
ಸಮಗ್ರ ದಾಸ ಸಾಹಿತ್ಯ

ಸಂಪುಟ : ೩೪



ಶ್ರೀ ಗುರುರಾಮವಿಠಲರ ಕೀರ್ತನೆಗಳು

ಸಮಗ್ರ ದಾಸ ಸಾಹಿತ್ಯ
ಸಂಪುಟ : ೩೪

ಶ್ರೀ ಗುರುರಾಮವಿಠಲರ ಕೀರ್ತನೆಗಳು

ಸಂಪಾದಕರು

ಡಾ. ಅನಂತಪದ್ಮನಾಭರಾವ್

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಬೆಂಗಳೂರು

SAMAGRA DASA SAHITYA SAMPUTA - 34 :
Keerthanas of *Gururama Vittalaru,* Edited by Dr. Ananthapadmanabha Rao and published by Sri. Y. K. Muddukrishna, Director, Directorate of Kannada and Culture, Kannada Bhavana, J.C. Road, Bangalore - 560 002.

ಪುಟಗಳು : 68 + ೪೫೩

ಪ್ರಥಮ ಮುದ್ರಣ : ೨೦೦೩
ಪ್ರತಿ : ೧೨೫೦

ಬಿಡಿ ಪ್ರತಿ ಬೆಲೆ : ರೂ. ೬೦=೦೦
ಸಮಗ್ರ ಸಂಪುಟಗಳ ಬೆಲೆ : ರೂ. ೨೪೦೦=೦೦

ಮುದ್ರಣ ನಿರ್ವಹಣೆ :

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
೩೬, ಕನ್ನಿಂಗ್‌ಹ್ಯಾಮ್ ರಸ್ತೆ
ಬೆಂಗಳೂರು – ೫೬೦ ೦೫೨.

ಮುದ್ರಕರು :

ಮೆ. ಡಾಟ್ಸ್
೧೨೪, ಸುಲ್ತಾನ್‌ಪೇಟೆ
ಬೆಂಗಳೂರು – ೫೬೦ ೦೫೩.

ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆ

ಸಂಪಾದಕ ಮಂಡಳಿ

ಕಾರ್ಯನಿರ್ವಾಹಕ ಸಂಪಾದಕರು

ಡಾ. ಶ್ರೀನಿವಾಸ ಹಾವನೂರ

ಡಾ . ಟಿ ಎನ್ ನಾಗರತ್ನ

ಪ್ರೊ. ವಸಂತ ಕುಷ್ಟಗಿ

ಸದಸ್ಯರು

ಡಾ. ಎಂ ಎಂ ಕಲಬುರ್ಗಿ

ಪ್ರೊ. ಎಂ. ರಾಜಗೋಪಾಲಾಚಾರ್ಯ (ಫೆಬ್ರವರಿ '೯೮ ರವರೆಗೆ)

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಮಂದಾಕಿನಿ

ಪ್ರೊ. ಸುಧಾಕರ

ಡಾ. ಬಸವರಾಜ ಸಬರದ

ಸದಸ್ಯ ಕಾರ್ಯದರ್ಶಿ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುನ್ನುಡಿ

ಹರಿದಾಸ ಸಾಹಿತ್ಯ ಕನ್ನಡ ಸಂಸ್ಕೃತಿ ಪರಂಪರೆಯ ಮಹತ್ವಪೂರ್ಣ ಭಾಗವಾಗಿದೆ. ದೇಶೀಯತೆ ಹಾಗೂ ಗೇಯತೆಗಳೆರಡನ್ನೂ ಮೇಳವಿಸಿಕೊಂಡು, ಕನ್ನಡ ಸಾಹಿತ್ಯವಾಹಿನಿಗೆ ಇದು ಹೊಸತನವನ್ನು ನೀಡಿದೆ. ಮನುಜಮತ, ಸಾಹಿತ್ಯಪಥ ಹಾಗೂ ಭಕ್ತಿಸಿದ್ಧಾಂತದ ತ್ರಿವೇಣಿಯಾಗಿರುವ ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ಪ್ರಜಾಸತ್ತಾತ್ಮಕ ಸರಕಾರದ ಆದ್ಯ ಕರ್ತವ್ಯವಾಗಿದೆ.

ಕನ್ನಡ ಭಾಷಿಕಶಕ್ತಿಯ ವಿವಿಧ ಆಯಾಮಗಳನ್ನು ಸೆಳೆದು ತೋರಿರುವ ಸಾಹಿತ್ಯ–ಸಂಗೀತಗಳ ಸಾಮರಸ್ಯವನ್ನು ಮೆರೆದಿರುವ ಈ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮಹತ್ವವನ್ನು ತಂದುಕೊಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಮಾನವಾನುಕಂಪ, ಸಮಾಜಸುಧಾರಣೆ, ಲೋಕದ ಡೊಂಕುಗಳನ್ನು ನಗೆ ವಿಡಂಬನೆಗಳ ಮೂಲಕ ತಿದ್ದುವ ಕೌಶಲ ದಾಸಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

ಆಧ್ಯಾತ್ಮಿಕ ಸಾಧನೆ, ಅನುಭವ – ಅನುಭಾವಗಳು ದಾಸಸಾಹಿತ್ಯದ ಪ್ರಮುಖ ಅಂಶವಾದರೂ, ಸುತ್ತಮುತ್ತಲಿರುವ ಜೀವನದ ಕಡೆಗೆ, ಮಾನವ ಸ್ವಭಾವದ ಕಡೆಗೆ ಕಣ್ಣು ಹರಿಸಿದ ಹರಿದಾಸರು ಸಾತ್ವಿಕ ಜೀವನ ನಿರ್ವಹಣೆಗೆ, ಮಾನವನ ಮೇಲ್ಮೆಗೆ, ನೈತಿಕ ಆಚರಣೆಗೆ ಒತ್ತು ನೀಡಿದವರು.

ಹರಿದಾಸ ಸಾಹಿತ್ಯ ಅಪಾರವಾದುದು ಹಾಗೂ ವೈವಿಧ್ಯವಾದುದು. ಈ ವಿಪುಲ ಸಾಹಿತ್ಯರಾಶಿಯನ್ನು ಒಂದೆಡೆ ಕ್ರೋಡೀಕರಿಸಿ, ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಕನ್ನಡ ಜನತೆಗೆ ನೀಡುತ್ತಿದೆ.

ಈ ಯೋಜನೆಗೆ ದುಡಿದ ಸಂಪಾದಕ ಮಂಡಳಿಯ ಶ್ರದ್ಧೆ ಹಾಗೂ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಮತ್ತು ಈ ಸಂಪುಟದ ಸಂಪಾದಕರ ಶ್ರಮವನ್ನು ಸ್ಮರಿಸುತ್ತ ಕನ್ನಡ ಜನತೆಯ ಕೈಗೆ ಈ ಮೌಲಿಕ ಪ್ರಕಟಣೆಗಳನ್ನು ಸಂತೋಷದಿಂದ ಅರ್ಪಿಸುತ್ತೇನೆ.

ಎಸ್. ಎಂ. ಕೃಷ್ಣ
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಎರಡು ಮಾತು

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕರ್ನಾಟಕದ ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ಪ್ರಭಾವಪೂರ್ಣವಾಗಿ ಸಮೃದ್ಧಿಗೊಳಿಸಿದವರು ಹರಿದಾಸರು. ಬದುಕಿನಲ್ಲಿ ನಿಷ್ಠೆ, ಸಾಹಿತ್ಯದಲ್ಲಿ ಬದುಕಿನ ತತ್ತ್ವಗಳನ್ನು ಅಡಗಿಸಿ ಜನಸಾಮಾನ್ಯರನ್ನು ಉನ್ನತ ಜೀವನದತ್ತ ಉದ್ದೀಪಿಸುವ ಮಹಾಕಾಯಕದಲ್ಲಿ ತೊಡಗಿದವರು ಹರಿದಾಸರು. ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯಾಗಿರುವ ಹರಿದಾಸ ಸಾಹಿತ್ಯ ಸಮಾಜದ ಮೌಢ್ಯವನ್ನು ಬಯಲಿಗೆಳೆದು, ಜಾತಿ, ಮತ, ಪಂಥಗಳನ್ನು ಮೀರಿ ನಿಂತ ಮಾನವೀಯ ಮೌಲ್ಯಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿತು.

ಹರಿದಾಸ ಸಾಹಿತ್ಯಕ್ಕೆ ಪ್ರೇರಣೆ ಭಕ್ತಿಯಾದರೂ, ಕರ್ನಾಟಕ ಸಂಗೀತಕ್ಕೆ ಸಮೃದ್ಧಿಯನ್ನು ನೀಡಿದವರು ಹರಿದಾಸರು. ಗ್ರಾಮ್ಯ ಮತ್ತು ದೇಶ್ಯ ಶಬ್ದಗಳಿಗೆ ಸಾಹಿತ್ಯದ ಮುದ್ರೆಯನ್ನು ಒತ್ತಿ, ಭಾಷೆಗೊಂದು ಪರಿಪಕ್ವತೆಯನ್ನು ತಂದುಕೊಟ್ಟವರು ಹರಿದಾಸರು. ಇಂಥ ಸಾಹಿತ್ಯ ಸಂಪತ್ತನ್ನು ರಕ್ಷಿಸುವುದು ಮತ್ತು ಪ್ರಸಾರ ಮಾಡುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆಗೆ ಸಮಿತಿಯೊಂದನ್ನು ರಚಿಸಿದ್ದು, ಇದರಲ್ಲಿ ನಾಡಿನ ಅನೇಕ ವಿದ್ವಾಂಸರು ಸಂಪುಟ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಂಪುಟಗಳು ಹೊರಬರಲು ಕಾರಣರಾದ

ಸಂಪಾದಕ ಮಂಡಳಿಯ ಸದಸ್ಯರಿಗೆ ಹಾಗೂ ಈ ಸಂಪುಟದ ಸಂಪಾದಕರಿಗೆ ನನ್ನ ಕೃತಜ್ಞತೆಗಳು.

ದಾಸರು ತಮ್ಮ ಸಾಹಿತ್ಯದಲ್ಲಿ ಸಾರ್ವಕಾಲಿಕ ಮೌಲ್ಯಗಳನ್ನು ಉಳಿಸಿ ಹೋಗಿದ್ದಾರೆ. ನಮ್ಮ ಸಾಮಾಜಿಕ ಜೀವನವನ್ನು ರೂಪಿಸುವಲ್ಲಿ ಈ ಕೀರ್ತನೆಗಳು ಮೌಲಿಕವಾದುವು. ಕನ್ನಡ ಜನತೆ ಈ ಕೃತಿಯ ಪ್ರಯೋಜನವನ್ನು ಪಡೆದರೆ ಪಟ್ಟ ಶ್ರಮ ಸಾರ್ಥಕವಾಗುತ್ತದೆ.

ರಾಣಿ ಸತೀಶ್

ಕನ್ನಡ ಮತ್ತು ಸಂಸ್ಕೃತಿ ಸಚಿವರು

ಯೋಜನೆಯನ್ನು ಕುರಿತು

ಕನ್ನಡ ಸಾಹಿತ್ಯ ಚರಿತ್ರೆಯ ಸಿರಿವಂತಿಕೆಯಲ್ಲಿ ಕೀರ್ತನ ಸಾಹಿತ್ಯದ ಕೊಡುಗೆ ವಿಪುಲವಾದುದು ; ವೈಶಿಷ್ಟ್ಯಪೂರ್ಣವಾದುದು. ಈ ಸಮಗ್ರ ಸಾಹಿತ್ಯದ ಸಂಗ್ರಹ ಮತ್ತು ಪ್ರಕಾಶನದ ಕಾರ್ಯ ಪೂರ್ಣವಾಗಿ ಆಗಿರಲಿಲ್ಲ. ಇದನ್ನು ಮನಗಂಡ ಸರ್ಕಾರ ಸಮಗ್ರ ದಾಸ ಸಾಹಿತ್ಯ ಪ್ರಕಟಣೆಯ ಕಾರ್ಯವನ್ನು ಕೈಗೆತ್ತಿಕೊಂಡಿತು.

ಸುಮಾರು ಒಂದು ನೂರ ಮೂವತ್ತೊಂಬತ್ತು ಜನ ದಾಸರ ಸುಮಾರು ಹದಿನಾರು ಸಾವಿರ ಕೀರ್ತನೆಗಳ ಬೃಹತ್ ಸಾಹಿತ್ಯ ಸಾಮಗ್ರಿ ದೊರಕಿತು. ಹೀಗೆ ಸಾಂಪ್ರದಾಯಿಕ ರೀತಿಯಲ್ಲಿ ಸಂಗ್ರಹಿಸಿ, ಸಂಪಾದಿಸಿದ ಕೀರ್ತನ ಸಾಹಿತ್ಯವನ್ನು ಸಂಪುಟಗಳಲ್ಲಿ ಮುದ್ರಿಸುವುದು ಕಷ್ಟವೇನಾಗಿರಲಿಲ್ಲ. ಆದರೆ, ಅದನ್ನು ಮಾಹಿತಿ ತಂತ್ರಜ್ಞಾನದ ಇವತ್ತಿನ ಸಂದರ್ಭದಲ್ಲಿ ಬಹು ಉಪಯೋಗಿ ನೆಲೆಯಲ್ಲಿ ಬಹುಮಾಧ್ಯಮದಲ್ಲಿ ಹೊರತರಬೇಕೆಂಬ ಕನಸು ರೋಮಾಂಚಕಾರಿ ಅನುಭವವೇ ಸರಿ. ಇದನ್ನು ಕೃತಿ ರೂಪಕ್ಕಿಳಿಸುವ ಹಾದಿಯಲ್ಲಿ ಎದುರಾದ ತಾಂತ್ರಿಕ ಸವಾಲು ಬಹು ಕ್ಲಿಷ್ಟಕರವಾಗಿಯೇ ಕಂಡಿತು.

ದಿಟ, ಈ ಸಮಗ್ರ ಸಾಹಿತ್ಯವನ್ನು ಕೇವಲ ಮುದ್ರಣದಲ್ಲಷ್ಟೇ ಅಲ್ಲ ಆಯ್ದ ಕೀರ್ತನೆಗಳನ್ನು ಗಾಯನಕ್ಕೆ ಅಳವಡಿಸಿ, ಸಿಡಿ ಮತ್ತು ಅಂತರ್ಜಾಲದಲ್ಲಿ ಹೊರತರ ಬೇಕೆಂದಾಗ ಬಳಕೆದಾರರ ಅವಶ್ಯಕತೆಯನ್ನು ಆಧರಿಸಿ ತಯಾರಿಸುವ ಅಗತ್ಯ ಇತ್ತು. ಆದರೆ ಇವುಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಸರ್ಚ್ ಎಂಜಿನ್ (ಹುಡುಕುವಿಕೆ) ಇಲ್ಲದಿರುವುದು ಒಂದು ತಾಂತ್ರಿಕ ಸಮಸ್ಯೆಯೇ ಆಯಿತು.

ಈ ರೀತಿಯ ಪ್ರಯತ್ನ ಕನ್ನಡ ಭಾಷೆಯಲ್ಲಿ ಹಿಂದೆಂದೂ ಆಗದಿದ್ದುದರಿಂದ ತಂತ್ರಾಂಶವನ್ನು ಹೊಸದಾಗಿಯೇ ಅಭಿವೃದ್ಧಿ ಪಡಿಸಬೇಕಾದ ಸವಾಲನ್ನು ಕೈಗೆತ್ತಿ ಕೊಳ್ಳಲಾಯಿತು. ಇದಕ್ಕಾಗಿ ಕನ್ನಡ ಗಣಕ ಪರಿಷತ್ತು, ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್‌ಐಸಿ), ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ, ಮಹಾಭಾರತ ಸಂಶೋಧನಾ ಪ್ರತಿಷ್ಠಾನ ಮುಂತಾದ ಹಲವಾರು ತಂತ್ರಾಂಶ ಸಂಸ್ಥೆಗಳೊಂದಿಗೆ ನಿರಂತರ ಸಮಲೋಚನೆ, ಚಿಂತನೆಗಳನ್ನು ನಡೆಸಲಾಯಿತು.

ಹೀಗೆ ಸಾಹಿತ್ಯ ಸಂಗ್ರಹ, ಸಂಪಾದನೆ, ಸಂಗೀತ ಸಂಯೋಜನೆ, ಧ್ವನಿಮುದ್ರಣ, ಬಹುಮಾಧ್ಯಮಕ್ಕೆ ಅಳವಡಿಸುವ ತಾಂತ್ರಿಕ ಕುಶಲತೆಯು ನಿರಂತರ ಕಾರ್ಯಾನುಷ್ಠಾನಕ್ಕೆ ಸಂಪಾದಕ ಮಂಡಳಿ ಸದಸ್ಯರು, ಸಂಪುಟ ಸಂಪಾದಕರು, ಇಲಾಖಾ ಅಧಿಕಾರಿಗಳು, ತಂತ್ರಜ್ಞರು, ಕೋರ್ ಸಮಿತಿ ಸದಸ್ಯರು, ಸಂಗೀತ ನಿರ್ದೇಶಕರು, ಗಾಯಕರು – ಈ ಎಲ್ಲರ ಪರಿಶ್ರಮ ಅಗಾಧವಾಗಿ ದೊರಕಿದೆ. ಈ ಶ್ರಮದ ಫಲವಾಗಿ ಬಹುಮಾಧ್ಯಮದಲ್ಲಿ ಸಮಗ್ರ ದಾಸ ಸಾಹಿತ್ಯ ಯೋಜನೆಯ ಬೃಹತ್ ಕಾರ್ಯ ಸಾಕಾರಗೊಂಡಿದೆ.

ಈ ವಿಪುಲ ಸಾಹಿತ್ಯವನ್ನು ಕನ್ನಡ ಅಕ್ಷರಜ್ಞಾನಿಗಳು ಪುಸ್ತಕ ರೂಪದಲ್ಲಿಯೂ, ಬಹುಗಾತ್ರದ ಸಾಹಿತ್ಯವನ್ನು ಕೈ ಅಳತೆಯ ಸಿಡಿ ರೂಪದಲ್ಲಿಯೂ ಈಗ ಪಡೆಯಬಹುದಾಗಿದೆ. ಅಲ್ಲದೆ, ಅಂತರ್ಜಾಲದ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಿರುವ ಆಸಕ್ತ ಜನತೆ ಕುಳಿತಲ್ಲಿಯೇ ಆರಾಮವಾಗಿ ವೀಕ್ಷಿಸುವ, ಕೇಳುವ ಹಾಗೂ ಕನ್ನಡ ಅಕ್ಷರ ಜ್ಞಾನವಿರದ ಭಾಷಿಕರು ಸಹಿತ ಸಂಗೀತವನ್ನು ಕೇಳಿ ಆಸ್ವಾದಿಸುವ ಅವಕಾಶವನ್ನು ಏಕಕಾಲದಲ್ಲಿ ಕಲ್ಪಿಸಲಾಗಿದೆ. ಪ್ರಕಾಶನದ ಇತಿಹಾಸದಲ್ಲಿಯೇ ದಾಖಲನೀಯವಾದ ಈ ಕಾರ್ಯ ಮುಂದೆ ಸರ್ಕಾರಿ ಸಂಸ್ಥೆಗಳಿಗಾಗಲಿ ಖಾಸಗಿ ಸಂಸ್ಥೆಗಳಿಗಾಗಲಿ ಮಾದರಿಯಾಗಬಹುದೆಂದು ನಂಬಲಾಗಿದೆ.

ನಮ್ಮ ಸಂಸ್ಕೃತಿಯನ್ನು ಬಿತ್ತರಿಸಲು ನಾಲ್ಕು ಗೋಡೆಗಳೊಳಗಿನ ರಂಗ ಮಂದಿರಗಳು, ವೇದಿಕೆಗಳು ಅಗತ್ಯವಿದೆ ದಿಟ. ಆದರೆ ಭವಿತವ್ಯದಲ್ಲಿ ವಿಶ್ವದ ಜನರನ್ನು ತಲಪಲು ಮತ್ತು ಮುಖ್ಯವಾಗಿ ಯುವಜನಾಂಗಕ್ಕೆ ನಮ್ಮ ಸಾಂಸ್ಕೃತಿಕ ಕ್ಷಿತಿಜದ ವಿಸ್ತಾರವನ್ನು ಪರಿಚಯಿಸಲು ಸೂಕ್ಷ್ಮ ಸಂವೇದನಾಶೀಲವಾದ ಸಾಹಿತ್ಯವನ್ನು ಬಹುಮಾಧ್ಯಮದಲ್ಲಿ ಅಳವಡಿಸುವುದು ಅತ್ಯಾವಶ್ಯಕ. ಈ ನಿಟ್ಟಿನಲ್ಲಿ ಇದೊಂದು ವಿನೂತನ ಪ್ರಯೋಗ; ಈ ಪ್ರಯೋಗದ ಫಲ ಎಲ್ಲರಿಗೂ ಲಭ್ಯವಾಗಲೆಂಬುದು ನಮ್ಮ ಆಶಯ.

ಸಿ. ಎಸ್. ಕೇದಾರ್
ಸರ್ಕಾರದ ಕಾರ್ಯದರ್ಶಿ

ಪ್ರಕಾಶಕರ ಮಾತು

ಕರ್ನಾಟಕದ ಧಾರ್ಮಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ಹರಿದಾಸರ ಸ್ಥಾನ ವಿಶಿಷ್ಟವಾದದ್ದು. ಸಾವಿರಾರು ವರ್ಷಗಳಿಂದ ಭಾರತದಲ್ಲಿ ಅವಿರತವಾಗಿ ಹರಿದುಬಂದ ಜೀವನಮೌಲ್ಯಗಳನ್ನು ಜನಸಾಮಾನ್ಯರ ಆಡುಭಾಷೆಯಲ್ಲಿ ಮುಟ್ಟಿಸಿ, ಲೌಕಿಕ ವಿಡಂಬನೆಯ ಮೂಲಕ ಅವರ ಮಾನಸಿಕ ವಿಕಾಸವನ್ನು ಯಶಸ್ವಿಯಾಗಿ ಸಾಧಿಸಿದವರು ಹರಿದಾಸರು. ಪಾಂಡಿತ್ಯ, ಲೋಕಾನುಭವಗಳ ಹಿನ್ನೆಲೆಯಿಂದಾಗಿ, ಆಡುಭಾಷೆಯ ಸೊಗಡಿನಿಂದಾಗಿ ಇವರು ಹಾಡಿದ್ದೆಲ್ಲ ಸಾಹಿತ್ಯವಾಯಿತು, ಕಾವ್ಯವಾಯಿತು, ಕೇಳುಗರನ್ನು ಸೆರೆಹಿಡಿಯಿತು. ಗೇಯಗುಣವುಳ್ಳ, ನೃತ್ಯಕ್ಕೆ ಅಳವಡುವ, ಛಂದೋಬದ್ಧವಾದ, ಜನತೆಯ ಮಧ್ಯದಲ್ಲಿಯೇ ಸಂದರ್ಭಾನುಸಾರ ಹುಟ್ಟಿದ ಹರಿದಾಸ ಸಾಹಿತ್ಯ ವೈಶಿಷ್ಟ್ಯಪೂರ್ಣವೆನಿಸಿತು. ಕನ್ನಡ ವಾಙ್ಮಯದಲ್ಲಿ ದಾಸಸಾಹಿತ್ಯ ಒಂದು ವಿಶೇಷ ಸ್ಥಾನ ಪಡೆಯಿತು. ಹೀಗೆ ಸಾಹಿತ್ಯ, ಸಂಗೀತ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ದಾಸಸಾಹಿತ್ಯದ ಕೊಡುಗೆ ಗಣನೀಯವಾದುದು.

ಸುಮಾರು ನೂರಮುವ್ವತ್ತೊಂಬತ್ತು ಜನ ದಾಸರು ಆಗಿಹೋಗಿದ್ದು, ಅವರ ಕೀರ್ತನೆಗಳ ಸಂಖ್ಯೆ ಸುಮಾರು ಹದಿನಾರು ಸಾವಿರಕ್ಕೂ ಅಧಿಕ. ಈವರೆಗೆ ಕೆಲವು ದಾಸರ ಕೀರ್ತನೆಗಳು ಬಿಡಿ ಬಿಡಿಯಾಗಿ ಪ್ರಕಟವಾಗಿವೆಯಾದರೂ, ಇನ್ನೂ ಅನೇಕ ದಾಸವರೇಣ್ಯರ ಕೀರ್ತನೆಗಳು ಹಸ್ತಪ್ರತಿ ರೂಪದಲ್ಲಿಯೇ ಉಳಿದುಕೊಂಡಿವೆ. ಅವುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ, ಸಮಗ್ರ ದಾಸಸಾಹಿತ್ಯವು ಕನ್ನಡಿಗರಿಗೆ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ದಾಸಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ಹಾಕಿಕೊಂಡಿದೆ. ಈ ಉದ್ದೇಶಕ್ಕಾಗಿ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಶ್ರೀನಿವಾಸ ಹಾವನೂರ, ಡಾ. ಟಿ. ಎನ್. ನಾಗರತ್ನ, ಪ್ರೊ. ವಸಂತ ಕುಷ್ಟಗಿ, ಸದಸ್ಯರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಬಸವರಾಜ ಸಬರದ, ಪ್ರೊ. ಸುಧಾಕರ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಡಾ. ಮಂದಾಕಿನಿ (ಈಗ ದಿವಂಗತರು), ಹಾಗೂ ಪ್ರೊ. ಎಂ. ರಾಜಗೋಪಾಲಾಚಾರ್ಯ (ಈಗ ದಿವಂಗತರು) ಅವರನ್ನೊಳಗೊಂಡಂತೆ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಇಲಾಖಾ ನಿರ್ದೇಶಕರು ಸಮಿತಿಯ ಸದಸ್ಯ-ಕಾರ್ಯದರ್ಶಿಗಳಾಗಿರುತ್ತಾರೆ. ಇದರಲ್ಲಿ ನಾಡಿನ ಅನೇಕ ವಿದ್ವಾಂಸರ ನೆರವನ್ನು ಬಳಸಿಕೊಳ್ಳಲಾಗುತ್ತಿದೆ.

ಈ ಯೋಜನೆಯನ್ವಯ 'ಸಮಗ್ರ'ವಾಗಿ ದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಪ್ರಕಟಿಸುವುದಿದ್ದರೂ, ಕೆಲವು ಹರಿದಾಸರ ರಚನೆಗಳು ಬಿಟ್ಟು ಹೋಗಿರುವ ಸಾಧ್ಯತೆ ಇರುತ್ತದೆ. ಅಂಥ ಹರಿದಾಸರ ಕೀರ್ತನೆಗಳು ದೊರೆತಲ್ಲಿ ಮುಂದೆ ಪರಿಷ್ಕರಣ ಸಂದರ್ಭದಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳಲಾಗುವುದು.

ಸಮಗ್ರ ದಾಸಸಾಹಿತ್ಯ ಯೋಜನೆಯಡಿ ಪ್ರಕಟವಾಗುತ್ತಿರುವ ಆಯಾ ಸಂಪುಟಗಳ ಸಂಪಾದಕರಿಗೆ ಹಾಗೂ ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಸಂಪಾದಕ ಮಂಡಳಿಯವರಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರಾದ ಶ್ರೀ ಕೆ.ಸಿ. ರಾಮಮೂರ್ತಿ, ಶ್ರೀ ಸಿ. ಸೋಮಶೇಖರ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಕಾ.ತ. ಚಿಕ್ಕಣ್ಣ ಅವರಿಗೆ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ ಹಾಗೂ ಡಾ. ಮಂಜುಳ ಅವರಿಗೆ ಕೃತಜ್ಞತೆಗಳು.

ಹರಿದಾಸರ ಕೀರ್ತನೆಗಳನ್ನು ಆಯ್ದು ಸಂಗೀತಕ್ಕೆ ಆಯ್ಕೆ ಮಾಡಲು ನೆರವಾದ ಶ್ರೀ ವಿನಾಯಕ ತೊರವಿ, ಶ್ರೀ ಮೈಸೂರು ಸುಬ್ರಮಣ್ಯಂ, ಶ್ರೀ ಆರ್. ಕೆ. ಪದ್ಮನಾಭ, ಶ್ರೀ ಬಾನಂದೂರು ಕೆಂಪಯ್ಯ ಹಾಗು ಶ್ರೀಮತಿ ಮಾಲತಿ ಶರ್ಮರವರಿಗೆ, ಸಂಗೀತ ನಿರ್ದೇಶಕರಿಗೆ ಹಾಗೂ ಗಾಯಕರಿಗೆ ಕೃತಜ್ಞತೆಗಳು.

ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸುವ ಕಾರ್ಯ ನಿರ್ವಹಿಸಿದ ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಅನಂತ ಪದ್ಮನಾಭರಾವ್ ಮತ್ತು ಪ್ರೊ. ನಾ. ಗೀತಾಚಾರ್ಯ ಇವರಿಗೂ ಸಹ ಕೃತಜ್ಞತೆಗಳು.

ಈ ಸಮಗ್ರ ದಾಸಸಾಹಿತ್ಯ ಸಂಪುಟಗಳ ಮುದ್ರಣ ಕಾರ್ಯವನ್ನು ನಿರ್ವಹಿಸಿದ ಎಂ.ಎಸ್.ಐ.ಎಲ್. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಶೋಕ್ ವಿ. ಡೇವಿಡ್ ಹಾಗೂ ವಿಶೇಷಾಧಿಕಾರಿಗಳಾದ ಶ್ರೀ ಎಂ. ರವಿಶಂಕರ್ ಅವರಿಗೆ ನನ್ನ ಕೃತಜ್ಞತೆಗಳು. ಸಮಗ್ರ ದಾಸಸಾಹಿತ್ಯವನ್ನು ಪ್ರಕಟಿಸುವುದು ಹರಿದಾಸರಿಗೂ ಕನ್ನಡ ಜನತೆಗೂ ನಾವು ಸಲ್ಲಿಸಬೇಕಾದ ಸೇವೆಯೆಂದು ಭಾವಿಸಿದ್ದೇನೆ. ಪಂಡಿತ ಪಾಮರರನ್ನು ಏಕ ಕಾಲಕ್ಕೆ ಆಕರ್ಷಿಸಬಲ್ಲ ವಿಶಿಷ್ಟ ಸಾಮರ್ಥ್ಯ ದಾಸಸಾಹಿತ್ಯದ್ದು ಎಂದರೆ ತಪ್ಪಾಗಲಾರದು. ಕನ್ನಡ ಜನತೆಯು ಈ ಪ್ರಕಟಣೆಯ ಸದುಪಯೋಗ ಪಡೆದುಕೊಂಡೀತು ಎಂದು ಆಶಿಸಿದ್ದೇನೆ.

ವೈ. ಕೆ. ಮುದ್ದುಕೃಷ್ಣ

ನಿರ್ದೇಶಕರು

ಸಂಪಾದಕ ಮಂಡಳಿಯ ನುಡಿ

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಓದಲಾರದ ಕನ್ನಡ ಜನಕ್ಕೆ ಪಂಪನಂತಹ ಪ್ರೌಢಕವಿಗಳು ಗೊತ್ತಿರಲಿ ಬಿಡಲಿ, ದಾಸರ ಹಾಡುಗಳು ಗೊತ್ತಿಲ್ಲದವರು ಮಾತ್ರ ಅಪರೂಪ. ಜನರ ಮೇಲೆ ನಿರಂತರ ಪ್ರಭಾವವನ್ನು ಬೀರುವ ಜನಸಮ್ಮುಖತೆ ದಾಸಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದು. ಇಂತಹ ದಾಸರ ಹಾಡುಗಳು ಜ್ಞಾನಸಂಪದ ಹಾಗೂ ಭಕ್ತಿಸಂಪದಗಳ ಸಾರ್ವತ್ರಿಕ ಹಬ್ಬುಗೆಗೆ ಸಾಧನವಾಗಿ ಪರಿಣಮಿಸಿವೆ.

ಕನ್ನಡ ನಾಡಿನಾದ್ಯಂತ ಎಲ್ಲ ಸ್ತರಗಳಲ್ಲಿ ವರ್ಗ-ವರ್ಣಗಳ ಭೇದವಿಲ್ಲದೆ, ಜನರ ಬಾಯಲ್ಲಿ ಉಳಿದುಕೊಂಡು ಬಂದ ಈ ಸಾಹಿತ್ಯವನ್ನು ಮೊಟ್ಟಮೊದಲಿಗೆ ಪ್ರಕಟಿಸಿದ ಶ್ರೇಯಸ್ಸು ಬಾಸೆಲ್ ಮಿಶನ್ನಿನ ರೆ. ಹರ್ಮನ್ ಮೊಗ್ಲಿಂಗ್‌ರಿಗೆ ಸೇರುತ್ತದೆ. ಇವರು ತಮ್ಮ ಇಲ್ಲಿಯ ವಾಸ್ತವ್ಯದಲ್ಲಿ (೧೮೩೬ರಿಂದ), ನಾಲ್ಕುನೂರಕ್ಕೂ ಮಿಕ್ಕಿದ ದಾಸರ ಪದಗಳನ್ನು ಸಂಗ್ರಹಿಸಿದ್ದರು. ಅವುಗಳಲ್ಲಿಯ ಒಂದು ನೂರು ಪದಗಳ ಸಂಗ್ರಹವನ್ನು 'ದಾಸರ ಪದಗಳು' ಎಂಬ ಹೆಸರಿನಿಂದ ಕ್ರಿ. ಶ. ೧೮೫೦ರಲ್ಲಿ, ಮತ್ತೆ ಕ್ರಿ.ಶ. ೧೮೫೩ರಲ್ಲಿ ೧೭೪ ಪದಗಳುಳ್ಳ ಸಂಕಲನವನ್ನು ಮಂಗಳೂರಿನಲ್ಲಿ ಕಲ್ಲಚ್ಚಿನಲ್ಲಿ ಛಾಪಿಸಿ ಪ್ರಕಟಿಸಿದರು. ಈ ವಿಷಯವನ್ನು ೧೮೭೩ರಲ್ಲಿ ಪ್ರಕಟವಾದ ಇಂಡಿಯನ್ ಎಂಟಿಕ್ವೆರಿಯ 'On the Karnataka Vaishnava Dasas' – ಎಂಬ ತಮ್ಮ ಲೇಖನದಲ್ಲಿ ರೆ. ಕಿಟೆಲ್ಲರು ಕಾಣಿಸಿದ್ದಾರೆ. ಇದರಿಂದ ಕಿಟೆಲ್‌ರಂಥವರು ಕೂಡ ದಾಸರ ಪದಗಳ ಮಹತ್ವವನ್ನು ಮತ್ತು ಜನಪ್ರಿಯತೆಯನ್ನು ಗುರುತಿಸಿದ್ದರು ಎಂಬುದು ಗೊತ್ತಾಗುತ್ತದೆ. ಪ್ರಾಸಂಗಿಕವಾಗಿ ಇದುವೆ ದಾಸಸಾಹಿತ್ಯದ ಕುರಿತಾದ ಮೊದಲ ಲೇಖನವೂ ಆಗಿದೆ.

ಅನಂತರದ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಹಲವಾರು ಜನರು ಕೆಲಸವನ್ನು ಮುಂದುವರಿಸಿದರು. ರೆ. ಮೊಗ್ಲಿಂಗರ 'ದಾಸರ ಪದಗಳು' ಇದರ ದ್ವಿತೀಯ ಆವೃತ್ತಿಯನ್ನು ೧೮೭೧ರಲ್ಲಿ ಜಾನ್ ಗ್ಯಾರೆಟರ ಸೂಚನೆಯ ಮೇರೆಗೆ ಹೊಳಕಲ್ಲು ನರಸಿಂಹಯ್ಯನವರು ಬೆಂಗಳೂರಿನಿಂದ ಪ್ರಕಟಿಸಿದರು. ೧೮೭೩ರಲ್ಲಿ ಹಿಂದೂ ಭಾಷಾ ಸಂಜೀವಿನೀ ಮುದ್ರಣ ಶಾಲೆಯಲ್ಲಿ 'ಹರಿಭಜನೆ, ಕೀರ್ತನೆ' ಎಂಬ ಸಂಗ್ರಹ ಪ್ರಕಟವಾಯಿತು. ೧೮೯೦ನೆ ದಶಕದಲ್ಲಿ ಬೆಳಗಾವಿಯ ಆಬಾಜಿ ರಾಮಚಂದ್ರ ಸಾವಂತ ಇವರು ದೇವನಾಗರಿ ಲಿಪಿಯಲ್ಲಿ "ದಾಸರ ಪದಗಳ ಸಂಗ್ರಹವು" ಎಂಬುದಾಗಿ ಎರಡು ಭಾಗಗಳಲ್ಲಿ ಪ್ರಕಟಿಸಿದರು. ಆ ದಶಕದಲ್ಲಿಯೇ ಮಡಕಶಿರಾದ ಬಾಲಕೃಷ್ಣರಾಯರು ೧೮೯೪ರಲ್ಲಿ 'ಪುರಂದರ ದಾಸರು ಮೊದಲಾದ ಅಪರೋಕ್ಷ ಜ್ಞಾನಿಗಳ ಪದಗಳು' ಎಂಬ ಪುಸ್ತಕವನ್ನು ತೆಲುಗು ಲಿಪಿಯಲ್ಲಿ ಮುದ್ರಿಸಿದ್ದು ಗಮನಾರ್ಹವಾಗಿದೆ. ಮತ್ತೆ ೧೯೦೮ರಲ್ಲಿ ಅವರೇ ಇನ್ನೊಂದು ಸಂಕಲನವನ್ನೂ ಪ್ರಕಟಿಸಿದ್ದಾರೆ.

ಹೀಗೆ ೧೮೫೦ರಷ್ಟು ಹಿಂದೆಯೇ ಪ್ರಾರಂಭವಾದ ದಾಸರ ಪದಗಳ ಸಂಗ್ರಹ ಹಾಗೂ ಪ್ರಕಟಣೆಯ ಕಾರ್ಯಕ್ಕೆ ಒಂದು ವ್ಯವಸ್ಥಿತ ರೂಪವನ್ನು ಕೊಟ್ಟು, ನಾಡಿನಾದ್ಯಂತ ಹರಿದು ಹಂಚಿಹೋದ, ಜನರ ಬಾಯಲ್ಲಿ ಉಳಿದುಕೊಂಡು ಬಂದ ವಿವಿಧ ದಾಸರ ಪದಗಳನ್ನು ಸಂಗ್ರಹಿಸಿ ಪ್ರಕಟಿಸಲು ಪ್ರಾರಂಭಿಸಿದವರು ಉಡುಪಿಯ ಪಾವಂಜೆ ಗುರುರಾಯರು. ಅವರು ೧೯೧೪ರಲ್ಲಿ ಪ್ರಕಟಿಸಿದ ಮೊದಲ ಸಂಕಲನದ ಹೆಸರು 'ಉದಯರಾಗವು' ಎಂಬುದು. ಅನಂತರದ ದಿನಗಳಲ್ಲಿ ಪುರಂದರದಾಸರ ಕೀರ್ತನೆಗಳನ್ನು ಐದು ಸಂಪುಟಗಳಲ್ಲಿ ಮತ್ತು ಉಳಿದ ದಾಸರ ಕೃತಿಗಳನ್ನು ಬಿಡಿಬಿಡಿಯಾಗಿ ಪ್ರಕಟಿಸಿದರು. ಹೀಗೆ ನಾಡಿನ ದಕ್ಷಿಣದ ಅಂಚಿನ ಉಡುಪಿಯಲ್ಲಿ ಪ್ರಾರಂಭವಾದ ಕೆಲಸವನ್ನು ಉತ್ತರದ ಅಂಚಿನ ಲಿಂಗಸುಗೂರಿನಲ್ಲಿ ಗೊರಾಬಾಳ ಹಣಮಂತರಾಯರು 'ವರದೇಂದ್ರ ಸಾಹಿತ್ಯ ಮಾಲೆ'ಯನ್ನು ಪ್ರಾರಂಭಿಸಿ ತಮ್ಮ ಇಡೀ ಜೀವನವನ್ನೇ ಹರಿದಾಸ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಗೆ ಮೀಸಲಾಗಿರಿಸಿದರು. ಇತ್ತ ಮೈಸೂರು ಭಾಗದಲ್ಲಿ ಸುಪ್ರಸಿದ್ಧ ದಾಸರ ಹಾಡುಗಳನ್ನು ತಕ್ಕಮಟ್ಟಿಗೆ ಶಾಸ್ತ್ರಶುದ್ಧವಾಗಿ ಪ್ರಕಟಿಸಲು ಸುಬೋಧ ರಾಮರಾಯರು ಮುಂದಾದರು. ಇದೇ ಬಗೆಯ ಕೆಲಸವನ್ನು ಧಾರವಾಡ ಪ್ರದೇಶದಲ್ಲಿ ನಾರಾಯಣರಾವ ಕಲಮದಾನಿ, ಹುಚ್ಚರಾವ ಬೆಂಗೇರಿ

ಹಾಗೂ ಬೆಟಗೇರಿ ಕೃಷ್ಣಶರ್ಮರು ಮಾಡಿದರು. ಇದರೊಂದಿಗೆ, ಭಜನೆಯ ದೃಷ್ಟಿಯಿಂದ ಅನುಕೂಲವಾಗುವಂತೆ ನಾಡಿನ ವಿವಿಧ ಭಾಗಗಳಲ್ಲಿ ದಾಸಸಾಹಿತ್ಯಾಸಕ್ತರು ತಮತಮಗೆ ಬೇಕಾದ ಪದಗಳ ಸಂಗ್ರಹವನ್ನು ಪ್ರಕಟಿಸತೊಡಗಿದರು. ಇದರಿಂದಾಗಿ ನಾಡಿನ ಬಹುತೇಕ ಭಾಗಗಳಲ್ಲಿ ಬೇರೆ ಬೇರೆ ದಾಸರು ಇದ್ದುದು ಮತ್ತು ಅವರು ಹಾಡುಗಳನ್ನು ಬರೆದಿದ್ದಾರೆ ಎಂಬುದು ಗಮನಕ್ಕೆ ಬಂದಿತು. ಅದು 'ದಾಸ-ಪೀಳಿಗೆ' ಯನ್ನು ಗುರುತಿಸಲು ಸಹಾಯವಾಯಿತು.

ಶ್ರೀಪಾದರಾಜರಿಂದ ಪ್ರಾರಂಭವಾದ ಕೀರ್ತನೆಗಳ ರಚನೆಯ ಸಂಪ್ರದಾಯವು ಈ ಐದುನೂರು ವರ್ಷಗಳಲ್ಲಿ ಸುಮಾರು ಮುನ್ನೂರು ಜನ ದಾಸರು ಹುಟ್ಟಿ ಮೂವತ್ತು ಸಾವಿರಕ್ಕೂ ಮಿಕ್ಕ ಕೀರ್ತನೆಗಳನ್ನು ರಚಿಸಿದ್ದಾರೆಂದರೆ ಅವುಗಳ ಮಹತ್ವ ಗೊತ್ತಾಗದೇ ಇರದು.

ಇಡಿಯಾಗಿ-ಬಿಡಿಬಿಡಿಯಾಗಿ ವ್ಯಕ್ತಿಗಳಿಂದ, ಸಂಘ ಸಂಸ್ಥೆಗಳಿಂದ ದಾಸರ ಪದಗಳು ಪ್ರಕಟವಾಗುತ್ತ ಬರುತ್ತಿರುವಾಗಲೇ ಪುರಂದರ ಕನಕದಾಸರ ಚತುಃಶತಮಾನೋತ್ಸವ ಸಂದರ್ಭಗಳಲ್ಲಿ ಅವರ ಸಮಗ್ರ ಕೃತಿಗಳು ಸರ್ಕಾರದಿಂದ ಹಾಗೂ ವಿವಿದ ಸಂಘ ಸಂಸ್ಥೆಗಳಿಂದ ಪ್ರಕಟವಾದವು. ಆದರೆ ಸಮಗ್ರ ದಾಸಸಾಹಿತ್ಯದ ಪ್ರಕಟಣೆ ಈವರೆಗೆ ಆಗಲೇ ಇಲ್ಲವೆಂದು ಹೇಳಬಹುದು. ಇಂಥದೊಂದು ಪ್ರಯತ್ನವನ್ನು ಮೂರು ದಶಕಗಳ ಹಿಂದೆ ಮೈಸೂರು ವಿಶ್ವವಿದ್ಯಾ ನಿಲಯವು ಕೈಗೊಂಡಿತು. ವೈಜ್ಞಾನಿಕ ರೀತಿಯಲ್ಲಿ ಶಾಸ್ತ್ರ ಶುದ್ಧವಾಗಿ ದಾಸಸಾಹಿತ್ಯವನ್ನು ಪ್ರಕಟಿಸುವುದರ ಅಡಿಗಲ್ಲನ್ನು ಹಾಕಿದ ಶ್ರೇಯಸ್ಸು ಆ ಮಾಲೆಯ ಸಂಪಾದಕರಾಗಿದ್ದ ಡಾ. ಜಿ. ವರದರಾಜರಾವ್ ಅವರಿಗೆ ಸಲ್ಲಬೇಕು. ಇದುವರೆಗೆ ಕೆಲವು ಸಂಪುಟಗಳು ಮಾತ್ರ ಬಂದಿವೆ. ಆದರೆ ಹಸ್ತಪ್ರತಿಗಳಲ್ಲಿ ವಿಪುಲ ದಾಸಸಾಹಿತ್ಯವನ್ನು ಸಂಗ್ರಹಿಸಲಾಗಿದೆ. ಅದೇ ರೀತಿಯಲ್ಲಿ ಲಿಂಗಸುಗೂರಿನಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹಾಗೂ ತಿರುಪತಿಯ ದಾಸಸಾಹಿತ್ಯ ಪ್ರೊಜೆಕ್ಟದಲ್ಲಿ ಕೂಡ ವಿಪುಲ ಹಸ್ತಪ್ರತಿಗಳ ಸಂಗ್ರಹವಿದೆ. ಇವರೆಲ್ಲರ ಸಹಕಾರದಿಂದ ಈಗ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಸಾಹಸದ ಕಾರ್ಯವನ್ನು ಮಾಡುತ್ತಿದೆ.

ಸಂಪುಟ ಯೋಜನೆ

ದಾಸಸಾಹಿತ್ಯದ ಪರಿಷ್ಕರಣ ಕಾರ್ಯ ತುಂಬ ಜಟಿಲವಾದುದೆಂಬುದು ಸಂಪಾದಕ ಮಂಡಳಿಯ ಪ್ರಥಮ ಸಭೆಯಲ್ಲಿಯೇ ಅನುಭವಕ್ಕೆ ಬಂದಿತು. ಕಳೆದ ಐದು ಶತಮಾನಗಳಿಂದ ನಿರಂತರ ಹರಿದು ಬಂದ ದಾಸಸಾಹಿತ್ಯ ರಚನೆಯಲ್ಲಿಯ ದಾಸರ ಹಾಗೂ ದಾಸರ ಪದಗಳ ಸಂಖ್ಯಾಬಾಹುಳ್ಯವನ್ನು ಗಮನಿಸಿ ಅದಕ್ಕೊಂದು ಕಾಲಮಿತಿಯನ್ನು ಹಾಕಿಕೊಳ್ಳುವುದು ಅನಿವಾರ್ಯ ವಾಯಿತು. ಹಾಗೆ ದಾಸಸಾಹಿತ್ಯದ ಪ್ರಾರಂಭ ಕಾಲದಿಂದ ೧೯ನೆಯ ಶತಮಾನದ ಅಂತ್ಯದ ವರೆಗೆ ರಚಿತಗೊಂಡ ವೈದಿಕ ಪರಂಪರೆಯ ದಾಸರ ಪದಗಳನ್ನು ಸಂಗ್ರಹಿಸುವುದೆಂದು, ಅದರಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಪರಂಪರೆಯ ಲಭ್ಯವಿದ್ದ ಹಾಡುಗಳನ್ನು ಸೇರಿಸಿಕೊಂಡು ೩೫ ಸಂಪುಟಗಳಲ್ಲಿ ಪ್ರಕಟಿಸುವುದೆಂದು ನಿರ್ಧರಿಸಲಾಯಿತು.

ಈ ೩೫ ಸಂಪುಟಗಳನ್ನು*, ಸಂಪಾದಕ ಮಂಡಳಿಯ ಸದಸ್ಯರಲ್ಲದೆ ನಾಡಿನ ಹಲವಾರು ವಿದ್ವಾಂಸರನ್ನು ಸಂಪಾದಿಸಿ ಕೊಡಲು ಕೇಳಿಕೊಳ್ಳಲಾಯಿತು.

ಇಂಥದೊಂದು ಬೃಹತ್ ಕಾರ್ಯವನ್ನು ಕೈಗೊಂಡಾಗ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುವುದು ಅನಿವಾರ್ಯವಾಗುತ್ತದೆ. ಅನ್ಯ ಮತ–ಪಂಥಗಳ ಟೀಕೆಗಳು ಬಂದಿದ್ದರೆ ಅಂಥ ಹಾಡುಗಳನ್ನು ಕೈಬಿಡಬೇಕು. ಒಂದೇ ಹಾಡು ಇಬ್ಬರು ದಾಸರ ಅಂಕಿತದಲ್ಲಿ ಪ್ರಚಲಿತದಲ್ಲಿದ್ದರೆ, ಎರಡೂ ಕಡೆಗೆ ಅವುಗಳನ್ನು ಕೊಟ್ಟು ಕೆಳಗೆ ' ಈ ಕೀರ್ತನೆ . . . . ದಾಸರ ಅಂಕಿತದಲ್ಲೂ ಇದೆ' ಎಂದೂ ಸೂಚಿಸಬೇಕು. ದ್ವೈತ ಸಂಪ್ರದಾಯದ ಕೀರ್ತನೆಗಳನ್ನು ಪ್ರಕಟಿಸುವಾಗ ದೇವ–ಗುರು ತಾರತಮ್ಯವನ್ನು ಪಾಲಿಸಬೇಕು ; ಉಳಿದೆಡೆ ಗಣೇಶ ಪ್ರಾರ್ಥನೆ, ಭಗವಂತನ ನಾಮಸಂಕೀರ್ತನೆ, ಆತ್ಮನಿವೇದನೆ, ಲೋಕನೀತಿ, ತಾತ್ವಿಕ, ಕಥನಾತ್ಮಕ, ಸಂಪ್ರದಾಯ ಹಾಗೂ ವಿಶೇಷ ಹಾಡುಗಳೆಂದು ಮುಂತಾಗಿ ವಿಂಗಡಿಸಿ ಕೊಡಬೇಕು – ಎಂಬುದಾಗಿ ನಿರ್ಧರಿಸಿತು.

---

*ಇವುಗಳಲ್ಲಿ ಕೆಲವುಗಳಿಗೆ ಎರಡು ಮೂರು ಭಾಗಗಳಿವೆ.

ಪ್ರತಿಯೊಂದು ಸಂಪುಟದ ಪ್ರಾರಂಭದಲ್ಲಿ ಹಾಡುಗಳ ಪರಿವಿಡಿಯನ್ನು ಕೊಟ್ಟು ಪ್ರಸ್ತಾವನೆಯಲ್ಲಿ ಆಯಾ ದಾಸರ ಸಂಕ್ಷಿಪ್ತ ಜೀವನ ಚರಿತ್ರೆ, ಕೃತಿಗಳ ಸಮೀಕ್ಷೆ, ಶೈಲಿ ಇತ್ಯಾದಿಗಳನ್ನು ವಿವರಿಸಿ, ಗ್ರಂಥಸಂಪಾದನೆಯ ಆಕರಗಳನ್ನೂ ಕೊಡಲು ಪ್ರಯತ್ನಿಸಲಾಗಿದೆ. ಕೊನೆಯಲ್ಲಿ ಬರುವ ಅನುಬಂಧಗಳಲ್ಲಿ ಕಠಿಣ ಶಬ್ದಗಳ ಅರ್ಥ, ಟಿಪ್ಪಣಿ ಮತ್ತು ವಿಶಿಷ್ಟ ಅಂಕಿತನಾಮಗಳ ಸೂಚಿ ಹಾಗೂ ಹಾಡುಗಳ ಅಕಾರಾದಿಯನ್ನು ಕೊಡಲಾಗಿದೆ.

ಈ ಸಂಪುಟಗಳು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿದೆ. ಅನ್ಯ ಪಾಠಗಳನ್ನು ಅಡಿಯಲ್ಲಿ ನಮೂದಿಸಿಲ್ಲ. ಆದರೂ ಇವು ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ರೀತಿಯಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

ಕೃತಜ್ಞತೆಗಳು

ಕಳೆದ ನೂರೈವತ್ತು ವರ್ಷಗಳಿಂದ ಪಾಶ್ಚಾತ್ಯ ಮಿಶನರಿಗಳಿಂದ ಹಿಡಿದು ಈ ಮೊದಲು ಉಲ್ಲೇಖಿಸಿದ ನಾಡಿನ ಅನೇಕ ವಿದ್ವಜ್ಜನರು, ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ದಾಸಸಾಹಿತ್ಯ ಕುರಿತು ನಿರಂತರ ದುಡಿದು ವಿಪುಲ ಸಾಮಗ್ರಿಯನ್ನು ಪ್ರಕಟಿಸಿದ್ದಾರೆ. ಈ ಎಲ್ಲ ವ್ಯಕ್ತಿಗಳಿಗೂ ಸಂಘ ಸಂಸ್ಥೆಗಳಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆ ಅಸ್ತಿತ್ವಕ್ಕೆ ಬಂದುದೂ ಒಂದು ವಿಶಿಷ್ಟ ಸಂದರ್ಭದಲ್ಲಿ ಎಂಬುದನ್ನು ಇಲ್ಲಿ ನಮೂದಿಸಬೇಕು. ಕರ್ನಾಟಕ ಸರ್ಕಾರವು ನಾಡಿನ ಖ್ಯಾತ ಸಂಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಸಮಗ್ರ ವಚನಸಾಹಿತ್ಯವನ್ನು ಪ್ರಕಟಿಸಿತಷ್ಟೇ. ಅವರೇ 'ದಾಸಸಾಹಿತ್ಯ' ಯೋಜನೆಯನ್ನು ರೂಪಿಸಿ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥರ ಮೂಲಕ ಈ ಯೋಜನೆಯತ್ತ ಸರ್ಕಾರದ ಗಮನ ಸೆಳೆದರು. ಇದನ್ನು ಅರಿತ ಅಂದಿನ ಮುಖ್ಯಮಂತ್ರಿಗಳೂ ಅನಂತರ ಭಾರತದ ಪ್ರಧಾನಮಂತ್ರಿಗಳೂ ಆಗಿದ್ದ ಸನ್ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರು ಮುಧೋಳದಲ್ಲಿ (೧೯೯೫) ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸರ್ಕಾರವು ಸಮಗ್ರ

ದಾಸಸಾಹಿತ್ಯವನ್ನು ಪ್ರಕಟಿಸಲು ಒಪ್ಪಿಕೊಂಡಿದೆ ಎಂದು ಘೋಷಿಸಿದರು. ಅದರಂತೆ ಸರ್ಕಾರವು ಒಂಬತ್ತು ಜನರ ಸಂಪಾದಕ ಮಂಡಳಿಯನ್ನು ರಚಿಸಿತು. ಅದರಲ್ಲಿ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ ಮತ್ತು ಪ್ರೊ. ವಸಂತ ಕುಷ್ಟಗಿ ಅವರನ್ನು ಸಮಿತಿಯ ಕಾರ್ಯನಿರ್ವಾಹಕ ಸಂಪಾದಕರೆಂದು ನಿಯಮಿಸಿತು. ಜೊತೆಗೆ ಈ ಮೊದಲು ಇಂಥ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ ಅನುಭವಿ ಡಾ. ಎಂ. ಎಂ. ಕಲಬುರ್ಗಿ, ದಾಸಸಾಹಿತ್ಯದಲ್ಲಿ ನುರಿತ ವಿದ್ವಾಂಸರುಗಳಾದ ಪ್ರೊ. ಎಂ. ರಾಜಗೋಪಾಲಾಚಾರ್ಯ, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ. ಮಂದಾಕಿನಿ, ಪ್ರೊ. ಸುಧಾಕರ ಮತ್ತು ಡಾ. ಬಸವರಾಜ ಸಬರದ ಅವರನ್ನು ಸಂಪಾದಕ ಮಂಡಳಿಯ ಸದಸ್ಯರನ್ನಾಗಿ ನಿಯಮಿಸಿತು. ಅವರುಗಳ ನಿರಂತರ ಪರಿಶ್ರಮದ ಫಲವೇ ಈ ಸಮಗ್ರ ದಾಸಸಾಹಿತ್ಯದ ಪ್ರಕಟಣಾ ಕಾರ್ಯ. ಈ ಪ್ರಕಟಣಾ ಕಾರ್ಯದಲ್ಲಿ ಅವರುಗಳೊಂದಿಗೆ ೩೫ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಸರ್ವಶ್ರೀ ಅರಳುಮಲ್ಲಿಗೆ ಪಾರ್ಥಸಾರಥಿ, ಡಾ. ಡಿ. ಆರ್. ಪಾಂಡುರಂಗ, ಡಾ. ಅನಂತಪದ್ಮನಾಭರಾವ್, ಪ್ರೊ. ಬಿ. ಆರ್. ಕುಲಕರ್ಣಿ, ಡಾ. ಕೆ. ಜಿ. ವೆಂಕಟೇಶ್, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಕೆ. ಗೋಕುಲನಾಥ, ಡಾ. ಕೆ. ಎಂ. ಕೃಷ್ಣರಾವ್, ಶ್ರೀ ಹಣಮಂತ ತಾಸಗಾಂವಕರ್, ಪ್ರೊ. ನಾ. ಗೀತಾಚಾರ್ಯ, ಡಾ. ಸ್ವಾಮಿರಾವ್ ಕುಲಕರ್ಣಿ, ಶ್ರೀ ಹನುಮನಗೌಡ, ಶ್ರೀ ಎ. ಎನ್. ಅನಂತಸ್ವಾಮಿರಾವ್, ಶ್ರೀ ನಾರಾಯಣಾಚಾರ್ಯ ಧೂಳಖೇಡ, ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಶ್ರೀ ಕೆ. ಎಸ್. ವೆಂಕಟೇಶ್ ಮತ್ತು ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ ಅವರುಗಳು ಹಾಗೂ ಶ್ರೀಮತಿಯರಾದ ನಳಿನಿ ವೆಂಕಟೇಶ್, ಮೀನಾರಾವ್, ಲೀಲಾವತಿ ಎಸ್. ರಾವ್, ಡಾ. ಜಯಲಕ್ಷ್ಮಿ ಮಂಗಳಮೂರ್ತಿ, ಡಾ. ಅಕ್ಕಮಹಾದೇವಿ, ಶೀಲಾ ದಾಸ್, ಡಾ. ರಮಾ ಕಲ್ಲೂರಕರ, ಡಾ. ಸೀತಾ ಗುಡೂರ ಕುಲಕರ್ಣಿ, ಹೆಚ್. ಎಸ್. ಪದ್ಮಾ ಮೂರ್ತಿ, ಮತ್ತು ರುಕ್ಮಿಣಿ ಗಿರಿಮಾಜಿ ಅವರುಗಳು ತುಂಬ ಶ್ರಮವಹಿಸಿ ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರುಗಳಿಗೆ ಸಂಪಾದಕ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಈ ಮಧ್ಯೆ ಸಂಪಾದಕ ಸಮಿತಿಯ ಸದಸ್ಯರಲ್ಲೊಬ್ಬರಾದ ಪ್ರೊ. ಎಂ. ರಾಜಗೋಪಾಲಾಚಾರ್ಯರು ಮತ್ತು ಡಾ. ಮಂದಾಕಿನಿ ಹಾಗೂ ಸಂಪುಟ ಸಂಪಾದಕರಲ್ಲಿ ಒಬ್ಬರಾದ ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ, ಡಾ. ಕೆ.ಎಂ. ಕೃಷ್ಣರಾವ್, ಶ್ರೀಮತಿ ಪದ್ಮಾ ಮೂರ್ತಿ ಹಾಗೂ ಶ್ರೀ ಹನುಮನಗೌಡ ಮಾನ್ವಿ ಅವರು ನಮ್ಮನ್ನು ಅಗಲಿದ್ದು ದುಃಖದ ವಿಷಯವಾಗಿದೆ.

ಆಯಾ ಕಾಲದಲ್ಲಿ ಈ ಯೋಜನೆಗೆ ಸಹಕರಿಸಿದ ಹಾಗೂ ಈ ಯೋಜನೆಯ ಪರಿಕಲ್ಪನೆ ಯಶಸ್ವಿಯಾಗಿ ಕಾರ್ಯಾನುಷ್ಠಾನಕ್ಕೆ ಬರುವ ದಿಸೆಯಲ್ಲಿ ಸಹಕರಿಸಿದ ಈ ಹಿಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ವಿಶೇಷವಾಗಿ ಇಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರಿಗೆ, ಇಲಾಖೆಯ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ಚಂದ್ರಹಾಸ ಗುಪ್ತ ಮತ್ತು ಈಗಿನ ಕಾರ್ಯದರ್ಶಿಗಳಾದ ಶ್ರೀ ಸಿ. ಎಸ್. ಕೇದಾರ್ ಅವರಿಗೆ ನಮ್ಮ ನಮನಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ಈ ಯೋಜನೆಗೆ ನೆರವಾದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರುಗಳು ಹಾಗೂ ಈಗಿನ ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ ಮತ್ತು ಡಾ. ಮಂಜುಳಾ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ನೆರವಾದ ಎಂ. ಎಸ್. ಐ. ಎಲ್. ಸಂಸ್ಥೆಯ ಅಧಿಕಾರಿ ಹಾಗೂ ಸಿಬ್ಬಂದಿವರ್ಗಕ್ಕೆ, ವಿಶೇಷವಾಗಿ ಶ್ರೀ ಎಂ. ರವಿಶಂಕರ್, ವಿಶೇಷಾಧಿಕಾರಿ, ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳು ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ಗೊಂದಲಕ್ಕೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಅಂಕಿತ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ಕೀರ್ತನೆಗಳನ್ನು ಶುದ್ಧೀಕರಿಸುವುದು ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ದಾಸಸಾಹಿತ್ಯದ ಮೇಲಿನ ಗೌರವ ಪ್ರೀತಿಗಳು ನಮ್ಮಿಂದ ಈ ಕೆಲಸ ಮಾಡಿಸಿದೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತೇವೆ. ಈ ಮೂವತ್ತೈದು ಸಂಪುಟಗಳನ್ನು ಸಹೃದಯ ಲೋಕಕ್ಕೆ ಅರ್ಪಿಸುತ್ತೇವೆ. ಸಮಗ್ರ ದಾಸಸಾಹಿತ್ಯವು ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ-ಮನಗಳಲ್ಲಿ ಬೆಳಗಲೆಂದು ಹಾರೈಸುತ್ತೇವೆ.

ಸಂಪಾದಕ ಮಂಡಳಿ

ಪರಿವಿಡಿ

ಪ್ರಸ್ತಾವನೆ

ಹತ್ತೊಂಬತ್ತನೆಯ ಶತಮಾನದ ಹರಿದಾಸ ಸಾಹಿತ್ಯಕ್ಕೆ ತಮ್ಮ ವೈವಿಧ್ಯಮಯ ರಚನೆಗಳ ಮೂಲಕ ಅಪೂರ್ವ ಕೊಡುಗೆಯನ್ನು ನೀಡಿ ಕೇವಲ ೫೦–೬೦ ವರ್ಷಗಳ ಅಂತರದಲ್ಲಿಯೇ ಅಜ್ಞಾತರ ಪಟ್ಟಿಗೆ ಸೇರಿಹೋದವರು ಬಾಗೇಪಲ್ಲಿ ಸುಬ್ರಹ್ಮಣ್ಯ ದಾಸರು. ಇವರ ಅಂಕಿತ 'ಗುರುರಾಮವಿಠಲ'.

ಶ್ರೀಸುಬ್ರಹ್ಮಣ್ಯದಾಸರು ಕೋಲಾರ ಜಿಲ್ಲೆಯ ಬಾಗೇಪಲ್ಲಿಯವರು. ವೈಷ್ಣವರಲ್ಲಿ ಒಂದು ಉಪಪಂಗಡವಾದ ಷಾಷ್ಟಿಕಕುಲ (ಅರವತ್ತೊಕ್ಕಲು)ದವರು. ಶಾಂಡಿಲ್ಯಗೋತ್ರದವರು. ನರಸಿಂಹ ಇವರ ಮನೆದೇವರು. ಬಾಗೇಪಲ್ಲಿಯ ಸಮೀಪದ ಪಾತಪಾಳ್ಯ ಇವರ ಪೂರ್ವಿಕರ ವಾಸಸ್ಥಳ. ಬಾಗೇಪಲ್ಲಿದಾಸರು, ಪಾತಪಾಳ್ಯದ ದಾಸರು, ಸುಬ್ರಹ್ಮಣ್ಯದಾಸರು, ಬಾಗೇಪಲ್ಲಿ ಸುಬ್ರಹ್ಮಣ್ಯದಾಸರು, ಗುರುರಾಮವಿಠಲರು, ಕುರುಡುದಾಸರು ಹೀಗೆ ಹಲವು ಹೆಸರುಗಳಿಂದ ದಾಸರನ್ನು ಕರೆಯುತ್ತಿದ್ದರು. ದಾಸರು ರಚಿಸಿರುವ ಸ್ವವಂಶಾವಳಿ ಶ್ಲೋಕ ೨೫ ಪದ್ಯಗಳ ಒಂದು ಸಂಸ್ಕೃತ ಕೃತಿ. ಇದರಲ್ಲಿ ತಮ್ಮ ವಂಶಾವಳಿಯನ್ನು, ಕುಲಗೋತ್ರಗಳನ್ನು ನಿರೂಪಿಸಿದ್ದಾರೆ. 'ಪುರಂಜನೋಪಾಖ್ಯಾನ ' ಎಂಬ ಕೃತಿಯ ಕೊನೆಯ ಭಾಗದಲ್ಲಿ, 'ಒಬ್ಬನೇದಾಸ ಹುಟ್ಟಿದನಿವ' ಎಂಬ ಕೀರ್ತನೆಯುಲ್ಲಿಯೂ ತಮ್ಮ ಸ್ವಂತ ವಿಷಯಗಳನ್ನು ತಿಳಿಸಿದ್ದಾರೆ. ಇವರ ತಂದೆಯವರ ಹೆಸರು ಮಧ್ವರಾಯ, ನರಸಪ್ಪ ಪಿತಾಮಹ, ನಾರಣಪ್ಪ ಪ್ರಪಿತಾಮಹ. ದಾಸರ ತಾಯಿಯವರ ಹೆಸರು ನರಸಮ್ಮ, ಆಕೆಯ ತಂದೆ ಅಹೋಬಲರಾಯ.

ಸುಬ್ರಹ್ಮಣ್ಯ ನಾಲ್ಕು ವರ್ಷದವನಾಗಿರುವಾಗಲೇ ತಂದೆತಾಯಿಗಳು ಸ್ವರ್ಗಸ್ಥರಾದರು. ಅನಂತರ ಅವನು ಬೆಳೆದದ್ದು ಸೋದರಮಾವ ವೆಂಕಟರಾಯನ ಮನೆಯಲ್ಲಿ. ಅಜ್ಜಿ ಪುಟ್ಟಮ್ಮ ೧೨ನೆಯ ವಯಸ್ಸಿನವರೆಗೂ ಪೋಷಿಸಿದಳು. ಸೋದರಮಾವ ವೆಂಕಟರಾಯನೇ ಉಪನಯನ ಮಾಡಿದ. (ಉಪನಯನವಾದ ಮೇಲೆ ಹಲವಾರು ವರ್ಷಗಳ ಕಾಲ ಸುಬ್ರಹ್ಮಣ್ಯ ಒಬ್ಬೊಂಟಿಗನಾಗಿ ದೇಶಸಂಚಾರ ಮಾಡಿದ ೨೩ನೆಯ ವರ್ಷದಲ್ಲಿ ವಿಜಯರಾಮದಾಸರಿಂದ ದಾಸತ್ವದ ದೀಕ್ಷೆಯನ್ನು ಪಡೆದು ಗುರುರಾಮವಿಠಲ ಎಂಬ ಅಂಕಿತದಿಂದ ಹರಿದಾಸನಾದ.)

ದಾಸರ ಇಬ್ಬರು ಸೋದರ ಮಾವಂದಿರಲ್ಲಿ ಒಬ್ಬ ಗೃಹಸ್ಥನಾದರೂ ಮಕ್ಕಳಿರಲಿಲ್ಲ. ಮತ್ತೊಬ್ಬ ಬ್ರಹ್ಮಚಾರಿಯಾಗಿ ಉಳಿದುಕೊಂಡ. ದಾಸರು ಬ್ರಹ್ಮಚಾರಿಯಾಗಿಯೇ ಉಳಿದುಕೊಂಡದ್ದರಿಂದ ತಾಯಿಯ ಅಥವಾ ತಂದೆಯ ಕಡೆ ವಂಶ ಬೆಳೆಯಲಿಲ್ಲ. ಹೀಗಿರುವಾಗ ತನ್ನ ಪಿತೃಗಳಿಗೆ ಮೋಕ್ಷ ದೊರೆಯುವುದಾದರೂ ಹೇಗೆ ಎಂದು ಚಿಂತಿಸಿ ಪಿತೃಗಳ ಉದ್ಧಾರಕ್ಕಾಗಿ ತಬಿಬಿಾವು ಹರಿಸ್ತೋತ್ರಗಳನ್ನು ರಚಿಸಿದ್ದಾಗಿ ದಾಸರು ಹೇಳಿಕೊಂಡಿದ್ದಾರೆ. ತಮ್ಮ ಕೃತಿಗಳನ್ನೇ ಮಕ್ಕಳೆಂದು ಭಾವಿಸಿ ಇವೇ ತಮ್ಮ ಪಿತೃಗಳಿಗೆ ಮೋಕ್ಷವನ್ನು ನೀಡುತ್ತವೆಂಬ ಭಾವನೆ ತುಂಬ ಉದಾತ್ತವಾದುದು.

ದಾಸರ ಜೀವಿತಕಾಲವನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲದಿದ್ದರೂ, ಅವರೇ ರಚಿಸಿರುವ ಕೀರ್ತನೆಗಳ ಆಧಾರದ ಮೇಲೆ (ಸುಮಾರು ಕ್ರಿ.ಶ.೧೮೫೦ ರಿಂದ ೧೯೧೫ ಎಂದು ಭಾವಿಸಬಹುದು.) ವ್ಯಾಸರಾಜ ಮಠದ ಗುರುಪೀಳಿಗೆಯನ್ನು ನಿರೂಪಿಸುವ ಒಂದು ಕೃತಿಯಲ್ಲಿ ವಿದ್ಯಾಶ್ರೀನಿವಾಸ ಯತೀಂದ್ರರು(ಕ್ರಿ.ಶ.೧೮೯೦) ತಮ್ಮ ಸಮಕಾಲೀನರು ಎಂಬುದನ್ನು ಗುರುರಾಮವಿಠಲರು ಉಲ್ಲೇಖಿಸಿದ್ದಾರೆ. ವಿದ್ಯಾಪೂರ್ಣ ತೀರ್ಥರಿಂದ ಪ್ರಾರಂಭಿಸಿ (ಕ್ರಿ.ಶ.೧೮೨೪–೧೮೭೨) ವಿದ್ಯಾರತ್ನಾಕರ ತೀರ್ಥರವರೆಗೆ (ಕ್ರಿ.ಶ.೧೯೧೫) ಇದ್ದ ವ್ಯಾಸರಾಜಮಠದ ಯತಿಗಳು ಗುರುರಾಮವಿಠಲರ ಸಮಕಾಲೀನರು. ಆದರೆ ವಿದ್ಯಾ ಶ್ರೀನಿವಾಸ ತೀರ್ಥರವರಗೆ (ಕ್ರಿ.ಶ.೧೮೯೦) ಮಾತ್ರ ಗುರುಪರಂಪರೆಯ ಸ್ತುತಿಯಲ್ಲಿ ಉಲ್ಲೇಖಿಸಲಾಗಿದೆ. ಆದ್ದರಿಂದ ಕ್ರಿ.ಶ.೧೮೯೦ಕ್ಕೆ ಮೊದಲು ಗುರುರಾಮವಿಠಲರು ಈ ಗುರು ಪರಂಪರೆಯನ್ನು ರಚಿಸಿರಬೇಕು. ಗುರುರಾಮವಿಠಲರು ತಮ್ಮ ' ಸಿದ್ಧಾಂತ ಸಾರ

' ಎಂಬ ಗ್ರಂಥವನ್ನು ಕ್ರಿ.ಶ.೧೮೯೩ರಲ್ಲಿ ರಚಿಸಿದ್ದಾಗಿ ತಿಳಿಸಿದ್ದಾರೆ. ಕ್ರಿ.ಶ.೧೯೧೨ರಲ್ಲಿ ದೆಹಲಿಯಲ್ಲಿ ದರ್ಬಾರು ನಡೆಸಿದ ಜಾರ್ಜ್ ದ ಫಿಫ್ತ್‌ದೊರೆಗೆ ರಾಜಾಶೀರ್ವಾದ ಮಾಡಿದ್ದಾರೆ. ಇದರಿಂದ ದಾಸರು ಕ್ರಿ.ಶ.೧೯೧೨ರ ವರೆಗೂ ಜೀವಂತವಾಗಿದ್ದಿರಬೇಕು.

ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಪಟ್ಟಾಭಿಷೇಕವಾದ ಸಂದರ್ಭದಲ್ಲಿ (ಫೆಬ್ರುವರಿ ೧, ೧೮೯೫) ಗುರುರಾಮವಿಠಲರು ' ಕೃಷ್ಣನೃಪನು ಸಲಹಲಿ ಉತ್ಕೃಷ್ಟ ಫಲಗಳಾಗಲಿ ' ಎಂದು ಕೀರ್ತನೆಯೊಂದರಲ್ಲಿ ಹಾರೈಸಿದ್ದಾರೆ. ಮಹಾ ಎಡ್ವರ್ಡ್ ಚಕ್ರವರ್ತಿ ಹೆಸರನ್ನು ಉಲ್ಲೇಖಿಸಿದ್ದಾರೆ. ಮೈಸೂರಿನ ದಿವಾನರಾಗಿದ್ದ ದಿವಾನ್ ಸಿ.ವಿ.ರಂಗಚಾರ್ಲು ಅವರ ಆಡಳಿತದ ಅವಧಿಯಲ್ಲಿ ಬೆಂಗಳೂರು ಖಜಾನೆಯ ಭಕ್ಷಿಯಾಗಿದ್ದ ಸೇತುರಾಯ ಎಂಬ ಅಧಿಕಾರಿಯನ್ನು ಕರಿತು ' ಸೇತುರಾಯನ ಕತೆ ' ಎಂಬ ಖಂಡಕಾವ್ಯವನ್ನು ರಚಿಸಿದ್ದಾರೆ.

'ಪ್ರಾಣದೇವ ಜೀಯ ದೇಹದಲಿ ಪ್ರಾಣ ತಗ್ಗಿತಯ್ಯ' ಎಂಬ ಕೀರ್ತನೆಯಲ್ಲಿ ಅನಾರೋಗ್ಯ ತಮ್ಮನ್ನು ಕಾಡುತ್ತಿದೆ ಎಂದೂ, ಕೈಕಾಲುಗಳು ಸೋತು ಹೋಗಿದೆಯೆಂದೂ, ಕಾಲ ಮೃತ್ಯು ಸಮೀಪಿಸುತ್ತಿದೆಯೆಂದೂ ತಿಳಿಸಿದ್ದಾರೆ. 'ವರುಷ ಐವತ್ತಾರು ಕಳೆದಿತು ಪರಿಪಾಲಿಪರ್‍ಯಾರು' ಎಂದು ಹಂಬಲಿಸಿದ್ದಾರೆ. ಸ್ವಕೀಯ ವೃತ್ತಾಂತವನ್ನೊಳಗೊಂಡ ಈ ಕೀರ್ತನೆಯ ರಚನೆಯ ಕಾಲಕ್ಕೆ ದಾಸರಿಗೆ ಐವತ್ತಾರು ವರ್ಷವಾಗಿರಬೇಕು.

ಸುಬ್ರಹ್ಮಣ್ಯದಾಸರು ದೊಡ್ಡಬಳ್ಳಾಪುರದ ಮುದ್ದುಮೋಹನ ವಿಠಲದಾಸರ (ಕ್ರಿ.ಶ.೧೮೯೮) ಸಮಕಾಲೀನರು. ಮುದ್ದುಮೋಹನ ವಿಠಲದಾಸರು ದೊಡ್ಡಬಳ್ಳಾಪುರದಲ್ಲಿ ಕಟ್ಟಿಸಿದ ವಿಜಯ ವಿಠಲ ದೇವಾಲಯಕ್ಕೆ ಸುಬ್ರಹ್ಮಣ್ಯದಾಸರು ಭೂಮಿಯನ್ನು ದಾನವಾಗಿ ನೀಡಿದ್ದರು.

ಈ ಎಲ್ಲದರ ಆಧಾರದ ಮೇಲೆ ಶ್ರೀ ಗುರುರಾಮವಿಠಲರು ಕ್ರಿ.ಶ. ಸುಮಾರು ೧೮೫೦ ರಿಂದ ೧೯೧೫ರವರೆಗೆ ಜೀವಿಸಿದ್ದರೆಂದು ಹೇಳಬಹುದು.

ಗುರುರಾಮವಿಠಲರು ಹುಟ್ಟು ಕುರುಡರಾಗಿದ್ದರೆಂದೂ, ಆದ್ದರಿಂದ ಅವರನ್ನು ಕುರುಡುದಾಸರೆಂದೇ ಕರೆಯುತ್ತಿದ್ದರೆಂದೂ ಪ್ರತೀತಿ. ಆದರೆ ಅವರ ಕೃತಿಗಳಲ್ಲಿರುವ ಅಪಾರ ಲೋಕಾನುಭವ, ಪಾಂಡಿತ್ಯಗಳನ್ನು ಗಮನಿಸಿದರೆ ಇವರು ಹುಟ್ಟು ಕುರುಡರಾಗಿರಲಾರರು. ಬಹುಶಃ ಮಧ್ಯವಯದಲ್ಲಿ ಕಣ್ಣುಗಳನ್ನು ಕಳೆದುಕೊಂಡು ಕುರುಡರಾಗಿ ದೇಶಾಂತರ ಹೊರಟುಹೋದರೆಂದು ಕಾಣುತ್ತದೆ. ಊರೂರು ಅಲೆದು, ನೂರಾರು ವಿಷಯಗಳನ್ನು ತಿಳಿದು, ಭಾರತ, ಭಾಗವತ, ಶಾಸ್ತ್ರಗ್ರಂಥಗಳನ್ನು ಕೇಳಿ ಲೋಕಾನುಭವ ಪಡೆದು ದಾಸದೀಕ್ಷೆ ಸ್ವೀಕರಿಸಿರಬೇಕು. ಇವರು ಕುರುಡರಾಗಿದ್ದರೆಂಬುದಕ್ಕೆ ಕೀರ್ತನೆಗಳಲ್ಲೂ ಉಲ್ಲೇಖಗಳು ದೊರೆಯುತ್ತವೆ. 'ಇಹ ಸುಖ ಮೊದಲೇ ಇಲ್ಲ' ಎಂಬ ಕೀರ್ತನೆಯಲ್ಲಿ

'ಕಣ್ಣಿಲ್ಲದ ಚಿಂತೆ ಒಂದು । ಸದಾ
ಬನ್ನಬಡುವುದು ಯೋಚನೆ ಎರೆಡು
ನಿನ್ನವನೆನಿಸೀ ಕಷ್ಟ ಬಿಡಿಸಿ ಒಳ
ಗಣ್ಣ ಕೊಟ್ಟು ನಿನ್ನ ಸೇವೆಯ ಪಾಲಿಸೋ'

ಎಂದು ತಮಗೆ ಒಳಗಣ್ಣು ನೀಡುವಂತೆ ದೇವರನ್ನು ಬೇಡಿದ್ದಾರೆ. 'ಸಾಕು ಸಾಕು ಸ್ವಾಮಿ ಸಂಸಾರವು' ಎಂಬ ಕೀರ್ತನೆಯಲ್ಲಿ ಕಿವಿಗಳು ಕೇಳದು. ಕಣ್ಣುಕಾಣದು, ಬಂಧುಗಳನ್ನು ಆಶ್ರಯಿಸಿ ಬದುಕುವುದು ಬಹಳ ಕಷ್ಟ ಎಂದು ಭಾಗ್ಯವಲ್ಲಿಯ ಹನುಮಂತನಲ್ಲಿ ತಮ್ಮ ಕಷ್ಟಗಳನ್ನು ನಿವೇದಿಸಿಕೊಂಡಿದ್ದಾರೆ. 'ಒಂದು ಅರಿಯದ ಉಭಯಾಂಧನು ನಾನು' ಎಂದು ಮತ್ತೊಂದು ಕೀರ್ತನೆಯಲ್ಲಿ ಹೇಳಿದ್ದಾರೆ.

ಗುರುರಾಮವಿಠಲರ ಎಲ್ಲ ಕೀರ್ತನೆಗಳನ್ನು ಸಂಗ್ರಹಿಸಿ ತಮ್ಮ ಹರಿಕಥೆಗಳಿಗೆ ಬಳಸಿಕೊಳ್ಳುತ್ತಿದ್ದ ಶ್ರೀ ಟಿ.ಕೆ. ವೇಣುಗೋಪಾಲದಾಸರು ತಮ್ಮ ದತ್ತು ತಾಯಿಯ ತವರು ಮನೆಯ ದಾಯಾದಿಗಳಾದ ಗುರುರಾಮವಿಠಲರ ಬಗ್ಗೆ ಹೀಗೆ ಹೇಳಿದ್ದಾರೆ: 'ಸುಬ್ರಹ್ಮಣ್ಯ ದಾಸರನ್ನು ನಮ್ಮ ಜನಕತಂದೆ, ತಾಯಿ, ಹಿರಿಯ ಅಕ್ಕ ಮತ್ತು ಹಿರಿಯ ಅಣ್ಣ ನೋಡಿದ್ದರು, ಅವರು ವರ್ಷಕ್ಕೆ ಒಂದು ಬಾರಿ ನಮ್ಮ ಮನೆಗೆ ಬಂದು ಹೋಗುತ್ತಿದ್ದರಂತೆ. ಅವರು ಹುಟ್ಟು ಕುರುಡರು ಎಂದು ಅವರಿಂದ ತಿಳಿದು

ಬಂತು. ಇದು ಅವರನ್ನು ನೋಡಿದವರ ಅಭಿಪ್ರಾಯವಾದರೂ. ಬಹುಶಃ ಹುಟ್ಟುಕುರುಡರಾಗಿರಲಾರರು. ಯೌವ್ವನಾವಸ್ಥೆಯಲ್ಲಿ ಯಾವಾಗಲೋ ಕಣ್ಣು ಕಳೆದುಕೊಂಡು ವೈರಾಗ್ಯಪರರಾಗಿರಬೇಕು'.

ಸುಬ್ರಹ್ಮಣ್ಯದಾಸರು ಕುರುಡರಾದರೂ ಯಾರ ಸಹಾಯವನ್ನೂ ಪಡೆಯದೆ ಒಬ್ಬಂಟಿಗರಾಗಿ ಹೆಗಲ ಮೇಲೆ ಹಸಿಬೆ ಚೀಲವನ್ನು ಹಾಕಿಕೊಂಡು ಊರೂರು ಸಂಚರಿಸುತ್ತಿದ್ದರು. ಕಾಶಿಯಿಂದ ಕನ್ಯಾಕುಮಾರಿಯವರೆಗೂ ಪಾದಚಾರಿಗಳಾಗಿ ತೀರ್ಥಯಾತ್ರೆಯನ್ನು ಮಾಡಿ ಬಂದವರು. ದಾಸರು ಕುರುಡರಾದ್ದರಿಂದ ಓದುವ ಬರೆಯುವ ಅವಕಾಶವೇ ಅವರಿಗಿರಲಿಲ್ಲ. ಆದರೂ ಬಹುಭಾಷಾಜ್ಞಾನವುಳ್ಳವರಾಗಿದ್ದರು. ಮಧ್ವಾಚಾರ್ಯರ ಕೃತಿಗಳು, ಹರಿದಾಸರ ಕೀರ್ತನೆಗಳು, ಭಾರತ, ಭಾಗವತ, ರಾಮಾಯಣ ಇವುಗಳನ್ನು ಕಂಠಪಾಠ ಮಾಡಿಕೊಂಡಿದ್ದರು. ಯಾವುದಕ್ಕಾದರೂ ಆಧಾರ ಎಲ್ಲಿದೆ ಎಂದು ಕೇಳಿದರೆ ಗ್ರಂಥದ ಹೆಸರನ್ನೂ, ಅಧ್ಯಾಯವನ್ನೂ, ಶ್ಲೋಕಗಳ ಸಂಖ್ಯೆಯನ್ನು ಕೇಳಿದ ನೆನಪಿನಿಂದಲೇ ಹೇಳುತ್ತಿದ್ದರಂತೆ. ತಾವು ಯಾತ್ರೆ ಮಾಡಿದ ಕ್ಷೇತ್ರ ಮೂರ್ತಿಗಳ ವರ್ಣನೆಯನ್ನು ಬೇರೆಯವರಿಂದ ಕೇಳಿ ತಿಳಿದುಕೊಂಡು ಆ ಪ್ರತಿಮೆಗಳ ಉದ್ದ, ಅಗಲ, ಭಂಗಿ, ಅಡಿಯಿಂದ ಮುಡಿಯವರೆಗಿನ ವಸ್ತ್ರಾಲಂಕಾರ ತಾವು ಒಳಗಣ್ಣಿಂದ ನೋಡಿದ ದರ್ಶನ ಎಲ್ಲವನ್ನೂ ನಿರೂಪಿಸುತ್ತಿದ್ದರು. ಆಶು ಕವಿಗಳಾಗಿ ಕೇಳಿದ ವಸ್ತುಗಳ ಮೇಲೆಲ್ಲಾ ಪದ್ಯ ಬರೆಯುತ್ತಿದ್ದರು. ಕುಳಿತಲ್ಲೇ ಹತ್ತಾರು ನುಡಿಗಳ ದೇವರನಾಮಗಳನ್ನು ಕಟ್ಟುತ್ತಿದ್ದರು. ಮದುವೆ, ಮುಂಜಿ, ಉತ್ಸವ, ಜಾತ್ರೆ ಹೀಗೆ ಹಲವು ಸಂದರ್ಭಗಳಿಗೆ ಸ್ಪಂದಿಸಿ ಹಾಡು ಹೇಳುತ್ತಿದ್ದರು. ಯಾರಾದರೂ ಬರವಣಿಗೆ ತಿಳಿದವರು ಸಿಕ್ಕಿದರೆ ತಾವು ರಚಿಸಿದ ದೇವರನಾಮಗಳನ್ನು ಮರಯದೆ ಹೇಳಿ ಬರೆಯಿಸುತ್ತಿದ್ದರು. ಈಗ ನಮಗೆ ದೊರೆತಿರುವ ಅವರ ಕೃತಿಗಳೆಲ್ಲವೂ ಇದೇ ಕ್ರಮದಲ್ಲಿ ಬೇರೆಯವರು ಬರೆದುಕೊಂಡ ರಚನೆಗಳು. ತಾವು ರಚಿಸಿದ ಕೃತಿಗಳನ್ನು ಮತ್ತೊಮ್ಮೆ ಅವಲೋಕಿಸಿ ತಿದ್ದುಪಡಿ ಮಾಡುವ ಸಾಧ್ಯತೆಯೂ ದಾಸರಿಗೆ ಇರಲಿಲ್ಲ. ಆದರೆ ದಾಸರ ವಿದ್ವತ್ತನ್ನು, ಕವಿತಾ ಚಾತುರ್ಯವನ್ನು ಮೆಚ್ಚಿಕೊಂಡಿದ್ದ ಆಗಿನ ವಿದ್ವಾಂಸರುಗಳಾದ ಬಾಗೇಪಲ್ಲಿಯ ಸಾಹಿತ್ಯ ವಿದ್ವಾನ್ ಶ್ರೀನಿವಾಸಾಚಾರ್ಯರು ಮೈಸೂರು ರಾಘವೇಂದ್ರಾಚಾರ್ಯರು, ಬೆಂಗಳೂರು ಶಿವರಾಮಶಾಸ್ತ್ರಿಗಳು ಕೃತಿಗಳ

ಪರಿಷ್ಕರಣೆಯಲ್ಲಿ ಸಹಾಯ ಮಾಡುತ್ತಿದ್ದರು. ಈ ವಿದ್ವಾಂಸರುಗಳ ಸಹಕಾರದಿಂದ ಸಿದ್ಧಾಂತಸಾರ, ಪಂಚಕಥಾ, ಮತ್ತು ದೇವರನಾಮಗಳು ೧೯೦೫ರಲ್ಲಿ ಪ್ರಕಟವಾದುವು. ಮುದ್ರಿತ ಕೃತಿಗಳಿಂದ ಬರಬಹುದಾದ ಅಲ್ಪಾದಾಯವನ್ನು ಕೂಡಾ ದಾಸರು ಅಪೇಕ್ಷಿಸಲಿಲ್ಲ. ತಮ್ಮ ಎಲ್ಲ ಕೃತಿಗಳ ರಿಜಿಸ್ಟರ್ಡ್ ಕಾಪಿರೈಟ್ ಹಕ್ಕನ್ನು ಬಾಗೇಪಲ್ಲಿ ತಾಲ್ಲೂಕು ಪಾತಪಾಳ್ಯದ ಜಗದೇಶವಿಠಲನಾರಾಯಣದಾಸರಿಗೆ ಧರ್ಮವಾಗಿ ಬಿಟ್ಟುಕೊಟ್ಟರು.

ದಾಸದೀಕ್ಷೆ ಪಡೆಯುವ ಪೂರ್ವದಲ್ಲಿ ಮತ್ತು ಅನಂತರ ನಿಂತಲ್ಲಿ ನಿಲ್ಲದೆ ದಾಸರು ದೇಶ ಸಂಚಾರ ಮಾಡಿದರು. ಬೆಂಗಳೂರು, ಕೋಲಾರ, ನೆರೆಯ ಆಂಧ್ರದ ಗಡಿಪ್ರದೇಶಗಳ ಹಳ್ಳಿಹಳ್ಳಿಗಳನ್ನು ಸುತ್ತಿದರು. ಅಲ್ಲಿನ ದೇವಾಲಯಗಳನ್ನು, ದೇವತಾಮೂರ್ತಿಗಳನ್ನು ಕುರಿತು ಕೀರ್ತನೆಗಳನ್ನು ರಚಿಸಿದರು. ಜನರ ನಡವಳಿಕೆಗಳನ್ನು ಆಚಾರ ವಿಚಾರಗಳನ್ನು ಬದಲಾಗುತ್ತಿದ್ದ ಸಾಂಸ್ಕೃತಿಕ ನೆಲೆಗಳನ್ನು ಕೇಳಿ ತಿಳಿದು ತಮ್ಮ ಕೃತಿಗಳಲ್ಲಿ ದಾಖಲಿಸಿದರು. ಈ ಅವಧಿಯಲ್ಲಿ ಅವರಿಗೆ ಚೆನ್ನಾಗಿ ದ್ರವ್ಯ ಸಂಪಾದನೆಯೂ ಆಯಿತು. ತಾವು ಸಂಪಾದಿಸಿದ ದ್ರವ್ಯವನ್ನು ಬಡವರಿಗೆ, ದೇವಾಲಯಗಳಿಗೆ ದಾನ ಮಾಡುತ್ತ ಅವಧೂತರಂತೆ ಸಂಚರಿಸಿದರು. ೫೬ನೆಯ ವಯಸ್ಸಿನಲ್ಲಿ ರೋಗದ ಉಪದ್ರವ ಇವರನ್ನು ಬಹಳವಾಗಿ ಕಾಡಿರಬೇಕು. ಶರೀರ ಬೆಂಡಾಯಿತು, ಊಟ ಮಾಡಲು, ಬಟ್ಟೆ ಉಡಲು ಕೂಡಾ ಬೇರೊಬ್ಬರನ್ನು ಆಶ್ರಯಿಸಬೇಕಾದ ಪರಿಸ್ಥಿತಿ ಉಂಟಾಯಿತು. ಎಲ್ಲ ಲೌಕಿಕ ಪಾರಮಾರ್ಥಿಕ ಆಸೆಗಳು ದೂರವಾಗಿ ದಾಸರು ಸಂಪೂರ್ಣ ವಿರಕ್ತರಾದರು. ಇದೇ ಸುಮಾರಿನಲ್ಲಿ ಅವರು ಎಲ್ಲಿ ಯಾವಾಗ ದೇಹತ್ಯಾಗ ಮಾಡಿದರೆಂಬ ವಿವರಗಳು ತಿಳಿಯುವುದಿಲ್ಲ. ಏಕೆಂದರೆ ಅವರ ವಂಶಸ್ಥರಲ್ಲಿ ದಾಸರೇ ಕೊನೆಯ ವ್ಯಕ್ತಿ.

ದಾಸರು ತಮ್ಮ ಜೀವಿತಾವಧಿಯಲ್ಲಿ ಕೆಲವು ಪವಾಡಗಳನ್ನು ಮಾಡಿದರೆಂಬ ಪ್ರತೀತಿಯಿದೆ. ಅವರು ನಿಜವಾಗಿ ಪವಾಡಗಳನ್ನೇ ಮಾಡಿದರೋ ಅಥವಾ ಸ್ವಾಭಾವಿಕ ಘಟನೆಗಳೇ ಪವಾಡ ಸದೃಶವಾಗಿ ಕಂಡವೋ ತಿಳಿಯದು. ಒಂದೆರೆಡು ಸಂದರ್ಭಗಳು ಹೀಗಿವೆ :

ಚಿಂತಾಮಣಿಯ ಸಮೀಪದ ಹಳ್ಳಿಯೊಂದರಲ್ಲಿ ದಾಸರು ಒಂದು ಮದುವೆ ಮನೆಗೆ ಹೋಗಿದ್ದರು. ಮದುವೆ ಮನೆಯಲ್ಲಿ ಒಂದು ಬಂಗಾರದ ಸರ ಕಳುವಾಗಿ ದಾಸರೇ ಅದನ್ನು ಕದ್ದಿರಬೇಕೆಂದು ಆರೋಪಿಸಲಾಯಿತು. ಪೋಲಿಸರು ದಾಸರನ್ನು ಎಳೆದೊಯ್ದು ಬೂಟುಕಾಲಿನಿಂದ ಒದ್ದರು. ದಾಸರು ಬೇಸರಗೊಳ್ಳಲಿಲ್ಲ, ರೋದಿಸಲಿಲ್ಲ, ತಾವು ಅಪರಾಧಿ ಅಥವಾ ನಿರಪರಾಧಿ ಎಂಬುದನ್ನು ಹೇಳಲಿಲ್ಲ. ಬದಲಿಗೆ ಒದ್ದವನನ್ನು ಕುರಿತು 'ಮಹಾರಾಯ ನೀನೆಷ್ಟು ದಯಾಮಯ, ನನ್ನ ಪಾಪಗಳನ್ನೆಲ್ಲಾ ದೂರಮಾಡಿಬಿಟ್ಟೆ ಸುಖವಾಗಿರು' ಎಂದು ಹಾರೈಸಿದರು. ರಾತ್ರಿಯೆಲ್ಲಾ ಠಾಣೆಯಲ್ಲಿಯೇ ಕಳೆದರು. ಮಾರನೆಯದಿನ ಬೆಳಗ್ಗೆಯೇ ದೂರು ಕೊಟ್ಟಿದ್ದ ಗೃಹಸ್ಥ ಠಾಣೆಗೆ ಧಾವಿಸಿ ಬಂದ. ಬಂಗಾರದ ಸರ ಸಿಕ್ಕಿತೆಂದೂ, ಅನ್ಯಾಯವಾಗಿ ದಾಸರ ಮೇಲೆ ಅಪವಾದವನ್ನು ಹೊರಿಸಿ ಮಹಾಪರಾಧ ಮಾಡಿದೆನೆಂದೂ ಮತ್ತೆ ಮತ್ತೆ ಅವರ ಕಾಲಿಗೆ ಬಿದ್ದ, ಪೋಲೀಸ್ ಅಧಿಕಾರಿಗೂ ತುಂಬಾ ಭಯವಾಯಿತು ಪಶ್ಚಾತ್ತಾಪಪಡುತ್ತಾ ಅವನೂ ದಾಸರ ಕಾಲಿಗೆ ಬಿದ್ದ. ದಾಸರು ಎಲ್ಲರಿಗೂ ಕೈಮುಗಿದು 'ಎಷ್ಟು ಪ್ರಾಯಶ್ಚಿತ್ತ ಮಾಡಿಕೊಂಡರೂ ಹೋಗದ ಪಾಪರಾಶಿಯನ್ನೆಲ್ಲಾ ಒಂದೇ ರಾತ್ರಿಯಲ್ಲಿ ಪರಿಹಾರವಾಗುವಂತೆ ನೀವೆಲ್ಲರೂ ಮಹೋಪಕಾರ ಮಾಡಿದ್ದೀರಿ, ಪತಿತನನ್ನು ಪಾವನಮಾಡಿದ ನಿಮಗೆಲ್ಲರಿಗೂ ವಂದನೆಗಳು' ಎಂದು ಹೇಳಿ ನಗುತ್ತಾ ಹೊರಟುಹೋದರು. ಈತನೇನು ಹುಚ್ಚನೋ, ಬೆಪ್ಪನೋ, ಅವಧೂತನೋ ಎಂದು ಜನ ವಿಸ್ಮಯಪಟ್ಟರು.

ಬಾಲಕನೊಬ್ಬನಿಗೆ ವಿಪರೀತ ಜ್ವರ ಬಂದು ಅನ್ನನೀರುಗಳನ್ನು ತೆಗೆದುಕೊಳ್ಳದೆ ಬಳಲುತ್ತಿದ್ದ. ಅಕಸ್ಮಾತ್ ದಾಸರು ಆ ಮನೆಗೆ ಬಂದರು. ಬಳಲಿದ ಬಾಲಕನ ಸ್ಥಿತಿಯನ್ನು ಕೇಳಿ ಕನಿಕರ ಉಂಟಾಯಿತು. ಜ್ವರವು ಅಡಗುವಂತೆ ಮೃತ್ಯುಂಜಯನಾದ ಭಯನಿವಾರಣ ನಾರಸಿಂಹನನ್ನು ಒಂದು ಕೀರ್ತನೆಯ ಮೂಲಕ ಸ್ತುತಿಸಿ ಪ್ರಾರ್ಥಿಸಿದರು. (ಕೀ.೩೩೪) ಬಾಲಕ ಆರೋಗ್ಯವಂತನಾಗಿ ಬದುಕಿಕೊಂಡ.

ಕೋಲಾರಜಿಲ್ಲೆಯಲ್ಲಿ ಸಾಮಾನ್ಯವಾಗಿ ಮಳೆ ಕಡಿಮೆ. ಮಳೆಯಿಲ್ಲದೆ ಒಮ್ಮೆ ಕುಡಿಯುವ ನೀರಿಗೂ ತೊಂದರೆಯಾಗಿ ಜನ ಪರಿತಪಿಸಿ ಮಳೆ ತರಿಸುವಂತೆ ದಾಸರನ್ನು ಬೇಡಿದರು. ಮಳೆ ಬಂದು ಸುಭಿಕ್ಷ ನೆಲಸಲಿ ಎಂದು ಹಾರೈಸುತ್ತಾ ದಾಸರು ಸೂರ್ಯಮಂಡಲ ಮಧ್ಯವರ್ತಿಯಾದ ನಾರಾಯಣನನ್ನು ಸ್ತೋತ್ರಮಾಡಿ ಹಾಡಿದರು. (ಕೀ.೩೩೭) ಪರ್ಜನ್ಯ ನಾಮಕನಾದ ಶ್ರೀಹರಿ ಸುವೃಷ್ಟಿಯನ್ನು ಕೊಟ್ಟು ಜನರನ್ನು ಸಂತೋಷಪಡಿಸಿದನೆಂದು ಹೇಳುತ್ತಾರೆ.

ದಾಸರು ತಮ್ಮ ತೋಳಿನಲ್ಲಿ ಒಂದು ಸೇರು ತೂಕದ ಬೆಳ್ಳಿ ಬಳೆಯನ್ನು ಧರಿಸುತ್ತಿದ್ದರು. ದಾಸರಿಗೇಕೆ ಬೆಳ್ಳಿ ಬಂಗಾರ ಎಂದು ಯಾರಾದರೂ ಕೇಳಿದರೆ 'ನನಗೆ ಹಿಂದೆ ಮುಂದೆ ಯಾರೂ ಇಲ್ಲ, ಯಾವಾಗ ಎಲ್ಲಿ ಸಾಯುತ್ತೇನೆಯೋ ಗೊತ್ತಿಲ್ಲ ಹಣವನ್ನು ಚಂದಾ ಎತ್ತಿ ಅಗ್ನಿ ಸಂಸ್ಕಾರ ಮಾಡುವ ತೊಂದರೆ ಯಾರಿಗೂ ಬೇಡ. ಈ ಬೆಳ್ಳಿಯ ಬಳೆಯನ್ನು ಮಾರಿ ಯಾವನಾದರೂ ಪುಣ್ಯಾತ್ಮ ನನ್ನ ಸಂಸ್ಕಾರ ಮಾಡಲಿ ಎಂದು ಈ ಬಳೆಯನ್ನು ಹಾಕಿಕೊಂಡಿದ್ದೇನೆಯೇ ಹೊರತು ಅಂದ ಚಂದಕ್ಕಲ್ಲ' ಎಂದು ಹೇಳುತ್ತಿದ್ದರಂತೆ.

ಗುರುರಾಮವಿಠಲರು ವಾರ್ಧಕ ಷಟ್ಪದಿಯಲ್ಲಿ ರಚಿಸಿರುವ ದಾಸಪೀಳಿಗೆಯ ಸ್ತುತಿಯಲ್ಲಿ ತಮ್ಮ ಗುರು ಪರಂಪರೆಯನ್ನು ಹೀಗೆ ತಿಳಿಸಿದ್ದಾರೆ :

೧. ಶ್ರೀಪಾದರಾಜ (ರಂಗವಿಠ್ಠಲ)
೨. ವ್ಯಾಸರಾಜ (ಶ್ರೀಕೃಷ್ಣ)
೩. ಪುರಂದರದಾಸ (ಪುರಂದರ ವಿಠಲ)
೪. ವಿಜಯದಾಸ (ವಿಜಯವಿಠಲ)
೫. ಮೋಹನದಾಸ (ಮೋಹನ ವಿಠಲ)
೬. ತಿರುಮಲದಾಸ (ಜನಾರ್ಧನ ವಿಠಲ)
೭. ಪ್ರೇಮದಾಸ (ಅಭಿನವ ಜನಾರ್ಧನವಿಠಲ)
೮. ದೂರಪ್ಪದಾಸ (ಭಾಗ್ಯನಿಧಿವಿಠಲ)
೯. ಚಿತ್ರದುರ್ಗದ ಮಾಧವರಾಯ (ರಾಮವಿಠಲ)
೧೦. ಬಾಗೇಪಲ್ಲಿ ಸುಬ್ರಹ್ಮಣ್ಯದಾಸ (ಗುರುರಾಮವಿಠಲ)

'ಗುರುಸಂತತಿಗೆ ನಮೋ' ಎಂಬ ಕೀರ್ತನೆಯಲ್ಲಿ ಮತ್ತು 'ಪಾರಂಪರ್ಯಾಂಕಿತ ಪದ' ಇವುಗಳಲ್ಲಿ ಆರೋಹಣ ಕ್ರಮದಲ್ಲಿ ತಮ್ಮ ಗುರು ಪರಂಪರೆಯನ್ನು ನಿರೂಪಿಸಿದ್ದಾರೆ. ಇದು ಹಿಂದಿನ ದಾಸ ಪೀಳಿಗೆಗಿಂತ ಸ್ವಲ್ಪ ಭಿನ್ನವಾಗಿದೆ.

೧. ಗುರುರಾಮವಿಠಲ (ಬಾಗೇಪಲ್ಲಿ ಸುಬ್ರಹ್ಮಣ್ಯದಾಸ)
೨. ಶ್ರೀರಾಮವಿಠಲ, ರಾಮವಿಠಲ, ವಿಜಯರಾಮವಿಠಲ (ಚಿತ್ರದುರ್ಗದ ಮಾಧವರಾಯರು)
೩. ಭಾಗ್ಯನಿಧಿವಿಠಲ (ದೂರಪ್ಪದಾಸರು ಅಥವಾ ದೂರ್ವಾಸರಾಯರು)
೪. ಅಭಿನವ ಜನಾರ್ದನ ವಿಠಲ (ಪ್ರೇಮದಾಸರು)
೫. ಸಿರಿಜನಾರ್ದನವಿಠಲ (ತಿರುಮಲದಾಸರು)
೬. ಗುರುಗೋಪಾಲವಿಠಲ (ಶೀನಪ್ಪದಾಸರು)
೭. ಗೋಪಾಲವಿಠಲ (ಭಾಗಣ್ಣದಾಸರು)
೮. ವಿಜಯವಿಠಲ (ವಿಜಯದಾಸರು)
೯. ಪುರಂದರವಿಠಲ (ಪುರಂದರದಾಸರು)
೧೦. ಶ್ರೀಕೃಷ್ಣ (ವ್ಯಾಸರಾಜರು)
೧೧. ರಂಗವಿಠಲ (ಶ್ರೀ ಪಾದರಾಜರು)

ಗುರುರಾಮವಿಠಲರು ರಚಿಸಿರುವ 'ಮಧ್ವಸಿದ್ಧಾಂತಸಾರ' ಎಂಬ ಕೃತಿಯಲ್ಲಿನ ೧೬ನೆಯ ಸಂಧಿಯ ಐದು ಪದ್ಯಗಳಲ್ಲಿ ವ್ಯಾಸರಾಯರಿಂದ ಪ್ರಾರಂಭಿಸಿ ಅವರೋಹಣ ಕ್ರಮದಲ್ಲಿ ಗುರು ಪರಂಪರೆಯನ್ನು ನಿರೂಪಿಸಿದ್ದಾರೆ. ಇದಕ್ಕೂ 'ಗುರುಸಂತತಿಗೆ ನಮೋ' ಮತ್ತು 'ಪಾರಂಪರ್ಯಾಂಕಿತ ಪದ' ಎಂಬ ಕೀರ್ತನೆಯಲ್ಲಿ ಹೇಳಿರುವ ಗುರುಪರಂಪರೆಗೂ ವ್ಯತ್ಯಾಸವಿಲ್ಲ.

'ವಿಷ್ಣುಶತಕ' ಎಂಬ ಕೃತಿಯ ಅಂಕಿತನುಡಿಯಲ್ಲಿ ತಮ್ಮ ಗುರುಪರಂಪರೆಯನ್ನು ಹೀಗೆ ಪ್ರಸ್ತಾಪಿಸಿದ್ದಾರೆ :

ಸಿರಿಪಾದರಾಯರ ಪರಂಪರೆಯೊಳ್
ನೆರೆಪತ್ತೊಂದನೆಯವಂ ಮನದೊಳ್
ಗುರುರಾಮವಿಠಲನು ಪೇಳಿಸಿದಂ-
ತರುಹಿರ್ಪ ವಿಷ್ಣುಶತಕಂ ತರಳಂ

ಇದರಂತೆ ಶ್ರೀಪಾದರಾಜ ಪರಂಪರೆಯಲ್ಲಿ ತಾವು ಹನ್ನೊಂದನೆಯವರು ಎಂದು ಹೇಳಿಕೊಂಡಿರುವುದರಿಂದ ಆರೋಹಣ ಕ್ರಮದ ಗುರುಪರಂಪರೆಯೆ ಹೆಚ್ಚು ಸಂಭಾವ್ಯವಾದದ್ದು ಎನ್ನಬಹುದು. ಗುರುರಾಮವಿಠಲರಿಗೆ ಅಂಕಿತ ನೀಡಿದವರು ಚಿತ್ರದುರ್ಗದ ಮಾಧವರಾಯರು. ಇವರು ಬೆಂಗಳೂರಿನಲ್ಲಿ (ಕಲ್ಯಾಣಪುರ) ಹಲವುಕಾಲ ನೆಲೆಸಿದ್ದು ಕೀರ್ತನೆ, ಹರಿಕಥೆ, ಪುರಾಣಗಳನ್ನು ಬೋಧಿಸುತ್ತ ಇದ್ದವರು, ಜ್ಞಾನ, ವೈರಾಗ್ಯ ಮತ್ತು ಸದ್ಭಕ್ತಿಗಳನ್ನು ಹೊಂದಿದ್ದವರು ಎಂದು ದಾಸ ಪೀಳಿಗೆಯ ಷಟ್ಪದಿಯಲ್ಲಿ ಸ್ತುತಿಸಿದ್ದಾರೆ. (ಅನುಬಂಧ-೮)

ಕೃತಿಗಳು

ಗುರುರಾಮವಿಠಲ ಅಂಕಿತದಲ್ಲಿ ದೊರೆತಿರುವ ಕೀರ್ತನೆಗಳ ಸಂಖ್ಯೆ ಸುಮಾರು ೩೫೦. ಭಗವಂತನ ಮತ್ತಿತರ ದೇವತೆಗಳ ಸಂಕೀರ್ತನೆ, ಆತ್ಮನಿವೇದನೆ, ತಾತ್ವಿಕ ಕೃತಿಗಳು, ಲೋಕನೀತಿ, ಸಮಾಜ ದರ್ಶನ, ಸಂಪ್ರದಾಯದ ಹಾಡುಗಳು, ವಿಶೇಷ ಸಂದರ್ಭದ ಕೃತಿಗಳು, ಹೀಗೆ ಕೀರ್ತನೆಗಳಲ್ಲಿ ವಿಷಯ ವೈವಿಧ್ಯವನ್ನು ಕಾಣಬಹುದು.

ಕಥನರೂಪವಾದ ಮನ್ಮಥ ಚರಿತ್ರೆ, ಪುರಂಜನೋಪಾಖ್ಯಾನ ಲಾವಣಿ, ಆಧ್ಯಾತ್ಮ ರಾಮಾಯಣ, ಸಂಕ್ಷೇಪ ಭಾಗವತ, ಸಂಕ್ಷೇಪಭಾರತ, ಸಂಕ್ಷೇಪ ರಾಮಾಯಣ, ಭಾಗವತ ದಶಮ ಸ್ಕಂಧದ ಕಥೆ, ವಿಷ್ಣುಶತಕ, ಇವು ಕೀರ್ತನ ಸಂಪ್ರದಾಯಕ್ಕೇ ಸೇರುವ ಇತರ ಕೃತಿಗಳು.

ಪಂಚಕಥಾ

ಹರಿಕಥೆಗೆ ಅನುಕೂಲವಾಗುವಂತೆ ಪ್ರಹ್ಲಾದ ಚರಿತ್ರೆ, ಮಾಧವ ಚರಿತ್ರೆ, ಅನಸೂಯಾ ಚರಿತ್ರೆ, ದ್ಯೂತಪರ್ವ ಮತ್ತು ದೂರ್ವಾಸ ಚರಿತ್ರೆ ಎಂಬ ಐದು ಕಥೆಗಳನ್ನು ಕಥಾ ಕೀರ್ತನ ರೂಪದಲ್ಲಿ ರಚಿಸಿದ್ದಾರೆ. ಈ ಕಥಾ ಕೀರ್ತನೆಗಳಲ್ಲಿ

ಕೀರ್ತನೆ, ಕಂದ ಪದ್ಯಗಳು, ಷಟ್ಪದಿಗಳು, ಶ್ಲೋಕಗಳು, ವಚನ, ಆರ್ಯೆ, ಜಂಗಲಾರ್ಯೆ, ಸೀಸಪದ್ಯ, ಕಡಕು, ದ್ವಿಪದಿ, ಸಂಸ್ಕೃತ ವೃತ್ತಗಳು ಹೀಗೆ ಹಲವು ರೀತಿಯ ಛಂದೋರೂಪಗಳನ್ನು ಬಳಸಿದ್ದಾರೆ. ಕೀರ್ತನೆಗಳಲ್ಲಿ ಬಹಳಷ್ಟು ಪ್ರಸಿದ್ಧವಾದ ಕನ್ನಡ. ತೆಲುಗು ಮತ್ತು ತಮಿಳು ಮಟ್ಟುಗಳ ಅನುಕರಣೆಯನ್ನು ಕಾಣಬಹುದು. ಸಂಭಾಷಣೆ ಬರುವ ಸಂದರ್ಭಗಳಲ್ಲಿ ಕೀರ್ತನೆಗಳನ್ನು ಅಳವಡಿಸಿರುವುದು ಈ ಕಥಾ ಕೀರ್ತನೆಗಳ ವೈಶಿಷ್ಟ್ಯ. ಈ ಕೀರ್ತನೆಗಳು ಆಯಾ ಕಥಾಸಂದರ್ಭಕ್ಕೆ ಹೊಂದುವಂತಿದ್ದು, ಆಯಾ ಕಥಾನಕದ ಒಂದೊಂದು ಭಾಗವಾಗಿವೆ. ಇಂಥ ಕೀರ್ತನೆಗಳನ್ನು ಸ್ವತಂತ್ರ ಕೀರ್ತನೆಗಳೆಂದು ಪ್ರತ್ಯೇಕಿಸಲು ಸಾಧ್ಯವಿಲ್ಲ.

ಭಾಗವತೋತ್ತಮನಾದ ಪ್ರಹ್ಲಾದನ ಕಥೆ **ಪ್ರಹ್ಲಾದ ಚರಿತೆ**ಯವಸ್ತು. ಬ್ರಹ್ಮಸೃಷ್ಟಿಯ ಯಾವುದರಿಂದಲೂ ಸಾವು ಬಾರದಂತೆ ಹಿರಣ್ಯಗರ್ಭನಿಂದ ವರವನ್ನು ಪಡೆದ ದೈತ್ಯ ಹಿರಣ್ಯಕಶಿಪು. ಪ್ರಹ್ಲಾದ ಇವನ ಮಗ. ಲೋಕ ಕಂಟಕನಾದ ತಂದೆಗೆ ವಿರುದ್ಧವಾದ ಸ್ವಭಾವ ಪ್ರಹ್ಲಾದನದು. ದೈವ ಭಕ್ತಿ ಸತ್ಯಸಂಧತೆ ಜಿತೇಂದ್ರಿಯತ್ವ ಇತ್ಯಾದಿ ಸದ್ಗುಣಗಳಿಂದ ಕೂಡಿದ ಪ್ರಹ್ಲಾದ ಮಹಾನ್ ವಿಷ್ಣುಭಕ್ತ. ಹಿರಣ್ಯ ಕಶಿಪುವಿನ ದುರಭಿಮಾನ, ಅಹಂಕಾರ, ಮಗನನ್ನು ತನ್ನ ದಾರಿಗೆ ತರಲು ಅವನು ನೀಡಿದ ಹಿಂಸೆಗಳು, ಹಿಂಸೆಗಳನ್ನು ಗಂಭೀರವಾಗಿ ಸ್ವೀಕರಿಸಿದ ಪ್ರಹ್ಲಾದನ ತಾಳ್ಮೆ, ನರಸಿಂಹನ ಅವತಾರ, ಹಿರಣ್ಯ ಕಶಿಪುವಿನ ಸಂಹಾರ ಮತ್ತು ಪ್ರಹ್ಲಾದನಿಗೆ ದೊರೆತ ಅನುಗ್ರಹ –ಈ ಸಂದರ್ಭಗಳನ್ನು ಕಥಾ ಕೀರ್ತನೆಯಲ್ಲಿ ಅಳವಡಿಸಲಾಗಿದೆ.

ಜಾತಿ ನೀತಿಗಳನ್ನು ಮೀರಿದ ಕಾಮಸುಖ ತಾತ್ಕಾಲಿಕವಾದದ್ದೆಂದು ಇದರಿಂದ ಗೌರವ ಘನತೆಗಳು ಕೆಟ್ಟು ಸಂಸಾರಿಗಳು ಭ್ರಷ್ಟರಾಗುತ್ತಾರೆಂಬ ನೀತಿಯನ್ನು ನಿರೂಪಿಸುವ ಕಥೆ **ಮಾಧವ ಚರಿತ್ರೆ.** ವರ್ಣಾಶ್ರಮ ಧರ್ಮಕ್ಕೆ ವಿರುದ್ಧವಾಗಿ ತಂದೆ ತಾಯಿಗಳನ್ನೂ. ಪತ್ನಿಯನ್ನೂ ದೂರಮಾಡಿ ಕುಂತಳೆ ಎಂಬ ಚಂಡಾಲ ಕನ್ಯೆಯನ್ನು ವರಿಸಿದ 'ದ್ವಿಜ' ಮಾಧವ. ಯೌವ್ವನ ಕಳೆದು ಮುದಿತನ ಮತ್ತು ರೋಗಗಳಿಂದ ಪೀಡಿತನಾದಾಗ ಮಾಧವನಿಗೆ ಪಾಪಪ್ರಜ್ಞೆ ಜಾಗೃತವಾಗುತ್ತದೆ. ಹರಿದಾಸರ ಜೊತೆಯಲ್ಲಿ ತಿರುಪತಿಗೆ ಬಂದ ಮಾಧವ ಆತ್ಮಶೋಧನೆ ಮಾಡಿಕೊಂಡು ಪರಿಶುದ್ಧನಾಗುತ್ತಾನೆ. ಕಾಮವನ್ನು ಭಗವತ್ಪ್ರೇಮವಾಗಿಸುವುದರಲ್ಲಿ ಜೀವನದ ಸಾರ್ಥಕ್ಯ ಅಡಗಿದೆ ಎಂಬ ನೀತಿಯನ್ನು ಗುರುರಾಮವಿಠಲರು ಇಲ್ಲಿ ನಿರೂಪಿಸಿದ್ದಾರೆ.

ದೂರ್ವಾಸ ಚರಿತ್ರೆ ಮಹಾಭಾರತದ ಅರಣ್ಯಪರ್ವದಲ್ಲಿ ನಿರೂಪಿತವಾಗಿರುವ ಕಥೆ. ಪಾಂಡವರನ್ನು ಪರೀಕ್ಷಿಸಲು ಅತಿಥಿಯಾಗಿ ಬಂದ ದೂರ್ವಾಸನ ಆಗಮದಿಂದ ಧರ್ಮರಾಯಾದಿಗಳು ಪಟ್ಟ ಆತಂಕ, ದ್ರೌಪದಿಯ ಕೃಷ್ಣಭಕ್ತಿ, ಕೃಷ್ಣನ ಕರುಣೆ ಇವುಗಳನ್ನು ನಿರೂಪಿಸುವ ಕೃತಿ ಇದು. ಭಕ್ತರ ಮೊರೆಗೆ ತಕ್ಷಣ ಸ್ಪಂದಿಸಿ ಅವರ ತೊಂದರೆಗಳನ್ನು ಪರಿಹರಿಸುವ ಕೃಷ್ಣನ ಕಾರುಣ್ಯವನ್ನು ಈ ಕೃತಿ ನಿರೂಪಿಸುತ್ತದೆ.

ದ್ರೌಪದಿಯ ಮಾನರಕ್ಷಣೆಯ ಮೂಲಕ ಶ್ರೀಕೃಷ್ಣನ ಭಕ್ತಪರಾಧೀನತೆಯನ್ನು ತಿಳಿಸುವುದು **ದ್ಯೂತಪರ್ವದ** ಉದ್ದೇಶ. ಶಕುನಿಯ ಕುತಂತ್ರ, ದುರ್ಯೋಧನನ ಕ್ರೋಧ, ವಿದುರನ ಪಾಂಡವ ಪಕ್ಷಪಾತ, ಕರ್ಣದುಶ್ಶಾಸನರ ಅಮಾನವೀಯ ನಡವಳಿಕೆ, ಕೃಷ್ಣನ ಕರುಣೆ, ಧೃತಾಷ್ಟ್ರನ ಔದಾರ್ಯ ಹೀಗೆ ಮಾನವ ಸ್ವಭಾವದ ಹಲವು ಮುಖಗಳ ಚಿತ್ರಣವನ್ನು ದ್ಯೂತಪರ್ವದಲ್ಲಿ ಕಾಣಬಹುದು. ಭೀಮ, ಅರ್ಜುನ, ಮತ್ತು ಸಹದೇವರು ಮಾಡಿದ ಪ್ರತಿಜ್ಞೆಗಳಲ್ಲಿ ಖಳ ಚತುಷ್ಟಯರಿಗೆ ಮುಂದೆ ಒದಗಬಹುದಾದ ವಿಪತ್ತನ್ನೂ ದ್ಯೂತಪರ್ವ ಸೂಚಿಸುತ್ತದೆ.

ಅನಸೂಯಾ ಚರಿತ್ರೆ ನಾರದೀಯ ಪುರಾಣದಲ್ಲಿ ಬರುವ ಒಂದು ಕಥಾಭಾಗ. ಪತಿವ್ರತೆಯರ ಎದುರು ಕುಚೇಷ್ಟೆಗಳು ನಡೆಯುವುದಿಲ್ಲ ಎಂಬ ಪೌರಾಣಿಕ ತತ್ವವನ್ನು ನಿರೂಪಿಸುವುದು ಇಲ್ಲಿ ಕೃತಿಕಾರನ ಉದ್ದೇಶ. ಅತ್ರಿ ಅನಸೊಯೆಯರ ಸೌಹಾರ್ದಯುತವಾದ ದಾಂಪತ್ಯ, ನಾರದನ ಚಿತ್ತ ಚಾಂಚಲ್ಯ, ತ್ರಿಮೂರ್ತಿ ಪತ್ನಿಯರ ಗರ್ವಭಂಗವಾದದ್ದು, ಈ ಸಂಗತಿಗಳ ನಿರೂಪಣೆಯಲ್ಲಿ ಅಲ್ಲಲ್ಲಿ ಕಾವ್ಯಾಂಶ ಮಿಂಚುವಂತೆ ಗುರುರಾಮ ವಿಠಲರು ನಿರೂಪಿಸಿದ್ದಾರೆ.

ಸೇತೂರಾಯನ ಕಥೆ ಮಿಶ್ರ ಛಂದಸ್ಸಿನ ಖಂಡ ಕಾವ್ಯ. ಸೇತೂರಾಯ ಮೈಸೂರರಸರ ಖಜಾನೆಯಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಅಧಿಕಾರಿ. ಹಣ ದುರುಪಯೋಗದ ಆಪಾದನೆಯನ್ನು ಹೊತ್ತು ದೇಶಾಂತರ ಹೊರಟು ಅನಂತರ ಬಂಧನಕ್ಕೆ ಒಳಗಾದ. ದಿವಾನ್ ರಂಗಾಚಾರ್ಯರು ಈ ಬಗ್ಗೆ ವಿಚಾರಣೆಯನ್ನು ನಡೆಸಿ ಸೇತೂರಾಯನನ್ನು ದೋಷ ಮುಕ್ತನನ್ನಾಗಿ ಮಾಡಿದರು. ಚಾಮರಾಜ ಒಡೆಯರು ಸೇತೂರಾಯನನ್ನು ಮತ್ತೆ ಎಷ್ಟೇ ಸಮಾಧಾನಪಡಿಸಿದರೂ ಆತ

ರಾಜಸೇವೆಗೆ ಹಿಂತಿರುಗದೆ ವೈರಾಗ್ಯಪರನಾಗಿ ತಿರುಮಕೂಡಲು ನರಸೀಪುರದಲ್ಲಿ ತನ್ನ ಕೊನೆಯ ದಿನಗಳನ್ನು ಕಳೆದು ಬೆಂಗಳೂರಿನಲ್ಲಿ ನಿಧನ ಹೊಂದಿದ.

ಸಿದ್ಧಾಂತ ಸಾರ

ಸಿದ್ಧಾಂತ ಸಾರ ೧೦೫೫ ಕಂದಪದ್ಯಗಳ ಒಂದು ಕೃತಿ. ದ್ವೈತ ಸಿದ್ಧಾಂತದ ತತ್ವಗಳು, ಪದ್ಧತಿಗಳು, ಇವುಗಳ ನಿರೂಪಣೆ ಈ ಕೃತಿಯ ವಸ್ತು. ಹರಿಯ ಅವತಾರಗಳು, ಸೃಷ್ಟಿಪ್ರಕರಣ, ಪುರಾಣ ವಿಭಾಗ, ಜೀವಿಗಳ ಸ್ವರೂಪ, ಆತ್ಮದ ಸ್ವರೂಪ, ತಾರತಮ್ಯ, ಭಗವನ್ಮಹಿಮಾ ವರ್ಣನೆ. ಗೀತಾಮೃತಸಾರ, ಜ್ಞಾನ ಭಕ್ತಿ ವೈರಾಗ್ಯಗಳ ಸ್ವರೂಪ, ಸೂರ್ಯಚಂದ್ರವಂಶಾನು ಕೀರ್ತನೆ, ಪ್ರಳಯ ಪ್ರಕರಣ, ಪೂಜಾವಿಧಾನ, ಯೋಗ ವಿಚಾರ, ಮಧ್ವಾಚಾರ್ಯರ ಅವತಾರತ್ರಯಗಳು, ಹೀಗೆ ಸಿದ್ಧಾಂತಸಾರವನ್ನು ಪ್ರತ್ಯೇಕ ವಿಭಾಗಗಳಲ್ಲಿ ನಿರೂಪಿಸಿದ್ದಾರೆ.

ಸಿದ್ಧಾಂತಸಾರದಲ್ಲಿ ಇಷ್ಟೆಲ್ಲಾ ವಿಚಾರಗಳು ಅಡಕವಾಗಿದ್ದರೂ ತಾನು ಏನೂ ಅರಿಯದ ಅಜ್ಞನೆಂಬ ವಿನಯ ಕೃತಿಕಾರನದು. ಜ್ಞಾನ ಭಕ್ತಿ ವೈರಾಗ್ಯಗಳನ್ನು ಅರಿಯದ ಶಾಸ್ತ್ರ ಚಿಂತನೆಗಳನ್ನು ಕನಸಿನಲ್ಲೂ ಕಾಣದ ತಾನು

'ಪವಮಾನಮತಾನುಗರ ಕರುಣ ಬಲದಿಂ ಪೇಳ್ವೆಂ' ಎಂದು ಹೇಳುವಲ್ಲಿಯೂ,

ಕಂದನ ಕಲಭಾಷೆಗಳಾ
ನಂದದೊಳಾಲಿಸುವ ತಂದೆ ತಾಯಿಗಳಂತೀ
ಗ್ರಂಥವನು ಕಂದ ಪದ್ಯಗ
ಳೆಂದು ನಿರಾಕರಿಸದೆಲ್ಲ ಕೇಳ್ವುದು ಸುಜನರ್

ಎಂಬಲ್ಲಿಯೂ ಈ ವಿನಯವನ್ನು ಗುರುತಿಸಬಹುದು. ಕಂದ ಪದ್ಯಗಳನ್ನು ನಿರಾಕರಿಸಬೇಡಿ ಎಂದು ಹೇಳುವಾಗ 'ಕಂದಪದ್ಯ' ಎಂಬ ಪದದ ಶ್ಲೇಷಾರ್ಥ ಗಮನಾರ್ಹವಾದುದು. ಇದು ಬಾಲಭಾಷೆಯ ಬರಹಗಳಲ್ಲ, ಮಕ್ಕಳ ಸಾಹಿತ್ಯವೂ ಅಲ್ಲ, ಗಂಭೀರವಾಗಿ ಅಧ್ಯಯನ ಮಾಡಬೇಕಾದ ಕೃತಿ ಎಂಬುದನ್ನು ಸೂಚಿಸಿದ್ದಾರೆ.

ಭೋಜನ ಕಾಲ ನಿರ್ಣಯ

ಭೋಜನ ಕಾಲ ನಿರ್ಣಯ ಭಾಮಿನಿ ಷಟ್ಪದಿಯ ಒಂದು ಸಣ್ಣ ಕೃತಿ. ಹಗಲು ರಾತ್ರಿಗಳಲ್ಲಿ, ಯಾವ ಕಾಲದಲ್ಲಿ ಯಾವ ಯಾವ ಆಹಾರವನ್ನು ಸ್ವೀಕರಿಸಬೇಕು ಎಂದು ತಿಳಿಸುವುದೇ ಈ ಕೃತಿಯ ವಸ್ತು. ಈ ಕೃತಿಯಲ್ಲಿ ದಾಸರು ತಮ್ಮ ಸ್ಥಳದ ಬಗ್ಗೆ ಹೇಳಿಕೊಳ್ಳುವ ಸ್ವಂತ ವಿಷಯ ಗಮನಾರ್ಹವಾದುದು :

ಧಾರುಣಿ ಮಂಡಲದೊಳಗೆ ಮಹಿ
ಶೂರ ದೇಶಕೆ ಸೇರಿರುವ ಕೋ–
ಲಾರದ ಭಾಗದಲಿ ಬಾಗೆಪಲ್ಲೆಂತೆಂಬ ।
ಚಾರುನಗರದ ವಾಸಿ ಎನಿಸುವ

ಸೂರಿನಿಕರ ವಿಧೇಯ ಸುಬ್ಬನು
ತಾರಚನೆಗೈದಿರುವ ಗುರುರಾಮವಿಠ್ಠಲಾಂಕಿತದಿ ॥

ಗುರುರಾಮವಿಠಲರ ಕೀರ್ತನೆಗಳನ್ನು ಅಭ್ಯಾಸದ ದೃಷ್ಟಿಯಿಂದ ಹೀಗೆ ವಿಭಾಗಿಸಿಬಹುದು.

೧. ಆತ್ಮಶೋಧನೆ–ಸಮರ್ಪಣೆ, ೨. ಹರಿಭಕ್ತಿ, ೩. ತತ್ವಪ್ರತಿಪಾದನೆ ಮತ್ತು ಉಪದೇಶಾತ್ಮಕ ಕೃತಿಗಳು.

ಆತ್ಮಶೋಧನೆ–ಸಮರ್ಪಣೆ : ಆತ್ಮಶೋಧನೆಯ ಕೃತಿಗಳಲ್ಲಿ ದಾಸರ ವೈಯಕ್ತಿಕ ವಿಷಯಗಳೂ ಅಡಕವಾಗಿದ್ದು, ಅವರು ಬದುಕಿನಲ್ಲಿ ಅನುಭವಿಸಿದ ಕಷ್ಟಗಳ ನಿರೂಪಣೆಯಿದೆ. ತಮ್ಮ ಜೀವನವನ್ನು ತಾವೇ ವಿಮರ್ಶಿಸಿಕೊಂಡು, ತಮ್ಮ ತಪ್ಪುಗಳನ್ನು ತಾವೇ ಎತ್ತಿ ಹಿಡಿದು, ತಮ್ಮ ನಡವಳಿಕೆಗಳನ್ನು ತಾವೇ ನಿಂದಿಸಿಕೊಂಡು, ತಮ್ಮ ದೌರ್ಬಲ್ಯಗಳಿಗೆ ತಾವೇ ನಾಚಿ ಪಶ್ಚಾತ್ತಾಪದ ಮೂಲಕ ಪರಿಶುದ್ಧರಾಗುವುದೇ ಆತ್ಮಶೋಧನೆಯ ಉದ್ದೇಶ. ಆಸೆಗಳಲ್ಲಿ ಕುಂದಿಕೊರಗಿ ಸಾರವಿಲ್ಲದ ಸುಖಗಳನ್ನು ಬಯಸಿ, ಬಾಲ್ಯದಲ್ಲಿ ಪರಾಧೀನ, ಯೌವ್ವನದಲ್ಲಿ ಅಜ್ಞಾನ, ವಾರ್ಧಕ್ಯದಲ್ಲಿ ಚಿಂತೆಗಳನ್ನು ಅನುಭವಿಸುವಂತೆ ಮಾಡುವ 'ಬದ್ಧ ಸಂಸಾರ' ದಾಸರಿಗೆ ಬೇಸರಿಕೆ ತರಿಸಿತ್ತು.

'ಯಾವ ವಿಧಿ ಸುಖಲೇಶ ಕಾಣೆನೊ ನಾನು
ದೇವ ನಿನ್ನ ಚಿತ್ತವೊ ಪುರಾಕೃತವೊ' (ಕೀ.೧೮೩)

–ಎಂದು ಹೇಳುವಲ್ಲಿ ಸಾಂಸಾರಿಕ ಕಷ್ಟಸುಖಗಳು ಹರಿಯ ಚಿತ್ತದಂತೆ ಪ್ರಾಪ್ತವಾಗುತ್ತವೆ ಇವು ನಮ್ಮ ಅಧೀನದಲ್ಲಿ ಇಲ್ಲ ಎಂಬ ನಿರ್ಧಾರಕ್ಕೆ ಬರುತ್ತಾರೆ. ಮಾನಸದಲ್ಲಿ ದೇವರು ಸಾಕ್ಷಿಯಾಗಿರುವಾಗ ಅವನಿಗರಿವಿಲ್ಲದಂತೆ ನಾವೇನು ತಪ್ಪು ಮಾಡಲು ಸಾಧ್ಯವಿಲ್ಲ. ನಾವು ಮಾಡುವ ಅಪರಾಧ ಮತ್ತು ಸತ್ಕಾರ್ಯಗಳಿಗೆ ಕಾರಣರಾದ ಕರಣಾಭಿಮಾನಿ ದೇವತೆಗಳಿಗೆ ಶ್ರೀ ಹರಿಯೆ ಒಡೆಯ. ಹೀಗಿರುವಾಗ ತಪ್ಪು ಒಪ್ಪುಗಳನ್ನು ನಾನು ಮಾಡಿದೆ ಎಂದು ಹೇಳುವುದರಲ್ಲಿ ಯಾವ ಅರ್ಥವೂ ಇಲ್ಲ.

೧. ಏನು ಅರಿಯೆ ನಾನು ಅಸ್ವಾತಂತ್ರನು ಜೀವ
ನೀನೆ ಸರ್ವ ಸ್ವತಂತ್ರ ಗುರುರಾಮವಿಠಲ (ಕೀ.೧೮೩)

೨. ಎಲ್ಲವು ನಿನ್ನಾಧೀನ । ನಾ
ಬಲ್ಲೆನೆಂಬುದ ಜ್ಞಾನ (ಕೀ.೧೮೨)

೩. ಕ್ಷೇಮದಿಂದಿರುವುದಕೂ । ನಿರ್ನಾಮವೈದಿ ಕೆಡುವುದಕೂ
ಪಾಮರ ಜೀವರು ತಾವರಿಯರು ಗುರು–
ರಾಮ ವಿಠಲ ನೀನಾ ಮಮತೆ ಕೊಡದಿರೆ (ಕೀ.೧೮೨)

೪. ಅಣುಗ ನಿನಗೆ ನಾನು । ಅಗಣಿತ
ಗುಣ ಸಮುದ್ರ ನೀನು (ಕೀ.೧೭೫)

೫. ದ್ವಾಸುಪರ್ಣ ಶ್ರುತಿಯ । ಪ್ರಮಾಣದಿ
ದಾಸನು ನಾನಯ್ಯಾ
ಓ ಸೀತಾಪತಿ ಗುರುರಾಮ ವಿಠಲಾ
ಶ್ವಾಸ ಬಿಡುವುದಕೆ ಸ್ವತಂತ್ರವೆನಗಿಲ್ಲ (ಕೀ.೧೭೫)

–ಹೀಗೆ ಜೀವಿಗಳ ಅಸ್ವಾತಂತ್ರವನ್ನು ಒಪ್ಪಿಕೊಂಡು ಸ್ವಾಹಂಕಾರ ಮತ್ತು ಮಮಕಾರಗಳಿಂದ ದೂರವಾದ ದಾಸತ್ವ ಒಂದೇ ಬದುಕಿಗೆ ಮಾರ್ಗದರ್ಶನ ನೀಡಬಲ್ಲದೆಂಬ ನಂಬಿಕೆ ದಾಸರದು.

ಗುರುರಾಮವಿಠಲರು ಸಂಸಾರಿಗಳಲ್ಲದಿದ್ದರೂ ಸಾಂಸಾರಿಕ ಕಷ್ಟಗಳಿಂದ ದೂರಾದವರೇನೂ ಅಲ್ಲ. ನೆಂಟರಾದವರಿಗೆ 'ಬಾಡಿಗೆ ಎತ್ತಿನ ಪರಿ' ಆಳಾಗಿರಬೇಕು. ಅವರು ಕೇಳಿದ್ದೆಲ್ಲಾ ಕೊಡಬೇಕು. ಸ್ವಾರ್ಥ ಸಾಧನೆಯಾದ ನಂತರ 'ಭವ ಸಮುದ್ರದಲಿ ಮುಳುಗಿಸಿ ಕಡೆಯಲಿ ಜವನಾಳ್ಗಳ ಕೈಗೊಪ್ಪಿಸಿ ಕೊಡುವ ' ಸ್ವಭಾವ ನೆಂಟರದು. ಇಂತಹ ದೇಹ ಸಂಬಂಧಿಗಳನ್ನು ನಂಬಿ 'ಕವಳಕೆ ಗತಿಯಿಲ್ಲದ ಪರಿಯಾಯಿತು' ಎಂದು ಕಳವಳಪಡುತ್ತಾರೆ.

ಹಣ, ಅಧಿಕಾರ, ಬಂಧುಗಳು, ದೇಹಬಲ, ಯೌವ್ವನ ಇದ್ದವರೆಗೆ ಮಾತ್ರ ಈ ಸಮಾಜದಲ್ಲಿ ಬೆಲೆಯಿದೆ. ಇವಾವುದೂ ಇಲ್ಲದೆ ಜೊತೆಗೆ ಎರಡು ಕಣ್ಣೂ ಇಲ್ಲದ ದಾಸರು ಸಮಾಜದ ಬಂಧುಗಳ ಅವಕೃಪೆಗೆ ಒಳಗಾಗಿ ಸಾಕಷ್ಟು ನೋವನ್ನು ಅನುಭವಿಸಿದರು.

ಜನರ ಬೇಡಲಾರೆ ನಿನಗಿದು
ವಿನೋದವೇನೊ ದೊರೆ (ಕೀ.೧೮೮)

–ಹೀಗೆ ತಮ್ಮ ನೋವನ್ನು ನಿವೇದಿಸಿಕೊಂಡು ಅನಾದಿ ಕರ್ಮಗಳನ್ನು ಕಳೆಯುವಂತೆ ಪ್ರಾರ್ಥಿಸುತ್ತಾರೆ. ತಮ್ಮ ವೈಯಕ್ತಿಕ ಬದುಕಿನ ಕೊರತೆಗಳನ್ನು ಹೀಗೆ ನಿರೂಪಿಸಿದ್ದಾರೆ :

ಆರೊಂದು ವ್ಯಸನದಿ ಈರೊಂದು ತಾಪದಿ
ಗಾರಾದೆ ಮೋಹದಿ ಕಾರುಣ್ಯ ವಾರಿಧಿ (ಕೀ.೧೮೫)

ತಂದೆ, ತಾಯಿ, ಪತ್ನಿ, ಸೋದರ ಮೊದಲಾದ ಹೊರಗಿನ ಬಂಧುಗಳು ಯಾರೂ ಇಲ್ಲದ್ದರಿಂದ ದಾಸರು ವೈರಾಗ್ಯದ ಜೊತೆಗೆ ದೃಢವಾದ ಭಕ್ತಿಯನ್ನು ಬೆಳೆಸಿಕೊಂಡಿದ್ದರು. ಸತ್ಯವೇ ತಾಯಿ, ಜ್ಞಾನವೇ ತಂದೆ, ಧರ್ಮವೇ ಸಹೋದರರು, ಶಾಂತಿಯೆ ಸತಿ, ಕ್ಷಮೆಯೆ ಸುತ, –ಹೀಗೆ ಹೊರಗಿನ ಬಂಧುಗಳಿಗಿಂತ ಒಳಗಿನ

ಬಂಧುಗಳೇ ಇಹಪರ ಸೌಖ್ಯಕ್ಕೆ ಕಾರಣರೆಂದು ಭಾವಿಸಿದ್ದರು. ಹೊರಗಿನ ಬಂಧುಗಳ ಜೊತೆ ಸಂಬಂಧಗಳು ಕೆಟ್ಟರೂ ಚಿಂತೆಯಿಲ್ಲ, ಒಳಗಿನ ಬಂಧುಗಳ ಸಂಬಂಧಗಳನ್ನು ಗಟ್ಟಿಮಾಡಿಕೊಳ್ಳಬೇಕು ಎಂಬ ಸಂಕಲ್ಪ ಅವರದು (ಕೀ.೨೮೫) ಈ ಸಂಕಲ್ಪವನ್ನು ಶಾಶ್ವತಗೊಳಿಸುವಂತೆ ದಾಸರು ದೇವರ ಮೊರೆ ಹೋಗುತ್ತಾರೆ. ವಿಹಿತ ಅಹಿತಗಳನ್ನು ಚಿಂತಿಸಿದ ಕುಹುಕಾತ್ಮರಾದವರ ಸ್ನೇಹದಿಂದ ಅನುಭವಿಸಿದ ನೋವುಗಳನ್ನು ವಿವರಿಸಲು ಪದಗಳಿಗೆ ಶಕ್ತಿಯಿಲ್ಲ. ಆದ್ದರಿಂದ ತಪ್ಪು ಒಪ್ಪುಗಳನ್ನು ಭಗವಂತನಲ್ಲಿ ನಿವೇದಿಸಿ ಮತ್ತೆ ಮತ್ತೆ ಶರಣಾಗತಿ ಬೇಡುತ್ತಾರೆ.

ಹರಿದಾಸನಾದ ಮೇಲೂ ಮಾಡಿದ ತಪ್ಪುಗಳು ಹೀಗಿವೆ:

೧. ಹೊಟ್ಟೆಗಾಗಿ ನಿಜತತ್ವಂಗಳಂ ಬೆಲೆಮಾಡಿ ಜೀವಿಸುವೆ
ಪಾಪಿಯು ನಾನು (ಕೀ.೨೪೧)

೨. ತವಪಾದ ಧ್ಯಾನವನು ಮಾಡುವ
ಭಾಗ್ಯವ ಬಿಟ್ಟು ಸಂಸರಣದೊಳ್ ಮುಳುಗಿ
ಕವಿಗಳ್ ಪ್ರಶಂಶಿಸುವ ವರ್ಣನೆಗೆ
ಕಿವಿಗೊಟ್ಟು ನಾನಕಟ ಕೆಟ್ಟೆನು (ಕೀ.೨೪೧)

೩. ಕಾಸಿಗೋಸುಗ ಪರರ ಕಾಡಿಬೇಡಿದೆ ಬರಿದೆ
ವೇಷ ಹಾಕಿದರೇನು ವೇದಾರ್ಥ ತಿಳಿದೀತೇ
ಉದರಂಭರಣಕ್ಕಾಗಿ ಪದ ಪದ್ಯಗಳ ಹೇಳಿ
ಉಂಟಾದುದಿಲ್ಲವೆನ್ನುವೆ
ತುದಿಮೊದಲಿಲ್ಲದ ದೋಷಕೆ ಗುರಿಯಾಗಿ
ಸದಮಲನೆಂದರೆ ಸರ್ವರು ನಗರೇನೊ (ಕೀ.೨೧೮)

೪. ಬವನಾಸಿ ಧರಿಸಿ ದಾಸನೆಂದು ನಾ
ಬರಿದೆ ದೇಶಗಳ ತಿರುಗಿ ಬೆಂಡಾದೆನು
ಯಮನಿಯಮಾಸನಯೋಗ । ಗಳ
ಕ್ರಮವರಿಯೆನು ನರಜನ್ಮದೊಳೀಗ
ಭ್ರಮೆ ಪಡುತ ಬಳಲುವೆ ಯಾವಾಗ
ಮಮ ಎಂಬುದರಿಂದ ಬಂದಿತು ರೋಗ (ಕೀ.೧೭೮)

ಖಳಸ್ನೇಹ, ಅಸ್ವಾಭಾವಿಕ ಬಯಕೆಗಳು, ಕಳವಳ, ಬಳಲಿಕೆ, ದುಷ್ಟತನ, ವ್ಯಾಮೋಹ, ಸ್ವಾರ್ಥಕ್ಕಾಗಿ ಪರರ ಸ್ತೋತ್ರ ಮಾಡುವುದು ನೀತಿಹೇಳಿದವರನ್ನು ನಿಂದಿಸುವುದು, ಮಾತಿನಲ್ಲಿ ನಿಸ್ಪೃಹನಾಗಿ ಮನದಲ್ಲಿ ಚಂಚಲನಾಗಿ ಆತ್ಮಜ್ಞಾನವಿಲ್ಲದ ದುರಾಸಕ್ತನೆನಿಸುವುದು –ಹೀಗೆ ತಪ್ಪುಗಳ ಪಟ್ಟಿ ಬೆಳೆಯುತ್ತಲೇ ಹೋಗುವುದು. ಇವುಗಳ ಬಗ್ಗೆ ಆತ್ಮಾವಲೋಕನ ಮಾಡಿಕೊಂಡಾಗ ನಿತ್ಯಕರ್ಮಗಳಲ್ಲಿ ಆಸಕ್ತಿ ಮೂಡುತ್ತದೆ. ಹೀಗೆ ಆತ್ಮಶೋಧನೆ ಹರಿದಾಸರ ಸಾಧನಪಥದಲ್ಲಿ ಒಂದು ಪ್ರಮುಖವಾದ ಘಟ್ಟ. ಆತ್ಮಾವಲೋಕನದಿಂದ ಪಾಪಪ್ರಜ್ಞೆ ಉಂಟಾಗಿ ಪಶ್ಚಾತ್ತಾಪಪಡದ ಹೊರತು ಬದುಕಿನಲ್ಲಿ ಬದಲಾವಣೆ ಆಗುವುದಿಲ್ಲ. ಈ ಪಶ್ಚತ್ತಾಪದಿಂದ ಜೀವನಪಥವೇ ಬದಲಾಗುತ್ತದೆ. ಹೊರಗಿನ ಡಂಭವ ಬಿಟ್ಟು, ಒಳಗೆ ನಿಶ್ಚಲನಾಗಿ, ಪರಹಿತವ ಕೋರುತ್ತ, ಕರಣತ್ರಯ ಶುದ್ಧಿಯಿಂದ ಹರಿಧ್ಯಾನ ಮಾಡಬೇಕೆಂಬ ಹಾದಿಯನ್ನು ದಾಸರು ಕಂಡುಕೊಳ್ಳುತ್ತಾರೆ. (ಕೀ.೨೧೮) ಜ್ಞಾನ, ಭಕ್ತಿ, ವೈರಾಗ್ಯ, ದಾನ, ಧರ್ಮಾದಿ ಸದ್ಗುಣಗಳು ತಾವಾಗಿಯೇ ಸ್ವಾಧೀನವಾಗುತ್ತವೆ. ಕಾಮ ಕ್ರೋಧಾದಿ ತಾಮಸ ಗುಣಗಳು ನಿರ್ನಾಮವಾಗುತ್ತವೆ. ಬದುಕಿನ ಪ್ರಯೋಜನವೇನು ಎಂಬ ಪ್ರಶ್ನೆಗೆ ಉತ್ತರವು ದೊರೆಯುತ್ತದೆ. ಆ ಉತ್ತರ ಹೀಗಿದೆ.

೧. ದೇವರ ದಿವ್ಯ ಗುಣಂಗಳ ಪೊಗಳುವುದು
ಜೀವರಿಗಿದುವೆ ಪ್ರಯೋಜನವು
ಭಾವದಿ ತೋರುವ ವಿಷಯಗಳೆಲ್ಲವು
ಭಕ್ತಿಯೊಳ.ಳರಿತು ಸಮರ್ಪಿಸುತ (ಕೀ.೨೨೦)

೨. ಪರಸೌಖ್ಯವಿದೆ ಮಾನವ ನಿನಗೆ
ನಿರತಂ ಹರಿಪಾದ ಭಜನೆ (ಕೀ.೨೨೬)

–ಹೀಗೆ ಆತ್ಮಶೋಧನೆ ಭಕ್ತಿಗೂ ಸಮರ್ಪಣ ಭಾವಕ್ಕೂ ಕಾರಣವಾಗುತ್ತದೆ.

೧. ನಡೆವುದು ನುಡಿವುದು ಕೊಡುವುದು ಬಿಡುವುದು
ಒಡೆಯ ಹರಿಯ ಪ್ರೇರಣೆಯೆಂದು
ದೃಢಮನದಲಿ ತಿಳಿದಾವಾಗಲು ತಾ
ಮೃಢಸಖನಡಿ ಧ್ಯಾನಕೆ ತಂದು (ಕೀ.೨೨೦)

೨. ಈಶನಾಧೀನ ಸಕಲ ಜೀವನ
ಯಾತಕಭಿಮಾನ । ಅಜ್ಞಾನ (ಕೀ.೨೨೧)

೩. ಬಿಂಬನವನು ಪ್ರತಿಬಿಂಬನು ನೀನೆಂದು
ಹಂಬಲಿಸುವುದುಚಿತ
ಉಂಬುಡುವುದು ಮೊದಲಾದ ಕ್ರಿಯೆಗಳನು
ಅಂಬುಜಾಕ್ಷಗರ್ಪಿಸಿ ಸುಖಿಯಾಗೊ (ಕೀ.೨೨೨)

–ಹೀಗೆ ಆತ್ಮಶೋಧನೆ ಸಮರ್ಪಣೆಗಳಿಂದ ಬದುಕಿನ ದಾರಿ ಯಾವುದೆಂಬುದು ಸ್ಪಷ್ಟವಾಗುತ್ತದೆ. ಭಕ್ತಿಮಾರ್ಗವನ್ನು ಅನುಸರಿಸಿ, ಕುಯುಕ್ತಿಗಳನ್ನು ತ್ಯಜಿಸಿ, ದುರ್ವಿಷಯಗಳಲ್ಲಿ ವಿರಕ್ತಿ ತೋರಿ, ಹರುಷ ಶೋಕಗಳನ್ನು ಒಂದೇ ಸಮನಾಗಿ ತಿಳಿದು, ಪುರುಷ ಪ್ರಯತ್ನಗಳನ್ನು ಮೆರೆದು, 'ಆಸೆಯು ಇಲ್ಲದ ಮೀಸಲು ಮನದಲಿ ಶ್ರೀಶನ ಪದವನು ಚಿಂತಿಸುತ ಲೇಸಾದ ದಾರಿಯೊಳ್ ನಡೆವ' ನಿರ್ಧಾರ ದೃಢವಾಗುತ್ತದೆ.

ಹರಿಭಕ್ತಿ

ವೇದ, ಉಪನಿಷತ್ತು, ಪುರಾಣ, ಶಾಸ್ತ್ರ, ಭಾಗವತ, ಭಾರತ, ಇತ್ಯಾದಿಗಳ ಅಧ್ಯಯನದಿಂದ ಶ್ರೀಹರಿಯ ಅನಂತ ಲೀಲೆಗಳನ್ನು ಅರಿತು ಅದನ್ನು ತನ್ನದೇ ಆದ ಭಾವ ಭಾಷೆಗಳಲ್ಲಿ ಭಕ್ತಿಯಿಂದ ಹಾಡುವವನೇ ಹರಿದಾಸ. ಭಗವಂತನ ಲೀಲೆಗಳಿಗೆ ಬೆರಗಾಗಿ, ಅವನ ಮಹಾತ್ಮ್ಯಕ್ಕೆ ಮರುಳಾಗಿ, ಅವನ ದಿವ್ಯಶಕ್ತಿಗೆ ತಲೆಬಾಗಿ, ಸೃಷ್ಟಿಯ ಚರಾಚರ ವಸ್ತುಗಳಲ್ಲೂ, ತನ್ನಲ್ಲೂ ಅವನನ್ನೇ ಕಾಣುವ ಹಂಬಲ ಮೂಡುವುದೇ ಭಕ್ತಿ

೧. ಇದ್ದೀಯಯ್ಯಾ ಎನ್ನೊಳಗೆ ಇನಕುಲರಾಯ
ಇದ್ದೀಯ್ಯೆ ಸರ್ವರ ಹೃದ್ಗುಹೆಯೆಂತೆಂಬ
ಪದ್ಮದೊಳಗೆ ನೀನು (ಕೀ.೧೨)

೨. ಒಬ್ಬನೇ ಸ್ವಾಮಿ ಎಲ್ಲರಿಗೂ ಬಲು
ಹಬ್ಬ ಅವನನೆ ನಂಬಿದವರಿಗೆ
ಪುಟ್ಟಿಸಿ ಪೋಷಿಸಿ ಸಂಹಾರಗೈಸಿ ತನ್ನ
ಹೊಟ್ಟೆಯೊಳಗಿಟ್ಟಿರುವನು ಎಲ್ಲರನು (ಕೀ.೧೫)

–ಇದು ಹರಿದಾಸರ ದೇವರ ಕಲ್ಪನೆ. ಅವನು ಶರಣರ ಪಾಲಿಗೆ ಕರುಣವಾರಿಧಿ, ಜರಾಮರಣರಹಿತ, ವಿದೇಹ, ಪರಮಪದವಿಯನ್ನು ಕೊಡಬಲ್ಲ ಸಮರ್ಥ.(ಕೀ.೧೯) ಅವನು ಪುರಷೋತ್ತಮ, ವಿಶ್ವಮೋಹನ, ಅಗಣಿತ ಗುಣಪೂರ್ಣ, ಸರ್ವಾಂತರ್ಯಾಮಿ, ಜಗದಾದಿಕಾರಣ, ಅಚ್ಯುತ, ಅನಂತ, ಆದಿಮಧ್ಯಾಂತರಹಿತ. (ಕೀ.೨೦) –ಹೀಗೆ ದೇವರ ಶಕ್ತಿ, ಸಾಮರ್ಥ್ಯ, ಕಾರ್ಯ, ಕರುಣೆ, ಹಿರಿಮೆ ಇವುಗಳ ಬಗ್ಗೆ ಪೂರ್ವ ನಿರ್ಧಾರಿತ ಅರಿವಿನಿಂದಲೇ ಗುರುರಾಮವಿಠಲರು ಭಗವಂತನ ಲೀಲೆಗಳನ್ನು ಸ್ತುತಿಸುತ್ತಾರೆ. ಇಷ್ಟೆಲ್ಲಾ ಹಿರಿಮೆಯನ್ನು ಹರಿಯಲ್ಲಿ ಗುರುತಿಸಿ ಮತ್ತೆ ಮತ್ತೆ ಸ್ತುತಿಸಿದರೂ ಅವನ ಯಾವ ಗುಣಗಳನ್ನೂ ತಾವು ಬೇಡದೆ ಕಾರುಣ್ಯವನ್ನು ಮಾತ್ರ ಅಪೇಕ್ಷಿಸುತ್ತಾರೆ. ಜಾಗೃತ್, ಸ್ವಪ್ನ, ಸುಷುಪ್ತಿಯಲ್ಲಿ ಅವನ ಚಿಂತನೆಯೊಂದನ್ನೇ ನೀಡುವಂತೆ ಬೇಡುತ್ತಾರೆ. ಅಂತಃಕರಣ ಪೂರ್ವಕವಾಗಿ ಹರಿಯ ಮಹಿಮಾತಿಶಯಗಳನ್ನು ಸ್ತುತಿಸುವಾಗ ದೋಷಗಳು ದೂರವಾಗಿ ಮನಸ್ಸಿಗೆ ನೆಮ್ಮದಿ ಮೂಡುತ್ತದೆಂದೂ, ಭೂತದಯೆ, ಪಶ್ಚಾತ್ತಾಪ, ಖ್ಯಾತಿ, ನೀತಿ, ಪ್ರೀತಿ, ನಿತ್ಯಾನುಸಂಧಾನ, ಧ್ಯಾನ–ಹೀಗೆ ಹರಿಯಾಜ್ಞೆಯಿಂದ ದೊರೆತ ಎಲ್ಲವನ್ನೂ ಹರಿಗೇ ಸಮರ್ಪಿಸುವ ಬುದ್ಧಿ ಪ್ರಾಪ್ತವಾಗುತ್ತದೆಂದು ಭಾವಿಸುತ್ತಾರೆ. (ಕೀ.೨೫) ಬಿಡಿ ಕೀರ್ತನೆಗಳು, ದಶಾವತಾರ ಸ್ತುತಿಗಳು, ತೀರ್ಥಕ್ಷೇತ್ರ ಸ್ತುತಿಗಳು, ಷೋಡಶೋಪಚಾರ ಕೃತಿಗಳು, ಆರತಿ, ಮಂಗಳ, ಹಸೆಗೆ ಕರೆವ ಹಾಡುಗಳು –ಹೀಗೆ ಸಂದರ್ಭೋಚಿತವಾಗಿ ರಚಿತವಾದ ಎಲ್ಲ ಕೀರ್ತನೆಗಳಲ್ಲೂ ದೇವರಿಗೂ ತಮಗೂ ಇರುವ ಸೇವ್ಯ ಸೇವಕ ಸಂಬಂಧವನ್ನು ಗುರುರಾಮವಿಠಲರು ನಿರೂಪಿಸಿದ್ದಾರೆ. ತಮ್ಮ ಹಿಂದಿನ ಹರಿದಾಸ ಪರಂಪರೆಯನ್ನು ಸಮರ್ಥವಾಗಿ ಮುಂದುವರೆಸಿದ್ದಾರೆ.

ತತ್ವ–ನೀತಿ

ಕಾಮ ಕ್ರೋಧಗಳನ್ನು ದೂರಮಾಡಿ ಸತ್ಕರ್ಮನಿರತನಾಗಿ ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು 'ಸ್ವಾಮಿ ಭೃತ್ಯ ನ್ಯಾಯ'ದಲ್ಲಿ ನಂಬಿಕೆಯಿಟ್ಟು ಹರಿ ಸರ್ವೋತ್ತಮನೆಂದು 'ಸಮಾಧಿಕ ಶೂನ್ಯ'ನೆಂದು ಭಾವಿಸುವುದೇ ದಾಸತ್ವ. ಈ ದಾಸತ್ವದಿಂದ ಪಡೆಯುವ ವಿಷ್ಣುತತ್ವ ಜ್ಞಾನವೇ ' ವಿಜ್ಞಾನ ' ಎಂದು ಗುರುರಾಮವಿಠಲರ ಭಾವನೆ. ವಿಷ್ಣುಪಾರಮ್ಯವನ್ನು ಎತ್ತಿ ಹಿಡಿಯುವ ಮೂಲಕ ತಮ್ಮ ಹಿಂದಿನ ಹರಿದಾಸರ ಮಾರ್ಗವನ್ನೇ ಅನುಸರಿಸಿದ್ದಾರೆಂಬುದಕ್ಕೆ ನಿದರ್ಶನಗಳು ಹೀಗಿವೆ :

೧. ಆಸ್ಥಾನ ಮಾಡೋಣ ಆತ್ಮವಿಚಾರ
ದಾಸ್ತಾನ ಮಾಡೋಣ
ಸ್ವಸ್ತಿ ಆಯುಷ್ಕೀರ್ತಿ ಧರ್ಮ ಯಶೋಕಾಮ
ಹಸ್ತಿವರದನಾಧೀನವೆಂದು ನಾವೆಲ್ಲ (ಕೀ.೨೭೮)

೨. ಅವರೇ ಕಾಯ್ ಬೇಕು । ಕಾಲದಿ
ಅವರೆ ಕಾಯ್ ಬೇಕು (ಕೀ.೨೭೭)

೩. ಕರ್ತನು ನೀನು ಭೃತ್ಯನು ನಾನು (ಕೀ.೨೭೫)

೪. ಪ್ರಣವ ಪ್ರತಿಪಾದ್ಯನು ಶ್ರೀ ನಾರಾ–
ಯಣನೊಬ್ಬನೆ ಧ್ಯೇಯನು ಜಗಕೆ
ತೃಣವಾದರು ಕದಲದು ಅವನಿಲ್ಲದೆ
ಎನುತ ಪೊಗಳುವುದು ಶ್ರುತಿ ತತಿಯು (ಕೀ.೨೯೮)

೧. ಹರಿಯು ಕರ್ತನೆಂದರಿತವನೇ ಮುಕ್ತ । ಮಿಕ್ಕ
ಮಾತೆಲ್ಲ ವ್ಯರ್ಥ(ಕೀ.೩೧೧)

ಮನುಷ್ಯ ತನ್ನ ಸ್ವಂತ ಯೋಗ್ಯತೆಯನ್ನು ಬೆಳೆಸಿಕೊಂಡು ದೈವಕೃಪೆಯನ್ನು ಪಡೆಯಲು ಸಮರ್ಥನಾದರೆ ಇಹಲೋಕದ ಜೀವನ ಸಂತೋಷಭರಿತವಾಗುತ್ತದೆ.

ಎಂಟು ಆನೆಗಳ ಸಂಹರಿಸಿದರೆ
ಉಂಟಾದ ಶತ್ರುಗಳಿಲ್ಲೆನಿಸಿದರೆ
ತಂಟೆಮಾಳ್ಪ ಬಂಟರೈವರ ಗೆದ್ದರೆ
ತಾನೆಲ್ಲಿದ್ದರೂ ಭಯವಿಲ್ಲಣ್ಣ (ಕೀ.೨೮೨)

ಅಷ್ಟಮದಗಳನ್ನು, ಅರಿಷಡ್ವರ್ಗಗಳನ್ನು ಗೆದ್ದು ಪಂಚೇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡರೆ ಬದುಕು ನಿಯಂತ್ರಣದಲ್ಲಿದ್ದು ಸಹನೀಯ ಎನಿಸುತ್ತದೆ.

(ತತ್ವದ ವಿಚಾರ ಬಂದಾಗ ಗುರುರಾಮವಿಠಲರು ದ್ವೈತ, ಅದ್ವೈತ, ವಿಶಿಷ್ಟಾದ್ವೈತ ತತ್ವಗಳ ಉದ್ದೇಶದಲ್ಲಿ ವ್ಯತ್ಯಾಸಗಳನ್ನು ಕಾಣುವುದಿಲ್ಲ. ಮೇಲ್ನೋಟಕ್ಕೆ ವ್ಯತ್ಯಾಸ ಕಂಡರೂ ವ್ಯತ್ಯಾಸ ವಿರೋಧವಾಗಿ ವಿರಸಕ್ಕೆ ಕಾರಣವಾಗಬಾರದು ಎಂಬುದು ದಾಸರ ಅಭಿಮತ, ತ್ರಿವಿಧ ಜೀವರೂ, ತ್ರಿವಿಧ ಕರ್ಮಗಳೂ, ತ್ರಿಗುಣಗಳೂ, ತ್ರಿಕಾಲಗಳೂ, ಇರುವಂತೆ ತ್ರಿಮತಗಳೂ ಸಮ್ಮತವಾದುವೆ. ' ಎಲ್ಲರ ಮಾತು ನಿಜ ಇದು ಅಲ್ಲ ಎಂಬುದು ಸಜ' ಎನ್ನುತ್ತಾರೆ. ದ್ವೈತ, ಅದ್ವೈತ, ವಿಶಿಷ್ಟಾದ್ವೈತಗಳ ಜಗಳ ವೈದಿಕ ಧರ್ಮದ ಸಮುದಾಯ ಶಕ್ತಿಯನ್ನು ಕುಂದಿಸುತ್ತದೆಯೇ ಹೊರತು ಸಂಘಟಿಸುವುದಿಲ್ಲ, ಎಂಬ ಕಟು ಸತ್ಯವನ್ನು ದಾಸರು ಅರಿತಿದ್ದರು. ಪರಮತ ಖಂಡನೆಯ ಹೆಸರಿನಲ್ಲಿ ಅದ್ವೈತವನ್ನು ಖಂಡಿಸುವುದು ವಾಸ್ತವಕೆ ಹೊಂದುವುದಿಲ್ಲ, ಈ ಕಾಲಕ್ಕೆ ಅಗತ್ಯವಿಲ್ಲ ಮತ್ತು ಅದು ಸರಿಯೂ ಅಲ್ಲ. ಹೀಗೆ ಮಾಡುವವರು ಧೂರ್ತರು ಎಂದು ದಾಸರು ಧೈರ್ಯವಾಗಿ ಘೋಷಿಸಿದರು.) (ಕೀ.೩೦೯) ವೇದಸಮಾನರೂ, ಪುರುಷಾರ್ಥಯುತರೂ, ಶ್ರುತಿಶಾಸ್ತ್ರ ಪ್ರವರ್ತಕರೂ ಆದವರನ್ನು ನಿಂದಿಸುವವರ ಬಾಯ್ಮೇಲೆ ಹೊಡೆದು ಬಾಯ್ಮುಚ್ಚಿಸಬೇಕು ಎಂದು ಹೇಳಬೇಕಾದರೆ ತಮ್ಮವರ ನಡವಳಿಕೆ ದಾಸರಿಗೆ ಎಷ್ಟು ಬೇಸರ ತರಿಸಿತ್ತು ಎಂಬುದನ್ನು ಊಹಿಸಬಹುದು. ಖಂಡನ ಮಂಡನಗಳಲ್ಲೇ ಕಾಲಕಳೆದು ಇತರರ ಮನಸ್ಸನ್ನು ನೋಯಿಸುವುದರಲ್ಲೇ ಪರಮ ಸುಖಪಡುವ ಸ್ವಜನರಿಗಿಂತಲೂ ವೇದಾಧ್ಯಯನ

ಸಂಪನ್ನರಾಗಿ 'ಸೋಹಂ' ತತ್ವವನ್ನು ನಂಬಿದರೂ, 'ದಾಸೋಹಂ' ಎಂದು ಎಲ್ಲ ದೇವತೆಗಳಲ್ಲೂ ಭಕ್ತಿತೋರುವ ಜನ ಹೆಚ್ಚು ಸಾತ್ವಿಕರು ಎಂದು ದಾಸರು ಭಾವಿಸಿದ್ದರು. ಇದು ಔದಾರ್ಯವಲ್ಲ. ದಾಸರು ವಾಸ್ತವವನ್ನು ಒಪ್ಪಿಕೊಂಡ ರೀತಿ.

ವ್ಯಾವಹಾರಿಕವಲ್ಲದ ವಿಷಯವನ್ನು ಮತ್ತೆ ಮತ್ತೆ ಪ್ರಸ್ತಾಪಿಸಿದರೆ ಸೌಹಾರ್ದತೆ ಕೆಡುತ್ತದೆ. ಮೂರು ಮತಗಳೂ ವೇದಗಳಿಗೆ ಸರಿಯಾದ ಅರ್ಥವನ್ನು ತಮ್ಮದೇ ಆದ ರೀತಿಯಲ್ಲಿ ನೀಡಿವೆ. ವ್ಯತ್ಯಾಸವಿರುವುದು ವೈಚಾರಿಕ ಮಟ್ಟದಲ್ಲಿ. ಹೀಗಿರುವಾಗ ಪರಮತ ವಿರೋಧ ನಿರರ್ಥಕವಲ್ಲವೇ? ಅವರವರ ಅಭಿಪ್ರಾಯಗಳು ಅವರವರಿಗೆ ನೇಮ. ಹೀಗಿರುವಾಗ ಒಬ್ಬರನ್ನೊಬ್ಬರು ಏಕೆ ವಿರೋಧಿಸಬೇಕು? ಎಂದು ಪ್ರಶ್ನಿಸುತ್ತಾರೆ. (ಕೀ.೨೪೯) ಪರಂಪರೆ, ಸಂಪ್ರದಾಯ, ಸಮನ್ವಯ ಮೊದಲಾದ ಆಧುನಿಕ ಚಿಂತನೆಗಳ ಪರಿಭಾಷೆಯ ಬಳಕೆಯನ್ನು ಗಮನಿಸಿದರೆ ಗುರುರಾಮವಿಠಲರು ತಮ್ಮ ಸ್ವಮತದ ಪರಿಧಿಯಿಂದ ಹೊರಬಂದು ಯೋಚನೆ ಮಾಡಿದ್ದಾರೆ ಎನಿಸುತ್ತದೆ.

ವೈಷ್ಣವ ಧರ್ಮದ ಸದಾಚಾರಗಳ ಮಿತಿಯಿಂದ ಆಚೆಗೆ ಬಂದು ಸಮಸ್ತ ಜನ ಸಮುದಾಯವನ್ನು ದೃಷ್ಟಿಯಲ್ಲಿಟ್ಟುಕೊಂಡು ದಾಸರು ಲೋಕನೀತಿಯನ್ನು ನಿರೂಪಿಸಿದ್ದಾರೆ. ಕೋಪ, ಚಿಂತೆ, ದುಃಖ ಇವುಗಳ ವಿವೇಚನೆ, ಹಣ, ಯೌವ್ವನ, ಅಹಂಕಾರ ಇವುಗಳಿಂದ ಆಗುವ ಅನಾಹುತಗಳು, ದೇಹ, ಸಂಸಾರ ಇವುಗಳ ಅಸ್ಥಿರತೆ, ಭಕ್ತಿ, ದಾನ, ಪ್ರಾಣಿದಯೆ ಇವುಗಳ ಅಗತ್ಯ ಇವೆಲ್ಲವೂ ಲೋಕನೀತಿಯಲ್ಲಿ ಸೇರುತ್ತವೆ.

೧. ದೇಹ ಅನಿತ್ಯವೊ ಮೋಸಪಡಬೇಡವೊ

೨. ಅತ್ಯಾಶೆ ಪಡಬೇಡ ಅಸ್ಥಿರ ಸಂಸಾರ

೩. ಕೋರಬೇಡ ದುರ್ವಿಷಯ ಸುಖಗಳ ಕೋತಿ ಮನವೆ ನೀನು

೪. ಕಾಮಕ್ರೋಧವ ಬಿಡು ತಾಮಸ ಗುಣವ ಸುಡು

೫. ತತ್ವೋಪದೇಶವ ಕೋರು ಸಾತ್ವಿಕರೊಳಗೆ ಸೇರು

–ಈ ಮಾತುಗಳಲ್ಲಿ ಅವರು ನಿರೂಪಿಸಿದ ಲೋಕನೀತಿಯ ಸ್ವರೂಪವನ್ನು ಅರಿಯಬಹುದು. ದೇಹ ಮತ್ತು ದೇಹ ಸಂಬಂಧಗಳ ಅನಿತ್ಯತೆಯನ್ನು ಅರಿತು ಮೋಹ ತ್ಯಾಗ ಮಾಡಿ ಸಜ್ಜನ ಸಹವಾಸದಲ್ಲಿ ಬದುಕಬೇಕೆಂಬ ನೀತಿ ಎಲ್ಲರಿಗೂ ಅನ್ವಯಿಸುವಂತಹುದು. ಚಂಚಲ ಚಿತ್ತನಾಗಿ ದುರ್ವಿಷಯಗಳ ಭ್ರಾಂತಿಯಲ್ಲಿ ಸಿಕ್ಕಿ ಮಾತು ಮಾತಿಗೆ ನಾನು ನನ್ನದೆಂದು ಕೋತಿಯಂತೆ ಕುಣಿಯುವುದು ಯಾರಿಗೂ ಮರ್ಯಾದೆ ತರುವ ಸಂಗತಿಯಲ್ಲ ಎಂದು ಎಚ್ಚರಿಸಿದ್ದಾರೆ. ಜೀವನ ನಡೆಸುವುದು ವ್ಯವಸಾಯ ಮಾಡಿದಂತೆ. ಸತ್ಕರ್ಮವೆಂಬುದೇ ಭೂಮಿ, ಜ್ಞಾನಿಗಳೇ ವ್ಯವಸಾಯಗಾರರು, ಸಿದ್ಧಾಂತವೆನ್ನುವುದೇ ಬೆಳೆ, ಈ ಬೆಳೆಯನ್ನು ಭಕ್ತಿ, ಜ್ಞಾನ, ವೈರಾಗ್ಯಗಳೆಂಬ ಬಂಡಿಗಳಲ್ಲಿ ತುಂಬಿ ಭಗವಂತನೆಂಬ ರಾಜನಿಗೆ ಒಪ್ಪಿಸಬೇಕು. ನಾವು ಭೂಮಾಲೀಕರಲ್ಲ, ಕೇವಲ ಕೆಲಸದವರು. ಆದರೂ ಸ್ವಾಮಿಭೃತ್ಯ ನ್ಯಾಯವನ್ನು ಡಂಗುರ ಸಾರುವ, ಕಾಮ ಕ್ರೋಧಗಳೆಂಬ ಖಳರನ್ನು ಶಿಕ್ಷಿಸುವ, ತಾಮಸರಿಗೆ ದಂಡನೆ ವಿಧಿಸುವ ಅಧಿಕಾರ ನಮಗಿದೆ. ಇದಕ್ಕೆ ಪ್ರತಿಫಲವಾಗಿ ದೊರೆಯುವ ಸಂಬಳವೇ 'ಹರಿಕರುಣೆ' ಎನ್ನುತ್ತಾರೆ. (ಕೀ.೨೭೮)

ಸಂಸಾರದ ಬಗ್ಗೆ ಅತಿಯಾದ ಮಮತೆ ಸಲ್ಲದು. ಸಂಸಾರದ ಸಮಸ್ತ ಆಗುಹೋಗುಗಳನ್ನು ಹರಿಗೆ ಸಮರ್ಪಿಸುವುದು ಜ್ಞಾನಿಗಳ ಲಕ್ಷಣ. ಇದೇ ಬದುಕಿನ ಕ್ರಮ. ಕಾಲವನ್ನು ನಾವು ನಿಯಂತ್ರಿಸಲಾರೆವು. ಆಗುವ ಕಾರ್ಯಗಳು ಆಗೇ ಆಗುತ್ತವೆ. ಮೂರು ದಿನದ ಬಾಳಿನಲ್ಲಿ ದ್ವೇಷಗಳನ್ನು ಬೆಳೆಸಿಕೊಂಡು ಜೀವನವನ್ನು ಹಾಳು ಮಾಡುವುದು ಸರಿಯಲ್ಲ. ಹೀಗೆ ನೀತಿಯನ್ನು ನಿರೂಪಿಸುವ ಸೂತ್ರಬದ್ಧವಾದ ಹಲವಾರು ಮಾತುಗಳು ಗುರುರಾಮ ವಿಠಲರಲ್ಲಿ ದೊರೆಯುತ್ತವೆ.

೧. ಎಲ್ಲರಂತೆ ನೀ ಮಾತಾಡು । ಸಿರಿ
ನಲ್ಲನ ವರ ಸಂಗದಿ ಕೂಡು (ಕೀ.೨೦೨)

೨. ಹಾನಿವೃದ್ಧಿಗಳು ತಾನಾಗಿ ಬರುವುದು
ಏನೇನು ಮಾಡಲು ಬಿಡಲೊಲ್ಲದು (ಕೀ.೨೦೩)

೩. ತಬ್ಬಿಕೊಂಡಿರ್ಪ ಪ್ರಾರಬ್ಧ ಬಿಡುವುದೇ
ಅಬ್ಜನಾಭನಿರ್ಪ ನಮ್ಮ ರಕ್ಷಿಸಲು (ಕೀ.೨೦೫)

೪. ಹುಟ್ಟಿಸಿದವ ತಾ ಖಟ್ಲೆ ಮಾಡಿರುವ
ನಷ್ಟವಾಗದಾತನ ಸಂಕಲ್ಪ (ಕೀ.೨೧೩)

ಸ್ವಭಾವಗಳನ್ನು ಬಿಟ್ಟು ಬದುಕುವುದು ಸಾಧ್ಯವಿಲ್ಲ. ದುರಹಂಕಾರ, ಕಾಮಾದಿಗಳು, ದರ್ಪ, ಜಡತೆ, ತುಂಟತನ, ಈ ಸ್ವಭಾವಗಳಿಂದ ಸಾಮಾನ್ಯರು, ಜ್ಞಾನಿಗಳು ಅತೀತರೇನಲ್ಲ. ನಮ್ಮ ಸ್ವಭಾವಗಳನ್ನು ಸರಿಯಾದ ಮಾರ್ಗದಲ್ಲಿ ಬಳಸಬೇಕು ಅಷ್ಟೆ. ಭಕ್ತರ ಸಂಗವನ್ನು ಅಪೇಕ್ಷಿಸುವ ಕಾಮ, ಹರಿಭಕ್ತಿ ವಿರೋಧಿಗಳಲ್ಲಿ ಕ್ರೋಧ, ದುರ್ಜನರಿಗೆ ಕೊಡಬಾರದೆಂಬ ಲೋಭ, ಸರ್ವವನ್ನೂ ಹರಿಶರಣರಿಗೆ ನೀಡುವ ಮೋಹ, ಹರಿನಿಂದಕರಲ್ಲಿ ಮತ್ಸರ, ದುರ್ಮತಿಗಳೊಂದಿಗೆ ಮಾತನಾಡದ ಜಡತೆ, ಧರ್ಮ ದ್ರೋಹಿಗಳ ಜೊತೆ ಹೋರಾಡುವ ದರ್ಪ ಇವು ಅಪೇಕ್ಷಣೀಯವೇ ಅಲ್ಲವೆ? ಹೀಗಿರುವಾಗ ಅರಿಷಡ್ವರ್ಗಗಳು ನಮ್ಮ ಅರಿಗಳು ಹೇಗಾಗುತ್ತವೆ ಎಂಬ ಪ್ರಶ್ನೆ ದಾಸರದು.

ಸಂಪ್ರದಾಯವಾದಿ ಸಮಾಜ ಮತ್ತು ಆಧುನಿಕ ವಿಚಾರಧಾರೆಗಳ ನಡುವೆ ಸಂಘರ್ಷ ಉಂಟಾದ ಸಂದರ್ಭದಲ್ಲಿ ಬದುಕಿದವರು ಗುರುರಾಮವಿಠಲರು. ಸಂಪ್ರದಾಯಗಳನ್ನು ಬಿಡಲಾಗದ ಆಧುನಿಕತೆಯಿಂದ ಆಕರ್ಷಿತರಾದ ಜನರ ಸ್ವಭಾವ, ಹಣಕ್ಕೆ ದೊರೆಯುತ್ತಿದ್ದ ಪ್ರಾಧಾನ್ಯ, ದಾನ, ಧರ್ಮ, ಅತಿಥಿಸತ್ಕಾರ, ದೈವಭಕ್ತಿ ಇವುಗಳಲ್ಲಿ ಕಡಿಮೆಯಾಗುತ್ತಿದ್ದ ಆಸಕ್ತಿ, ಹೀಗೆ ಕಲಿಕಾಲದ ಜನರ ನಡವಳಿಕೆಗಳನ್ನು ಗುರುರಾಮವಿಠಲರ ಕೃತಿಗಳು ಪ್ರತಿಬಿಂಬಿಸುತ್ತವೆ. ಆಗಮಗಳನ್ನು ಸುಳ್ಳೆನ್ನುವುದು, ತಾನೇಯೋಗಿ ಎಂದು ಭಾಗವತರ ನಿಂದನೆ ಮಾಡುವುದು, ಜಪಹೋಮಗಳಲ್ಲಿ ಅನಾದರ, ದೈವದ್ವೇಷ, ನಿರುಪದ್ರವಿಗಳಿಗೆ ದಂಡನೆ, ಇವುಗಳಿಗೆಲ್ಲಾ ಕಲಿಪ್ರವೇಶವೇ ಕಾರಣ. (ಕೀ೨೯೨) ಎನ್ನುತಾರೆ.

ಗುರುರಾಮವಿಠಲರು ಕನ್ನಡ, ತೆಲುಗು ಮತ್ತು ಸಂಸ್ಕೃತ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಜೊತೆಗೆ ಇಂಗ್ಲಿಷ್ ಭಾಷೆಯ ಪದ ಪ್ರಯೋಗಗಳ ಪರಿಚಯವೂ

ಇತ್ತು. ಲೌಕಿಕ ಆಶಯದ ಹಲವು ಕೃತಿಗಳಲ್ಲಿ ಇಂಗ್ಲಿಷ್ ಪದಗಳ ಬಳಕೆಯನ್ನು ಹೆಚ್ಚಾಗಿಯೇ ಮಾಡಿದ್ದಾರೆ. ಗಡಿ ಪ್ರದೇಶದ ತೆಲುಗು ಪದಗಳು ಕೀರ್ತನೆಗಳಲ್ಲಿ ಅಲ್ಲಲ್ಲಿ ನುಸುಳಿವೆ. ಸಂಸ್ಕೃತ ಭೂಯಿಷ್ಠವಾದ ಸಮಾಸ ಪದಗಳನ್ನು ಬಳಸುವಂತೆಯೇ ಸರಳವಾದ ಕನ್ನಡವನ್ನೂ ಸಮರ್ಥವಾಗಿ ಬಳಸುತ್ತಾರೆ. ಕೀರ್ತನೆಗಳಲ್ಲಿ ವರ್ಣನೆಗಳಿಗೆ ಹೆಚ್ಚು ಅವಕಾಶವಿರದಿದ್ದರೂ, ದೀರ್ಘ ಕೃತಿಗಳಲ್ಲಿ ಸಂದರ್ಭೋಚಿತ ವರ್ಣನೆಗಳೂ ಇವೆ. ವಿವಿಧ ಛಂದಸ್ಸುಗಳೂ, ಮಟ್ಟುಗಳೂ, ಲಯಗಳೂ, ಗೇಯ ಪ್ರಕಾರಗಳೂ ಗುರುರಾಮವಿಠಲರಿಗೆ ಸಹಜವಾಗಿ ಸಿದ್ಧಿಸಿದ್ದವು. ಕುಮಾರವ್ಯಾಸ, ಲಕ್ಷ್ಮೀಶ, ಪುರಂದರದಾಸ ಮೊದಲಾದ ವೈಷ್ಣವ ಕವಿಗಳ, ಕೀರ್ತನಕಾರರ ಪ್ರಭಾವವನ್ನೂ ನಿಚ್ಚಳವಾಗಿ ಕಾಣಬಹುದು. ಪೂಜಾಕೃತಿಗಳನ್ನು ಕನ್ನಡದಲ್ಲಿ ಹಾಡಿರುವುದು, 'ಪುರುಷಸೂಕ್ತ'ವನ್ನು ಕನ್ನಡಿಸಲು ಪ್ರಯತ್ನಿಸಿರುವುದು, ವಿಷ್ಣುಶತಕದಲ್ಲಿ ತಮ್ಮ ಕನ್ನಡ ಕೃತಿಯನ್ನು 'ಪರಿಮಳವಿಲ್ಲದ ತಂಗಡಿಯ ಪುಷ್ಪವೆಂದು ಭಾವಿಸದೆ ಗೌರವಿಸಬೇಕು'. ಎಂದು ಹೇಳಿರುವುದು –ಹೀಗೆ ಗುರುರಾಮವಿಠಲರ ಕನ್ನಡ ಪ್ರೇಮವನ್ನು ಅರಿಯಬಹುದು.

ಹರಿದಾಸ ಸಾಹಿತ್ಯದಲ್ಲಷ್ಟೇ ಏಕೆ ಇಡೀ ಕನ್ನಡ ಸಾಹಿತ್ಯದಲ್ಲೇ ಅಂಥ ಕವಿಯೊಬ್ಬ ಈ ರೀತಿಯ ವೈವಿಧ್ಯಮಯವಾದ ಕೃತಿಗಳನ್ನು ರಚನೆ ಮಾಡಿದ ದಾಖಲೆಗಳಿಲ್ಲ. ಹೆಂಗಸರ ಸಂಪ್ರದಾಯದ ಹಾಡುಗಳಲ್ಲಿ, ಹರಿಕಥೆದಾಸರ ಕಥಾಕೀರ್ತನೆಗಳಲ್ಲಿ ಅಪರೂಪಕ್ಕೆ ಕೇಳುತ್ತಿದ್ದ ಗುರುರಾಮವಿಠಲರ ಕೃತಿಗಳು ಅವರ ಜೀವಿತ ಕಾಲದಲ್ಲಿ ಮಾತ್ರ ಪ್ರಸಿದ್ಧವಾಗಿದ್ದು, ಅನಂತರ ಅಜ್ಞಾತವಾದವು. ಗುರುರಾಮವಿಠಲರು ಯಾರಿಗೂ ಅಂಕಿತ ನೀಡಲಿಲ್ಲ, ಶಿಷ್ಯಪರಂಪರೆಯನ್ನು ಬೆಳೆಸಲಿಲ್ಲ. ತಮಗೆ ಆಪ್ತರಾಗಿದ್ದ ಜಗದೀಶವಿಠಲ ನಾರಾಯಣದಾಸ ಮತ್ತು ಬಾಗೇಪಲ್ಲಿ ಶೇಷದಾಸರಿಗೆ ತಮ್ಮ ಸಮಕಾಲೀನರಾಗಿದ್ದ ತಂದೆ ಮುದ್ದುಮೋಹನವಿಠಲರಿಂದ ದಾಸದೀಕ್ಷೆಯನ್ನು ಕೊಡಿಸಿದರು. ಆದ್ದರಿಂದ ಗುರುರಾಮವಿಠಲರ ವಂಶಪೀಳಿಗೆ ಹೇಗೆ ನಿಂತು ಹೋಯಿತೋ ಹಾಗೆಯೇ ಅವರ ದಾಸ ಪೀಳಿಗೆಯೂ ಅವರ ಕಾಲಕ್ಕೇ ನಿಂತು ಹೋಯಿತು. ಹೀಗಾಗಿ ಅವರ ಕೃತಿಗಳು ಪ್ರಚಾರವಾಗಲಿಲ್ಲ. ಮುದ್ರಿತ ಕೃತಿಗಳೂ ಅಲಭ್ಯವಾದ್ದರಿಂದ ಗುರುರಾಮವಿಠಲರು ಅಜ್ಞಾತರ ಸಾಲಿಗೆ ಸೇರಿಹೋದರು.

•

ಹಾಡುಗಳ ಆಕರಗಳು

೧. ಬಾಗೇಪಲ್ಲಿ ಸಾಹಿತ್ಯ ವಿದ್ವಾನ್ ಶ್ರೀನಿವಾಸಾಚಾರ್ಯರು ಸಂಪಾದಿಸಿದ ಗುರುರಾಮವಿಠಲರ 'ದೇವರನಾಮಗಳು' ೧೯೦೫ರಲ್ಲಿ ಪ್ರಕಟವಾಯಿತು. ಬೆಂಗಳೂರು ಅರಳೇಪೇಟೆ, ಎಸ್.ಜಿ.ಎನ್. ಪ್ರೆಸ್ ಮಾಲೀಕರಾದ ಶ್ರೀ ಬಿ. ಬಸಪ್ಪಶೆಟ್ಟರು ಇದನ್ನು ಮುದ್ರಿಸಿ ಪ್ರಕಟಿಸಿದರು. ಇದರಲ್ಲಿ ದೀರ್ಘಕೃತಿಗಳು ಸೇರಿದಂತೆ ೨೦೦ ದೇವರನಾಮಗಳು ಪ್ರಕಟವಾಗಿವೆ.

೨. ಹರಿಕಥಾ ವಿದ್ವಾನ್ ಶ್ರೀ ಟಿ.ಕೆ.ವೇಣುಗೋಪಾಲದಾಸರ ವಹಿಗಳಲ್ಲಿ ಕೆಲವು ಹಾಡುಗಳು ದೊರೆತಿವೆ.

೩. ಪ್ರಕಟಿತ ಮತ್ತು ಅಪ್ರಕಟಿತ ಸಂಪ್ರದಾಯದ ಹಾಡುಗಳಲ್ಲಿ "ಗುರುರಾಮವಿಠಲ" ಅಂಕಿತದ ಕೃತಿಗಳು ದೊರೆಯುತ್ತವೆ.

ಮೇಲಿನ ಈ ಮೂರು ಆಕರಗಳಿಂದ ಗುರುರಾಮವಿಠಲರ ಕೃತಿಗಳನ್ನು ಸಂಪಾದಿಸಲಾಗಿದೆ.

ಉಪಕಾರ ಸ್ಮರಣೆ

ಗುರುರಾಮವಿಠಲರ ಹೆಸರನ್ನು ಅವರ ಕೀರ್ತನ ವೈವಿಧ್ಯವನ್ನು ನನಗೆ ಮೊದಲು ಪರಿಚಯ ಮಾಡಿಸಿದವರು ದಿ|| ಕೊರಟಿ ಶ್ರೀನಿವಾಸರಾಯರು. ತಮ್ಮಲ್ಲಿದ್ದ ಕೆಲವು ಹಾಡುಗಳನ್ನು ಪ್ರತಿಮಾಡಿಕೊಳ್ಳಲು ಕೊಟ್ಟಿದ್ದರ ಜೊತೆಗೆ ಶ್ರೀ ವೇಣುಗೋಪಾಲ ದಾಸರಿಂದ ಹೆಚ್ಚಿನ ಮಾಹಿತಿ ಪಡೆಯಬಹುದೆಂಬುದನ್ನು ತಿಳಿಸಿದರು.

ಶ್ರೀ ಟಿ.ಕೆ.ವೇಣುಗೋಪಾಲದಾಸರು ತಮ್ಮ ವಹಿಗಳಲ್ಲಿದ್ದ ದೇವರನಾಮಗಳನ್ನು, ತಾವು ಗುರುರಾಮವಿಠಲರ ಬಗ್ಗೆ ಬರೆದ ಲೇಖನವೊಂದನ್ನು ನೀಡಿ, ದಾಸರ ಸ್ವವಂಶಾವಳೀ ಶ್ಲೋಕಗಳನ್ನು ಪರಿಷ್ಕರಿಸಿ ಕನ್ನಡ ಅನುವಾದಕ್ಕೂ ನೆರವಾದರು.

ಪ್ರೊ॥ ಜಿ. ಅಶ್ವತ್ಥನಾರಾಯಣ ಅವರು ಮುದ್ರಿತ ದೇವರನಾಮಗಳ ಕೃತಿಯನ್ನು ನೀಡಿದ್ದಲ್ಲದೆ, ಹಲವು ವಿಧದಲ್ಲಿ ಮಾರ್ಗದರ್ಶನ ನೀಡಿದ್ದಾರೆ.

ಗುರುರಾಮವಿಠಲರ ಜೊತೆಗೆ ಅವರ ಸಮಕಾಲೀನ ಹರಿದಾಸರ ಕೃತಿಗಳನ್ನು ಆಧರಿಸಿ ಪಿ.ಎಚ್.ಡಿ ಪದವಿಗೆ ಅಧ್ಯಯನ ನಡೆಸಲು ನನಗೆ ಮಾರ್ಗದರ್ಶನ ನೀಡಿದ ಡಾ॥ ಸುಮುತೀಂದ್ರ ನಾಡಿಗ ಅವರು ದಾಸರ ಸಮಗ್ರ ಕೃತಿಗಳನ್ನು ನಾನೇ ಸಂಪಾದಿಸಬೇಕೆಂದು ಹಲವಾರು ಬಾರಿ ಒತ್ತಾಯಿಸಿದ್ದಾರೆ.

ಡಾ॥ ಶ್ರೀನಿವಾಸ ಹಾವನೂರ, ಡಾ॥ ಟಿ.ಎನ್.ನಾಗರತ್ನ, ಇವರುಗಳು ಸಂಪಾದನ ಕಾರ್ಯದಲ್ಲಿ ಮಾರ್ಗದರ್ಶನ ನೀಡಿದ್ದಾರೆ. ಹಸ್ತಪ್ರತಿಗಳ ಸಂಗ್ರಹ, ಪರಿಷ್ಕಾರ, ಪಾಠನಿರ್ಣಯ, ಅರ್ಥನಿರ್ಣಯ ಇತ್ಯಾದಿ ವಿಷಯಗಳಲ್ಲಿ ನನ್ನ ಸ್ನೇಹಿತರಾದ ಶ್ರೀ ಎಸ್.ಎ.ಜಗನ್ನಾಥ್, ಶ್ರೀ ಎಸ್.ಬಿಳಿಗಿರಿವಾಸನ್, ಶ್ರೀ ಚಂದ್ರಶೇಖರ್, ಶ್ರೀ ಎಸ್.ಎಲ್.ಮಂಜುನಾಥ್ ಇವರು ನೆರವು ನೀಡಿದ್ದಾರೆ.

ಕರ್ನಾಟಕ ಸರ್ಕಾರದ ಕನ್ನಡ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳು, ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು ಮತ್ತು ಬಿ.ಎಚ್.ಎಸ್.ಆಡಳಿತ ಮಂಡಲಿಯ ಕಾರ್ಯದರ್ಶಿಗಳು ಪ್ರೋತ್ಸಾಹಿಸಿ ಉತ್ತೇಜನ ನೀಡಿದ್ದಾರೆ.

ಈ ಎಲ್ಲ ಮಹನೀಯರ ಉಪಕಾರವನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಡಾ. ಅನಂತ ಪದ್ಮನಾಭರಾವ್
ಸಂಪಾದಕರು

ಕೀರ್ತನೆಗಳ ಕ್ರಮಸೂಚಿ

ಭಗವಂತನ ಸಂಕೀರ್ತನೆ (ಆ) ಷೋಡಶೋಪಚಾರ

ಲೋಕನೀತಿ (ಅ)

ಲೋಕನೀತಿ (ಆ) ಸಮಾಜ ದರ್ಶನ

ಗುರುರಾಮವಿಠಲರ ಕೀರ್ತನೆಗಳು

ಗಣೇಶ ಪ್ರಾರ್ಥನೆ

೧

ಗಜವದನಾ ಗಣೇಶಾ ಪ

ನೀ ಮೊದಲು ಸಕಲ ವಿಘ್ನಗಳ ಕಳಿಯೊ ಅ.ಪ

ಗಿರಿಜಾಮಲ ಸಂಭೂತ ನಮೋ ನಮೋ
ಹರಿಬ್ರಹ್ಮ ಶಿವರಿಗತಿ ಪ್ರಿಯನೆ ೧

ಲಂಬೋದರ ಹೇರಂಬ ವಿನಾಯಕ
ಕಂಬುಕಂಠ ಶುಕ್ಲಾಂಬರಧರ ೨

ಸರೋಜಾಂಬಕ ಗುರುರಾಮವಿಠಲನ
ಸ್ಮರಿಸುವ ಸುಜನರಿಗೆ ಅಭಯವ ಕೊಡು ನೀ ೩

೨

ಗಣೇಶ ಬಾರೋ
ಕರುಣವ ಬೀರೋ ಪ

ತ್ರಿಗುಣಯ್ಯನ ಸುತ
ಮುನಿಜನಹಿತ ಅ.ಪ

ವಿಘ್ನನಿಕರಗಳನೆಲ್ಲವ
ಭಗ್ನವೆಗೈಯುತಲಿಶ
ತೃಷ್ಣಾಗ್ರಜನಣ್ಣನನಿ–
ರ್ವಿಘ್ನತೆಯಲಿ ಭಜಿಸುವದಕೆ ೧

ಮೂಲಾಧಾರನಿಲಯರಿಪು
ಕಾಲಗಿರಿಸುತಾಬಾಲ
ಲೀಲಾಮಾತ್ರದಿ ಸುಜನರ
ಪಾಲಿಸುತಿಹೆ ಕರುಣಾಳೊ ೨

ತಾಮಸದಾನವ ಹರಗುರು
ರಾಮವಿಠಲನಡಿಗಳನಿ-
ಷ್ಕಾಮದಿಂದ ಭಜಿಸುವರಿಗೆ
ಕಾಮಿತ ಫಲಗಳ ಕೊಡುವಡೆ ೩

೩

ಪಾಲಿಸೊ ಎನ್ನ ಗಣಪತಿಯೆ ಪ

ಆಲಿಸು ಎನ್ನ ವಿಜ್ಞಾಪನೆಯನು ನೀಂ ಅ.ಪ

ಮೂಷಿಕವಾಹನ ಮುನಿಜನ ಪೋಷಣ
ಶೇಷಾಭರಣ ವಿಶೇಷ ಮಹಿಮನೆ ೧

ಅಂಬಾಸುತ ಹೇರಂಭ ನಿನ್ನಯ ಪಾ-
ದಾಂಬುರುಹವ ನೆರೆ ನಂಬಿದೆ ಜೀಯ ೨

ಗುರುರಾಮವಿಠಲ ಸ್ಮರಣೆ ಮಾಡುವುದಕೆ
ನಿರ್ವಿಘ್ನತೆ ಕೊಡು ಕರುಣವಾರಿಧಿಯೆ ೩

೪

ಭಜಿಸುವೆ ವಿಘ್ನರಾಜ ಭಾವಜಾರಿ ಪುತ್ರನೆ ಪ

ಭಾವಜಾರಿ ಪುತ್ರನೇ ಭವಾಬ್ಧಿ ಕರ್ಣಾಧಾರನೆ ಅ.ಪ

ವರಗಳ ಕೊಡು ಕರುಣದಿ ವಂದಿಸುವೆ ನಿನ್ನನಾ
ವಂದಿಸುವೆ ನಿನ್ನನಾ ವೃಂದಾರಕೇಂದ್ರ ಪೂಜ್ಯನ ೧

ಆದಿಯಲ್ಲಿ ನಿನ್ನ ಪೂಜಿಸದೆ ಕೌರವೇಂದ್ರನು
ಮೋದರಹಿತನಾದನು ನಿರ್ಮೂಲವಾಗಿ ಪೋದನು ೨

ಗುರುರಾಮವಿಠಲನ ದಾಸ ಕೋಟಿ ಸೂರ್ಯ ಭಾಸನೆ
ಕೋಟಿ ಸೂರ್ಯಭಾಸನೆ ಸುಕುಮಾರ ಮಂದಹಾಸನೆ ೩

೫

ಶ್ರೀ ಗಣಾಧಿನಾಥಾಶ್ರಿತ ಸೌಖ್ಯಧಾತ ಪ

ನಾಗಭೂಷಣಸುತ ನಾರದಾದಿವಂದಿತ ಅ.ಪ

ಗಜವದನ ಗಣೇಶ ಲಂಬೋದರ ಗಿ-
ರಿಜಾಮಲ ಸಮುದ್ಭವ ಭೂತೇಶ
ಭುಜಗವಿಭೂಷಣ ಭೂರಿ ಕೃಪಾಕರ
ಭಜಿಸುವೆ ನಾನಿನ್ನ
ಸುಜನರ ಕಾರ್ಯಕೆ ಬರುತಿಹ ವಿಘ್ನ
ವ್ರಜವಖಂಡ್ರಿಸುತ ವರಗಳ ನೀಡುತ
ತ್ರಿಜಗದೊಳಗೆ ಪೂಜೆಗೊಂಬೆ ತವಪದ
ರಜಗಳಿಗೆ ನಮೊ ನಮೋ ಎಂಬುವೆನಾಂ ೧

ಇಂದುಧರನ ತನಯಾ ರವಿ ಶಶಿ ಸಂ-
ಕ್ರಂದನ ಮುಖ ಸುರಬೃಂದ ಸೇವ್ಯಮೃದು
ಮಂದಹಾಸ ಪೂರ್ಣೇಂದುವದನ ಸ್ಫುರಿ-
ತೇಂದೀವರನಯನಾ
ಇಂದಿನದಿನ ಸಕಲ ದೇಶದವರು ಮುದ-

ದಿಂದ ನಾಟಿ ಭೈರವಿ ಶ್ರೀರಾಗಗ-
ಳಿಂದ ಗೀತಗಳ ಪಾಡುತತವಪದ
ದ್ವಂದ್ವಗಳನು ಕೊಂಡಾಡುತಲಿಹರೊ ೨

ಪಾಶಾಂಕುಶಗಳ ಕರದಿ ಹಿಡಿದು ನಿಜ-
ದಾಸರ ಮನದಭಿಲಾಷೆ ಸಲ್ಲಿಸುವೆ
ಮೂಷಕವೇರಿ ಬರುವೆ ನತಜನ ಸುರ
ತರುವೆ ಜಗದ್ಗುರುವೆ
ದೋಷದೂರ ಗುರುರಾಮವಿಠಲನ
ದಾಸರದಾಸ್ಯವನಿತ್ತು ಸದಾಸಂ-
ತೋಷದಿಂದ ಪಾಲಿಸು ಎನ್ನನು ಸ-
ರ್ವೇಶ ಮೋದಕ ಪ್ರಿಯ ವಿಘ್ನೇಶಾ ೩

೬

ಸಿದ್ಧಿ ವಿನಾಯಕ ಪರಿಪಾಹಿ । ವರ ಪ

ಸಿದ್ಧಿ ವಿನಾಯಕ ವೀರಭದ್ರನಗ್ರಜನೆ ಮಹಾ
ರುದ್ರದೇವನ ಸುಕುಮಾರ । ಧೀರ ಅ.ಪ

ಮೊದಲು ನಿನ್ನಡಿಗಳಿಗೆ ಮುದದಿ ವಂದಿಸುವರಿಗೆ
ಸದಮಲ ಸುಮಾರ್ಗವೀವದೇವ । ವರ ೧

ಏಕವಿಂಶತಿಸುರೂಪ ಕಾಕುದುರ್ಮತಿಯನು ನಿ-
ರಾಕರಿಸಿ ಕೊಡುವದು ನಿರ್ವಿಘ್ನವಂ । ವರ ೨

ತಾಮಸರಹಿತ ಗುರುರಾಮವಿಠಲನಡಿಗಳ ನಿ-
ಷ್ಕಾಮದಿಂದಾ ಭಜಿಸುವಂತೆಮಾಡು । ವರ ೩

(ಅ) ಭಗವಂತನ ಸಂಕೀರ್ತನೆ

೭

ಅಪ್ರಮೇಯ ಆದರಿಸೋ ಎನ್ನ ಪ

ಸ್ವಪ್ರಕಾಶಾನಂದರೂಪನೆ ಅ.ಪ

ಮುಪ್ಪುರಹರನುತ ಮುನಿಜನಸೇವಿತ
ತಪ್ಪುಗಳೆಣಿಸದೆ ದಾಸನೆಂತೆಂದು ೧

ನಿನ್ನದರುಶನದಿಂದಾ ಧನ್ಯರಾಗುವರುಜನರು
ಪುಣ್ಯವಂತರಾಗಿಹವರವ ಪಡೆವರು ೨

ಧಾರುಣಿಯೊಳಗೆ ಮಳೂರೊಳು ನೆಲಸಿದೆ
ಮಾರಜನಕ ಗುರುರಾಮ ವಿಠಲ ೩

೮

ಅವತರಿಸಿದ ನೃಸಿಂಹ । ಶ್ರೀ ಹರಿ ಪರಬ್ರಹ್ಮ ಪ

ಅವತರಿಸಿದ ತನ್ನವರನು ಪಾಲಿಸುವ
ತವಕದಿ ಭೂ ಭಾರವನಿಳುಹುವುದಕೆ ಅ.ಪ

ದಡಿಗ ರಕ್ಕಸನು ಖಡುಗದಿ ಕಂಬವ
ಹೊಡೆದ ಮಾತ್ರದಲಿ ಗುಡುಗಿನಂತೆವಡ
ನೊಡನೆ ಘುಡುಘುಡಿಸಿ ಕಿಡಿಗಳುದುರೆ ಕೋಟಿ
ಸಿಡಿಲಿದೆನ್ನುತ ಕಿವುಡುಗೊಳೆ ಲೋಕವು ೧

ಭೂ ನಭೋಂತರಾಳದಲಿ ಭಯಂಕರ
ಧ್ವಾನ ತುಂಬಿ ಪೊಗೆ ಸುತ್ತಿ ಉರಿಯಲು ಶ
ತಾನಂದಾದ್ಯಮರರು ಕರಗಳ ಮುಗಿ
ದಾನತರಾಗಿ ನಮೋನಮೋಯೆನಲ್ ೨

ಚಿಟಿಲು ಚಿಟಿಲು ನಿರ್ ನಿಟಿಲು ಶಬ್ದದಿ
ಕ್ಕಟಗಳೊಡೆಯೆ ಲಟಕಟಿಸೆ ಭುವನಚಯ
ಹಟಯೋಗದ ಮುನಿಕಟಕವು ಗುರುರಾಮ
ವಿಠಲನ ಪೊಗಳುತ ಮಿಟಿಮಿಟಿ ನೋಡಲು ೩

೬

ಆರತಿಯೆತ್ತಿದರು ಅಪ್ರಮೇಯಗೆ ಪ

ಸಾರಸಮುಖಿಯರು ಸಂತೋಷದಿಂದ ಅ.ಪ

ತರಳಗೋಸುಗ ಕಂಬ ಬಿರಿದು ಅವತಾರಗೈದು
ದುರುಳನುದುರವ ಸೀಳಿ ಕರುಳ ಧರಿಸಿದವಗೆ ೧

ಸಾಧುಜನರಿಗೆಲ್ಲ ಮೋದಕೊಡುವ ಜಗ
ದಾದಿ ಕಾರಣ ಪೂರ್ಣ ಭೋದಾಮೃತಮಯಗೆ ೨

ಕಾಮುಕರನು ಕೊಂದು ಭೂಮಿ ಭಾರವನಿಳುಹಿ
ಸ್ವಾಮಿಯಾಗಿ ಮೆರೆವ ಶ್ರೀ ಮನೋಹರನಿಗೆ ೩

ವಿಸ್ತಾರದಿ ಪಾಡುತ ವಿವಿಧ ರಾಗಗಳಿಂದ
ಸ್ವಸ್ತಿಯಾಗಲಿ ಎಂದು ಹಸ್ತಿನಿಯರು । ಹವಳದ ೪

ಕಿಂಕರ ಜನಮನ ಸಂಕಟಹರ ನಿಷ್ಕ
ಳಂಕ ನೀನೆನ್ನುತ ಶಂಕಿನಿಯರು । ರತ್ನದ ೫

ತತ್ವದರ್ಶಿಗಳಿಗೆ ನಿತ್ಯೈಶ್ವರ್ಯವನೀವ
ಭೃತ್ಯವತ್ಸಲನೆಂದು ಚಿತ್ತಿನಿಯರು । ಮುತ್ತಿನ ೬

ವಿದ್ವಜ್ಜನರ ಹೃದಯ ಪದ್ಮದಿ ಬೆಳಗುವ
ಶುದ್ಧಾನಂದ ರೂಪಗೆ ಪದ್ಮಿನಿಯರು । ಕುಂದಣ ೭

ವಾಣಿ ಭಾರತಿ ಸೌಪರ್ಣಿ ವಾರುಣಿ ಶ
ರ್ವಾಣಿ ಸ್ಮರನ ರಾಣಿ ಯಿಂದ್ರಾಣಿ ಮುಖ್ಯರು । ಹುವ್ವಿನ ೮

ಸರಸಿಜಭವ ಪುರಹರ ಪಾಕ ವೈರಿ ಮುಖ್ಯ
ಸುರವಂದ್ಯ ಶರಣ ಶ್ರೀ ಗುರು ರಾಮವಿಠಲಗೆ ೯

೧೦

ಆರತಿಯೆತ್ತಿದರು ನಾರಿಯರು ಕೃಷ್ಣಗೆ ಪ

ನೀರೆ ರುಕ್ಮಣಿ ಸತ್ಯಭಾಮ ಸಮೇತಗೆ ಅ.ಪ

ಭಕ್ತವತ್ಸಲಗೆ ಭವ ಭಯಗಳ ಬಿಡಿಸುತ
ಮುಕ್ತರ ಪೊರೆವಗೆ ಮುನಿಜನ ವಂದ್ಯಗೆ ೧

ವಾರಿಜಾಕ್ಷಿ ದ್ರೌಪದಿಗೆ ಸೀರೆಗಳಕ್ಷಯ ಮಾಡಿ
ಕ್ರೂರರ ಮುಖಗರ್ವ ಕುಂದಿಸಿದ ಮಹಿಮಗೆ ೨

ಪಾಂಡವಪ್ರಿಯಗೆ ಪದ್ಮಜನಯ್ಯಗೆ
ಕುಂಡಲಿಶಯನ ಶ್ರೀ ಗುರುರಾಮವಿಠಲಗೆ ೩

೧೧

ಇಂದ್ರಾದಿಸುರರಾರಾಧಿತ ಇನವಂಶಸಂಜಾತಾ
ಚಂದ್ರಧರ ಪ್ರಿಯ ಶ್ರೀರಾಮಚಂದ್ರಾ ಎಚ್ಚರಿಕೆ ೧

ಅರುಣಾತ್ಮಜ ಮುಕ್ತಿಪ್ರದ ಕರುಣಾಸಮುದ್ರಾ
ಭರತಾಗ್ರಜ ಭವಹರರಾಮಭದ್ರಾ ಎಚ್ಚರಿಕೆ ೨

ಘಟಸಂಭವಮುಖಸಮ್ಯಮಿ ಕಟಕಾರ್ಚಿತ ಚರಣಾ
ಕುಟಲಾರಿ ಶ್ರೀ ಗುರುರಾಮವಿಠಲಾ ಎಚ್ಚರಿಕೆ ೩

೧೨

ಇದ್ದೀಯಯ್ಯ ಎನ್ನೊಳಗೆನೀ ಇನಕುಲರಾಯ ಪ

ಇದ್ದೀಯೈ ಸರ್ವರ ಹೃದ್ಗುಹೆಯೆಂತೆಂಬ
ಪದ್ಮದೊಳಗೆನೀನು ಪದುಮೆಯಿಂದೊಡಗೂಡಿ ಅ.ಪ

ಮರುತಾತ್ಮಜ ನಿನ್ನ ಚರಣವನೊತ್ತಲು
ಸರಸಿಜಭವ ಮುಖ್ಯ ಪರಿವಾರಸಹಿತನು ೧

ಮೂರು ಲೋಕದ ವ್ಯಾಪಾರ ನಡೆಸುತ್ತ
ಯಾರಿಗು ತಿಳಿಸದೆಯೆಲ್ಲೆಲ್ಲಿಯು ನೀನೆ ೨

ಪ್ರೇಮದಿಂದಲಿ ಭಕ್ತಸ್ತೋಮವಪೋಲೈಸುವದು
ಸ್ವಾಮಿಯಾಗಿ ಗುರು ರಾಮವಿಠಲ ತಂದೆ ೩

೧೩

ಏನು ಪೇಳಲಿ ಹರಿಯ ಚರ್ಯ ಎಂತು ಪೊಗಳಲಿ ಪ

ಗಾನಲೋಲ ಜ್ಞಾನಪೂರ್ಣ ಶ್ರೀನಿವಾಸನ ಅ.ಪ

ಬಲಿಯ ದಾನ ಬೇಡಿ ಬೆನ್ನೊಳು ಭಾರ ಪೊತ್ತನ
ಖಳನ ಮಡುಹಿ ವೇದರಾಶಿ ಅಜಗೆಯಿತ್ತನ ೧

ಧರಣಿ ಎತ್ತಿ ದೈತ್ಯನ ಸೀಳಿ ತರಳಗೊಲಿದನ
ಕರದಿಕೊಡಲಿ ಪಿಡಿದು ಅಡವಿ ಚರಿಸಿದಾತನ ೨

ಬೆಂಣೆ ತಿಂದು ತ್ರಿಪುರ ಸತಿಯರ ಬೆರಗು ಮಾಡ್ಡನ
ಪುಣ್ಯ ಮೂರುತಿ ಕಲ್ಕಿ ಗುರುರಾಮವಿಠಲನ ೩

೧೪

ಏಳಯ್ಯ ಸ್ವಾಮಿ ಏಳಯ್ಯ ಪ

ಏಳು ಶ್ರೀದುರ್ಗಾಲೋಲ ಭಕ್ತಜನ
ಪಾಲ ವೇಣುಗೋಪಾಲಬಾಲಾ
ಏಳು ಇಂದ್ರಾದಿ ಸುರಾಳಿಗಳೆಲ್ಲ ನಿ–
ನ್ನೊಳಿಗ ಬಯಸಿ ಕಾದಿರುವರೊ ಕೃಷ್ಣಾ ಅ.ಪ

ರಕ್ಕಸರನೆಲ್ಲ ಸೊಕ್ಕು ಮುರಿಯುವದೇ
ವಕ್ಕಿತನಯ ಬೇಗ ಏಳಯ್ಯ
ಅಕ್ರೂರಗೆಮುನಾನದಿಯೊಳು ನಿನ್ನನಿ
ಜಾಕೃತಿ ತೋರುವೆ ಏಳಯ್ಯ ೧

ವರಮಾತೆ ಒರಳಿಗೆ ಕಟ್ಟಲು ಮರಗಳ
ಮುರಿದ ಮಹಾತ್ಮನೆ ಏಳಯ್ಯ
ತರುಣಿಯರೊಡನೆ ರಾಸಕ್ರೀಡೆಯಾಡಿದ
ಪರಮ ರಸಿಕನೀನು ಏಳಯ್ಯ ೨

ಬಿಲ್ಲು ಹಬ್ಬವಂತೆ ಮಲ್ಲಯುದ್ಧವಂತೆ
ಬಲ್ಲಿದನು ನೀನಂತೇಳಯ್ಯ
ಖುಲ್ಲ ಕಂಸನ ಕೊಂದು ತಾತನ ರಾಜ್ಯದಿ
ನಿಲ್ಲಿಸುವರೆ ಬೇಗ ಏಳಯ್ಯ ೩

ದೇವದೇವೋತ್ತಮನೆ ಮಾವನ ಭಂಗಿಸಿ
ದೇವಿ ಕೈ ಪಿಡಿಯಲು ಏಳಯ್ಯ
ದೇವಿಯರು ಹದಿನಾರು ಸಾವಿರವಾಳಿದ
ಭಾವಜಪಿತ ಕೃಷ್ಣ ಏಳಯ್ಯ ೪

ನರಗೆ ಸಾರಥಿಯಾಗಿ ಜಯವ ಕೊಡಿಸಿ ಯುಧಿ ।
ಷ್ಠಿರಗೆ ಪಟ್ಟವಗಟ್ಟು ಏಳಯ್ಯ
ನರನಂತೆ ನಟಿಸಿ ದಾಸರ ಪರಿಪಾಲಿಪ ।
ಗುರುರಾಮ ವಿಠಲನೆ ಏಳಯ್ಯ ೫

೧೫

ಒಬ್ಬನೆ ಎಲ್ಲರಿಗೂ ಸ್ವಾಮಿ ಬಲು ಪ

ಹಬ್ಬ ಅವನನೆ ನಂಬಿದವರಿಗ್ಯಾವಾಗಲು ಅ.ಪ

ಪುಟ್ಟಿಸಿ ಪೋಷಿಸಿ ಸಂಹಾರಗೈಸಿ ತನ್ನ
ಹೊಟ್ಟೆಯೊಳಗಿಟ್ಟಿರುವನು ಎಲ್ಲರನು ೧

ಪ್ರವಿಮಲಾತ್ಮನಾಗಿ ರವಿಮಂಡಲದಲಿದ್ದು
ಭುವನಗಳನ್ನು ಪೊರೆವನು ಕೇಳಿನ್ನು ೨

ಸಾಗರಸುತೆಗೆ ಪೇಳದೆ ಭಾಗವತರ ಕಾಯ್ವನು
ಶ್ರೀಗುರುರಾಮ ವಿಠಲನು ಕೇಳಿದನೂ ೩

೧೬

ಕರುಣವಾರಿಧಿಯೆ ಮೊರೆ ಕೇಳೋ ಹರಿಯೆ ಪ

ಶರಣರಿಗೆ ಜರಾಮರಣರಹಿತವಹ
ಪರಮ ಪದವಿ ಕೊಡು ಪರ ವಿದೇಹ ಅ.ಪ

ವನಿತೆಯಪಹರಿಸಿದನ ತಮ್ಮ ಗೊಲಿದೆ
ಇನಕುಲಭೂಷಣನೆನಿಪ ರಾಮ ೧

ಹಿಡಿಯವಲಕ್ಕಿಯ ಬಡಬ್ರಾಹ್ಮಣ ಕೊಡ-
ಲೊಡನೆ ಒಲಿದು ಸೌಭಾಗ್ಯವಿತ್ತು ೨

ಕಾಮಜನಕ ಬಲರಾಮಾನುಜ ಮಮ
ಸ್ವಾಮಿ ಕಾಯೊ ಗುರುರಾಮವಿಠಲಾ ೩

೧೭

ಕರುಣವಾರಿಧೆ ಮಾಧವ ಕೇಶವಾ ಪ

ವರದ ವೆಂಕಟೇಶ್ವರ ಚಿತ್ಸ್ವಭಾವ ಅ.ಪ

ವುರಗಾದ್ರಿಮಂದಿರದೇವ ದೇವ
ಶರಣಾರ್ತಿ ಭಂಜನಸುಪ್ರಭಾವ ೧

ಪದುಮಾವತೀ ಹೃದಯಾಬ್ಜಮಿತ್ರ
ಸದಸದ್ವಿಹಾರ ಸನ್ಮಾನಿಸ್ತೋತ್ರ ೨

ಗುರುರಾಮ ವಿಠಲ ಸುರಪತಿಸಹಾಯ
ಧರಣಿಯೊಳ್ ಕಲ್ಯಾಣ ತಿರುಪತಿನಿಲಯ ೩

೧೮

ಕರುಣಾಬ್ಧೆ ಶ್ರೀನಾರಸಿಂಹ ಪ

ಶರಣಾಗತಜನರ ಪೊರೆವೊ ಕೃಪಾಳು ಅ.ಪ

ತರಳನ ಮಾತನು ಸಲಿಸುವುದಕೆ ಕಂಬ
ಬಿರಿದು ಅವತಾರಗೈದೆ ೧

ಕ್ಷೇಮವುಂಟಾದುದು ಶ್ರಮವೆಲ್ಲ ಪೋದುದು
ಭೂಮಿ ಭಾರವಿಳಿದುದು ೨

ಜಯ ಭಕ್ತವತ್ಸಲ ಜಯಜಗತ್ಪಾಲ
ಜಯ ಜಯ ಜಯ ಶ್ರೀ ಗುರುರಾಮವಿಠಲ ೩

೧೯

ಕರೆವರು ನಿನ್ನ ಹಸೆಗೆ ಪರಮ ಪುರುಷ ನೀನೆಂದು ಪ

ಸರಸದಿಂದ ಸಿರಿಸಹಿತ ಬರಬೇಕು ನೀಂ ತ್ವರಿತದಲಿ ಅ.ಪ

ನಾದದಶವಾದ್ಯಗಳು ಮೋದದಿಂದ ಮೊರೆಯಲು
ವೇದಾಂತರಹಸ್ಯವೆಂಬ ವಿವಿಧ ಗೀತೆಗಳ ಪಾಡಿ ೧

ತತ್ವಭಿಮಾನಿಗಳೆಂಬ ಮುತ್ತೈದೆಯರೆಲ್ಲ ಕೂಡಿ
ಸುತ್ತ ಜ್ಯೋತಿಯ ಬೆಳಗಿ ಸೂರಿ ಜನಪ್ರಿಯನೆಂದು ೨

ಎಂಟುದಳ ಪದ್ಮದೊಳು ನೆಂಟರಿಷ್ಟರೆಲ್ಲರು ನೂ-
ರೆಂಟು ಚಿತ್ರಗಳ ಬರೆದು ರಚಿಸಿ ರತ್ನ ಪೀಠವನ್ನು ೩

ಮೂರು ಸಂಪಾದಿಸಿಕೊಂಡು ಮೂರು ಬಿಟ್ಟು ಆಳಿದ
ಧೀರ ಸಭೆಯಲ್ಲಿ ಹದಿನಾರು ನಿನ್ನಾಧೀನಗೈದು ೪

ಯಾಮ ಯಾಮದಿ ಬಿಡದೆ ಕಾಮಿನೀ ಮಣಿಯರು ನಿ-
ಷ್ಕಾಮ ಸುಖವೀವ ಗುರುರಾಮವಿಠಲ ಬಾರೆಂದು ೫

೨೦

ಗತಿಯೆಂದು ನಂಬಿದೆ ನಿನ್ನ ಕಾಯೊ ಎನ್ನ । ಲಕ್ಷ್ಮೀ
ಪತಿಯೆ ಪುರುಷೋತ್ತಮ ವಿಶ್ವಮೋಹನ್ನ ಪ

ಗತಿಯಿಲ್ಲದವರಿಗೆ ಗತಿನೀನಲ್ಲವೆ ಸ್ವಾಮಿ
ಸತತನಿನ್ನಯ ಪಾದಾಶ್ರಿತರಲ್ಲವೆ ನಾವು ಅ.ಪ

ಅಗಣಿತಗುಣಪೂರ್ಣನೆಂದು ದೀನಬಂಧು । ಸ-
ರ್ವಗಸರ್ವಾಂತರ್ಯಾಮೀ ಮೊರೆಹೊಕ್ಕೆನಿಂದು
ಜಗದಾದಿಕಾರಣ ಜಲಜಾತ ನಯನ ಪ-
ನ್ನಗರಾಜಶಯನ ಪ್ರಸನ್ನ ವತ್ಸಲ ಶೌರಿ ೧

ವಾಸುದೇವಾಚ್ಯುತಾನಂತಾದಿಮಧ್ಯಾಂತ ರಹಿತ
ವಾಸುದೇವಾನುಜ ಸರ್ವಾಧೀಶ ಶ್ರೀಕಾಂತ
ನಾಶರಹಿತ ಪರಮಾತ್ಮ ಪಾಪವಿದೂರ
ನಾಥನು ನೀನು ಅನಾಥರಿಗೆಲ್ಲ ೨

ಸ್ಮರಿಸಿದವರ ಕಷ್ಟಗಳನು ಬಿಡಿಸುವೆ
ಶರಣಾಗತ ರಕ್ಷಾನತಸುರಧೇನು
ಗುರುರಾಮವಿಠ್ಠಲ ಕರುಣಾಸಾಗರನು ಎಂ–
ದರಿತು ನಿನ್ನಡಿಗಳ ಭಜಿಸಿ ಬೇಡುವೆನು ೩

೨೧

ಜಯ ಜಾನಕೀನಾಥ ಜಯ ಕುಶೀಲವ ತಾತ
ಜಯತು ಲಕ್ಷಣ ಭ್ರಾತ ಜನಕ ಜಾಮಾತ ಪ

ಜಯಭಕ್ತ ಸಂತ್ರಾತ ಜಯ ಭುವನ ವಿಖ್ಯಾತ
ಜಯ ಜಯತು ಸುಖದಾತ ಜಯ ಜಗನ್ನಾಥ ಅ.ಪ

ಮರುತಸಂಭವ ಪಕ್ಷ ಮಹನೀಯ ಸುಕಲಾಕ್ಷ
ಸರಿಸಿಜದಳ ನಿಭಾಕ್ಷ ಸಾಧು ಸಂರಕ್ಷಾ
ಶರಧಿ ಬಂಧನದಕ್ಷ ಶಾತ್ರವನಿಕರ ಶಿಕ್ಷ
ವರವಿಶಾಲಸು ವಕ್ಷ ವಂದ್ಯ ಪಾಲಾಕ್ಷ ೧

ದಾರಕಾಸುರನಿಕರ ದಾಸಜನ ಮಂದಾರ
ಘೋರ ಪಾಪವಿದೂರ ಕುಜನಸಂಹಾರ
ಮಾರಶತ ಶೃಂಗಾರ ಮಮಸ್ವಾಮಿ ರಘುವೀರ
ಸಾರತತ್ವವಿಚಾರ ಸದಸದ್ವಿಹಾರ ೨

ಶಿವವಿನುತ ಶುಭನಾಮ ಜೀಮೂತನಿಭಶ್ಯಾಮ
ನವತುಳಸಿದಳಧಾಮ ನತಜನಪ್ರೇಮ
ಅವನಿಪಾಲಲಲಾಮ ಅಖಿಳಾಮರಸ್ತೋಮ
ಕವಿಗೇಯ ಗುರುರಾಮವಿಠಲ ರಿಪುಭೀಮ ೩

೨೨

ಜಾನಕೀವರತೇ ಜಯ ಮಂಗಳಂ ಪ

ಮಾನವಾಧಿಪತೇ ಮಂಗಳಂ ಅ.ಪ

ರಾವಣಾನುಜಮಿತ್ರ ರಮಣೀಯ ಸುಚರಿತ್ರ
ದೇವಾಧಿದೇವ । ತೇ ಮಂಗಳಂ ೧

ಕಪಿಗಣಪೂಜಿತ ಕಾಮಿತ ಫಲದಾತ
ಅಪವರ್ಗಪ್ರದ ತೇ ಮಂಗಳಂ ೨

ಖರದೂಷಣನಿಹಂತ ಕರಧೃತಶರಚಾಪ
ಗುರುರಾಮವಿಠಲತೇ ಮಂಗಳಂ ೩

೨೩

ಜಾನಕೀಮನೋಹರ ಪ್ರಭೋ
ಜರಾಮರಣವಿದೂರ ರಾಮ ಪ

ನಾನಾವತಾರ ಚಿದಾ
ನಂದಾತ್ಮ ಶರೀರ ಅ.ಪ

ಧರ್ಮಾತ್ಮ ಸತ್ಯಸಂಧ
ದಿನಕರ ವಂಶಾಬ್ಧಿಚಂದ್ರ ೧

ಶಬರಿದತ್ತ ಫಲಭೋಜನ
ಶಾಶ್ವತ ತ್ರಿಜಗನ್ಮೋಹನ ೨

ಶಿವಚಾಪಖಂಡನ ಆ
ಶ್ರಿತಲೋಕ ಮಂಡನ ೩

ರಾವಣಾದಿ ದನುಜ ಮಥನ
ದೇವಪರಾತ್ಮರ ರಘುವರ ೪

ತಾಮಸಗುಣ ವಿರಹಿತ ಗುರು
ರಾಮವಿಠಲ ನಮೋ ನಮೋ ೫

೨೪

ದರುಶನವಾಯಿತು ಪಂಢರೀಶನ ಪ

ದರುಶನದಿಂದಲಿ ಧನ್ಯರಾದೆವು
ಸರಸಿಜಭವನ ನಾಭಿಯಲಿ ಪಡೆದವನ ಅ.ಪ

ತಂದೆತಾಯಿಯರ ಭಕ್ತಿಯಿಂದ ಸೇವಿಸುವರಿಗೊಲಿದಾ-
ನಂದಪದವಿಯನಿತ್ತ ನಂದನ ಕಂದನ ೧

ಇಷ್ಟ ಭಕುತ ಕೊಟ್ಟ ಇಟ್ಟಿಗೆ ಮೇಲೆ ನೆಲಸಿ
ಶಿಷ್ಟರ ಸಲಹುವ ವಿಠ್ಠಲರಾಯನಂಘ್ರಿ ೨

ಉರದಲಿ ಸಿರಿಯನು ಧರಿಸಿ ಸುರರ ಕಾರ್ಯ
ನೆರವೇರಿಸುವ ಜಗದ್ಭರಿತನ ಶ್ರೀಪಾದ ೩

ಭಾಗವತರ ಭವರೋಗಗಳ ಕಳೆವ
ನಾಗಶಯನ ನಿಖಿಲಾಗಮವೇದ್ಯನ ೪

ರುಕುಮಾಬಾಯಿಗೆ ಸುಖವ ಕರುಣಿಸಿದ
ಮುಕುತಿದಾಯಕ ಗುರುರಾಮವಿಠಲ ಚರಣ ೫

೨೫

ದೃಷ್ಟಾಂತವಾಗಿದೆಯ್ಯ ಪ

ಕೃಷ್ಣಾ ನೀಮಾಡಿರ್ಪ ಸೃಷ್ಟ್ಯಾದಿಗಳೆಲ್ಲ ಅ.ಪ

ಜನರು ನಡೆವದೀಗ ನೋಡಲ್
ಮನಕೇ ಬಂದಂತೆ ಕಾರ್ಯಂಗಳೊಡಗೂಡಲ್ ೧

ಧೃಡವಾಗಿಯೇ ತೋರ್ಪುದು
ನಡೆನುಡಿ ಮೊದಲಾದ ನರರು ಮಾಳ್ಪುದೆಲ್ಲ ೨

ಚತುರಾವಸ್ಥೆಗಳಿಂದಲಿ
ಹಿತವೇಬೇಕೆಂದರು ಅಹಿತವಾಗುತಿರುವುದು ೩

ತನ್ನಿಂತಾನೆ ನಡೆವದು
ಭಿನ್ನಾಭಿನ್ನವಾಗಿ ಭೇದ ಪ್ರಪಂಚವು ೪

ಎರಡಾಗಿರುವೆಯಲ್ಲಕು
ಗುರುರಾಮವಿಠಲಾ ನೀ ಮಾಡಿರ್ಪ ಕಷ್ಟಗಳು ೫

೨೬

ದೊರೆವನಲ್ಲವೋ ಹರಿ ದೊರೆವನಲ್ಲವೊ ಪ

ಪರಮಯೋಗನಿಷ್ಠೆಯಿಂದ ಇರುಳು ಹಗಲು ಸಮಾಧಿಯಲ್ಲಿ
ಇರುವ ಮಹಾಯೋಗಿಗಳಿಗೆ ಅರಿಯೆ ಸಾಧ್ಯವೇ ಅ.ಪ

ಸಕಲ ದಾನಧರ್ಮಗಳನು ಸರ್ವಕ್ರತುಗಳನ್ನು ಮಾಡೆ
ಶಕುತರಾಗಲರಿಯರೆಂದಿಗು ಶಾರ್ಙ್ಗಪಾಣಿಯಂ ೧

ಸಚ್ಚಿದಾನಂದ ರೂಪನ ಸರ್ವವ್ಯಾಪ್ತನ ಪರಾತ್ಪರನ
ರಚ್ಚೆಗಿಕ್ಕಿ ಕಾಣಬಹುದೇ ರಾಜೀವಾಕ್ಷನ ೨

ಪಾಮರ ತಾನೆಂದು ಸಕಲ ನೇಮನಿಷ್ಠೆಯಿಂದಲವನ
ನಾಮ ಸ್ಮರಿಸೆ ಸುಲಭನಹನು ಗುರುರಾಮವಿಠ್ಠಲನು ೩

೨೭

ದ್ವೈತಮತಾಬ್ಧಿ ಚಂದ್ರಮ ಪ

ಅದ್ವೈತ ಸ್ವರೂಪ ಪಾಲಿಸೊ ಶ್ರೀರಾಮ ಅ.ಪ

ಒಂದೆರಡಾಗಿ ನೀ ಛಂದದಿ ಮೂಲದೊ
ಳೊಂದು ಉತ್ಸವದಿ ಮತ್ತೊಂದು ರೂಪಾಗಿರುವೆ ೧

ಎಷ್ಟು ಪ್ರಾಣಿಗಳಿಗೆ ಅಷ್ಟುರೂಪಾಗಿ ನೀ
ಕೃಷ್ಣ ಒಳ ಹೊರಗೆ ಚೇಷ್ಟೆ ಮಾಡಿಸುತಿಹೆ ೨

ಅಣುವಿಗೆ ಅಣುವು ಮಹತ್ತಿಗೆ ಮಹತ್ತು
ಕೊನೆಗಾಂಬರಾರೊ ಶ್ರೀ ಗುರುರಾಮ ವಿಠಲನೇ ೩

೨೮

ಧನ್ಯನಾದೆನು ನಾಂ ಪ

ಘನ್ನಮಹಿಮ ಶ್ರೀನಿವಾಸ ಕರುಣದಿಂದ ಒಲಿದನಿನ್ನು ಅ.ಪ

ದೇಶದೇಶದಿಂದ ಸಕಲ
ದಾಸಜನರು ಬಂದು ಸದಾ
ಶ್ರೀಶ ಸಲಹೆಂದು ಕೂಗುವ
ಘೋಷ ಕೇಳಿ ಕರ್ಣಗಳಿಂ ೧

ಧಾರ್ತರಾಷ್ಟ್ರ ವೈರಿ ವಿನುತ
ಪ್ರಾರ್ಥಿಸುವರಭೀಷ್ಟ ಕೊಡುತ
ತೀರ್ಥ ಪ್ರಸಾದಗಳ ಮಾರಿಸಿ
ಅರ್ಥ ಗಳಿಸುವವನ ಕಂಡು ೨

ರಥವನೇರಿ ಪದ್ಮಾವತಿ
ಪತಿಯು ಬರುವುದರಿತು ದೇವ
ಸತಿಯರೆಲ್ಲ ಮುತ್ತಿನಾ-
ರತಿಯ ಬೆಳಗುವುದು ಕಂಡು ೩

ಸಂತಸದಿ ಮಹಂತರು ಶ್ರೀ-
ಕಾಂತನ ಗುಣರಾಸಿ ಪೊಗಳಿ
ಸ್ವಾಂತನಿರ್ಮಲರಾಗಿ ಭಜಿಪ-
ರಂತರಾತ್ಮನ ಕಂಡು ೪

ಭೂಮಿಗಧಿಕ ಶೇಷಗಿರಿ
ಧಾಮಪೂರ್ಣಕಾಮ ಭಕ್ತ-
ಸ್ತೋಮವನ್ನು ಪಾಲಿಪ ಗುರು-
ರಾಮವಿಠಲನ್ನ ಕಂಡು ೫

೨೯

ಧ್ಯಾನಿಸುವ ಸುಜನರಿಳೆಯೊಳೇನು ಧನ್ಯರೊ ಪ

ಶ್ರೀನಿಧಿ ನಮ್ಮ ನಾರಾಯಣನ ಚರಣಕಮಲವ ಅ.ಪ

ಬ್ರಹ್ಮ ರುದ್ರ ಪ್ರಮುಖ ಸುರರಿಗೇನು ಮೂಲವೊ
ಸಮ್ಮತಿ ವೇದ ಶಾಸ್ತ್ರ ಪುರಾಣವೇನು ಪೇಳ್ವುದೊ ೧

ಕಾಲಕರ್ಮ ಜೀವ ಮಾಯ ಯಾರಧೀನವೊ
ಮೇಲೆ ಅನುಭವದಲಿ ತಿಳಿವುದದುವೆ ಜ್ಞಾನವೊ ೨

ಅರ್ಥ ಚತುಷ್ಟಯವ ಕೊಡುವ ಪಾರ್ಥಸಾರಥಿ
ಕರ್ತಾ ಭೋಕ್ತಾ ಗುರುರಾಮವಿಠಲ ಮೂರುತಿ ೩

೩೦

ನಂದ ನಂದನ ಸುಂದರಾ ನವನೀತ ಚೋರಾ ಪ

ಚಂದ್ರ ಸಹೋದರಿ ಮಾನಸ ಚಕೋರ
ಚಂದ್ರ ಚಂದ್ರ ಕುಲಚಂದ್ರ ಚಂದ್ರಮುಖ ಅ.ಪ

ಸೂರಿಜನಪ್ರಿಯ ಸುಗುಣನಿಲಯ ಪಾ-
ಕಾರಿಗರ್ವಹರ ಕರುಣಾ ಜಲಧೇ ೧

ಮೃದ್ಭಕ್ಷಣಾದಿ ಚಿದ್ವಿಲಾಸನದ
ಸದ್ವಿಹಾರ ದೇವ ದ್ವಿಜ ಪೋಷಕ ೨

ರಾಮಾನುಜ ಭೃಗು ರಾಮತ್ರಿಜಗದಭಿ
ರಾಮಪಾಹಿ ಗುರುರಾಮವಿಠಲ ಜಯ ೩

೩೧

ನಂಬಿದೆ ನಾನಿನ್ನ ನಾರಾಯಣ ವಿಶ್ವಂಭರ ಮೂರುತಿಯೇ
ಕಂಬುಧರ ಕಮಲಾಂಬಕ ಶ್ರೀಹರಿ ಪಾರ್ಥನ ಸಾರಥಿಯೇ ಪ

ವಾರಿಜನಾಭನೆ ಪಾರುಗಾಣಿಸೊ ಸಂ-
ಸಾರ ಶರಧಿಯಿಂದ
ಮಾರಮಣನೆ ಮೊರೆಹೊಕ್ಕೆ ಲಾಲಿಸೊ
ಮುರಹರ ಗೋವಿಂದ ೧

ಪುಣ್ಯಪುರುಷ ಲಾವಣ್ಯ ನಿಧಿಯೆ ಕಾ-
ರುಣ್ಯ ಸುಗುಣ ಸಾಂದ್ರ
ಸನ್ನುತಿಗೈಯಲು ಶೇಷಗಳವೆ
ವನಜಾಪ್ತವಂಶ ಚಂದ್ರ ೨

ಕಾಮ ಜನಕ ಸುತ್ರಾಮವಿನುತ ಶುಭ-
ನಾಮಸುಜನಪ್ರೇಮಿ
ತಾಮಸದೂರ ಸುಧಾಮವರದ ಗುರು-
ರಾಮವಿಠಲಸ್ವಾಮಿ ೩

೩೨

ನರಹರಿಯೇ ಪಾಲಿಸೋ ಪ

ಪರಮ ಪುರಷ ಪ್ರಹ್ಲಾದ ವರದ ಅ.ಪ

ದನುಜ ತನ್ನ ಮಗನನು ಬಾಧಿಸುತಿರೆ
ಕನಲಿ ಕಂಬದಿಂದವತರಿಸಿದ ೧

ನಖದಿ ಉದರವನು ಸೀಳುತಲಿ ಹಿರ-
ಣ್ಯಕನ ಕೊಂದು ಕರುಳನು ಧರಿಸಿದ ೨

ಗುರುರಾಮ ವಿಠಲ ಕಾಮಿತವರಗಳ
ಶರಣಗೆ ನೀಡುತ ಆದರಿಸಿದ ೩

೩೩

ನಾರಸಿಂಹ ನಮಿಪೆ ನಿಮ್ಮ ನತಜನಾಶ್ರಯ ಪ

ಘೋರ ದುರಿತದೂರ ಭಕ್ತಕುಮುದಕುಡುರಾಯ ಅ.ಪ

ವಿವಿಧಗತಿಯಲಸುರ ಸುತನ ವೇಧೆಪಡಿಸಲು
ತವ ಪದಾಂಬುರುಹವ ನೆನೆಯೆ ಒಂದೆ ಕ್ಷಣದೊಳು ೧

ಕೋಟಿ ಸಿಡಿಲು ಬಡಿದ ತೆರದಿ ಕೂಗು ಪುಟ್ಟಲು
ಚಾಟ ಸ್ತಂಭದೊಳುದಿಸೆ ದನುಜಕೂಟ ಬೆದರಲು ೨

ಹಿರಣ್ಯ ಕಶಿಪುನಸುವ ಬಗೆದು ಕರುಳ ಧರಿಸಿದೆ
ತರಳಗೊಲಿದೆ ಗುರುರಾಮ ವಿಠಲ ನಂಬಿದೆ ೩

೩೪

ನಿತ್ಯ ಪರಿಪೂರ್ಣ ಕಾಮ ಪಟ್ಟಾಭಿರಾಮ
ತನ್ನ ಸ್ಮರಿಸುವ ಜನಕೀವನು ಕ್ಷೇಮ ಪ

ಧರಣಿಜಾರಮಣ ಭಾಸ್ಕರವಂಶ ಭೂಷಣ
ತರಣಿಜಮಿತ್ರ ಭವ್ಯ ಚರಿತ್ರ । ದಾಶರಥಿ
ಕರುಣಾಳು ಸರೋಜನೇತ್ರ ಅ.ಪ

ಉಡತೆ ಭಕ್ತಿಗೆ ಮಚ್ಚಿಕೊಡಲಿಲ್ಲವೆ ಅಭಯ
ಜಡಮತಿಯಾದರೂ ಇವನ । ಮರೆಯಾ ಇನ್ನು
ಧೃಢಮತಿಗೆ ತನ್ನನೇ ಕೊಡುವನ್ನೆಯ್ಯಾ ೧

ಬ್ರಹ್ಮಾಂಡಕಿವರಾಜ ಬ್ರಹ್ಮಾದಿಸುರ ಸಮಾಜ
ತಮ್ಮೊಳು ತಾವು ತಿಳಿದು । ಭಜಿಸುವರು ಇನ್ನು
ಹೆಮ್ಮೆಯ ಮಾತುಗಳು ಬಿಡಿರಿ ಜನರು ೨

ರಾಮನು ನರನೆಂಬ ಪಾಮರನ ಬಾಯಲಿ ಮಣ್ಣು
ಸೋಮಶೇಖರ ತನ್ನ ಸತಿಗೆ । ಪೇಳಿದ ಇವನ
ನಾಮದ ಮಹಿಮೆ ಕುಣಿಕುಣಿದು ೩

ಮರ ಮರ ಎಂದ ವ್ಯಾಧ ಪರಮ ಋಷಿಯೆನಿಸಿದ
ನಿರುತಾ ಪೊಗಳುವವಿವನ ವೇದ । ಇವನಾ
ಚರಣೆ ಸಜ್ಜನರಿಗೆ ಬಲುಸ್ವಾದ ೪

ಸೇತುವೆ ಕಟ್ಟುವುದುಂಟೆ ಕೋತಿದಂಡುಗಳೆಲ್ಲಾ
ಸ್ವಾತಿಯ ಮುತ್ತಾಗುವುದಂತೆ । ದೇವ
ವ್ರಾತ ರಹಸ್ಯವೇತಕೆ ಚಿಂತೆ ೫

ಹೊರಗಿನ ಕಣ್ಣಿಂದ ಅರಿಯಲು ಸಾಧ್ಯವಲ್ಲಾ
ನೆರೆ ಒಳಗಣ್ಣಲಿ ನೋಡಬೇಕು । ಸ
ದ್ಗುರು ಕಟಾಕ್ಷವಾದವಗೆ ಜೋಕು ೬

ಪ್ರತ್ಯಕ್ಷವಾದಿಗಳಿಗೆ ಮೃತ್ಯುವಿನ ಬಾಯೊಳು
ಸತ್ತು ಹುಟ್ಟುವುದು ತಪ್ಪುವುದಿಲ್ಲಾ । ಆ
ಪತ್ತು ಇದೇ ದುರ್ಜನಿರಿಗೆಲ್ಲಾ ೭

ಮಗನು ಬ್ರಹ್ಮನು ಮೊಮ್ಮಗನು ರುದ್ರನು ಮೂ
ಜಗವನಾಳುವ ನಾರಾಯಣನಿವನು । ತಾನು
ಮಗುವಾಗಿ ದಶರಥಗುದಿಸಿದನು ೮

ಮುನಿ ಯಾಗವ ಪಾಲಿಸಿ ವನಿತೆಯ ಶಾಪ ಬಿಡಿಸಿ
ವನದೊಳಗಿದ್ದ ತಮ್ಮನು ತಾನು । ಸೀತೆಯನು
ತನ್ನೊಳಗಿಟ್ಟು ತಾ ಹುಡುಕಿದನು ೯

ನರನಾಗಿ ದೈತ್ಯರ ಮುರಿದು ದೇವತೆಗಳಿಗೆ
ಪರಮ ಹರುಷ ಪಡಿಸಿ ರಾಜ್ಯವಾಳಿ । ದ ಧರೆ
ಗರಸನಾಗಿ ಸಾಕೇತಪುರದಿ ಪೊಳೆದ ೧೦

ಹರಿಸರ್ವೋತ್ತಮ ಶ್ರೀಗುರುರಾಮ ವಿಠಲನ
ನರನು ಪಾಮರನು ಹ್ಯಾಗೆ ತಿಳಿಯುವನು । ಸಂಸೃತಿ
ಶರಧಿಯೊಳು ಬಿದ್ದು ಬಳಲುವನು ೧೧

೩೫

ನಿದ್ರೆಗೈಯ್ಯುವ ನಮ್ಮ ಸ್ವಾಮಿ । ರಾಮ
ಭದ್ರ ಮೂಜಗದಂತರ್ಯಾಮಿ ಪ

ಸದ್ದು ಮಾಡದಿರಿನ್ನು ಸಾರ ಸಾಕ್ಷಿಯರೆಲ್ಲಾ
ಮುದ್ದು ಸೀತೆ ಸಹಿತ ಹುವ್ವಿನ ಮಂಚದಿ ಮಲಗಿ ಅ.ಪ

ಪೋಗಿ ನಿಮ್ಮಯ ಸದನಗಳಿಗೇ । ಉದಯ
ವಾಗೋದು ಬನ್ನಿ ಸನ್ನಿಧಿಗೇ
ಯೋಗೀ ಜಾಣರು ಪರಮ ಭಾಗವತೋತ್ತಮರು
ಸಾಗಿ ಪೋದರು ನಿಜಾಶ್ರಮಗಳಿಗೆಲ್ಲರು ೧

ತುಂಬುರಾ ನಾರದಾದಿಗಳು । ವೀಣೆ
ತಂಬೂರಿ ದಿವ್ಯನಾದದೊಳು
ಗಂಭೀರಾ ಸ್ವರದಿಂದಾಗಾಯನಗಳ ಮಾಡೆ
ಸಂಭ್ರಮದಲಿ ಇತರ ಹಂಬಲ ಮರೆತೀಗ ೨

ಹದಿನಾಲ್ಕು ಲೋಕಾವನಾಳಿ । ತಾದ-
ಣಿದೆನೆಂದು ಜನರಿಗೆ ಪೇಳಿ
ಸದಮಲಾತ್ಮಕ ಶ್ರೀ ಗುರುರಾಮ ವಿಠಲ ನಂ-
ಬಿದವರಿಗಭಯವ ಕೊಡುವ ಇಚ್ಛೆಯಿಂದ ೩

೩೬

ನಿನ್ನ ಚಿತ್ತವೊ ಎನ್ನ ಭಾಗ್ಯವೊ
ಇನ್ನು ಏನು ತಿಳಿಯದು ಹರಿ ಪ

ಪನ್ನಗಾದ್ರಿನಿಲಯ ಪರಮ ಪಾವನ್ನ ಜಗನ್ಮೋಹನ ಅ.ಪ

ಎಲ್ಲಾ ಜಗನಿನ್ನೊಳಗಿಹುದು ಎಲ್ಲರೊಳಗೆ ನೀನಿರುವೈ
ಬಲ್ಲಿದನು ನೀನು ನಿನಗೆ ಸಮ ಬ್ರಹ್ಮಾದಿಸುರರೊಳಗ್ಯಾರು ೧

ದೀನರು ಮಾಡಿದ ಕರ್ಮವ ನೀನು ಕಳೆಯಲಾರೆಯಾ
ನಾನಿದಕೆ ಭಾಗಿಯೋ ನೀನಿದ್ದು ಮಾಡಿಸಲಿಲ್ಲವೆ ೨

ಎಂದೂ ನಿನ್ನ ಆಜ್ಞೆಯಿಲ್ಲದೆ ಒಂದಾದರು ಚಲಿಸುವುದೆ
ತಂದೆ ತಾಯಿ ಗುರುದೈವ ನೀನೆಂದು ನಂಬಿದೆ ಇಂದಿರೇಶ ೩

ಶೃತಿತತಿ ಶಾಸ್ತ್ರ ಪುರಾಣಗಳತಿಶಯದಲಿ ಪೊಗಳುವುದು
ಗತಿ ನೀನೆ ಎಂದನವರತವು ಕಥೆಗಳ ಕೇಳುವುದೇಕೆ ೪

ಗುಣಬದ್ಧನಮಾಡಿ ಎನ್ನ ಕುಣಿಸುವ ನೀನಲ್ಲವೆ
ದಣಿಸುವುದುಚಿತವೆ ಅಗಣಿತ ಗುಣನಿಧಿ ಗುರುರಾಮವಿಠಲ ೫

೩೭

ನಿನ್ನಯ ನಾಮಾಪನ್ನರಿಗೆಲ್ಲಾ ಪ್ರೇಮ ಪ

ಪನ್ನಗ ಶಯನ ಪಾವನ ಚರಿತ ಅ.ಪ

ವಾಸುದೇವ ಮಾಧವ ದಾಶರಥಿ ಕೇಶವ
ಈಶ ರಮೇಶ ಭವ ಪಾಶ ವಿಮೋಚನ ೧

ಕರಿಧೃವ ಬಲಿರುಕ್ಮಾಂಗದ ಪ್ರಹ್ಲಾದ ದ್ರೌಪದಿ
ವರಚಂದ್ರಹಾಸಾದಿ ಭಕ್ತರನೆಲ್ಲ ಪಾಲಿಸಿತು ೨

ಪರಮಾತ್ಮ ಹರಿಕೃಷ್ಣ ಧರಣಿಧರ ಮುಕುಂದ
ವರದ ವರೇಣ್ಯ ಶ್ರೀಗುರುರಾಮವಿಠಲ ೩

೩೮

ನೀನೇ ಅನಾಥ ನಾನೇ ಸನಾಥ ಪ

ಜ್ಞಾನಿಗಳಾಡುವರು ಯೀಪರಿ ಮಾತಾ ಅ.ಪ

ನಂಬಿರುವುದೆ ಸುಳ್ಳು ನಂಬಿದಿರುವದೆ ನಿಜ
ಹಂಬಲಿಸಿದರೇನು ತುಂಬುವುದಿಲ್ಲ ೧

ಇಲ್ಲಾ ಎಂಬೋದುಂಟು ಉಂಟೂ ಎಂಬೋದಿಲ್ಲ
ಬಲ್ಲರು ಸರ್ವರು ಬಾಯಿಮಾತಲ್ಲ ೨

ನೀನಿಲ್ಲದಿರೆ ಮತ್ತೆ ನಾನೆಲ್ಲಿರುವೆನು
ಮಾನಾಭಿಮಾನ ನಿನ್ನಧೀನವು ಹರಿಯೇ ೩

ಕಾಣೋದು ಕೇಳೋದು ಮಾಣಾದೆ ಮಾಡೋದು
ನೀನೆ ಯನ್ನೊಳಗಿದ್ದು ನಡೆಸುತ್ತಲಿರುವೆ ೪

ಎನಗೇ ನೀನೆ ತಂದೆ ನಿನಗೇ ತಂದೆ ಕಾಣೆ
ಅನುಮಾನದ ಮಾತಿದಲ್ಲ ಸಿರಿನಲ್ಲ ೫

ನಿನ್ನೊಳಗೆ ಜಗವು ಜಗದೊಳಗೆ ನೀನೆ
ಪನ್ನಗ ಶಯನಾ ಪಾವನ ಚರಿತನೆ ೬

ಸರುವಾರೊಳಗೂ ಗುರುರಾಮ ವಿಠ್ಠಲ
ಪರಿಪೂರ್ಣನೆಂಬೋದು ಪ್ರಹ್ಲಾದ ಬಲ್ಲ ೭

೩೯

ನೀನೆ ಅನಾಥ ರಕ್ಷಕ ಪ

ನಿಖಿಲ ದ್ವೈತ್ಯ ಶಿಕ್ಷಕ ಅ.ಪ

ವಿಧಿ ಸೃಷ್ಟಿಯೊಳಿಲ್ಲದ ರೂಪದಿ ದಿತಿ ಸುತನುದರ ಬಗೆದು
ಭೇದಿಸಸುರನ ಮೋದದಲಿ ಕರುಳನು ಧರಿಸಿದೆ ೧

ಶರಣಸುರರ್ತನಗೆನ್ನುತ ಹರಶರಭಾಕೃತಿಯಂಬತಿ
ಘೋರ ಯುದ್ಧದಿ ಧಾರುಣಿಯೊಳಗೆ ಕೆಡಹಿ ತುಳಿದೆ ೨

ಅಷ್ಟಮುಖಭೇರುಂಡನೆಂದು ಸೃಷ್ಟಿಯೊಳ್ ಪ್ರಸಿದ್ಧವಾಯ್ತು
ದಿಟ್ಟಗುರುರಾಮ ವಿಠ್ಠಲ ಪ್ರಹ್ಲಾದವರದ ೩

೪೦

ನೋಡಿರಯ್ಯ ಈ ರೂಢಿಯ ಜನರೆಲ್ಲಾ
ಮೂಡಲಗಿರಿವಾಸನಾ ವೆಂಕಟೇಶನಾ ಪ

ಬೇಡಿದ ವರಗಳ ಭಕ್ತ ಸಮೂಹಕೆ
ನೀಡುತಲಿ ಕೊನೆಗೆ ನಿಜಪದವೀವನಾ ಅ.ಪ

ಹರಿಬ್ರಹ್ಮರೊಳಾವನುತ್ತಮನೆಂದು
ಪರೀಕ್ಷಿಸೆ ಭೃಗುಮುನಿಯು
ತೆರಳಿಬಂದು ಅಜಹರನೊಪ್ಪದೆತಾ-
ಪರಮಪದಕೆ ಬರಲು
ಅರಿಯದವನ ಪರಿ ಸಿರಿಯ ತೊಡೆಯ ಮೇಲೆ
ಹರಿಮಲಗಿರೆ ಕಂಡು
ಚರಣದಿಂದ ಹೃದಯಕೆ ತಾಡನೆ ಮಾಡಲು
ಪರಮ ಭಕುತಿಯಿಂದ ಋಷಿಯ ಪೂಜಿಸಿದ ೧

ಸಿರಿಕರವೀರಪುರವನ್ನೈದಲು
ಹರಿಚಿಂತಿಸಿ ಮನದೊಳಗೆ
ಧರೆಯೊಳು ವೆಂಕಟಗಿರಿಯ ಸಾರುತ-
ಲ್ಲಿರೆ ವಲ್ಮೀಕದಲಿ
ಸರಸಿಜಭವ ಶಿವರು ತುರುಕರುವಾಗಿ ಪಾ
ಲ್ಗರೆಯೆ ವಲ್ಮೀಕದಲಿ
ದೊರೆ ಚೋಳನ ಭೃತ್ಯಗೋವನು ಭಾದಿಸೆ
ಶಿರದೊಳಾಂತು ನೃಪಗೆ ಶಾಪವನಿತ್ತ ೨

ಮನುಜನೋಲ್ ನಟಿಸುತಲಂಬರರಾಜನ
ತನುಜೆಯ ಕೈಪಿಡಿದು
ನೆನೆವರಿಗೆ ತಿರುಪತಿಯೆ ವೈಕುಂಠ-
ವೆನುತ ಸಾರಿ ಒಲಿದು
ಘನಮಹಿಮೆಗಳನು ತೋರಿ ಸಕಲರಿಂ
ಕಪ್ಪಗಾಣಿಕೆಗೊಳುತ
ಗುಣನಿಧಿ ಶ್ರೀಗುರುರಾಮವಿಠಲ ಈ
ಫಣಿಗಿರಿಯೊಳಗಿರುತಿಪ್ಪ ತಿಮ್ಮಪ್ಪ ೩

೪೧

ಪರಮ ಪುರಷಾ ರಾಘವ ಪಾಲಿಸೊ
ಸುರಮುನಿವರ ಪೂಜಿತ ಪ

ಸರಸಿಜಾಪ್ತವಂಶಾಬ್ಧಿ ಚಂದ್ರಮ ನಿನ್ನ
ಹೊರತು ಪೊರೆವರನ್ಯರ ಕಾಣೆನೊ ಅ.ಪ

ಕಂಜದಳಾಕ್ಷನಿರಂಜನ ಶುಭಕರ
ಆಂಜನೇಯ ಪ್ರಿಯ ಆದರಿಸೈ ೧

ಮೃತ್ಯಪರಿಹರಿಸೆನುತ್ತ ಬೇಡಲು ನಿನ್ನ
ಭಕ್ತಜನರಿಗಭಯ ಕೊಡುವನೆ ೨

ಸಾಮಜವರದ ಮಹಾಮಹಿಮನೆ ನಮ್ಮ
ಸ್ವಾಮಿ ನೀನೆ ಗುರುರಾಮ ವಿಠಲ ೩

೪೨

ಪರಮ ಪುರುಷ ರಘುವೀರ ಪ

ಪಾಹಿಮಾಂ ದಶರಥ ಸುಕುಮಾರ ಅ.ಪ

ದುರಿತ ಸಂಹಾರ ದುರ್ಜನದೂರ
ಅಗಣಿತ ಸುಗುಣ ಗಂಭೀರ ೧

ರವಿಸುತಮಿತ್ರ ರಾಜೀವನೇತ್ರ
ಪ್ರವಿಮಲ ಭವ್ಯಚಾರಿತ್ರ ೨

ಗುರುರಾಮವಿಠ್ಠಲ ಸುರಮುನಿಪಾಲ
ತುಲಸೀಶೋಭಿತ ವನಮಾಲ ೩

೪೩

ಪರಮಾತ್ಮ ಪರಿಪಾಲಿಸೆನ್ನಾ
ದೊರೆಯೆಂದು ನಂಬಿದೆ ನಿನ್ನ ಪ

ಇರುವೇ ಮೊದಲು ವಿಧಿ
ಪರಿಯಂತವು ಪ್ರಾಣಿ
ಹೊರಗೊಳಗೆ ವ್ಯಾಪಿಸಿರ್ಪ ಅ.ಪ

ಯಾರು ಬಲ್ಲರೋ ನಿನ್ನಾ
ಪಾರ ಮಹಿಮೆಯನ್ನ
ಶ್ರೀನಾರಾಯಣ ಸುಪ್ರಸನ್ನಾ ೧

ದಾಸರನೆಲ್ಲಾ
ಪೋಷಿಸಬಲ್ಲಾ
ಈಶನೀನಲ್ಲದಿನ್ನಿಲ್ಲಾ ೨

ಕರಿವರದನೆಂದು
ಮರೆ ಹೊಕ್ಕೆನಿಂದು । ಶ್ರೀ
ಗುರುರಾಮವಿಠಲ ಬಂದು ೩

೪೪

ಪರಶುರಾಮದೇವಾ ನೀನೆ ದುರಿತ ವಿಪಿನ ದಾವಾ ಪ

ದರುಶನ ಮಾತ್ರದಿ ಭವರೋಗವಪರಿ
ಹರಿಸಿ ಕೈಪಿಡಿವ ಕರುಣಾನಿಧಿಯೆ ಅ.ಪ

ಜಮದಗ್ನಿಕುಮಾರಾ ನಿನ್ನನು
ಕ್ರಮದಿಭಜಿಸುವವರಾ
ಸಮವಿರಹಿತ ಉತ್ತಮ ಪದವಿಯೊಳಿ
ಟ್ಟಮಿತ ಸುಖಪಡಿಸಿ ಆದರಿಸುವೆ ಸದಾ ೧

ನಿನ್ನಮಹಿಮೆಯನ್ನು ಅರಿಯದ
ಕುನ್ನಿಪಾಮರನಾನು
ಬನ್ನಬಡುವೆನು ಭವಾರ್ಣವದೊಳುಯೆನ್ನ
ಜನ್ಮಜನ್ಮದಘವನ್ನು ಬಿಡಿಸಿ ಕಾಯೊ ೨

ಗರಳಪುರದದೊರಿಯೆ ನಿನ್ನ ಸಂ
ಸ್ಮರಣೆ ಕೊಡೊ ಹರಿಯೆ
ಸರಸಿಜಭವ ಶಿವ ಮುಖ ಸುರವಂದಿತ
ಪರಮ ಪುರುಷ ಶ್ರೀ ಗುರುರಾಮ ವಿಠಲ ೩

೪೫

ಪರಾತ್ಪರಾಮಾಂಪಾಹಿ ಸುಖಪ್ರದ
ಪದ್ಮಸಂಭವಾದ್ಯಮರ ವಿನುತ ಪದ ಪ

ಸರೋಜದಳನಿಭಲೋಚನ ಭವ ಹರ
ಸರ್ವಜೀವ ಹೃದ್ವನಜ ನಿವಾಸಿ ಅ.ಪ

ಕ್ರೂರದನುಜ ಕಾನನ ವಿಚ್ಛೇದ ಕುಠಾರ
ಗಂಭೀರ ಸುಗುಣದಾರ ಸುವಿಚಾರಧೀರ । ರಘು
ವೀರ ಧರಣಿಜಾ ಚಿತ್ತಚೋರ ನೃಪವರ
ಕರುಣಾಕರ ದಿನಕರ ಕುಲಮಣಿ ಜನ ವರ ಶುಭಕರ ೧

ಖರವಿದಾರ ಕಲಿ ಕಲ್ಮಷನಾಶನ ನಾಮ
ಶ್ರೀಕರ ಸುಂದರ ಶ್ಯಾಮ
ಭಾಸುರ ಶರೀರ ಸಂಪೂರ್ಣ ಕಾಮ ತುಳ–
ಸೀದಳಧಾಮ ವಿಭೀಷಣ ಪ್ರೇಮ ೨

ಮೀನ ಕಮಠ ಕಿಟಿ ನರಹರಿ ವಾಮನರೂಪ
ಭಾರ್ಗವ ಕರಧೃತ ಚಾಪ
ಸುಜ್ಞಾನದೀಪ ವಸುದೇವ ತನಯ
ಜಿನ ಜಾತ ಕಲ್ಕಿ ಗುರುರಾಮ ವಿಠಲ ೩

೪೬

ಪರಾತ್ಪರಾ ಕೃಪಾ ಸಮುದ್ರ ಪಾಹಿಮಾಂ ಸದಾ ಪ

ಸರೋಜ ಸಂಭವಾದಿವಿನುತ ಸುಜನ ಸೌಖ್ಯದಾ ಅ.ಪ

ಅನಂತರೂಪ ಅಪ್ರಮೇಯ ಆದಿಕಾರಣಾ
ಸನಂದನಾದಿ ಮೌನಿಸೇವ್ಯ ಜಗನ್ಮೋಹನಾ ೧

ಖರಾದಿ ದನುಜ ಭಂಜನ ನವ ಕಂಜ ಲೋಚನಾ
ಸರಿಸೃಪಾಧಿಪಶಯನ ಶಿವ ಚಾಪಖಂಡನಾ ೨

ಧರಾತ್ಮಜಾ ಮನೋಹರ ನಿಜ ದಾಸ ಪೋಷಕಾ
ಗುರುರಾಮ ವಿಠಲ ಕುಶಿಕಪುತ್ರ ಯಾಗ ರಕ್ಷಕಾ ೩

೪೭

ಪಾಂಡುರಂಗ ವಿಠಲೇಶ್ವರಾ ಪಾಹಿಮಾಂ
ರುಕುಮಾಯಿ ಮನೋಹರಾ ಪ

ಪುಂಡರೀಕ ವರದಾಂತ ಜಗಮನ ಮೃಕಂಡು ಸುತ
ಪ್ರಿಯಾಖಂಡ ತೇಜ ಅ.ಪ

ಇಷ್ಟಭಕುತ ಪ್ರೀತಿಯಿಂದ ನಿನಗೆ ಕೊಟ್ಟ
ಇಟ್ಟಿಗೆ ಮೇಲೆ ನೆಲಸಿರುವ ದೇವ ೧

ಮರೆತಾದರು ಸಂಸ್ಮರಿಸುವಜನರಘ
ಪರಿಹರಿಸುವೆನೆಂಬ ಬಿರುದು ಕಟ್ಟಿಹ ೨

ಭೂವಲಯದಿ ನೂತನಾವರಣ ಪುರದಿ
ದೇವ ಗುರುರಾಮ ವಿಠಲನೆಲಸಿದೆ ೩

೪೮

ಬಾಗಿಲು ತೆಗೆಯೇ ಭಾಮಾಮಣಿ ನಾ
ಬಂದಿರುವೆನು ಭೂಜಾತೆ । ಶರ–
ದಿಂದುವದನೆ ವೋ ಸೀತೆ ಪ

ಕೂಗುವುದೇತಕೆ ನಿಮ್ಮಯ ಪೆಸರೇ
ನೀಗ ತಿಳಿಸಿರೈ ಸ್ವಾಮಿ । ನುಡಿ
ಭಾಗವತ ಜನಪ್ರೇಮಿ ಅ.ಪ

ಹೀನತಮವ ಮುರಿದಜಗೆ ಶೃತಿಗಳಿತ್ತ
ಮೀನಾವತಾರನೆ ನಾನು । ಬಾ
ಜಾನಕಿ ಬೇಗನೆ ನೀನು
ಮೀನಾದರೆ ನೀರೊಳಗಿರುವುದು ಸರಿ
ಮಾನಿನಿಯಲಿ ಕಾರ್ಯವೇನು । ನಡಿ
ದೀನ ಜನರ ಸುರಧೇನು ೧

ಕಮಠವಾಗಿ ಬೆನ್ನಲಿ ಗಿರಿ ಧರಿಸಿದೆ
ಕಮಲನಯನೆ ನಾ ಪೂರ್ವದಿ । ಗಜ–
ಗಮನೆಯೆ ನೋಡನುರಾಗದಿ
ಭ್ರಮೆಯಾತಕೆ ಕೇಳ್ ಕಠಿಣಾಂಗಗೆ ನಾ
ಸಮಳೆ ನಿನಗೆ ನೀ ನೋಡು । ಸಂ
ಭ್ರಮವಿದ್ದಲಿ ನಲಿದಾಡು ೨

ಹಿರಣ್ಯಾಕ್ಷನ ಕೊಂದೆತ್ತಿದೆ ಭೂಮಿಯ
ವರಹಾರೂಪನೆ ಕಾಮಿನಿ । ಓ
ತರುಣಿಯರೊಳಗೆ ಶಿರೋಮಣಿ
ವರಾಹನಾದರೆ ಅಡವಿಯ ತಿರುಗುತ–
ಲಿರದೇತಕೆ ಇಲ್ಲಿ ಬಂದೆ । ನಡಿ
ಪರಿಪರಿ ಮೃಗಗಳ ಹಿಂದೆ ೩

ಭರದಿ ಕಂಬದಲಿ ಬಂದು ಹಿರಣ್ಯನ
ಕರುಳ ಬಗೆದ ನರಸಿಂಹ । ನಾನು
ಪರಮ ಪುರಷ ಪರಬ್ರಹ್ಮ
ನರಸಿಂಹನು ನೀನಾದರೆ ನಡಿನಡಿ
ಗಿರಿಗುಹೆಯೊಳಗಿರು ಹೋಗೈ । ಬಹು
ಪರಿನುಡಿಗಳು ನಿನಗೇಕೈ ೪

ಭೂಮಿಯ ದಾನವ ಬೇಡಿ ಬಲಿಯ ಗೆದ್ದ
ವಾಮನ ನಾನೆಲೆ ನಾರಿ । ಸು
ತ್ರಾಮಾದ್ಯರಿಗುಪಕಾರಿ
ಬ್ರಾಹ್ಮಣನಾದರೆ ನಮಿಸುವೆ ಚರಣಕೆ
ಹೋಮಧ್ಯಾನ ಜಪಮಾಡೈ । ನಿ
ಷ್ಕಾಮ ಜನರ ಪಥನೋಡೈ ೫

ದುರುಳನೃಪರ ಸಂಹರಿಸವನಿಯ ಭೂ
ಸುರರಿಗೆ ಕೊಟ್ಟೆನೆ ದಾನವು । ಕೇಳ್
ಪರಶುರಾಮಾಭಿದಾನವು
ವರಮಾತೆಯ ಶಿರವರಿದವ ನೀನಂತೆ
ಸರಸವೇತಕೆನ್ನಲ್ಲಿ । ಮನ
ಬರುವಲ್ಲಿಗೆ ತೆರಳಲ್ಲಿ ೬

ತಾಯನುಡಿಗೆ ತಮ್ಮಗೆ ರಾಜ್ಯವ ಕೊಟ್ಟು
ಪ್ರಿಯದಿ ವನದೊಳಗಿದ್ದನೆ । ದೈ
ತ್ಯೇಯ ನಿಕರವನು ಗೆದ್ದನೆ
ಕಾಯಕ್ಲೇಶದಿ ಬಳಲುವ ಮನುಜಗೆ
ಶ್ರೀಯರಲ್ಲಿ ಹಿತವೇನು । ಕಮ
ಲಾಯತಾಕ್ಷ ನಡಿ ನೀನು ೭

ನಾರಿಯರನು ಕೂಡಿ ರಾಸ ಕ್ರೀಡೆಯೊಳ್
ತೋರಿದೆ ಪರಿಪರಿ ಚಿತ್ರವ । ವಿ–
ಚಾರಿಸು ನೀ ವೇದ ಶಾಸ್ತ್ರವ
ಜಾರ ಪುರಷನಿಗೆ ಹೋಲುವಳಲ್ಲವು
ಸಾರ ಪತಿವ್ರತೆ ನಾನು । ಇ–
ನ್ಯಾರು ತಿಳಿಸು ಮತ್ತೆ ನೀನು ೮

ಪತಿವ್ರತೆಯರ ಸದ್ವ್ರತವ ಕೆಡಿಸಿದಾ
ಪ್ರತಿಮ ಬುದ್ಧನೆ ಲತಾಂಗಿ । ಓ
ಮತಿವಂತಳೆ ಮೋಹನಾಂಗಿ
ಚತುರನೆ ನಾಸ್ತಿಕ ಶಾಸ್ತ್ರವ ಪೇಳಿದೆ
ಕೃತಕವಾಡದಿರು ಒಲ್ಲೆ । ಕೇ
ಳತಿ ಮೋಹಕ ನೀ ಬಲ್ಲೆ ೯

ಹಲವು ನುಡಿಗಳೇನು ಕಲಿಯುಗಾಂತದಲಿ
ಮಲೆತ ಮನುಜರನು ಕೊಲ್ವೆನೆ । ಓ
ಲಲನೆ ನೋಡು ಬಲು ಚೆಲ್ವನೇ
ಕಲಿತನವ ತೋರಿಸದಿರು ಈ ಪರಿ
ಹಲವು ವೇಷ ನಿನಗೇಕೆ । ಕೇ
ಳೆಲವೊ ಸ್ವಾಮಿ ನುಡಿ ಜೋಕೆ ೧೦

ವೇಷವಲ್ಲ ಸರ್ವೇಶ ನಾನು ಪರಿ–
ಪೋಷಿಸುವೆನು ನಿಜಭಕ್ತರ । ಸಂ–
ತೋಷಿಸುವೆನು ಧರ್ಮಯುಕ್ತರ
ಪೋಷಿಸುವನು ನೀನಾದರೆಲ್ಲಿ ನಿನ್ನ
ವಾಸಪೇಳು ನಿಜವೀಗಾ । ಪರಿ
ಹಾಸವೇಕೆ ನುಡಿಬೇಗ ೧೧

ಸರ್ವರ ಹೃತ್ಕಮಲಗಳು ಬೆಳಗಿಸುವ
ಪರಮಾತ್ಮನು ನಾ ಕೇಳೆ । ಎನ್ನ
ಮರತೆಯೇನೆ ಎಲೆ ಬಾಲೆ
ಅರಿತೆನೀಗ ಬಹು ಸಂತಸವಾಯಿತು
ಎರಗುವೆ ಚರಣಕೆ ನಾನು । ನಿನ್ನ
ಸರಿಯಾರ್ಯೆ ದೊರೆ ನೀನು ೧೨

ಧರೆಯೊಳಯೋಧ್ಯಾ ಪುರದರಸನ ಮಗ
ಗುರುರಾಮವಿಠಲನೆ ನಾನು । ಓ
ತರುಣಿ ನಿನಗೊಲಿದು ಬಂದೆನು
ಧರಣಿ ತನಯೆ ನಸುನಾಚಿಕೆಯಿಂದಲಿ
ಕದವನು ತೆಗೆದಳು ಆಗ । ಚರ
ಣಗಳನು ತೊಳೆದಳು ಬೇಗ ೧೩

೪೯

ಬಾರೋ ವೆಂಕಟೇಶ ನಮ್ಮ ಭಾಗ್ಯನಿಧಿಯೆ ಪ

ಬಾರೋ ವೆಂಕಟೇಶ ಬೇಗ ತೋರೊ ನಿನ್ನಪಾದವೀಗ
ಸಾರಿಸಾರಿ ಶಿರಬಾಗಿ ಬೇಡುವೆ ನಾ ಅ.ಪ

ವದ್ದಾ ವಿಪ್ರನ ಪೂಜಿಸಿದೀ ಶುದ್ಧಸತ್ವಗುಣಾಂಬೋಧಿ
ಪದ್ಮಾವತಿ ರಮಣ ಭಕ್ತ ಪಾಲನೀನೆ ೧

ಪಾಪಿಪಾವನನಾಗುವ ಶ್ರೀಪಾ ನಿನ್ನ ಸ್ಮರಣೆಯಿಂದ
ಆಪದ್ಬಂಧುಯೆಂಬುವನೀನಲ್ಲವೇ ಸ್ವಾಮಿ ೨

ನಾಮಧಾರಿದಾಸರಿಗೆ ಕ್ಷೇಮವ ಕೊಡುವಿ ಕೊನೆಗೆ
ತಾಮರಸನೇತ್ರಾ ಗುರುರಾಮವಿಠ್ಠಲ ೩

೫೦

ಮಂಗಳಂ ಮಂಗಳಂ ಮಾರಮಣಗೆ ಪ

ಅಂಡಜ ಗಮನಗೆ ಅಖಿಲ ಲೋಕೇಶಗೆ
ಕುಂಡಲಿ ಶಯನಗೆ ಗುಣನಿಧಿಗೆ
ಪಾಂಡವಪಕ್ಷಗೆ ಪಾಪ ವಿದೂರಗೆ
ಪುಂಡರೀಕಾಕ್ಷ ಶ್ರೀ ಪುರುಷೋತ್ತಮಗೆ ೧

ಸರ್ವಪ್ರಾಣಿಗಳ ಹೃತ್ಕಮಲನಿವಾಸಗೆ
ಗರ್ವಿಗಳನು ಭಂಗಿಸುವವಗೆ
ಉರ್ವಿಭಾರವ ಪರಿಹರಿಸಿ ಭಕ್ತರ ಕಾಯ್ವ
ಸಾರ್ವಭೌಮ ಹರಿಸರ್ವೋತ್ತಮಗೆ ೨

ತರುಣಿ ದ್ರೌಪದಿ ಕರೆಯಲು ಓಡಿಬಂದಗೆ
ತುರುಗಳ ಕಾಯ್ದ ಗೋಪಾಲನಿಗೆ
ಧರೆಯೊಳ್ ಭಾಗ್ಯವಲ್ಲಿ ಹನುಮನೊಡೆಯನಮ್ಮ
ಗುರುರಾಮ ವಿಠಲ ಶ್ರೀ ಕೃಷ್ಣಮೂರುತಿಗೆ ೩

೫೧

ಮಂಗಳಂ ವೆಂಕಟೇಶಗೆ ಅಲಮೇಲ್
ಮಂಗಾ ಮನೋಹರಗೆ ಪ

ಮಂಗಳ ಗರುಡ ತುರಂಗಗೆ ಮುನಿಜನ
ಸಂಗಗೆ ಭವ ಭಯ ಭಂಗಗೆ ಜಯ ಶುಭ ಅ.ಪ

ಆಕಾಶರಾಯನಳಿಯಗೆ । ಪಿ
ನಾಕಿ ಮುಖಸುರರ ಗೆಳೆಯಗೆ
ಲೋಕೇಶನ ನಾಭಿಯೊಳ್ ಪಡೆದವಗೆ
ಲೋಕವಿಶ್ರುತಗೆ ಶ್ರೀ ಭೂರಮಣಗೆ ೧

ತೊಂಡಮಾನ ನೃಪ ಪೂಜಿತಗೆ । ಬ್ರ
ಹ್ಮಾಂಡಗಳುದರದೊಳಿಟ್ಟವಗೆ
ಕುಂಡಲಿ ಶಯನಗೆ ಗೋಪಾಲಗೆ ಮೃ
ದ್ಭಾಂಡವ ರಚಿಸುವಗೆ ಭೀಮಗೊಲಿದವಗೆ ೨

ಶರಣಾಗತರನು ಪಾಲಿಪಗೆ
ಪರಿಪರಿ ವರಗಳ ನೀಡುವಗೆ
ಉರಗಾದ್ರೀಶಗೆ ಗುರುರಾಮ ವಿಠಲಗೆ
ವರ ಚಕ್ರಗಧಾಧರ ಹಸ್ತಗೆ ೩

೫೨

ಮಂಗಳಾರತಿಎತ್ತಿ ಮಾಮನೋಹರನಿಗೆ ಪ

ಅಂಗನೆಯರೆಲ್ಲ ಬಂಗಾರದ ತಟ್ಟೆಯಲ್ಲಿ ಅ.ಪ

ವೇದಚೋರನ ಕೊಂದು ಭೂಧರವನು ಪೊತ್ತು
ಮೇದಿನಿಯನು ಎತ್ತಿ ಕಂಬದಿ ಬಂದವಗೇ ೧

ಭೂಮಿದಾನವ ಕೇಳಿ ಭೂಮಿಪರನು ಸೀಳಿ
ಭೂಮಿಜಾತೆಯನಾಳಿ ಭೂ ಭಾರವಳಿದವಗೆ ೨

ಬುದ್ಧಿಹೀನರಿಗೆಲ್ಲಾಬದ್ಧವ ಬೋಧಿಸುತ
ಮುದ್ದುಕುದುರೆಯ ಏರಿದ ಗುರುರಾಮ ವಿಠಲಗೆ ೩

೫೩

ಮರೆತಿರಲಾರೆ ಪ್ರಿಯನ ಮಾರನಯ್ಯನ ಪ

ಇರುಳು ಹಗಲು ಅನುಸರಿಸಿ ತಿರುಗುತಲಿ
ಸುರತ ವಾರ್ತೆಗಳನಾಡಿಸುತ ನಲಿಸುತಿಹನ ಅ.ಪ

ಎನಗೆ ಬೇಕಾದುದ ತನಗೆ ತಾ ಕೊಡುತಲಿ
ಮನಕೆ ಹರುಷವ ಕೊಡುವನ ತ್ರಿಲೋಕ ಸುಂದರನ ೧

ಎನ್ನ ನೋಡುತಲಿ ಹಿಗ್ಗುತಲಿರುವನ
ಕಣ್ಣಲಿ ಕಾಣದ ಘಳಿಗೆ ಯುಗವಾಗಿರುವುದೆಲೆ ೨

ಕಾಮವಿಚಾರದಿ ಕಥೆಗಳ ಪೇಳುತ
ಪ್ರೇಮದಿ ಬಿಗಿದಪ್ಪುತ ಮುದ್ದಿಸಿ ಲಾಲಿಪನ ೩

ಮೊದಲಿಂದವಗೆನಗೊದಗಿದ ಸ್ನೇಹವೆ
ಚದುರನ ಸರಸವು ವಿಧ ವಿಧ ಲೀಲೆಗಳ ೪

ಜನುಮ ಜನುಮಕು ಇವನೆ ಪ್ರಿಯನಾಗಿರ–
ಲೆನುತ ಬೇಡುವೆನೆ ವನಜಾಕ್ಷಿ ಅನುದಿನ ೫

ಅವನಿಲ್ಲದ ಸೌಖ್ಯವು ನರಕಕ್ಕೆ ಸಮ
ಸವಿಯಾಗದು ಅಮೃತವು ವಿಷವಾಗುವುದೆಲೆ ಮನಕೆ ೬

ತರುಣೀಮಣಿ ಕೇಳು ಗುರುರಾಮವಿಠಲನ
ಬೆರೆವ ಸುಖಕೆ ಇನ್ನು ಸರಿಯಾವುದೆ ಜಗದೊಳು ೭

೫೪

ಯಾಕೆ ಸಂಶಯ ಅವಿವೇಕ ಶಿಖಾಮಣಿ । ದುರ್ಗುಣಿ ಪ

ಶ್ರೀ ಕಳತ್ರನೆ ಜಗದೇಕ ನಾಯಕನೆಂದರಿಯದೆ ಅ.ಪ

ಅನ್ಯರಾದವರಿಗೆ ಭಿನ್ನವ ಗೈದರೆ
ನಿನ್ನಯ ಬನ್ನ ಬಿಡಿಸುವರೇನೊ
ಕುನ್ನಿ ಮಾನವ ಕಡು ಮೂರ್ಖನೆ ೧

ನಾನಾ ಪ್ರಯತ್ನಗಳ
ನೀನು ಮಾಡುತ ಫಲವನು
ಕಾಣುವುದಿಲ್ಲವೇಕೊ
ಪ್ರಾಣಿಮಾತ್ರನು ನೀ ನಿಜವಿದು ೨

ಇರುವೆ ಮೊದಲು ಬ್ರಹ್ಮನ
ವರಿಗೆ ಬಿಡದೆ ಸರ್ವರೊಳಗೆ ನಿಂತಿಹ
ಗುರುರಾಮ ವಿಠಲನೆಂದರಿಯದೆ ೩

೫೫

ರಾಮಚಂದ್ರ ಸೀತಾ ಮನೋಹರನೆ ಸ್ವಾಮಿಯೆನ್ನ
ಕಾಯೊನೀನೆ ಕರುಣದಿ ಪ

ಆ ಮಹೇಶ್ವರನು ನಿನ್ನ ದಿವ್ಯಸಿರಿ ನಾಮ ಮಹಿಮೆ
ತನ್ನ ಸತಿಗೆ ಪೇಳ್ದನು
ರಾಮರಾಮಯೆಂದು ಪೊಗಳುವನು ಮಹಾರಾಜ ಸಾರ್ವಭೌಮ
ಪೂರ್ಣ ಕಾಮನೆ
ಸಾಮಜರಾಜವರದ ಕೃಪಾಕರ ಸರ್ವಲೋಕವಂದಿತ ಪರಾತ್ಪರ
ಕಾಮಕೋಟಿಲಾವಣ್ಯ ರವಿಕುಲಸೋಮ
ದಶರಥಾವನೀಶ ಕುಮಾರ ೧

ದೇವದೇವನೆ ಕೃಪಾವಲೋಕನದಿ ದೀನಜನರ ನೋಡೊ
ನೀದಯಮಾಡೊ
ದೇವಿ ಸಹಿತ ಎನ್ನ ಹೃದಯದಲಿ ನಿನ್ನ ದಿವ್ಯದರ್ಶನವ
ನೀಡೋಯನ್ನದುರಿ-
ತಾವಳಿಗಳ ಪರಿಹರಿಸುವದು ಪತಿತ ಪಾವನಾ ಪ್ರಮೇಯ
ಜಯಜಯ ಪ್ರಭೋ
ರಾವಣಾದಿದನುಜ ಭಂಜನ ಜಗ ಜ್ಜೀವನ ನತಜನ ಸಂಜೀವನಸು-
ಗ್ರೀವ ಮಿತ್ರ ಶುಭ ಚರಿತ್ರ ಋಷಿಗಣ ಭಾವಿತ
ಕುಶೀಲವರತಾತ ಸುಪ್ರೀತ ೨

ಸರಿಸಿಜೋದ್ಭವಾದ್ಯಮರನಾಯಕ ಸಾಧುರಕ್ಷಸದ್ಧರ್ಮ ಪಾಲಕ
ತರುಚರಾಧಿನಾಥದಾತ ಪುರುಷೋತ್ತಮ ಸಮೀರಜಾಂತ
ರಂಗ ಮಂದಿರ
ತರಣಿ ಚಂದ್ರ ನಯನ ನೃಪವರೇಣ್ಯ ದಾಸ ಪೋಷ ಮಾಯ
ಮನುಜವೇಷ
ಪರಮಾತ್ಮ ನಾರದ ಗಾನಲೋಲ ಗುರುರಾಮವಿಠಲ
ದುರ್ಜನ ಕಾಲ
ಖರಸೂದನ ಶರಧಿ ಸೇತು ಬಂಧನ ಕಂಜೇಕ್ಷಣ
ಮಾಂ ಪಾಹಿ ರಘುವೀರ ೩

೫೬

ರಾಮನಾಮ ಕೀರ್ತನೆ ಮಾಡೊ ಮುದಗೊಡೊ ಪ

ಹೃತ್ತಾಮರಸದಿ ನೋಡೋ ಕೊಂಡಾಡೊ ಅ.ಪ

ಮರಮರ ಎಂದಾ ವಾಲ್ಮೀಕನ
ವರಋಷಿ ಎನ್ನಿಸಿದಾತನ
ಧರಣಿಸುತೆಯಳ ಸಮೇತನ
ಮರುತಾತ್ಮಜಾದಿ ನುತನ ಸುಚರಿತನ ೧

ದಶರಥಗೆ ಮಗನಾದನ
ಪಶುಪತಿ ಚಾಪವ ಮುರಿದನ
ಅಸುರರನೆಲ್ಲ ಸಂಹರಿಸಿದನ
ಬ್ರಹ್ಮಾದಿದೇವ ವಂದ್ಯನಾ ರಾಜೇಂದ್ರನಾ ೨

ಭರತ ಶತೃಘ್ನ ಲಕ್ಷ್ಮಣ ಸೇವ್ಯನ
ಸರಸಿಜಗಾಪ್ತಜ ಭಾವ್ಯನ
ಪರಮಾತ್ಮ ಗುರುರಾಮವಿಠ್ಠಲನ
ನೃಪಾಗ್ರಗಣ್ಯನಾದನ ವಿನೋದನಾ ೩

೫೭

ರಾಮ ಜಾನಕಿ ಮನೋಹರ ಮಾರ ಕೋಟಿ ಸುಂದರ ಪ

ಸೋಮಶೇಖರಾದಿ ಸುರ ಸ್ತೋಮನುತ ನಾಮ ಅ.ಪ

ವಾಯುಸುತ ಮುಖ್ಯ ಕಪಿನಾಯಕ ವಿನುತಾಮೋಘ
ಸಾಯಕ ಶ್ರೀದಾಯಕ ನಿರ್ಮಾಯ ರಘುರಾಯ ೧

ಅಪ್ರಾಕೃತ ಶರೀರ ಗೋ ವಿಪ್ರಜನ ಪಾಲ ನಿನ್ನ
ಸುಪ್ರಭಾವ ಪೊಗಳಲು ಸರ್ಪಾಧಿಪಗಳವೇ ೨

ದೇವ ಗುರುರಾಮ ವಿಠಲಾ ವನಜನೇತ್ರ ನೂತ-
ನಾವರಣ ಪುರಿವಾಸ ಕಾವುದೆಮ್ಮನು ಸರ್ವೇಶಾ ೩

೫೮

ರಾಮರಾಜೀವಾಕ್ಷ ಬೇಗಬಾರೊ ಪ

ಕಾಮಿತ ವರಗಳನು ಬೀರೊ ಅ.ಪ

ದಶರಥ ನೃಪ ಸುಕುಮಾರ
ದಶವಿಧ ದಿವ್ಯಶರೀರ ೧

ಸೀತಾದೇವಿಹೃದಯಾಬ್ಜಮಿತ್ರ
ಚೇತೋಹರನುತಿಪಾತ್ರ ೨

ಗುರುರಾಮವಿಠಲೇಶ ನೀನೆ
ಶರಣರ ಪರಿಪಾಲಕನೆ ೩

೫೯

ಲಾಲಿ ಪಾವನ ಚರಣ ಲಾಲಿ ಭವ ಹರಣ
ಲಾಲಿ ಲಕ್ಷ್ಮೀರಮಣ ಲಾಲಿ ನತ ಶರಣ ಪ

ಲೀಲಾ ವಿನೋದದಲಿ ಮೂಜಗವ ಸೃಜಿಸಿ
ಪಾಲಿಸುವೆ ನಿನ್ನ ವ್ಯಾಪಾರವನುಸರಿಸಿ
ಕಾಲಕಾಲಾರ್ಚಿತನೆ ಕಲುಷಹರನೆಂದು
ನೀಲಾಹಿವೇಣಿಯರು ನಿನ್ನ ತೂಗುವರು ೧

ಶೇಷ ಪರಿಯಂಕದಲಿ ಶ್ರೀ ಸಮೇತದಲಿ
ತೋಷದಿಂ ಪವಡಿಸುವೆ ಪ್ರಳಯ ವಾರಿಯಲಿ
ಭಾಷಾಪತಿಯ ಪಡದೆ ನಾಭಿ ಕಮಲದಲಿ
ಪೋಷಿಸುವೆ ಜೀವರನು ಸರ್ವಕಾಲದಲಿ ೨

ಶ್ರೀರಾಮ ಮಾಧವಾಶ್ರಿತಜನೋದ್ಧಾರಾ
ಘೋರ ಪಾಪ ವಿದೂರ ಕುಜನ ಸಂಹಾರಾ
ನಾರಾಯಣಾಚ್ಯುತಾನಂತಾವತಾರ
ವಾರಿಜಾಯತ ನೇತ್ರ ಗುರುರಾಮವಿಠಲಾ ೩

೬೦

ವಂದಿಸುವೆ ವಾರಿಜನೇತ್ರ ಸುಚರಿತ್ರ ಜನಕೆ
ತಂದೆತಾಯಿ ನೀನೆ ಬಾ ಬೇಗನೆ ಪ

ಮಂದರೋದ್ಧಾರ ಮನ್ಮಥ ಜನಕ ಆ–
ನಂದ ಮೂರುತಿ ಹರಿಯೆ ಸಿರಿದೊರೆಯೆ ಅ.ಪ

ಕೇಶವ ಕೃಷ್ಣ ಮಾಧವ ವಾಮನ
ವಾಸುದೇವ ಗೋವಿಂದ ಮಧುಸೂಧನ

ದಾಶರಥೇ ಸಂಕರ್ಷಣ ತ್ರಿವಿಕ್ರಮ
ಹೃಷಿಕೇಶ ನಾರಸಿಂಹ ಪರಬ್ರಹ್ಮ ೧

ಪದ್ಮನಾಭಾಚ್ಯುತ ದಾಮೋದರ ಜ–
ನಾರ್ಧನ ಪುರಷೋತ್ತಮ ಶ್ರೀಧರ
ಪ್ರದ್ಯುಮ್ನಧೋಕ್ಷಜ ನಾರಾಯಣ ಅನಿ–
ರುದ್ಧ ವಿಷ್ಣು ಭೂಧರ ಉಪೇಂದ್ರ ೨

ಅರಿತು ಚತುರ್ವಿಂಶತಿ ನಾಮವ
ಮರೆಯದೆ ಅಡಿಗಡಿಗೂ ನೆನೆವ
ಶರಣರದುರಿತವ ಪರಿಹರಿಸುವನಮ್ಮ
ಗುರುರಾಮವಿಠಲನೆ ನಿನ್ನನೆ ನಾಂ ೩

೬೧

ವೇಂಕಟೇಶ್ವರ ವೇದಗೋಚರ –ನಿನ್ನಪಾದ
ಪಂಕಜವನು ಕಂಡೆ ಶ್ರೀಧರ ಪ

ಮಂಕುಮನುಜ ಪಾಮರ ನಾ ನಿ
ಶ್ಯಂಕಜ್ಞಾನ ಶೂನ್ಯನು ತವ
ಕಿಂಕರರೊಳು ಸೇರಿಸೆನ್ನ ಸಂಕಟಗಳ ಪರಿಹರಿಸೈ ಅ.ಪ

ಜೀವರೂಪ ಜೀವಿತೇಶನೆ ಜೀಯ ರಾ–
ಜೀವನಾಭ ಶ್ರೀನಿವಾಸನೆ
ಜೀವೋಪಿಕರ್ತನೆಂಬ ಶಾಸ್ತ್ರ
ಭಾವವೇನೊ ತಿಳಿಯದು ಸ್ವ–
ಭಾವ ಸ್ಥಿತಿಯ ಬಿಡದೆ ಜೀವರ
ಕಾವ ಕೊಲುವ ನೀನೆ ೧

ಭೃಗುಮುನಿಪನು ಕಾಲಲೊದೆಯಲು –ಪೂಜಿಸಿದ
ಸುಗುಣ ಶುದ್ಧ ಸತ್ವ ನೀ ಬಲು
ನಗಧರ ದೀನಬಂಧು ಮೂ–
ಜಗದೊಡೆಯನೆ ಸಲಹು ಎನ್ನ
ಜಗದಿಂದಾದರೂ ಹೊರಗುಮಾಡು
ಅಗಣಿತ ಮಹಿಮಾಪ್ರಮೇಯ ೨

ತೀರ್ಥ ಪ್ರಸಾದ ಮಾರಿ ಹಣವನು–ಗಳಿಸುವೆ ನೀ
ಧೂರ್ತರನ್ನು ಅಣಕಿಸುವವನು
ಕರ್ತನೀನು ಪದ್ಮಾವತೀ
ಭರ್ತ ಶ್ರೀ ಗುರುರಾಮವಿಠಲ
ಪಾರ್ಥಸಾರಥಿ ಪರಮಪುರುಷ
ಆರ್ತಜನರ ಕೃಬಿಡದಿರು ೩

೬೨

ಶರಣು ಶರಣು ಸುರಾರಿ ಭಂಜನ
ಶರಣು ತ್ರಿಭುವನ ರಂಜನ
ಶರಣು ಸೇವಿತ ಸಕಲ ಮುನಿಜನ
ಶರಣು ರವಿಕುಲವರ್ಧನ ಶರಣು ಪ

ಹರಿಮುಕುಂದ ಮುರಾರಿ ಶ್ರೀಧರ ಆದಿಪುರಷ ರಮಾವರ
ಪರಮಭಕ್ತ ಸರೋಜ ಭಾಸ್ಕರ ಪಾಹಿ ಪಾಹಿ ಕೃಪಾಕರ ೧

ತರುಣಿ ದ್ರೌಪದಿ ಮಾನ ರಕ್ಷಕ ದಾಸ ಜನ ಪರಿಪಾಲಕ
ದುರುಳ ದನುಜಾರಣ್ಯ ಪಾವಕ ದುರಿತಹರ ರಘುನಾಯಕ ೨

ಕೇಶವಾಚ್ಯುತ ಕೃಷ್ಣವಾಮನ ವಾಸುದೇವ ಜನಾರ್ಧನ
ವಾಸವನುತ ವನಜಲೋಚನ ವಂದಿತಾಖಿಲ ಬುಧಜನ ೩

ಬ್ರಹ್ಮರುದ್ರೇಂದ್ರಾದಿ ಪೂಜಿತ ಬ್ರಹ್ಮಋಷಿಗಣ ಭಾವಿತ
ಬ್ರಹ್ಮಪಿತ ಪ್ರಹ್ಲಾದವರದ ನೃಸಿಂಹದೇವ ನಮೋಸ್ತುತೇ ೪

ಎನುತ ಭಜಿಸುವ ಭಕ್ತ ಜನರಿಗೆ ಮನದಭೀಷ್ಟವ ಪಾಲಿಪ
ಜನವರನೆ ಗುರುರಾಮವಿಠ್ಠಲ ಜಾನಕೀ ಪ್ರಾಣವಲ್ಲಭ ೫

೬೩

ಶ್ರೀಗಣೇಶ ಪಾರ್ವತಿ ಶಿವ ಶಾರದೆಯರ ಕೊಂಡಾಡುವೆನು
ಮರುತ್ಸುತಗೆರಗಿನುತಿಪೆ ನಾನು ಪ

ಭಾಗವತಾಗ್ರಣಿಬ್ರಹ್ಮನಡಿಗೆ ತಲೆಬಾಗಿ ವಂದಿಸುವೆನು ।
ಸಿರಿಯನನುರಾಗದಿ ಭಜಿಸುವೆನು ೧

ಕ್ಷೀರಸಾಗರಾತ್ಮಜೆಯರಸ ಕೃಪಾವಾರಿಧಿ ಸರ್ವೇಶ । ಅ
ಪಾರಗುಣಾರ್ಣವ ಜಗದೀಶ
ನಾರಾಯಣ ಸಕಲಾತ್ಮ ಪರಾತ್ಪರ ನಂಬಿದೆ ಶ್ರೀನಿವಾಸ ।ಸಜ್ಜನರ
ಬೆಂಬಿಡದಿರು ಶ್ರೀಶಾ ೨

ದೋಷರಹಿತ ನಿನ್ನ ಪಾಡಿ ಪೊಗಳುವೊಡೆ ಶೇಷಗಳವೆಸ್ವಾಮಿ।
ಸದಾ ಸದ್ಭಕ್ತ ಜನಪ್ರೇಮಿ
ಭಾಷಾಪತಿ ರುದ್ರಾದ್ಯಮರ ವಿನುತ ಸಕಲಾಂತರ್ಯಾಮಿನಿನ್ನ
ನಂಬಿದವನೆ ನಿಷ್ಕಾಮಿ ೩

ಅಂಬುಜಾಕ್ಷ ಪೀತಾಂಬರಧರ ವಿಶ್ವಂಭರ ಗೋವಿಂದ ।
ಸನ್ಮುನಿಗಳಿಗೆ ಪರಮಾನಂದ
ಶಂಬರಹರಪಿತ ಕಂಬುಕಂಠ ನಿನ್ನ ನಂಬಿದೆನು ಮುಕುಂದ ।
ಪ್ರಪಂಚಕು ಟುಂಬಿ ಸದಾನಂದ ೪

ಕಾಮಜನಕ ಲಕ್ಷ್ಮೀಮನೋಹರ ನಿನ್ನನಾಮಸ್ಮರಣೆ
ಕೊಟ್ಟು । ಎನ್ನೊಳಿಹ
ದುರ್ವಿಷಯ ಸುಟ್ಟು
ನೇಮದಿ ಎನ್ನ ನಿಷ್ಕಾಮಿ ಎನಿಸು ಶ್ರೀರಾಮಕರುಣವಿಟ್ಟುಸದಾ
ನಿನ್ನ ಚಿಂತೆ ಮನಕೆ ಕೊಟ್ಟು ೫

ವೇದಚೋರನ ಕೊಂದು ನಿಗಮಗಳ ವೇದಗಿತ್ತದೇವ । ನಿನ್ನ ಶ್ರೀ
ಪಾದಗಳನು ನೆನೆವ
ಸಾಧುಗಳನು ಅನುರಾಗದಿ ಪಾಲಿಪ ಬಿರುದು ನಿನ್ನದು ಪಾವ ।
ನಾತ್ಮಕನೆ ಶರಣ ಸಂಜೀವ ೬

ಬೆಟ್ಟ ಪೊತ್ತು ಸುರರಿಷ್ಟವ ಸಲ್ಲಿಸಿಕೊಟ್ಟೆ ಅಮೃತವನ್ನು ।
ದುರ್ಜನರ ಬಿಟ್ಟೆ ದೈತ್ಯರನ್ನು
ಸೃಷ್ಟಿಗೊಡೆಯ ನಿನ್ನ ಮಹಾಮಹಿಮೆ ಪರ
ಮೇಷ್ಠಿ ಪೊಗಳುತಿಹನು ಎನ್ನಳವೆ ಶಿಷ್ಟರ ದೊರೆ ನೀನು ೭

ಸೂಕರರೂಪದೊಳು ಕನಕಾಕ್ಷನ ನೂಕಿ ಸಮುದ್ರದಲಿ ।
ಭೂಮಿಯನೆ ತ್ತಿದೆ ಕೋರೆದಾಡೆಯಲಿ
ಸಾಕಾಗದೆ ನಿರುತವು ಭಜಿಸುವ ಶಶಿ ಶೇಖರ ಮೋದದಲಿಎಂದುಸು
ರುತಲಿದೆ ವೇದದಲಿ ೮

ದುರುಳರಕ್ಕಸನು ತರಳನ ಬಾಧಿಸೆ ಹರಿಯೆ ಬಾಯೆನಲು ।
ಕಂಬದೊಳವ ತರಿಸಿದೆ ಮೋದದೊಳು
ಭರದಿ ಕರುಳು ಮಾಲೆಯನೆ ಮಾಡಿ ನೀ ಧರಿಸಿದೆ ಕಂಠದೊಳುಸಕಲಸು
ಮನಸರು ಭಲಾ ಎನಲು ೯

ಅದಿತಿ ಕಶ್ಯಪರಿಗೋಸುಗ ವಟುವಾಗುದಿಸಿ ವಿಪ್ರನಾಗಿ ।
ಬಲಿಯಯಾಗ ಮಂಟಪಕ್ಕೆ ಪೋಗಿ
ಪದತ್ರಯಭೂಮಿಯ ದಾನವ ಬೇಡಿದೆ ಪರಮಾದ್ಭುತವಾಗಿ ।
ನಿನ್ನಸಂ ಸ್ಮರಿಸುವನೇ ಯೋಗಿ ೧೦

ಕ್ಷತ್ರಿಯರಮುರಿದು ಧಾತ್ರಿಯನು ವಿಪ್ರೋತ್ತಮರಿಗೆ ಕೊಟ್ಟೆ ।
ಸಮುದ್ರ ವನ್ಮೊತ್ತಿದೆ ಜಗಜಟ್ಟಿ
ಪೃಥ್ವೀಪತಿ ದಾಶರಥಿಯ ಕರದಲಿ ನಿನ್ನಧನುವಿಟ್ಟೆ । ತಪವ
ನಾಚರಿಸಲು ಮನವಿಟ್ಟೆ ೧೧

ಕೌಸಲೇಯ ಕೌಶಿಕಯಾಗದಲಿ ಮಹಾಸುರರನು ಮುರಿದೆ ।
ಗೌತಮನ ಸತಿ ಶಾಪವ ಪರಿದೆ
ದ್ವೇಷಿರಾವಣಾದ್ಯರ ಹತಮಾಡಿ ಸುರೇಶ ಮುಖರ ಪೊರೆದೆ ।
ಸತ್ಕೀರ್ತಿಯ ಪಡೆದು ಜಗದಿ ಮೆರೆದೆ ೧೨
ದೇವಕೀತನಯನಾಗಿ ಗೊಲ್ಲರೊಲು ಗೋವುಗಳ ಕಾಯ್ದೆ ।
ನಾರಿಯರ ಸೀರೆಗಳನು ಒಯ್ದೆ
ಮಾವನಮರ್ದಿಸಿ ಅರ್ಜುನನ ಬಂಡಿ ಬೋವನಾಗಿ
ಮೆರೆದೆ ಕೌರವರ ಭೀಮನಿಂ ಕೊಲ್ಲಿಸಿದೆ ೧೩

ಬುದ್ಧರೂಪದಲಿ ವೇದಶಾಸ್ತ್ರಗಳ ಬದ್ಧವೆಂದು ಪೇಳಿ ।
ಜನಾದ್ಯರ ಗೆದ್ದು ಸುಮನಸಾಳಿ
ಹೊದ್ದಿಸಿ ಆನಂದವಬಲೆಯರ ವ್ರತ ತಿದ್ದಿಸೆ ತ್ರಿಪುರಾಳಿ ।
ಯರಸಂ ಹರಿಸಿದನಾ ಶೂಲಿ ೧೪

ತುರಗವೇಗದಲಿ ಯುಗಾಂತದಲಿ ದುಷ್ಟರನು ಸೀಳಿದಯ್ಯಾ ।
ಕೃತಯುಗದ ಧರ್ಮ ನಡೆಸಿದೆಯ್ಯಾ
ಶರಣಾಗತರಕ್ಷಕನೆಂಬೊ ಬಿರುದು ನಿನಗೆ ಸಲುವುದಯ್ಯಾ ।
ಎನ್ನ ಪಾಲಿಸಯ್ಯ ಜೀಯಾ ೧೫

ಇಂತು ದಶಾವತಾರದ ಮಹಿಮೆಯ ಸುಸ್ವಾಂತದಲಿ
ಜನರುನೆನೆಯಲು ತಾ ಇಷ್ಟಾರ್ಥವ ಪಡೆವರು
ಕಂತುಜನಕ ಗುರುರಾಮವಿಠಲ ನಿರಂತರ ಕೈಬಿಡನು ।
ಸದಾ ತನ್ನ ಸಂತರೊಳಗಿಡುವನು ೧೬

ರಾಮ ರಾಮ ಸೀತಾಮನೋಹರ ರಾಜೀವದಳಾಕ್ಷ ।
ಸುಜನ ಕಾಮಿತದಾಯಕ ರಕ್ಷ
ಕೋಮಲಾಂಗ ನೂತನ ಪುರಿ ಮಂದಿರ ಕುಜನನಿಕರ ಶಿಕ್ಷಾ । ವರದ
ರಾಜನಿಖಿಲ ಸಂರಕ್ಷಾ ೧೭

೬೪

ಶ್ರೀನರಹರಿ ಕರುಣಾಜಲಧೆ ತವಚರಣವ ನಂಬಿದೆ ಪ

ದೀನಜನರು ಪ್ರತಿದಿನ ಮೊರೆಯಿಡುತಿರೆ
ನೀನುದಾಶಿಸುವರೇನೊ ರಮಾಪತೆ ಅ.ಪ

ದುರಿತಗಿರಿ ನಿಕರ ಕುಲಿಶಾಯುಧ ಧುರಧೀರಾ ಶೂರಾ
ದುರುಳ ಹಿರಣ್ಯ ಕಶಿಪು ದನುಜವನ ಕುಠಾರ
ಸರಸಿಜಭವ ಶಿವ ಪುರಂದರ ಮುಖ ಸುರ
ಸನ್ಮುನೀಂದ್ರ ನುತಿ ಪಾತ್ರಸುಚರಿತ ೧

ಉಗ್ರರೂಪ ಸಕಲಗ್ರಹಭಯ ಪರಿಹಾರೀ ಶೌರೀ
ಊರ್ಜಿತ ಸುಬಲ ಪರಾಕ್ರಮ ಮಧು ಮುರ ವೈರಿ
ಜಾಗ್ರತ್ಸ್ವಪ್ನಸುಷುಪ್ತಿಗಳೊಳೆನಗೆ
ಜಲಜನಾಭ ನಿನ್ನಯ ಚಿಂತನೆ ಕೊಡು ೨

ಕ್ಷುದ್ರರೋಗಗಳುಪದ್ರಪಡಿಸುತಿಹದೈಯ್ಯ । ಜೀಯಾ
ಕ್ಷೇಮವಿತ್ತು ನಿನ್ನವರ ದಾಸನೆನಿಸೈಯ್ಯಾ
ರುದ್ರಾಂತರ್ಗತ ಗುರುರಾಮ ವಿಠಲ
ಭದ್ರಮೂರುತಿ ಘಟಿಕಾಚಲನಿಲಯ ೩

೬೫

ಶ್ರೀನಿಧಿ ನಿನ್ನನು ಧ್ಯಾನಿಸುವೆನು ಆಶ್ರಿತ ಜನ ಮಂದಾರ
ದಾನವಗಿರಿಕುಲಿಶಾ ನರಸಾರಥಿ ದಶರಥ ಸುಕುಮಾರ ಪ

ಅಂಬರರಾಜನಳಿಯ ಅಘನಾಶನ
ಕುಂಭಿನಿಜಾರಮಣ
ಜಂಭಾರಿವಿನುತ ಶಂಬರಹರಪಿತ
ನಂಬಿದೆ ನಾನಿನ್ನ ೧

ಮೀನ ಕಮಠ ವರಾಹ ನರಹರಿ ವಾ-
ಮನ ಭಾರ್ಗವ ರಾಮ
ಧೇನುಕ ಭಂಜನ ಜಿನಸುತ ಕಲ್ಕಿಯೆ
ದೀನ ಜನ ಪ್ರೇಮಾ ೨

ತಿರುಪತಿಯಲಿ ನೆಲಸಿರುವೆ ಭಕ್ತಸುರ-
ತರುವೆ ವೆಂಕಟೇಶ
ಗುರುರಾಮವಿಠಲ ಕೋರಿದ ವರಗಳ
ಕೊಡುವ ಶ್ರೀನಿವಾಸ ೩

೬೬

ಶ್ರೀನಿವಾಸ ಚಿದ್ವಿಲಾಸ ಸೇವಕ ಪರಿಪೋಷ ಪ

ಗಾನಲೋಲ ಸುಗುಣಶೀಲ ಕರುಣಾಲವಾಲ ಗೋಪಾಲ ಅ.ಪ

ಎಷ್ಟುಪ್ರಾರ್ಥಿಸಲು ನಿನಗೆ ಯಾತಕೆ ದಯಬಾರದು
ಕಷ್ಟ ಬಿಡಿಸಿ ಕರವ ಪಿಡಿದು ಕಡೆಹಾಯಿಸುವದೆನ್ನ ೧

ಕಾಮಜನಕ ಕಮಲನಾಭ ಸೋಮಶೇಖರಾರ್ಚಿತ
ಶಾಮಲಾಂಗ ಚಕ್ರಪಾಣಿ ಶತಕೋಟಿ ರವಿ ತೇಜ ೨

ಕರೆಯೆಕರೆಯೆ ಬಿಂಕವೇನು ಶರಣರ ಸುರಧೇನು
ಗುರುರಾಮ ವಿಠಲ ನೀನು ಕೋರಿ ನಿನ್ನ ನಂಬಿದೆನು ೩

೬೭

ಶ್ರೀ ಪಾರ್ಥ ಸಾರಥಿ ರಮಾಪತಿ ನೀನೇ ಗತಿ ಪ

ಕಾಪಾಡುವರಾರೊ ಕರುಣಾ ನಿಧಿ ಬಾರೋ ಅ.ಪ

ಭಕ್ತ ಹೃದಯ ಮಂದಿರ ಮುಕ್ತಿಲೋಕ ಸುಂದರ
ವ್ಯಕ್ತಾವ್ಯಕ್ತ ಸ್ವರೂಪ ವೇದ ವೇದ್ಯ ಮುರಹರ ೧

ಕುಬುಜೆಗಂಧ ಕೊಲಿದನೆ ಅಬುಜನಾಭ ಮುಕುಂದನೆ
ಶಬರಿಯಿತ್ತ ಫಲಕೆ ಮೆಚ್ಚಿ ಶಾಶ್ವತ ಫಲವಿತ್ತವನೆ ೨

ಚನ್ನಪಟ್ಟಣವಾಸನೆ ಪ್ರಸನ್ನ ಶ್ರೀನಿವಾಸನೆ
ಎನ್ನ ಪಾಲಿಸುವ ಭಾರವು ನಿನ್ನದು ಗುರುರಾಮ ವಿಠಲ ೩

೬೮

ಶ್ರೀರಂಗನಾಥಾ ಶ್ರಿತ ಸೌಖ್ಯದಾತ ಪ

ನೀರಜ ಭವಪಿತ ನಿನ್ನ ನಂಬಿದೆ ದಾತ ಅ.ಪ

ಬ್ರಹ್ಮಕರಾರ್ಚಿತ ಪಾದಾರವಿಂದ
ಬ್ರಹ್ಮಜನಕ ಪೂರ್ಣಾನಂದ ಮುಕುಂದಾ ೧

ರವಿವಂಶ ರಾಯರ ರಕ್ಷಿಸಿ ಮೆರೆದೆ
ರಾವಾಣಾನುಜಗೆ ಒಲಿದು ನೀ ಬಂದೆ ೨

ಕಾವೇರಿ ತಪಗೈಯೆ ಕರುಣದಿ ನೀ ನೋಡಿ
ದೇವ ತನ್ಮಧ್ಯದಿ ನೆಲೆಸಿದೆ ಹೂಡಿ ೩

ಏಳು ಪ್ರಾಕಾರ ಮಧ್ಯದಲ್ಲಿರುವವನೆ
ಫಾಲನಯನ ಸಖ ಪತಿತ ಪಾವನನೆ ೪

ನಿನ್ನ ಸಂದರುಶನ ಮಾಡಿದ ಜನರು
ಧನ್ಯರಾಗುತಯಿಹಪರ ಪಡೆಯುವರು ೫

ಚಂದ್ರ ಪುಷ್ಕರಣಿಯೋಳ್ಮಿಂದ ತಕ್ಷಣದಿ
ಬೆಂದು ಪೋಗುವುದಘವೃಂದವು ಭರದಿ ೬

ಗುರುರಾಮ ವಿಠ್ಠಲ ವರಮುನಿ ಪಾಲ
ಶರಣಜನಾಧಾರ ಶ್ರೀ ತುಲಸೀ ಮಾಲಾ ೭

೬೯

ಶ್ರೀ ರಘುವರತೇ ನಮೋ ನಮೋ ಪ

ಆಶ್ರಿತ ಪರಿಪಾಲತೇ ನಮೋ ನಮೋ ಅ.ಪ

ಸರಸಿಜಭವಪಿತ ಸರಸಿಜಲೋಚನ
ಪರಮಪುರಷ ಖಗಪತಿ ಗಮನ
ಸುರಕಿನ್ನರ ಭೂಸುರನರವರನುತ
ಸೂರಿಜನಪ್ರಿಯತೇ ನಮೋ ನಮೋ ೧

ಮದನಕೋಟಿ ಲಾವಣ್ಯ ಶರಣ್ಯ ನಾ-
ರದ ವೀಣಾಗಾನ ವಿಲೋಲ
ಮುದತೀರ್ಥವರದ ಮುನಿಜನಪಾಲಕ
ಸದಮಲಾತ್ಮಕತೇ ನಮೋ ನಮೋ ೨

ರಾಮಭೂವರ ವಿರಾದಾಂತಕಬಲ-
ರಾಮಾನುಜ ರಘುರಾಮವಿಭೋ
ಸೋಮಸೂರ್ಯನಯನ ಶುಭ-
ತಮ ಶ್ರೀ ಗುರುರಾಮವಿಠ್ಠಲತೇ ನಮೋ ೩

೭೦

ಶ್ರೀರಮಣೀ ಮನೋಹರ ಆ
ಶ್ರಿತ ಜನ ಮಂದಾರ ಯದುವೀರ ಪ

ಘೋರ ದುರಿತ ಪರಿಹಾರ ಕುಜನ ಸಂ-
ಹಾರ ಯಶೋದೆ ಸುಕುಮಾರ ನಮೋ ನಮೋ ಅ.ಪ

ಪಾಂಡವಪ್ರಿಯ ಬ್ರಹ್ಮಾಂಡನಾಯಕ ವೇ-
ತಂಡ ರಾಜವರದ ಪುಂಡರಿಕಾಕ್ಷನೆ ೧

ಅಕ್ಷಯ ಫಲದ ಮುಮುಕ್ಷುಗಳೊಡೆಯನೆ
ಪಕ್ಷಿವಾಹನ ನಿಟಿಲಾಕ್ಷ ಸಖನೆ ನಮೋ ೨

ದುರಭಿಮಾನಿಗಳ ಗರುವ ಬಿಡಿಸಿ ತನ್ನ
ಶರಣರ ಸಲಹುವ ಗುರುರಾಮ ವಿಠಲನೆ ೩

೭೧

ಶ್ರೀರಾಮ ಮಂಗಳಂ ಘೋರಾಘಮರ್ದನ ಪ

ಸ್ಮರ ಕೋಟಿ ಲಾವಣ್ಯ ವಾನರ ಪರಿ–
ವಾರ ಜಾನಕೀ ಮನೋಹರ ಅ.ಪ

ಪಾಂಡವ ಪಾಲನ ಅಂಡಜ ವಾಹನ
ಕುಂಡಲೀ ಶಯನ ರಿಪು ಮಂಡಲವಿ–
ಖಂಡನ ಬ್ರಂಹ್ಮಾಂಡ ನಾಯಕ ೧

ವೆಂಕಟ ರಮಣ ಸಂಕಟ ಹರಣ
ಪಂಕಜ ನಯನ ಬಿರುದಾಂಕ ಹರಿ
ಶಂಖಧರ ಕಿಂಕರ ಪ್ರಿಯ ೨

ಮರುತಾತ್ಮಜಾರ್ಚಿತ ಪುರವೈರಿಭಾವಿತ
ಸುರನಾಥ ಸೇವಿತ ಮಹಿಮಾನ್ವಿತ
ಗುರುರಾಮ ವಿಠಲ ಶುಭಚರಿತ ೩

೭೨

ಶ್ರೀರಾಮ ಮನೋಹರ ಕೃಪಾಸಾಗರ ಪ

ಸಾರಸಾಪ್ತ ವಂಶ ಭೂಪ ಸಾಧು ಪೋಷಕ
ಮಾರುತಾತ್ಮಜಾ ಪೂಜಿತ ಅ.ಪ

ಗಾಧಿತನಯ ಯಾಗರಕ್ಷಗಾಧ ಮಹಿಮನೇ
ವೇದ ವೇದ್ಯ ಬೋಧ ರೂಪ ಬುಧ ಜನ ಪ್ರಿಯಾ
ವೇದವಂದ್ಯ ವಿಶ್ವವಲ್ಲಭಾ ೧

ರಾವಣಾದಿದನುಜ ಭಂಜನಾನತರ ಕಾವನೆ
ಭಾವಜಾರಿ ಚಾಪಭಂಗ ಭಾಸುರಾಂಗನೆ
ದೇವ ದೇವ ದೀನರಕ್ಷಕಾ ೨

ಭೂಮಿಗಧಿಕ ನೂತನ ಪುರಿಧಾಮ ನೀನಲಾ
ಕಾಮಿತಾರ್ಥದಾತ ಸಾಮಗಾನ ಲೋಲ
ಕ್ಷೇಮವೀವ ಗುರುರಾಮ ವಿಠ್ಠಲ ೩

೭೩

ಶ್ರೀರಾಮ ಶ್ರೀರಾಮ ಶ್ರೀರಾಮ ಶ್ರೀರಾಮ
ಶ್ರೀರಾಮ ಸೀತಾರಮಣನೆ । ಪರಾತ್ಪರ
ಕಾರುಣ್ಯನಿಧಿಯೆ ಕೈಪಿಡಿಯೊ ಪ

ಸರಸಿಜಾಸನ ಪುರಹರನನ್ನೆ ಮೊದಲು ನೀ
ಶರೀರದಿ ಪಡೆದೆ ಸರ್ವೇಶ । ಕೇಶವ
ಪರಮಪುರುಷನೆ ಕೈಪಿಡಿಯೊ ೧

ಅರಿವಿಗಾಶ್ರಯನೀನೆ ಸರ್ವಶಬ್ದವಾಚ್ಯ
ದುರಿತವಿದೂರ ಪರಮಾತ್ಮ । ನಾರಾಯಣ
ಕರುಣವಾರಿಧಿಯೆ ಕೈಪಿಡಿಯೊ ೨

ಮಾಯಾಮನೋಹರ ಕಾಯಜ ಜನಕನೆ
ನೋಯುತಲಿಹೆನೊ ಭವದೊಳು । ಮಾಧವ
ರಾಯನೀ ಒಲಿದು ಕೈಪಿಡಿಯೊ ೩

ಗೋವುನಿಗಮಭೂಮಿ ಸೂರ್ಯ ಕಿರಣಗಳಿಂದ
ನೀವೊಲಿದೆಲ್ಲರ ಸಲಹುವೆ । ಎನ್ನಯ್ಯ
ಗೋವಿಂದ ನೀನೆ ಕೈಪಿಡಿಯೊ ೪

ವ್ಯಾಪಕನಾಗಿದ್ದು ವ್ಯಾಪಾರ ಮಾಡಿಸುವೆ
ಭೂಪಾತಾಳದಿ ಲೋಕವ । ವಿಷ್ಣುವೆ
ಆಪದ್ಬಾಂಧವನೇ ಕೈಪಿಡಿಯೊ ೫

ಕರ್ಣದಿ ಪುಟ್ಟಿದ ಕಲುಷ ದಾನವರನ್ನು
ಮುನ್ನನೀ ಕೊಂದೆ ಯುಕ್ತಿಯಲಿ । ಮಧುಸೂಧನ
ಪನ್ನಗಶಯನ ಕೈಪಿಡಿಯೊ ೬

ಶಕ್ರಗೋಸುಗ ನೀನೆ ಶುಕ್ರ ಶಿಷ್ಯನ ಬೇಡಿ
ವಿಕ್ರಮದಿಂ ಭೂಯಳದೆ । ಅದ್ಭುತತ್ರಿ
ವಿಕ್ರಮ ಮೂರುತಿಯೆ ಕೈಪಿಡಿಯೊ ೭

ಆಮಹಾವಟುರೂಪದಿಂದಲದಿತಿಯೊಳು
ಸ್ವಾಮಿ ನೀಉದಿಸಿ ಬಲಿಯನು । ಯಾಚಿಸಿದೆ
ವಾಮನ ಮೂರ್ತಿಯೆ ಕೈಪಿಡಿಯೊ ೮

ಸಿರಿದೇವಿಯನು ವಕ್ಷಸ್ಥಳದಿ ನೀ ಧರಿಸಿದೆ
ಸುರನರೋರಗರಿಗೊಡೆಯನೆ । ಶ್ರೀಧರ
ತ್ವರಿತದಿ ಎನ್ನ ಕೈಪಿಡಿಯೊ ೯

ವಿಷಯಗಳನುಭವಿಸುವರಿಂದ್ರಿಯಗಳಿಂದ
ಹೃಷಿಕೇಶ ನಿನ್ನ ಕಾಣರೊ । ಪಾಮರರು
ಋಷಿಗಣವಂದ್ಯ ಕೈಪಿಡಿಯೊ ೧೦

ನಾಭಿಯದೆಸೆಯಿಂದ ಬ್ರಹ್ಮಾಂಡವ ಪಡೆದೆ
ಶೋಭನಚರಿತಾಮರವಿನುತ । ನೆ ಪದ್ಮ
ನಾಭನೆ ಒಲಿದು ಕೈಪಿಡಿಯೊ ೧೧

ನೀ ದಯದಲಿ ಯಶೋದಾದೇವಿಯಿಂದಲಿ
ಬೋಧರೂಪನೆ ಕಟ್ಟಿಸಿಕೊಂಡೆ । ಸ್ವಾಮಿ
ದಾಮೋದರ ಎನಗೊಲಿದು ಕೈಪಿಡಿಯೊ ೧೨

ಹರನಲ್ಲಿ ನಿಂತು ಸಂಹರಿಸುವೆ ಜಗವನ್ನು
ಪರಮ ನಿಷ್ಕರುಣದಲಿ । ನೀ ಸಂ
ಕರ್ಷಣ ಮೂರುತಿಯೆ ಕೈಪಿಡಿಯೊ ೧೩

ಭಾಸುರಗಾತ್ರ ದೇವಾಸುರ ಮನುಜರೆಂ–
ಬೀಸಮುದಾಯದೊಳಗಿರ್ಪೆ । ಸರ್ವಾತ್ಮ
ವಾಸುದೇವಾಖ್ಯ ಕೈಪಿಡಿಯೊ ೧೪

ಶುದ್ಧ ನಿರ್ಮಲರೂಪ ಸೂರಿ ಜನಾಶ್ರಯ
ವಿದ್ವದ್ಭಿರೀಡ್ಯಾ ಸುಗುಣಾಢ್ಯ । ನೀನೆ ಶ್ರೀ
ಪ್ರದ್ಯುಮ್ನ ಒಲಿದು ಕೈಪಿಡಿಯೊ ೧೫

ಮುನಿಜನವಂದಿತ ಅನಿಮಿಷಸನ್ನುತ
ಕನಕಗರ್ಭನ ತಾತ ಖಗವಾಹ । ಗತ ಮೋಹ
ಅನಿರುದ್ಧ ಎನ್ನ ಕೈಪಿಡಿಯೊ ೧೬

ಸರಸಿಜಭವ ಮೊದಲು ತೃಣಪರಿಯಂತವು
ಸರ್ವರು ಜೀವರೆನಿಸುವರು । ಸಿರಿಯರಸ
ಪುರುಷೋತ್ತಮ ನೀನೆ ಕೈಪಿಡಿಯೊ ೧೭

ಮೋಕ್ಷದಾಯಕ ಸರ್ವಾಧ್ಯಕ್ಷ ಜೀವರಿಗೆಲ್ಲ
ಸಾಕ್ಷಿಯಾಗಿರುವೆಯೊ ಹೊರ ಒಳಗೆ । ಸ್ವಾಮಿ ಅ–
ಧೋಕ್ಷಜ ನೀನೆ ಕೈಪಿಡಿಯೊ ೧೮

ಪರಮಸತ್ಪುರುಷನಾಗಿಹ ಪ್ರಹ್ಲಾದನ
ದುರುಳ ಹಿರಣ್ಯಕ ಬಾಧಿಸಲು । ಉದಿಸಿದ
ನರಸಿಂಹ ಮೂರುತಿಯೆ ಕೈಪಿಡಿಯೊ ೧೯

ಇಚ್ಛಾಮಾತ್ರದಿ ಸೃಷ್ಟಿ ಸ್ಥಿತಿಲಯಗೈಯ್ಯುವೆ
ನಿಚ್ಚಲನಾಗಿ ಜಗವನ್ನು । ನುಂಗುವೆ
ಅಚ್ಯುತ ಎನ್ನ ಕೈಪಿಡಿಯೊ ೨೦

ಸ್ಪರ್ಧೆಗೈಯ್ಯುತಲಿರುವ ದುರ್ದಾನವರನ್ನು
ನಿರ್ದಯನಾಗಿ ಕೊಲ್ಲುವೆ । ನೀನೆ ಜ-
ನಾರ್ಧನಸ್ವಾಮಿ ಕೈಪಿಡಿಯೊ ೨೧

ಇಂದ್ರನಂದನ ವಿಧಿ ಚಂದ್ರಶೇಖರ ಮುಖ್ಯ
ಸಂದೋಹ ನಿನ್ನ ಪೊಗಳುವರು । ಅಯ್ಯ ಉ-
ಪೇಂದ್ರ ಮೂರುತಿಯೆ ಕೈಪಿಡಿಯೊ ೨೨

ಕರುಣಸಾಗರ ನೀನೆ ಶರಣ ಜನೋದ್ಧಾರ
ಸಿರಿದೇವಿಯರಸ ಸರ್ವೇಶ । ಸರ್ವಗ ಸ್ವಾಮಿ
ಹರಿಯೆ ನೀ ಒಲಿದು ಕೈಪಿಡಿಯೊ ೨೩

ಕಷ್ಟ ಎಂಬುವ ಬಲು ಉಷ್ಣ ಜಲದಿ ಬಿದ್ದು
ವಿಷ್ಣುವೆ ನಾನು ಮೊರೆಯಿಡುವೆ । ಕಾದುಕೊ
ಕೃಷ್ಣ ನೀ ಒಲಿದು ಕೈಪಿಡಿಯೊ ೨೪

ಸರ್ವಜೀವರಿಗಂತರ್ಯಾಮಿ ನೀನಲ್ಲವೆ
ವರಬಿಂಬಮೂರ್ತಿ ನೀನಯ್ಯಾ । ಸ್ವಾಮಿ ಶ್ರೀ
ಗುರುರಾಮವಿಠ್ಠಲಾನತಪಾಲ ೨೫

೭೪

ಶ್ರೀವೆಂಕಟೇಶಾ ಶ್ರಿತಜನಪೋಷಾ ಪ

ದೇವ ದೇವ ಮಹದೇವ ವಿನುತಸುಜ ।
ನಾವನ ಶ್ರೀ ಭೂದೇವಿಯರರಸನೆ ಅ.ಪ

ಅಂಬರರಾಜನಳಿಯನೆ ತ್ರಿಭುವನ ಕು ।
ಟುಂಬಿ ನಿನ್ನ ನೆರೆ ನಂಬಿದೆನಯ್ಯ ೧

ಸ್ವಾಮಿ ಪುಷ್ಕರಣಿ ತಟದಿ ನೆಲಸಿ ಸುರ ।
ಸ್ತೋಮದಿಂದ ಓಲಗ ಕೈಗೊಂಬ ೨

ದುರಿತವ ಕಳೆಯುವ ದೊರೆ ನೀನಲ್ಲವೆ
ಉರಗಗಿರಿನಿಲಯ ಗುರುರಾಮವಿಠಲ ೩

೭೫

ಸರಸಿಜಾಕ್ಷ ಸಾಧುಪಕ್ಷ ನಿರತ ನಿನ್ನ ನಂಬಿದೆ ಪ

ಸಿರಿ ಚತುರ್ಮುಖಾದಿ ವಿನುತ ಶ್ರೀಧರಾ ಕೃಪಾನಿದೆ ಅ.ಪ

ತರಳ ಕರೆಯೆ ಕಂಬದೊಳುದಿಸಿ ಹಿರಣ್ಯ ಕಶಿಪುಯೆಂಬನ
ತರಿದು ಕರುಳ ಮಾಲೆಧರಿಸಿದ ನರಹರಿ ಪತಿತ ಪಾವನ ೧

ಮಾನಿನಿಯ ಮೊರೆಯ ಕೇಳಿ ಮಾನಕಾಯ್ದದೇವನೆ
ದಾನಕೊಟ್ಟಬಲಿಗೆ ಮೆಚ್ಚಿ ದ್ವಾರಪಾಲಕನಾದವನೆ ೨

ಕರಿಯಮೊರೆದು ಕಾಂಚಿಪುರದೊಳಿರುವ ವರದರಾಜನೆ
ಗುರುರಾಮ ವಿಠಲ ನೀನೆ ಶರಣ ಕಲ್ಪಭೂಜನೆ ೩

೭೬

ಸರಿಯೊರೊ ನಿನಗೆ ದೇವ ಶರಣಜನ ಸಂಜೀವ ಪ

ಸುರವೈರಿವಿಪಿನ ದಾವಾ । ನಲ । ಸೂರ್ಯಾನೇಕ ಪ್ರಭಾವ ಅ.ಪ

ಕರುಣಾಬ್ಧಿದೀನಬಂಧು । ಕರಿರಾಜ ಕರೆಯೆ ಬಂದು
ಅರಿಯಾದನೆಗಳ ಕೊಂದು ಆದರಿಸಿದೆ ಗುಣ ಸಿಂಧು ೧

ಅನುದಿನದಿ ನಿನ್ನಪಾದ ನೆನೆವರಿಗೆ ಕೊಡುವೆ ಮೋದಾ
ಘನಮಹಿಮನೆಂದು ವೇದಗಳು ಪೊಗಳುವುದೊ ಶ್ರೀಧ ೨

ನತ ಪ್ರೇಮವೆಂಕಟೇಶ ಶುಭನಾಮ ಭಕ್ತಪೋಷ
ಚಿಂತಾಮಣಿ ಪುರವಾಸ ಗುರುರಾಮವಿಠಲ ಶ್ರೀಶಾ ೩

೭೭

ಸರೋಜದಳೇಕ್ಷಣಾ ಸಲಹೋಯೆನ್ನ । ವಿಧಿ ಪ

ಪುರಾರಿನುತ ಚರಣಾ ನಾರಾಯಣಾ ಅ.ಪ

ಸರಸಿಜಾಪ್ತ ಕುಲಚಂದ್ರಮ ರಾಮ । ಮ–
ಹಾರಾಜ ರಾಜಲಲಾಮ ನಿಸ್ಸೀಮ ೧

ಎನ್ನಪರಾಧಗಳೇನಿದ್ದರು ಸರಿ
ಮನ್ನಿಸುವರು ನೀನಲ್ಲದಾರು ೨

ಅಜಿತಾದ್ಯನಂತರೂಪಾಪ್ರಮೇಯ
ಭಜಕ ಪೋಷ ಗುರುರಾಮ ವಿಠ್ಠಲ ರಾಯಾ ೩

೭೮

ಸಲಹೋ ಎನ್ನನು ಸ್ವಾಮಿ ಸರ್ವಾಂತರ್ಯಾಮಿ ಪ

ಜಲಜಾಪ್ತಕುಲ ಭೂಷಾನತಜನ ಪ್ರೇಮಿ ಅ.ಪ

ದಶರಥನಂದನ ದಾನವ ಹರಣಾ
ಪಶುಪತಿ ಮುಖಸುರ ಪೂಜಿತ ಚರಣಾ ೧

ಭಕ್ತ ಮಾನಸ ಹಂಸ ಭವರೋಗ ವೈದ್ಯ
ಮುಕ್ತಿ ಪ್ರದಾಯಕ ನಿಗಮಾಂತ ವೇದ್ಯಾ ೨

ಸೀತಾ ಮನೋಹರಾ ಶ್ರಿತ ಪರಿಪಾಲ
ವಾತ ಸಂಭವ ಪ್ರೀಯ ಗುರುರಾಮವಿಠಲ ೩

೭೯

ಸುಖಖರ ನೀನೆನ್ನುತಾ ಸೂರಿಗಳು ಭಜಿಸುವರೊ ನಿನ್ನ ಪ

ಭಕುತಿಯಿಂದಲಿ ನಿನ್ನ ಶ್ರೀಪಾದ ಪದ್ಮಂಗಳ ಸೇವಿಸುತ
ಭವಭಯಗಳನೀಡಾಡುತ ಪಾಪರಹಿತರಾಗಿಹರು ಅ.ಪ

ಭೂತದಯೆ ಪಶ್ಚಾತ್ತಾಪವಿಖ್ಯಾತಿಯಶೋದಾನ
ನೀತಿಮನಃ ಪ್ರೀತಿಧ್ಯಾನ ನಿತ್ಯಾನುಸಂಧಾನ
ಶ್ರೀ ತರುಣಿವರ ಪ್ರಾಣಿ ವ್ರಾತಗಳಿಗೆ ಕರ್ತನು ಯಂ
ದಾತುರವಿಲ್ಲದೆ ಸರ್ವದ ಜಾತಿ ಧರ್ಮಾಚಾರದಲ್ಲಿ ೧

ತನ್ನಂತಿತರರ ನೋಡುತ ಮನ್ನಣೆಯಲಿ ಸತತ
ಹೆಣ್ಣು ಹೊನ್ನು ಮಣ್ಣಾಸೆ ಬಿಡುತ ಹೇಯವವರ್ಜಿಸುತ
ನನ್ನದು ನಾನೆಂಬುದ ಬಿಟ್ಟನ್ಯರ ನಿಂದಿಸದಲೆ ಹರಿ
ನಿನ್ನಾಜ್ಞೆಯೊಳಾದುದೆಲ್ಲ ನಿನಗೆ ಸಮರ್ಪಣೆಗೈಯ್ಯುತಾ ೨

ಸತಿಸುತಹಿತ ಸೋದರಾಪ್ತ ತತಿಯಲಿ ಸಂಭ್ರಮದಿ
ಮತಿಗೆಡದೆ ಎಚ್ಚರಿಕೆಯಿಂ ಸುಮಾರ್ಗದಿ ಸಮ್ಮುದದಿ
ಪ್ರತಿ ದಿನದಲಿ ಶೃತಿ ಸ್ಮೃತಿ ಸಂಮತದಿ ಸತ್ಸಂಗದಿ ಸೀತಾ-
ಪತಿ ಗುರುರಾಮ ವಿಠಲ ಯಂದತಿಶಯದಲಿ ಚಿಂತಿಸುತ ೩

೮೦

ಸುಂದರಾಂಗಿ ತಂದುತೋರೆ ಇಂದಿರೆ ಮನೋಹರನ ಪ

ಒಂದು ಕ್ಷಣ ತಾಳಲಾರೆ ವಂದಿಸುವೆನೆಲೆ ನೀರೆ ಅ.ಪ

ಚಂದ್ರಕಿರಣಗಳುರಿಯಂದದಿ ತೋರುತಲಿದೆ
ಮಂದ ಮಾರುತಗೆ ಕಡು ಕುಂದಿದೆನೆ ಮಂದಯಾನೆ ೧

ಮಾರನಾಟದಲ್ಲಿ ಒಂದು ಬಾರಿ ಸೊಕ್ಕಿ ಸೋಲಿಸುತ
ಸೇರಿದ ಸುಖವ ಮರೆಯಲಾರೆನೆ ಸರೋರುಹಾಕ್ಷಿ ೨

ಭೂತಳಕಧಿಕವಾದ ನೂತನಾವರಣಪುರಿ
ದಾತ ಗುರುರಾಮವಿಠಲ ಯಾತಕೆ ನಿರ್ದಯಗೈದ ೩

೮೧

ಸೀತಾಮನೋಹರ ಬಾರೊ । ಸ್ವಾಮಿ ಪ

ಸೀತಾಮನೋಹರ ಶ್ರಿತ ಲೋಕೋದ್ಧಾರ ರಘು ।
ನಾಥ ಪ್ರಖ್ಯಾತ ದಾತ ಬಾರೋ ಅ.ಪ

ನಂಬಿದ ಭಕ್ತರ ಬೆಂಬಿಡದೆ ಪೊರೆವ
ಅಂಬುಜ ಲೋಚನ ಬಾರೋ ೧

ನೀನು ಮಾಡಿಸಿದಂತೆ ನಾನು ಮಾಡುವೆನೆಂಬಸು ।
ಜ್ಞಾನವಪಾಲಿಸೆ ಬಾರೊ ೨

ಅಂತಃ ಪ್ರೇರಕನಾಗಿ ನಿಂತು ಜೀವರನೆಲ್ಲ
ಸಂತೈಸುತಿಹ ದೇವ ಬಾರೋ ೩

ಬಾಗಿ ನಮಿಸುತಿರ್ಪ ಭಾಗವತರ ಭವ–
ರೋಗಕ್ಕೆ ವೈದ್ಯ ನೀನೆ ಬಾರೊ ೪

ಪರಮ ನಿಷ್ಕಾಮಿಯಾದ ಮರುತಾತ್ಮಜಾಂತರ್ಗತ ಶ್ರೀ
ಗುರುರಾಮ ವಿಠಲಬೇಗ ಬಾರೋ ಸ್ವಾಮಿ ೫

೮೨

ಸೀತಾ ಪತಿಮಮಲಂ ವಂದೇಹಂ ಪ

ವಾತಾತ್ಮಜರವಿಜಾತಾದಿ ವಾನರ
ವ್ರಾತನಮಿತಪಾದಂ ನತಮೋದಂ ಅ.ಪ

ರವಿಕುಲದೀಪಂ ರಮಣಿಯ ರೂಪಂ
ಕರಧೃತ ಶರಚಾಪಂ ಬಲಕೋಪಂ ೧

ದಶರಥಬಾಲಂ ಧರ್ಮಾನುಕೂಲಂ
ದಶಶಿರಮದಹರಣಂ ಜಿತಮರಣಂ ೨

ಗುರುರಾಮವಿಠಲಂ ಸುರಮುನಿ ಪಾಲಂ
ತುಳಸೀವನಮಾಲಂ ಸುಸೀಲಂ ೩

೮೩

ಹರಿಯೆ ಸಿರಿದೊರೆಯೆ
ಅರಿಯೆ ನಿನ್ನೊರತನ್ಯರ ಪ

ಶರಣರ ಪೊರೆವ ಕರುಣಿ ನೀನೆ ದೇವ
ಮೊರೆ ಹೊಕ್ಕಿರುವರ ದುರಿತಗಳ ಕಳೆವ ಅ.ಪ

ಕೋಟಿ ಸೂರ್ಯ ಪ್ರಕಾಶ ಕುಮುದಾಪ್ತಮಿತ ಭಾಸ
ನಾಟಕಾಧಾರ ಶ್ರೀಶ
ಸಾಟಿಯಿಲ್ಲ ನಿನಗೆ ಸುರ ನರೋರಗರೊಳಗೆ
ಹಾಟಕ ಗರ್ಭತಾತ ಅಖಿಲ ಸದ್ಗುಣೋಪೇತ ೧

ಬರಿದೆ ಈ ಸಂಸಾರ ಶರಧಿಯೊಳ್ ಮುಳುಗುತ
ಧರೆಯ ಕಾಣದೆ ಕೂಗುತ
ಮರಳಿ ಮರಳಿ ಜನನ ಮರಣಗಳೈದುತ
ನರಕ ಸ್ವರ್ಗ ಭೂಲೋಕ ತಿರುಗಿ ಬಳಲುವವೋ ೨

ಹಟದಿ ದುರ್ಮತಿಗಳಾರ್ಭಟಿಸುತಜ್ಞಾನದಿ
ಮಟ ಮಾಯದಿ ಚರಿಸಿ
ತ್ರುಟಿಯಾದರು ನಿನ್ನ ಭಜಿಪ ಜನರಿಗೆ
ಘಟಿಪುದೇ ಗುರುರಾಮವಿಠಲ ನಿನ್ನಯ ಕರುಣ ೩

೮೪

ಹರಿಯೇಕಾರ್ಯೋ ಶರಧಿಶಯನನೇ
ಸಿರಿದೇವಿಯರಸ ಪರಮಾತ್ಮ ಪರಾತ್ಪರನೇ ಪ

ನಿರುತ ನಿನ್ನ ಸ್ಮರಿಸುವ ಸ । ಜ್ಜನರಘಗಳ ಪರಿಹರಿಸುವ
ಬಿರುದ ಧರಿಸಿ ಮೆರೆಯವೆ ನೀ ಧರೆಯೊಳು ಶುಭಚರಿತನೆ ಅ.ಪ

ವರರುಕ್ಮಾಂಗದ ಪ್ರಹ್ಲಾದರು ದ್ರೌಪದಿ ವಿಭೀಷಣಶ–
ಬರಿಧೃವಮುಖರೆಲ್ಲರು ನಿನ ಸಿರಿ ನಾಮದ ಮಹಿಮೆಯು ೧

ಬುದ್ಧಿವಂತರೆಲ್ಲ ಮನವ ತಿದ್ದಿಕೊಳುತಲಹರ್ನಿಶಿಯಲಿ
ವೃದ್ಧವಪ್ರಿಯ ನಿನ್ನಪಾದ ಪದ್ಮಮಧುಪರೆನಿಪರು ೨

ಧೃಹಿಣನುಮಗ ಮೊಮ್ಮಗ ನಿನಗಹಿಭೂಷಣ ನಿನ್ನ ಮಹಿಮೆ
ಗಹನವಳವಡುವಡಲ್ಲವು ಮಹಿಯೊಳು ಪಾಮರರಿಗೆ ೩

ಸಕಲಕು ನೀನೆ ಗತಿಯೆಂದ ಕುಟಿಲರು ನಿರಂತರ ಪರ
ಸುಖವನು ತಾವ್ತೋರದೆ ಸದ್ಭಕುತಿಯಿಂದ ಸೇವಿಪರು ೪

ಅರಿಯದ ದುರ್ಜನರೀದುಸ್ತರ ಸಂಸಾರದಿ ಮುಳುಗುತ
ಹೊರಳಿ ಹೊರಳಿ ನೋಯ್ವರು ಶ್ರೀ ಗುರುರಾಮ ವಿಠಲನೇ ೫

೮೫

ಹರಿಕಾಣದ ಉಪಾಯ ನರಬಲ್ಲನೆ
ದುರುಳರ್ ತಾವ್ ಕರ್ತರೆಂದು ವ್ಯರ್ಥರಾಗುವರು ಪ

ಸುರಪತಿಯ ಸ್ವರ್ಗವನು ಬಲಿರಾಯ ಕೈಗೊಂಡು
ಎರೆಡು ಐವತ್ತು ಹಯಮೇಧಗೈಯ್ಯೆ
ಪುರಂದರಗೆ ತಮ್ಮನಾಗಿ ಉದಿಸಿ ಬಲಿಯನು ಗೆದ್ದು
ಎರೆಡು ಅಡಿಯಲಿ ಬುವಿಯನಳೆದು ಕೊಳಲಿಲ್ಲವೆ ೧

ಅಸುರರು ಅಮರರಲ್ಲಿ ಅತಿದ್ವೇಷವನುಗೈಯೆ
ಬಿಸಜಲೋಚನ ತಾನು ಸ್ತ್ರೀರೂಪದಿ
ನಸುನಗುತ ರಾಕ್ಷಸರ ಮೋಹಿಸಿ ಸುಧೆಯನು ಸುಮ ।
ನಸರಿಗಿತ್ತಾದರಿಸಿ ಕರುಣಿಸಿದ ಸ್ವಾಮಿ ೨

ಗುರುಭೀಷ್ಮರನು ಗೆಲುವುದಕ್ಕೆ ಕೃಷ್ಣನು ಯುಧಿ
ಷ್ಠಿರನಿಂದ ಒಂದು ನುಡಿಯನು ನುಡಿಸಿ
ಪರಮ ಸಂಭ್ರಮದಿಂದ ಕೌರವರ ನಾಶಗೈದ
ಗುರುರಾಮ ವಿಠಲಗೆ ಸರಿಯು ಇನ್ನುಂಟೆ? ೩

೮೬

ಹಸೆಗೆ ಬಾರಯ್ಯ ಹದಿನಾಲ್ಕು ಲೋಕದೊಡೆಯ ಪ

ಕುಸುಮಾಸ್ತ್ರನೈಯ್ಯ ಕೋರಿ ಪ್ರಾರ್ಥಿಪೆ ಜೀಯಾ ಅ.ಪ

ಪಕ್ಷಿಗಮನ ದುಷ್ಟ ರಾಕ್ಷಸಾಂತಕ ನೀನು–
ಪೇಕ್ಷೆಮಾಡದೆ ನಿರಪೇಕ್ಷ ಸೌಖ್ಯವೀಯಲು ೧

ಪದುಮೆಯೊಡನೆ ಹೃದಯಪದುಮ ಪೀಠದಿ ಕುಳಿತು
ಸದಮಲ ಜ್ಞಾನ ವದಗಿಸುವದಕೀಗ ೨

ಪ್ರೇಮಾದಿ ಸುಜನರಿಗೆ ಕಾಮಿತ ಫಲವೀವ
ಸ್ವಾಮಿ ನೀನೆ ಶ್ರೀಗುರುರಾಮ ವಿಠಲ ವಲಿದು ೩

೮೭

ಹಸೆಗೆ ಬಾರೈರಾಮಾ ಪ

ಬಿಸಜಾಪ್ತ ವಂಶಲಲಾಮ ಅ.ಪ

ಮಾನಸ ಪೀಠಕೆ ಜಾನಕಿದೇವಿ ಸಹಿತಾ
ಆನತರಿಗೆ ಸೌಖ್ಯವ ಬೀರುತಲಿ ೧

ಬ್ರಹ್ಮಮಹೇಶ್ವರ ಸುಮ್ಮಾನದಿ ಕೈಕೊಡಲು
ಧರ್ಮಸ್ಥಾಪಿಸೆ ಧರಣಿ ಮಂಡಲದಿ ೨

ಹನುಮಂತ ಜಾಂಬವ ಇನತನಯಾಂಗದಾದಿ
ಘನಕಪಿವೀರರು ಕಾದುಕೊಂಡಿರುವರು ೩

ಕಾಮಾದಿ ವರ್ಗಂಗಳ ನಿರ್ನಾಮವಾಗಿ ಪೋಪಂತೆ
ನೀಮನವಲಿದನುಗ್ರಹಿಸಿ ಬೇಗದಿ ೪

ಅಂತಃಕರುಣಾಸಿದ್ಧಿಯಂ ತವಕದಿ ಕೊಟ್ಟು
ಅಂತರಾತ್ಮಕ ಗುರುರಾಮ ವಿಠಲನೆ ೫

೮೮

ಹಸೆಗೆ ಬಾರೈ ಶ್ರೀರಾಮ ಹನುಮ ಪ್ರೇಮ ಪ

ದಶರಥ ಕುಮಾರ ದಶವಿಧ ಶರೀರ ಅ.ಪ

ಪರಮಾತ್ಮ ಶುಭಚರಿತ ಸೂರ್ಯವಂಶಾ
ಶರಧೀಗೆ ಚಂದ್ರಮನೆ ಕರುಣದಿ ಬೇಗನೆ ೧

ಅಚ್ಯುತಾ ಅನಂತ ಅಗಣಿತ ಗುಣವ್ರಾತ
ಚಿತ್ಸುಖಾಪ್ರದಾತ ಜಾನಕೀ ಸಮೇತಾ ೨

ದುರಿತಾನಲಸಲಿಲ ದೈತ್ಯನಿಕರ ಕಾಲ
ಗುರುರಾಮ ವಿಠಲ ತರಣಿಜ ಪಾಲ ೩

೮೯

ಹೊಡೆಯಿರೋ ನಗಾರಿ
ಗಡಗಡನೆ ಮೂರು ಬಾರಿ ಪ

ದೃಢಭಕ್ತ ಸಮೂಹವ ಸಿರಿ
ಯೊಡೆಯನು ಕೈಬಿಡನೆಂದು ಅ.ಪ

ವಿಧಿಸೃಷ್ಟಿಯೊಳಿಲ್ಲದರೂ–
ಪದಿ ಬಂದು ನಖದಿ ಅಸುರನ
ಉದರ ಬಗೆದು ಕರುಳ ತೆಗೆದು
ಮುದದಿ ಗಳದಿ ಧರಿಸಿದನೆಂದು ೧

ಪರರು ತನ್ನ ಹಿಂಸೆಗೈ
ದರು ಸಹಿಸಿ ಸಮಾಧಾನದಿ
ಸಿರಿಯರಸನ ನೆನೆವಗೆ ಭಯ
ವಿರದಿರದಿರದಿರದೆಂದು ೨

ದ್ವೇಷಿಗಳನುದಿನ ಯೋಚಿಪ
ಮೋಸಗಳನು ತಿಳಿಯುತ ಲ–
ಕ್ಷ್ಮೀಶನು ಪರಿಹರಿಸಿ ತನ್ನ
ದಾಸರಿಗೊಶವಾಗುವನೆಂದು ೩

ಖಳಜನರ ಮರ್ದಿಸುತ
ಜಲಜನಾಭ ಮೂಜಗದ
ಒಳಹೊರಗೂ ವ್ಯಾಪಿಸುತ
ತಿಳಿಯಗೊಡನು ಸತ್ಯವಿದೆಂದು ೪

ಕಾಮಾದಿಗಳನು ಗೆದ್ದು ಮ–
ಹಾಮಹಿಮರೆನಿಸುವರ ಯೋಗ–
ಕ್ಷೇಮವನ್ನು ವಹಿಸಿಹ ಗುರು–
ರಾಮವಿಠಲ ನರಹರಿಯೆಂದು ೫

(ಆ) ಭಗವಂತನ ಸಂಕೀರ್ತನೆ

(ಷೋಡಶೋಪಚಾರ ಪೂಜಾ ಕೀರ್ತನೆಗಳು)

೯೦

ಧ್ಯಾನಿಸಲರಿಯೆ ನಿನ್ನ ಶ್ರೀನಿವಾಸ ಪ

ಧ್ಯಾನಿಸಲರಿಯೆನು ದೀನಮಂದಾರ ನಿ-
ತ್ಯಾನಂದ ಮೂರ್ತಿಯಂದರಿತು ಹೃದಯದೊಳು ಅ.ಪ

ಯಮನಿಯಮಾಸನದಿ ಪ್ರಾಣಾಯಾಮ
ಕ್ರಮದಿ ಪ್ರತ್ಯಾಹಾರದಿ
ಭ್ರಮಗೊಳಿಸುವ ಮನವ ನಿಲಿಸಿಧಾರಣೆಯನು-
ಪಮ ಸಮಾಧಿಯಲಿ ಹಂಮಮಯಂಬುವದು ಬಿಟ್ಟು ೧

ಪರಿಪರಿಶಾಸ್ತ್ರ ವೇದ ಪುರಾಣಗಳ
ತರತಮ ಭೇದಾಭೇದದರುವಿಗೆ ಸಾಕ್ಷಿಯಾ-
ಗಿರುವ ತತ್ವೇಶರ ಗುರುವೆನಿಸುವ ನಿನ್ನ
ಚರಣಕಮಲವರಿತು ೨

ಮದಮತ್ಸರಾದಿಗಳು ಕೂಡಿಯನ್ನನು
ಬಾಧಿಸುತಿಪ್ಪವು ಅನುದಿನವು
ಸದಮಲಾತ್ಮಕ ಶ್ರವಣ ಮನನಗಳರಿಯೆ ಮೋ-
ಹದ ಕೂಪದಲ್ಲಿ ಬಿದ್ದೆ ಗುರುರಾಮ ವಿಠಲನೆ ೩

೯೧

ಆವಾಹನೆ ಮಾಡಲಾನೇನು ಬಲ್ಲೆ
ಸರ್ವಾಂತರ್ಯಾಮಿ ನಿನಗೆ ಪ

ದೇವತಿರ್ಯಗ್ ಮನುಷ್ಯಾದಿ ಜಂತುಗಳಲ್ಲಿ
ದಿವಿಭುವಿ ಪಾತಾಳದೊಳ ಹೊರಗಿರುವಗೆ ಅ.ಪ

ಪ್ರಾಣ ಪ್ರತಿಷ್ಠೆಗೋಳಕತ್ರಯ ಚಿಂತನೆ
ಏನು ಬೃಹತಿನಾಮಗೆ
ನೀನೆ ಕರುಣದಿ ಮನ್ಮಾನಸದೊಳು ಪೊಳ-
ದೇನೇನು ಮಾಡಿಸಲದು ನಿನಗರ್ಪಿತ ೧

ಅಣುವಿನೊಳಣುವಾಗಿ ಮಹತ್ತಿನೊಳ್ಮಹತ್ತಾಗಿ
ಗುಣನಿಧಿ ತುಂಬಿರುವೆ
ಎಣಿಸಲೆನ್ನಳವೆ ನಿನ್ನಯ ಮಹಾಮಹಿಮೆಯ
ವಿನುತಿಸುವುದು ಕೊನೆಗಾಣದೆ ಶೃತಿ ತತಿ ೨

ಶ್ವೇತದ್ವೀಪಾನಂತಾಸನ ವೈಕುಂಠ ಆ-
ದಿತ್ಯ ಮಂಡಲ ಮಧ್ಯಗ
ಪ್ರೀತಿಯಿಂದಲಿ ನಿನ್ನ ಭಜಿಸುತಿರುವ ಭಕ್ತ-
ವ್ರಾತವ ಸಲಹುವ ಗುರುರಾಮವಿಠಲನೆ ೩

೬೨

ಸಿಂಹಾಸನವಿದೆ ಸ್ವೀಕರಿಸೈ ನರ
ಸಿಂಹ ರಮಾರಮಣ ಪ

ಬ್ರಂಹ್ಮಾದ್ಯಮರವಿನುತ ಪಾದಪರ
ಬ್ರಂಹ್ಮನಿನಗೆ ಮನ್ಮಾನಸವೆಂಬುವ ಅ.ಪ.

ದಾರುಲೋಹಮಯ ಪೀಠಗಳೀವುದು
ತರವೆ ನಿನಗೆ ಸ್ವಾಮಿ
ಕಾರುಣ್ಯನಿಧಿಯಚಿಂತ್ಯ ಮಹಿಮಭವ
ವಾರಿಧಿತಾರಕನಾಮ ರತ್ನಮಯ ೧

ಸಿರಿದೇವಿಯು ನಿನ್ನರ್ಚನೆಗೈವಡ
ಶಕ್ತಳಾಗಿರುವಳು
ಸ್ವರಮಣ ಸರ್ವಾಂತರ್ಯಾಮಿ ಪರಾ–
ತ್ಪರ ಮುಕುಂದ ರತ್ನಮಯ ಮಣಿಖಚಿತ ೨

ಏಕಚಿತ್ತದಲಿ ನಿನ್ನ ಭಜಿಪರಿಗೆ ಅ–
ನೇಕ ಸುಖಗಳೀವೆ
ನಾ ಕೇಶನುತ ಗುರುರಾಮ ವಿಠಲ ನಮೋ
ಸ್ವೀಕರಿಸೈ ರತ್ನಮಯ ಮಣಿ ಖಚಿತ ೩

೯೩

ಪಾದ್ಯವಾನು ಕೊಡುವುದು ಹ್ಯಾಗೆ
ಪರಮಪುರುಷ ನಿನಗೆ ಪ

ಅನಾದ್ಯನಂತ ಕಾರಣ ಸರ್ವತ್ರ ತುಂಬಿರುವಗೆ ಅ.ಪ

ಬಲಿಯ ದಾನವ ಬೇಡುವ ಕಾಲದಿ
ನೆಲನಯೀರಡಿಯ ಗೈದು
ತಳತಳಿಸುವ ದಿವ್ಯ ಪದದಿ
ಚೆಲುವ ಗಂಗೆಯ ಪಡೆದವನಿಗೆ ೧

ಅನೇಕ ಪಾದಗಳೆಂದು ನಿನ್ನ
ಅನುತಿಹವು ಶ್ರುತಿ ತತಿಗಳು
ಅವಧಿಕಾರಿಯಾದ ಮೂಢ
ನಾನು ಅಲ್ಪಮತಿಯು ಸ್ವಾಮಿಯೇ ೨

ಮೌನಿ ಸತಿಯಳ ಶಾಪ ಬಿಡಿಸಿದ ಪಾದಕ್ಕೆ
ಮೌನಿಗಳಿಗಾಧಾರವಾದ ಪಾದಕ್ಕೆ
ವನಜದಳವ ಪೋಲ್ವ ಚೆಲುವ ಪಾದಕ್ಕೆ
ದನುಜರಿಪು ಗುರುರಾಮ ವಿಠಲ ಪಾದಕ್ಕೆ ೩

೯೪

ಅರ್ಘ್ಯವರ್ಘವಿದುವೆ ನಿನ್ನ ಅಭಯ ಹಸ್ತಕೆ ಪ

ಭಾರ್ಗವೀ ಮನೋಹರಾಪ ವರ್ಗದಾಯಕ ಅ.ಪ

ಸಿರಿಯು ಮುಡಿಯೊಳೊಪ್ಪುವ ಹಸ್ತಕೆ
ಸಿರಿಕರವಾದ ದಿವ್ಯಹಸ್ತಕೆ
ಅರುಣಜನ ನೇವರಿಸಿದ ಹಸ್ತಕೆ
ಪರಮ ಕೋದಂಡ ಪಿಡಿದ ಹಸ್ತಕೆ ೧

ವರಕುಚೇಲನವಲನು ಬಹು–
ತ್ವರದಿ ಚಾಚಿ ಬೇಡಿದ ಹಸ್ತಕೆ
ತರುಣಿದ್ರುಪದ ತನಯಳ ಶಾ–
ಕಾನ್ನವಾಂತ ದಿವ್ಯ ಹಸ್ತಕೆ ೨

ದಧಿಭಾಂಡವಡದೆಶೋದೆಗೆ
ಮುದವ ತೋರಿದ ಮುದ್ದು ಹಸ್ತಕೆ
ಅದುಭುತ ಗುರುರಾಮವಿಠಲ
ಅಪ್ರಮೇಯ ನಿನ್ನ ಹಸ್ತಕೆ ೩

೯೫

ಆಚಮನವ ಮಾಡು ನಿಗಮ ಗೋಚರ ಸಿರಿರಮಣಾ ಪ

ವಾಚಾಮಗೋಚರ ಕಂಜ ಲೋಚನ ಗುಣ ಪೂರ್ಣಾ ಅ.ಪ

ಪರಮ ಪವಿತ್ರ ಸಕಲಗುಣಭರಿತ ಜಗತ್ಪ್ರಭುವೇ
ನರಸುರ ಗರುಡೊರಗ ಕಿನ್ನರರೊಳು ನೀನಿರುವೆ ೧

ಪಾವನ ಸುಜನಾ ವನಜಗ ಜೀವನ ಮಮಸ್ವಾಮಿ
ಸಾವಧಾನದೊಳೆನ್ನ ಮೊರೆ ಕೇಳ್ ಸರ್ವಾಂತರ್ಯಾಮಿ ೨

ಸ್ಮರಣೆ ಮಾಳ್ಪರಘವ ಕಳೆವ ಬಿರುದು ಕಟ್ಟಿಹೆ ನೀನು
ಗುರುರಾಮ ವಿಠಲ ನಿಜ ಭಕ್ತರಿಗೆ ಕಾಮಧೇನು ೩

೯೬

ಸ್ನಾನಾ ಮಾಡೈಯ ಸರ್ವಾಧಾರಾ ಪ

ಜಾನಕೀವಲ್ಲಭ ನೀನೆ ನಿರ್ಮಲ ಮೂರ್ತಿ ಅ.ಪ

ಸ್ಮರಿಸಿದ ಮಾತ್ರದಿ ಪರಿಶುದ್ಧ ಮಾಳ್ಪೆನೆಂ
ದುರುತರ ಶೃತಿಗಳು ಪೊಗಳುತಿಹವು ನಿನ್ನ ೧

ಕ್ಷೀರದದಾಜ್ಯ ಮಧುಶರ್ಕರ ಫಲಗಳಿಂ
ನಾರಿಕೇಳೋದಕದಿಂದ ಪಂಚಾಮೃತ ೨

ಗಂಗೆ ಗೋದಾವರಿ ಯಮುನೆ ಸರಸ್ವತಿ
ತುಂಗ ನರ್ಮದ ಸಿಂಧು ಕಾವೇರಿ ಜಲಗಳಿಂ ೩

ಪರಿಮಳ ಪುನಗು ಕೇಸರಿ ಕರ್ಪೂರ ಕಸ್ತೂರಿ
ಪರಮದ್ರವ್ಯವು ನವರತ್ನ ಮುತ್ತುಗಳಿಂದ ೪

ಸಾಗರಶಯನ ಸರ್ವಾಗಮವೇದ್ಯನೆ
ಭಾಗವತಪ್ರಿಯ ಗುರುರಾಮವಿಠಲನೆ ೫

೯೭

ವಸ್ತ್ರಗಳನರ್ಪಿಸುವೆ ವಾರಿಜನಾಭ ಪ

ಹಸ್ತಿರಾಜ ವರದ ನೀಲಘನನಾಭ ಅ.ಪ

ವರಪೀತಾಂಬರ ಧರಿಸಿರುವವನೆ
ತರುಣಿಗೆ ಅಕ್ಷಯಾಂಬರಗಳಿತ್ತವನೆ ೧

ಬ್ರಹ್ಮಾಂಡ ಶರೀರನೆ ಬ್ರಹ್ಮನ ಪೆತ್ತವನೆ
ಬ್ರಹ್ಮಸ್ವರೂಪನೆ ಬ್ರಾಹ್ಮಣ ಪ್ರೀಯನೆ ೨

ನೀನಿತ್ತುದೆಲ್ಲವು ನಿನಗೆ ಸಮರ್ಪಿಸುವ
ಧ್ಯಾನವಂದೇ ಪಾಲಿಸು ಗುರುರಾಮ ವಿಠಲಾ ೩

೯೮

ಯಜ್ಞೋಪವೀತವೀವೆನೊ ನಿನಗೆ ಸ್ವಾಮಿ ಪ

ಯಜ್ಞಪುರಷ ಮುನಿ ಯಜ್ಞಪಾಲಕನಿಗೆ ಅ.ಪ

ಅಜ್ಞಮನೋರಥನು ನಾನು । ಕಿಂ
ಚಿಜ್ಞನೆಂದಿಗು ನಿನ್ನ ಪೊಂದಿದೆನು
ಸುಜ್ಞಾನವೆಂಬುದು ಸ್ವಪ್ನದೊಳರಿಯೆ । ಸ
ರ್ವಜ್ಞ ನಿನ್ನವನೆಂದು ವಿಜ್ಞಾನ ಪಾಲಿಸು ೧

ಸಾಧು ಜನಪ್ರಿಯ ಸರೋಜಾಕ್ಷ ಪೂರ್ಣ
ಬೊಧಾಮೃತ ಮಯದಿವಿಜ ಪಕ್ಷಾ
ಕಾದುಕೊಂಡಿರುವೆ ಅನಾದಿಯಿಂದಲಿ ನಮ್ಮ ನಿ–
ರಾದರಣೆ ಮಾಡದೆ ನೀ ದಯದಿಂದ ಸಲಹೊ ೨

ಮುಕುತಿದಾಯಕ ದೇವಾಧಿದೇವಾ ನಿಜ
ಭಕುತ ಜನರಿಗೆ ನೀನೇ ಸಂಜೀವಾ । ಆ
ಯುಕುತ ಮಾತುಗಳಿದಲ್ಲ ವೇದಾಂತ ರಹಸ್ಯ
ಸಕಲಾಧಾರನೆ ಶ್ರೀ ಗುರುರಾಮವಿಠಲ ೩

೯೯

ಆಭರಣಗಳರ್ಪಿಸುವೆನು ಶೋಭನ ಚರಿತಾ ಪ

ಮಹಾಭಾಗ್ಯಪ್ರದೆ ನಿನ್ನರಸಿ ಯುಗುಣಭರಿತಾ ಅ.ಪ

ಪದನೂಪುರಗಳು ಘಂಟೆ ನಿನದದುಡಿದಾರಾ
ಉದರವು ಪರಿಯಂತ ವೈಜಯಂತಿಯ ಹಾರ
ವಿಧವಿಧಕರ ಕಂಕಣ ಹತ್ತು ಬೆರಳಿಗುಂಗೂರಾ
ಹೃದಯದಿ ಕೌಸ್ತುಭ ಶ್ರೀ ವತ್ಸದ ಶೃಂಗಾರಾ ೧

ಹೊಳೆಯುವ ಭುಜಕೀರ್ತಿಯು ಕುಂಡಲ ಕರ್ಣದಲ್ಲಿ
ತುಳಸಿಯ ವನಮಾಲೆ ಶೋಭಿಪುದು ಕಂಠದಲೀ
ಥಳಥಳಿಪುದು ರವಿಯಂತೆ ಕಿರೀಟಶಿರದಲ್ಲಿ
ಬೆಳಗುವ ತೇಜೋಮಯ ಗಾನಾವದು ಕೊಡಲಿ ೨

ಸ್ಮರ ಶತ ಸುಂದರ ವಿಗ್ರಹ ಕರುಣಾಕರನೇ
ಸರಸಿಜಭವ ಜನಕ ಪರಾತ್ಪರ ಮಾಧವನೆ
ಶರದಿಂದುನಿಭಾನನ ಸರ್ವತ್ರಕಾಶನೇ
ಗುರುರಾಮ ವಿಠಲ ಹರಿ ಸರ್ವೋತ್ತಮನೇ ೩

೧೦೦

ಗಂಧವಿದೇಭವ ಬಂಧ ವಿಮೋಚನ ಗರುಡ
ಗಮನ ಕೃಷ್ಣಾ ಪ

ಇಂದಿರೇಯರಸ ಮುಕುಂದ ಮೂಜಗಕ್ಕೆ
ತಂದೆತಾಯಿ ನೀನೇ । ಶ್ರೀರಾಮಾ ಅ.ಪ

ವಾಸನೆ ಪರಿಮಳ ಗಂಧ ಕರ್ಪೂರ
ಕೇಸರಿ ಪುನಗುಗಳೂ
ನೀಸತಿ ಸಹಿತ ಸದಾ ಲೇಪಿತ ಶ್ರೀನಿ-
ವಾಸ ಸುಗುಣಧಾಮಾ । ಶ್ರೀ ರಾಮ ೧

ಸ್ಫುರಿಪಲಲಾಟದೊಳೂರ್ಧ್ವ ಪುಂಡ್ರಕ-
ಸ್ತುರಿತಿಲಕವು ಬೆಳಗೇ
ಹರಿದ್ರಾ ಕುಂಕುಮ ಮಂಗಲ ದ್ರವ್ಯ ನಿನ್ನ
ಅರಸಿ ಜಾನಕಿ ದೇವಿಗೇ । ಶ್ರೀರಾಮ ೨

ಕ್ಷತೆಯಿಲ್ಲದವನು ನೀನೆಂಬುವದ-
ಕ್ಷತೆ ನಿನದಿದೊ ದೇವಾ
ಪತಿತ ಪಾವನ ಗುರುರಾಮವಿಠಲ ಜಗ
ತ್ಪತಿ ಮಹಾನುಭಾವಾ । ಶ್ರೀರಾಮ ೩

೧೦೧

ಪೂಜಿಸ ಬಲ್ಲೆನೆ ನಾನು ನಿನ್ನಂಘ್ರಿಯ
ರಾಜೀವದಳ ನಯನ ಪ

ರಾಜರಾಜಾನುಜ ಭಂಜನ ಭವ ದೂರ
ರಾಮಚಂದ್ರ ಸೀತಾ ಹೃತ್ಕುಮುದ ಚಂದ್ರ ಅ.ಪ

ಪಾರಿಜಾತ ಪುನ್ನಾಗ ಬಕುಳ ಮಂ-
ದಾರ ಮಲ್ಲಿಕ ಕೇತಕೀ-
ಸಾರಸ ಜಾಜಿ ಚಂಪಕ ತುಳಸಿಯುಕರ-
ವೀರವೇ ಮೊದಲಾದ ದಿವ್ಯ ಪುಷ್ಪಗಳಿಂದ ೧

ವಿಶ್ವಾದಿ ಸಾಹಸ್ರನಾಮಂಗಳಿಂ ನಿನ್ನ
ಶಾಶ್ವದ್ರೂಪವ ತಿಳಿದು
ಅಶ್ವಮುಖಾನಂದಮಯ ಪರಮಾತ್ಮ ನಿ-
ನ್ನರ್ಚಿಸುವಡೆ ಚಪಲ ಚಿತ್ತಗೆ ಸಾಧ್ಯವೆ ೨

ಮೇರು ಸಿಂಹಾಸನ ಸೂರ್ಯ ಚಂದ್ರರು ದೀಪ
ನೀರೆಲ್ಲ ಅಭಿಷೇಕವೂ
ತೋರೂವದಿಗ್ವಸ್ತ್ರ ಪೃಥ್ವಿಗಂಧವು ಸರ್ವ
ಸಾರ ಭೋಕ್ತಗೆ ಗುಣಗಳ ತಾಂಬೂಲಾದಿಗಳಿಂದ ೩

ಹೃದಯ ಕಮಲ ನಿನ್ನ ಸದನ ಹಂಸಾಖ್ಯ ಕು-
ಡಿದ ನೀರು ಅಭಿಷೇಕವೂ
ಮುದದಿ ನಿತ್ಯದಿ ಉಂಬುವುದೆ ನೈವೇದ್ಯವು ಪ್ರತಿ
ಪದ ಪ್ರದಕ್ಷಣೆ ಮಲಗುವದೆ ವಂದನೆಯೆಂದು ೪

ಒಂದು ಅರಿಯದ ಉಭಯಾಂಧನು ನಾನು ಗೋ-
ವಿಂದ ನಿನ್ನಯ ಭಕ್ತಾರಾ
ಸಂದೋಹದೊಳಗಿಟ್ಟೆನ್ನರ್ಚನೆ ಕೈಕೊಂಡು
ತಂದೆ ಪಾಲಿಸೋ ಗುರುರಾಮ ವಿಠಲ ಸ್ವಾಮಿ ೫

೧೦೨

ಧೂಪವಾಘ್ರಾಣಿಸೋ ದುರಿತ ವಿದೂರ ಪ

ತಾಪಸ ಪ್ರಿಯ ನಿಜದಾಸ ಮಂದಾರಾ ಅ.ಪ

ನಾ ಸತ್ಯರೊಳಭಿಮಾನಿಯಾಗಿದ್ದು ಸಕಲ
ವಾಸನೆಗಳ ಕೊಂಡು ಎಲ್ಲ ಜೀವರ ಅಭಿ-
ಲಾಷೆಗಳರಿತು ಸುಖಗಳೀವುತ ಸರ್ವಾ-
ವಾಸನಾಗಿಹ ಇಂದಿರೇಶ ಕೃಪಾಳೊ ೧

ಸತತವು ಕಪಿಲಾ ಘೃತ ಶ್ರೀಚಂದನ
ಯುತ ಗುಗ್ಗುಳ ಸಂಮಿಳಿತ ಕೃಷ್ಣಾಗರು ಮಿ-
ಶ್ರೀತ ಧೂಪವ ಶ್ರೀಸಹಿತನಾಗಿ ನೀ ಕೈಕೊ-
ಳ್ಳುತ ಭಕ್ತರಿಗೀಪ್ಸಿತ ವರವೀವನೆ ೨

ವಾಸನೆಯರಿತು ಸರ್ವಭೂತದಲಿ ನಿ-
ವಾಸಮಾಡುತ ಕರ್ಮಫಲಗಳ ನೀವ
ವಾಸುದೇವನಿಗೆ ಸುವಾಸನೆಯಾವದು
ವಾಸುಕಿ ಶಯನ ಶ್ರೀಗುರುರಾಮ ವಿಠಲಾ ೩

೧೦೩

ಏಕಾರತಿ ನೋಡ್ಯೆ ಜಗದೇಕನಾಥ ಪ

ನಾಕೊಡುವೆನು ತ್ರಿಲೋ ಕೈಕ ರಕ್ಷಕ ಸ್ವಾಮಿ ಅ.ಪ

ಘೃತವರ್ತಿತ್ರಯ ವಂಹ್ನಿಯುತವಾದ ಮಂಗಳಾ-
ರತಿಯ ಸ್ವೀಕರಿಸು ಶ್ರೀಪತಿ ಪುರುಷೋತ್ತಮ ೧

ಮೂರುಲೋಕದ ಅಂಧಕಾರಾ ಪರಿಹರಗೈವ
ಘೋರಾನರಕ ತ್ರಾತ ದಿವ್ಯ ಜ್ಯೋತಿ ರೂಪನೆ ೨

ದ್ವಾದಶ ಸ್ತೋತ್ರ ಪ್ರತಿಪಾದಕ ಮಧ್ವಮುನಿಗೆ
ಮೋದವಿತ್ತೆಂಥಾ ಗುರುರಾಮ ವಿಠಲ ತಂದೆ ೩

೧೦೪

ಭೋಜನ ಮಾಡೈಯ ಶ್ರೀರಾಮಚಂದ್ರ ಪ

ರಾಜೀವಾನಯನ ಸ್ವರಾಜಾನುಜ ಮಹಾ
ರಾಜ ವಂದಿತ ರಾಜಾರಾಜ ಸಖಾರ್ಚಿತ ಅ.ಪ

ಉಪ್ಪು ಉಪ್ಪಿನಕಾಯಿ ಪಚ್ಚಡಿಗಳು ಗೊಜ್ಜು
ಹಪ್ಪಳ ಸಂಡಿಗೆ ಶಾಖಗಳೂ
ಒಪ್ಪುವ ರಸ ಕೂಟು ಹುಳಿ ಫಳಿದ್ಯವು ಸೂಪ
ತುಪ್ಪ ಶಾಲ್ಯೋದನ ಚಿತ್ರಾನ್ನಗಳನ್ನು ೧

ಹೊರೀಗೆ ಶಷ್ಕುಲಿ ಹೋಳಿಗೆ ಕಡುಬು ಮು–
ಚ್ಚೋರೆಯು ಅತಿರಸ ಹೊಯಗಡಬೂ
ಕೀರುಆಂಬೊಡೆ ಬೋಂಡ ಶಾವೀಗೆ ಹುಳಿದೋಸೆ
ಕ್ಷೀರ ಶರ್ಕರ ಜೇನು ತುಪ್ಪವೆ ಮೊದಲಾಗಿ ೨

ಮಂಡೀಗೆ ಲಾಡು ಚಿರೋಟಿ ಘೀವರು ಪೇಣಿ
ಬೆಂಡು ಸೋಮಾಶಿಬತ್ತಾಸು ಫೇಡಾ
ಖಂಡ ಶರ್ಖರೆ ಕಬ್ಬು ಖರ್ಜೂರ ದ್ರಾಕ್ಷಿಗ–
ಳುಂಡು ತ್ರಿಲೋಕಳುದ್ಧರಿಸುವ ಸ್ವಾಮಿ ೩

ಪನಸು ಜಂಬೂ ಕದಳಿನಾರಂಗ ಎಳನೀರು
ಪಾನಕ ತಕ್ರಬೆಣ್ಣೆಯು ಮೊಸರೂ
ಅನುವಾದ ಸ್ವಾದೋದಕ ಮೊದಲಾಗಿ ಶ್ರೀ
ಯರ್ಪಿಸುವಳು ಭಕ್ತಿಯಿಂದಾ ಕೈಕೊಂಡು ನೀ ೪

ನಿತ್ಯತೃಪ್ತ ನಿರಾಮಯಗೆ ನಿರಂತರ
ಸತ್ವರಜಸ್ತಮೊಗುಣಗಳೆಂಬ

ಸತ್ಯತಾಂಬೂಲ ವರ್ಪಿಸಲು ಯಥಾಶಕ್ತಿ
ವಿತ್ತಸಮೇತವಾದಿದನು ಕೈಕೊಂಡು ನೀ ೫

ಪೂಗಲವಂಗ ಜಾಜಿಕಾಯಿ ಏಲಕ್ಕಿ
ನಾಗವಲ್ಲಿ ದಳಗಳು ಸಹಿತ
ಭೋಗದ್ರವ್ಯವು ಮುಕ್ತಚೂರ್ಣ ದಕ್ಷಿಣೆ ಸಹ
ಈಗ ತಾಂಬೂಲ ವೊಪ್ಪಿಸಲು ಕೈಕೊಂಡು ನೀ ೬

ನವ್ಯ ಸುಗಂಧ ಪುನರ್ಧೂಪವರ್ಪಿಸಿ
ಕಾವ್ಯನಾಟಕ ಸ್ತುತಿ ಕಥೆಗಳಿಂದ
ಸೇವ್ಯಸೇವಕನಾಗಿ ಸೇವೆ ಕೈಕೊಳ್ಳೆಂದು
ಭವ್ಯಚರಿತ ನಿನ್ನ ಪೊಗಳುತ್ತ ಕುಣಿವರು ೭

ಅವ್ಯಯಾನಂತ ಜಗದ ಬದುಕು ನೀನೆಂದು
ಸೇವ್ಯಸೇವಕನಾಗಿರುವೆ ಎಂದು
ಭವ್ಯಚರಿತ್ರರು ಪೊಗಳುವರ್ರೆ ನಿನ್ನ
ಸವ್ಯಸಾಚಿಯ ಸೂತ ಗುರುರಾಮ ವಿಠಲನೆ ೮

೧೦೫

ಮಂಗಳಾರತಿ ಎತ್ತುವೆ ಮಾರಮಣಗೆ ಪ

ಅಂಗಜ ಜನಕ ಶುಭಾಂಗ ಶ್ರೀರಂಗಗೆ ಅ.ಪ

ಭೋಜ್ಯ ಸಾಮ್ರಾಜ್ಯ ವೈರಾಜ್ಯ ಸ್ವಾರಾಜ್ಯ ಮಹ
ರಾಜ್ಯ ಪರಮೇಷ್ಠಿ ರಾಷ್ಟ್ರ ಸಾರ್ವಭೌಮ ನೀನೆಂದು ೧

ವೇದೋಕ್ತ ಮಂತ್ರ ಪುಷ್ಪಾಂಜಲಿಯಿಂದ ನಿನ್ನಯ
ಪಾದಕ್ಕೆರಗಿ ಪುನಃ ಪ್ರಾರ್ಥನೆಗೆಯ್ಯುತ ೨

ಪಾಪಿಗಳೊಳಗತಿ ಪಾಪಿಯು ನಾನೆನ್ನ
ತಾಪತ್ರಯವ ಬಿಡಿಸಿ ಕಾಪಾಡು ನೀನೆಂದು ೩

ಪದಜಾನುಕರಗಳಿಂ ಉದರ ಹೃದಯದಿ ಶಿ–
ರದಿ ದೃಷ್ಟ್ಯಮನಸವಚನಸಾಷ್ಟಾಂಗದಿಂ ಮಣಿದು ೪

ದರ್ಪಣ ನೋಡು ಕಂದರ್ಪ ಕೋಟಿ ಲಾವಣ್ಯ
ಸರ್ಪಶಯನ ನಮ್ಮಪ್ಪಾ ತಿಮ್ಮಪ್ಪನೆಂದು ೫

ಛತ್ರಚಾಮರ ಗೀತೆ ನೃತ್ಯವಾದ್ಯ ವಾಹನ
ವಸ್ತೂಗಳರ್ಪಿಸಿ ಸರ್ವೋತ್ತಮ ನೀನೆಂದ್ಹೊಗಳಿ ೬

ಅಪರಾಧವೆಮ್ಮಿಂದಲಾಗುವುದೆಲ್ಲ ಕ್ಷಮಿಸು
ಕಪಟನಾಟಕ ಸೂತ್ರಧಾರೀ ಗುರುರಾಮವಿಠಲ ೭

೧೦೬

ಮಂಗಳಂ ಸೀತಾಮನೋಹರ ಪ

ಮಂಗಳಂ ಜಗದೇಕ ಸುಂದರ ಅ.ಪ

ಮಂಗಳಂ ವಿಧಿರುದ್ರಮುಖ ಸುರವಿನುತ ಪದಯುಗಳ
ಮಂಗಳಂ ಸೂರ್ಯ ಕುಲಭೂಷಣ
ಮಂಗಳಂ ಮರುತಾತ್ಮಜ ಪ್ರಿಯ ಮಂಗಳಂ
ಮಂಗಳಾರತಿಯು ಗುರುರಾಮ ವಿಠಲಗೆ
ಪರಾತ್ಪರಾನಂತ ಗುಣಾರ್ಣವ ಪ್ರಭೋ
ಅಜೇಶವಂದ್ಯಾಮಲ ಪಾದ ಪಂಕಜ
ಸರೋಜಮಿತ್ರಾನ್ವಯ ಪೂರ್ಣ ಚಂದ್ರಮಾ
ನಮಾಮ್ಯಹಂ ತೇ ಗುರುರಾಮವಿಠ್ಠಲ

೧೦೭

ನಿನಗೆ ನಿನ್ನ ನಾಮ ಗುಣಗಳಿಂದರ್ಚನೆ ಗೈವೆನು ಸ್ವಾಮಿ ಪ

ಎನಗೊಂದು ಪದಾರ್ಥವು ದೊರೆಯದು
ಮನ್ಮನದಿ ನೀನೆ ನಿಂತು ಮಾಡಿಸನುದಿನಾ ಅ.ಪ

ಧೇನುಸುವೆನು ವಾಙ್ಮಯನೆನ್ನುತ ಜೀವ ದೇವ ನಿನ್ನಾ
ನಾನಾ ದಿವ್ಯ ಸ್ವರೂಪನೆನ್ನುತಾವಾಹನೆಯನುಗೈವೆ
ಶ್ರೀನಾಥಗೆ ರತ್ನಮಯ ಮಣಿಖಚಿತ ಸಿಂಹಾಸನವೀವೆ
ಗಾನಲೋಲ ಗಂಗಾಜನಕನು ಎಂದಾನು ಪಾದ್ಯವನು
ಸಮರ್ಪಣೆ ಮಾಳ್ಪೆನು ೧

ಶರಣರಿಗಭಯವ ಕೊಡುವನೆಂದು ಅರ್ಘ್ಯಗಳ ಸಮರ್ಪಿಸುವೆನು
ಪರಮ ಪವಿತ್ರನು ನೀನೆನ್ನುತಲಾಚಮನ ಮಾಡಿಸುವೆನು
ಪರಿಶುದ್ಧಗೆ ಪಂಚಾಮೃತ ಶುದ್ಧೋದಕಗಳ ನಾ ಕೊಡುವೆ
ವರ ಪೀತಾಂಬರ ಧರಿಸಿರುವವನಿಗೆ ವಸ್ತ್ರಯುಗ್ಮವ
ಸಮರ್ಪಣೆಗೈವೆನು ೨

ಜನಿವಾರವ ಯಜ್ಞಪುರಷ ನೀನೆಂದನವರತವು ಕೊಡುವೆ
ಘನ ತೇಜೋಮಯ ರೂಪಗಾಭರಣಗಳಲಂಕರಿಸುವೆನು
ಹನುಮತ್ಪ್ರಿಯನಿಗೆ ದಿವ್ಯ ಚಂದನಾಕ್ಷತೆಗಳ ಧರಿಸುವೆನೂ
ವನಜಾಕ್ಷಗೆ ದಿವ್ಯ ತುಳಸಿ ಪುಷ್ಪಗಳನು ಸಮರ್ಪಣೆಯಗೈವೆನು
ಮುದದಲಿ ೩

ಭಕ್ತವತ್ಸಲನು ನೀನೆನ್ನುತ ಧೂಪವನೀವೆನು ಸ್ವಾಮಿ
ಭಕ್ತಿಯಿಂದ ದೀಪವ ಕೊಡುವೆನು ಭವ
ಭಯಹರ ನೀನೆಂದೂ
ನಿತ್ಯತೃಪ್ತಗೆ ಮಹಾ ನೈವೇದ್ಯ ತಾಂಬೂಲವನೀವೆ
ಶಕ್ತನು ಸರ್ವೋತ್ತಮ ನೀನೆನ್ನುತ ಉತ್ತರ
ನೀರಾಜನವರ್ಪಿಸುವೆನು ೪

ಸರಸಿಜಭವಪಿತನೆಂದು ಮಂತ್ರಪುಷ್ಪಗಳ ಸಮರ್ಪಿಸುವೆ
ಸರ್ವೋತ್ತಮ ನೀನೆಂದು ಪ್ರದಕ್ಷಿಣೆ ನಮಸ್ಕಾರವ ಗೈವೆ
ಪರಮಪುರಷವೆನ್ನುತಲಿ ಪುನಃ ಪೂಜೆಯ ಮಾಳ್ಪೆನು ನಿನಗೆ
ಗುರುರಾಮವಿಠಲ ಎನ್ನಪರಾಧಗಳೆಣಿಸದೆ ನಿನ್ನವರಡಿ
ಸೇವೆಯ ಕೊಡೊ ೫

ಮಹಾಲಕ್ಷ್ಮೀ

೧೦೮

ಎನ್ನ ಪಾಲಿಸೆ ಇಂದಿರಾದೇವಿ ಜ–
ಗನ್ನುತ ಚರಿತೆ ಭಕ್ತ ಸಂಜೀವಿ ಪ

ಸನ್ನುತಾಂಗಿಯೆ ದೀನ ಜನರಾಪನ್ನರಕ್ಷಕಳಲ್ಲವೇ ನೀ–
ನಿನ್ನುತಡಮಾಡದಲೆ ಬಂದು ಪ್ರಸನ್ನಳಾಗಿರು
ಕೃಪಾ ಕಟಾಕ್ಷದಿ ಅ.ಪ

ಕಮಲನಾಭನರಾಣಿ । ಕಲ್ಯಾಣಿ
ವಿಮಲರೂಪಳೆ ಪಂಕಜ ಪಾಣಿ
ಶಮದಮಾದಿ ಸುಖಂಗಳಿತ್ತೆಮ್ಮಮಿತದುರಿತಗಳೋಡಿಸಿ ಅಹಂ
ಮಮ ಎನಿಪ ಪಾಶವ ಬಿಡಿಸಿ ತವರಮಣನಡಿಗಳ
ಕ್ರಮದಿ ತೋರಿಸಿ ೧

ಎಷ್ಟೊ ಜನ್ಮಗಳೆತ್ತಿದೆನಮ್ಮಾ । ಬಲು
ಕಷ್ಟಕಾಡುತಿಹುದು ಕರ್ಮ
ಪೊಟ್ಟೆಗೋಸುಗ ತಿರುಗಿ ತಿರುಗೆಳ್ಳಷ್ಟು ಸುಖವನು ಕಾಣದೆ ಸಂ–
ತುಷ್ಟನಾಗದೆ ಬಳಲುವೆನು ಪರಮೇಷ್ಠಿ
ಜನಕನ ಪಟ್ಟದರಸಿಯೆ ೨

ಸಾಮಜಗಮನೆ ಸದ್ಗುಣರನ್ನೆ । ಕ್ಷೀರ –
ಸಾಗರಕನ್ನೆ ಸುಸಂಪನ್ನೆ
ನೀಮನವಲಿದು ಹೃದಯ ಕಮಲದಿ ನಿಂತು
ಕರುಣದಿ ನಿನ್ನಸಿರಿಪದ
ತಾಮರಸವನು ತೋರುವುದು ಗುರುರಾಮವಿಠಲನ
ಪ್ರಾಣನಾಯಕಿ ೩

೧೦೯

ಚಿತ್ತಾಭಿಮಾನಿ ಬಾರೆ ತ್ವಚ್ಚರಣಕಮಲ ತೋರೆ ಪ

ಭೃತ್ಯಾರ್ಥಕಾರಿಣಿ ನೀರೆ ಭುವನೈಕ ಸುಗುಣಧಾರೆ ಅ.ಪ

ಮಜ್ಜನನಿ ಎಂದು ನಿನ್ನೇ ಸಜ್ಜನರು ಪ್ರಾರ್ಥಿಸುವರ್ ಮುನ್ನೆ
ನಿರ್ಜರವರದೆ ಸಂಪನ್ನೆ ನಿಗಮಾಭಿಮಾನಿ ಪ್ರಸನ್ನೆ ೧

ಬುದ್ಧ್ಯಾದಿ ತತ್ವದೊಡೆಯರು ಭೃತ್ಯರು ನಿನಗೆನಿಸುವರು
ಬದ್ಧರು ನಿಮ್ಮನ್ನು ಬಿಟ್ಟು ದುರ್ಭವದಿ ಬೀಳ್ವರು ಕೆಟ್ಟು ೨

ನೀನೊಲಿದಮೇಲೆ ಭಯವೆ ಜ್ಞಾನಿಗಳಿಗೆಂದಿಗು ಜಯವೆ
ಜಾನಕಿ ನೀನೆ ಮಹಾಮಾಯೆ ಮನ್ಮಾನಸದೊಳಿರು ತಾಯೆ ೩

ಐಶ್ವರ್ಯಮದದಿ ಕೆಲರು ಈಶ್ವರಿ ನಿನ್ನನು ಮರೆಯುವರು
ಪಶ್ವಾದಿಗಳ ಸಮವವರೂ ನಿಸ್ವರಾಗಿಗತಿ ದೂರರಹರು ೪

ಸ್ವಾಮಿ ಜೀವೇಶ ತವ ಭರ್ತ ಕಾಮಿತ ಪ್ರದಾಯಕ ಪಾರ್ಥ–
ಸೂತನ ನಾಮ ಸ್ಮರಣೆ ಸ್ವಾರ್ಥ ಗುರುರಾಮ ವಿಠಲ ಕರ್ತ ೫

೧೧೦

ಪರದೇವತೆ ಪದ್ಮಾವತಿ ಶರಣಾಗತೋದ್ಧಾರಣೆ ಜನನಿ ಪ

ನಿರತವೂ ನಿನ್ನ ಚರಣ ಕಮಲ ನೆರೆನಂಬಿದೆ ಕರುಣಾವಾರಿಧೆ ಅ.ಪ

ವೇದಘೋಷೆಯಿಂದ ಉದಿಸಿ ಮೊದಲು ಶ್ರೀಧರನ
ಕೈಪಿಡಿವೆನೆನ್ನುತ
ಮೋದದಿಂದ ತಪವನಾಚರಿಸುತ ಮೂರ್ಖರಾವಣನಿಗೆ
ಶಾಪವಿತ್ತ ೧

ತಾವರೆಯೊಳು ಪುಟ್ಟಿ ಧಾತ್ರಿಯೊಳ್ ಜನಕ
ಭೂವರನಿಗೆ ಮಗಳೆನ್ನಿಸಿ
ದೇವದೇವರಾಮನ ವರಿಸುತ ದಿತಿಜರ ಸಂಹಾರ
ಮಾಡಿಸಿದಾ ೨

ಆಕಾಶ ನೃಪತಿಗಾತ್ಮಜೆಯಾಗಿ ಬೇಕಾದ ವರಗಳ ಭಕ್ತರಿಗೀವುತ
ಲೋಕವರಿಯೆ ಪದ್ಮ ಸರಸಿಯೋಳ್ ನೆಲಸಿದೆ ಭೂಕಾಂತ
ಗುರುರಾಮವಿಠಲ ಅರಸಿ ೩

೧೧೧

ಪೂತ ಚರಿತೆ ಭೂಮಿಜಾತೆ ಸೀತಾದೇವಿಯೇ ಪ

ಪಾತಕಗಳ ಕಳೆದು ಯಮ್ಮನು ಪಾಲಿಸು ತಾಯೆ ಅ.ಪ

ತಾವರೆಯೊಳಗುದಿಸಿ ಮೊದಲು
ದೇವ ವೈರಿಯ ಕೈಯಲಿ ಸೇರಿ
ಭೂವರ ಜನಕರಾಯಗೊಲಿದೌ
ಭೂವಿವರದೊಳಿಡಲು ಮಾಯದಿ ೧

ಶಿಶುಪಾಲಂಗೆ ಕೊಡಬೇಕೆನುತ
ಅಸುರ ರುಕ್ಮಿಯತ್ನಗೈಯಲು
ವಸುಧೆ ಸುರನಿಂದೋಲೆ ಕಳುಹಿಸಿ
ಬಿಸಜಾಕ್ಷ ಕೃಷ್ಣನೊಲಿಸಿ ಕೈಪಿಡಿದೆ ೨

ಶರಧಿರಾಜನ ಮಗಳೆ ಚಂದ್ರಸೋ
ದರಿ ಮಾಂ ಪಾಹಿ ಪರಾಶಕ್ತಿಯೆ
ಗುರುರಾಮ ವಿಠಲನರ್ಧಾಂಗಿ
ಕರುಣಿಸಮ್ಮ ಕೃಪಾ ಪಾಂಗಿ ೩

೧೧೨

ಬಾರಮ್ಮ ಭಾಗ್ಯನಿಧಿಯೆ । ಸಿರಿಯೆ ಪ

ಬಾರಮ್ಮ ನಿನ್ನ ಪಾದಾರವಿಂದ ತೋರಲು ಅ.ಪ

ಸರಸಿಜಾಕ್ಷನ ವಕ್ಷ ಮಂದಿರೆ
ಸರಸಿಜಾಸನ ಮಾತೆ ಇಂದಿರೆ
ಸರಸಿಮುದವೆರಸಿ ನಿನ್ನರಸನೊಡನೆನೀ ೧

ಸೀತಾರುಕ್ಮಿಣ್ಯಾದ್ಯವತಾರಿಣಿ ಬುಧ-
ವ್ರಾತ ಮನಃ ಪದ್ಮ ವಿಹಾರಿಣಿ
ಚೇತೋದ್ಭವ ಜನನೀ ಶ್ರೀತರುಣೀಮಣಿ ೨

ಬ್ರಹ್ಮರುದ್ರೇಂದ್ರಾದಿ ಸುರಸೇವಿತೆ
ಬ್ರಹ್ಮಾಣಿ ಗಿರಿಜಾ ಶಚೀವಂದಿತೆ ಪರ-
ಬ್ರಹ್ಮ ಗುರುರಾಮವಿಠಲನ ದಯಿತೆ ೩

೧೧೩

ಬಿಜಯಂಗೈವುದು ಹಸೆಗೀಗಾ ಪ

ಅಜಮುಖ ಸುರನುತೆ ಅಖಿಳಲೋಕೈಕ ಮಾತೆ ಅ.ಪ

ಸೃಷ್ಟಿ ಸ್ಥಿತಿ ಲಯಗಳಿಗಧಿಕಾರಿಯೆ
ಕೃಷ್ಣನ ಮೋಹದ ಪಟ್ಟದ ಜಾಯೆ
ಅಷ್ಟ ಸೌಭಗ್ಯಗಳ ಅಮರರಿಗೀವಳೆ ೧

ಶೃಂಗಾರ ಮಂಟಪದಿ ಅಂಗನೆಯರೆಲ್ಲರು
ಸಂಗೀತವ ಪಾಡಿ ಸರಸದಲಿ
ಮಂಗಳದೇವತೆ ಬಾರೆಂದು ಕರೆವರು ೨

ಸರಸ್ವತಿ ಭಾರತಿ ಗಿರಿರಾಜ ಸುತೆಯರು
ಅರುಂಧತಿ ಶಚಿ ಮುಖರ್ನೆರದಿಹರು
ಗುರುರಾಮವಿಠಲನ ತರುಣೀ ಮಣಿಯೆ ಬೇಗಾ ೩

೧೧೪

ಮಂಗಳಾಂಗಿ ಹಸೆಗೆ ಬಾರೆ ಮಾರ ಜನಕನ ನೀರೆ ಪ

ಗಂಗಾಧರನ ರಾಣಿ ವಾಣಿಯರ್ ಕರವ ಕೊಡಲು
ಹರುಷದಿಂದಾ ಅ.ಪ

ಕ್ಷೀರವಾರ್ಧಿತನಯೆಯೆಂದು ಸಾರಸಾಕ್ಷಿಯರು ಬಂದು
ಕೋರಿ ಭಜಿಸುವರು ನಿನ್ನ ಅಪಾರ ಮಹಿಮೆಗಳನು ೧

ಸುತ್ತ ಜ್ಯೋತಿಗಳ ಬೆಳಗಿ ಮುತ್ತೈದೆಯರೆಲ್ಲ ಕೂಡಿ
ಮುತ್ತು ಮಾಣಿಕ ಪೀಠವಿರಿಸಿ ಭಕ್ತಿಯಿಂದ ಪ್ರಾರ್ಥಿಸುವರು ೨

ಜನಕರಾಯನ ಕುಮಾರಿ ಸನಕಾದಿಯೋಗಿ ಜನಾಧಾರೀ
ದಿನಕರ ಕೋಟಿ ಪ್ರಕಾಶೆ ದಿವ್ಯಮಣಿಮಯ ಭೂಷೆ ೩

ಮಾನಸಾಬ್ಜ ಮಂಟಪದಲಿ ಧ್ಯಾನವೆಂಬೊ ಪೀಠದಲ್ಲಿ
ಜ್ಞಾನಿಶಕ್ತಿಗಳು ಪೊಗಳೆ ಸಾನುರಾಗದಿಂದಲೀಗಾ ೪

ನಿತ್ಯಸಂಪತ್ಪ್ರದಾಯಿನಿ ಭೃತ್ಯವತ್ಸಲೆ ಜನನೀ
ಸತ್ಯಸಂಕಲ್ಪ ಗುರುರಾಮ ವಿಠಲನ ಪಟ್ಟದರಾಣಿ ೫

೧೧೫

ಮಹಾಲಕ್ಷ್ಮಿದೇವಿ ಪ

ಆಹಾ ನಿನ್ನ ಮಹಿಮೆ ಹೊಗಳಲಳವೆ ಅ.ಪ

ಮೂಲ ಪ್ರಕೃತಿ ಮಹಾಮಾಯೆ ನಿನ್ನ
ಲೀಲೆಯಲ್ಲವೆ ಸಮಸ್ತವೂ
ಸಾಲದೆಂಬುವ ದುಸ್ವಭಾವ ಬಿಡಿಸಮ್ಮ ೧

ಕ್ಷೀರಸಾಗರಾತ್ಮಜೇ ಭಜೇ ಅಂ
ಭೋರುಹಾಕ್ಷನರ್ಧಾಂಗಿ
ಸಾರಸ ವೈರಿಯ ತಂಗಿ ಶುಭಾಂಗಿ ೨

ಚಿತ್ತ ಸ್ಥೈರ್ಯಾನ್ನವ ಭಕ್ತಜನಕೆ
ತುತ್ತುಮಾಡಿವುಣಿಸಮ್ಮ
ಮತ್ತಾರನು ಕಾಣೆಮ್ಮ ನಮ್ಮಮ್ಮ ೩

ತಾನೆ ಶ್ರೇಷ್ಟನೆಂಬ ಹೀನರ ಸಂಗವು
ಹಾನಿಯಾಗಿದೆ ವಿಚಾರಿಸೆ
ಜ್ಞಾನಿಗಳಿಗೆಯಿದು ಹಾಸ್ಯವಲ್ಲದೆ ೪

ನಿನ್ನ ಪತಿಯಾದ ಗುರುರಾಮ ವಿಠಲನ
ಘನ್ನ ಚಿತ್ತಗನುಸಾರ ಮನ್ನಿಸಿ ಕಾಯಿ ನೀ
ನೆನ್ನನು ನಿಜದೆ ಮಹಾಲಕ್ಷ್ಮಿದೇವಿ ೫

೧೧೬

ಯಾರು ಇಲ್ಲ ಎನಗೆ ನಿನ್ನ ಹೊರತು
ವಾರಿಜಾಲಯೆ ತಾಯೆ ಪ

ಘೋರತರ ಸಂಸಾರ ಮಡುವಿನ
ಪಾರತೋರೆ ಈಸಲಾರೆ ಅ.ಪ

ಈ ದೇಹದ ತಂದೆ ತಾಯ್ಗಳು ಪೋದರು ಮೊದಲೆ
ಆದರಿಸುವರಿನ್ಯಾರು ಕಾದುಕೋ ಕೈಬಿಡದಿರು ಕರುಣದಿ ೧

ಪಾರಂಪರ್ಯದಿ ಜೀವರು ನಿನಗೆ ಪುತ್ರರಲ್ಲವೆ
ಬಾರಿ ಬಾರಿಗೂ ಮೊರೆಯಿಡುವೆ ಭಕ್ತಾರ್ತಿಹಾರಿಣಿ ರುಕ್ಮಿಣಿ ೨

ಪಂಕಜಾಸನನ ಮಾತೆ ಪದ್ಮಸಂಭೂತೆ
ವೆಂಕಟರಮಣನ ರಾಣೀ ವಿಶ್ವಜನನೀ ವಿವಿಧ ರೂಪಿಣಿ ೩

ನಾನು ಎಂಬ ಅಭಿಮಾನದಿಂದ ಹೀನನಾದೆನು
ಆನಂದದಾಯಕೆ ನೀನು ಜಾನಕಿದೇವಿ ಕೈಬಿಡದಿರು ೪

ಅರಿತು ಅರಿಯದೆ ಮಾಡಿದ ದುರಿತವ ಕಳೆಯಮ್ಮ
ಪರದೇಶಿ ಅನಾಥ ನಾನು ಗುರುರಾಮ ವಿಠಲನರ್ಧಾಂಗಿಯೆ ೫

೧೧೭

ಶ್ರೀಜಾನಕಿದೇವಿ ನಿನ್ನ ನಾ ಧ್ಯಾನಿಪೆ ತಾಯಿ ಪ

ಸುಜ್ಞಾಪ್ರದೆಯೆನ್ನ ಮನೋಭೀಷ್ಟವನೀಯ್ಯೆ ಅ.ಪ

ಸಂಸಾರವಾರ್ಧಿಯೊಳಗೆ ಮುಳುಗಿ ಬಳಲುವೆನಮ್ಮ । ಇದು
ಪಾರುಗಾಣೋದೆಂದಿಗೊ ನಿನ್ನ ಪತಿಯ ಕೇಳಮ್ಮ ೧

ವಿಧಿ ಶಂಭು ಮುಖಾಮರ ವಿನುತ ಪದಾಂಬುಜಯುಗಳೆ
ಜಗದಂಬೆ ನಿನ್ನ ನಂಬಿದೆ ವಿಶ್ವಂಭರಪ್ರಿಯಳೆ ೨

ಸಾಮಜರಾಜವರದ ಶ್ರೀಗುರುರಾಮವಿಠಲನ । ಹೃ
ದ್ಧಾಮದಲ್ಲಿ ತೋರಿಸಿ ಪರಚಿಂತೆ ಬಿಡಿಸೆನ್ನ ೩

೧೧೮

ಶ್ರೀ ಮಹಾಲಕ್ಷಮ್ಮ ಬಾರಮ್ಮ ಪ

ಸಹಕಾರಿಯಾಗಿದ್ದು ಸಲಹುವೆ ಜಗವ ಅ.ಪ

ಜ್ಞಾನ ಭಕ್ತಿ ವೈರಾಗ್ಯಾನಂದಗಳ ಕೊಟ್ಟು
ಹೀನ ದುರ್ವಿಷಯ ಚಿಂತನೆ ಬಿಡಿಸಮ್ಮ ೧

ಸೀತೆ ಭೀಷ್ಮಕ ನೃಪಜಾತೆ ನಿನ್ನಯ ವಿ
ಖ್ಯಾತಿಯ ಪೊಗಳುವಡೆನ್ನಳವಹುದೆ? ೨

ಚಿತ್ತ ನಿಯಾಮಕೆ ಶ್ರೀ ಗುರುರಾಮ ವಿಠಲನ
ಪತ್ನಿ ಪಾಲಿಸು ಕ್ಷೀರ ರತ್ನಾಕರನ ಪುತ್ರಿ ೩

೧೧೯

ಸರೋಜಜಾತೆ ಜಗನ್ಮಾತೆ ಪಾಲಿಸು
ಜನಕಸುತೆ ಜನನಮರಣರಹಿತೆ ಪ

ಪರಂಪರದಿ ನಮ್ಮ ಪೊರೆದವಳಲ್ಲವೆ
ಬನ್ನಬಡಿಸುವುದೇ ನಮ್ಮ ಸೀತಮ್ಮ ಅ.ಪ

ಪತಿಹೃದಯನಿವಾಸಿನಿ ಸುವಾಸಿನಿ ಭ-
ವತ್ಪಾದಾಂಬುಜ ಭಜಿಸುವ ಜನರು
ಸತತವಿಹಪರದಿ ಸೌಖ್ಯ ಪಡುವರೆಂದು ಸಾ-
ರುತಿಹವು ಶೃತಿ ಸ್ಮೃತಿ ಪುರಾಣ ೧

ಭವ್ಯ ಚರಿತರಾದ ಬ್ರಹ್ಮಾದಿಗಳಿಗಳವೆ ನಿನ್ನ
ದಿವ್ಯಾಂಘ್ರಿ ದರ್ಶನವಾಗುವುದು
ಸೇವ್ಯನಾದ ಪತಿಚಿತ್ತಾನುಸಾರದಿ
ಜೀವನಿಕರವ ಕರುಣದಿ ನೋಡುವ ೨

ಸಿರಿಮಾಯೆ ಕೃತಿ ಶಾಂತಿ ರುಕ್ಮಿಣಿ ಲಕುಮಿ
ಸೀತೆ ಭೂಜಾತೆ ಗುಣವ್ರಾತೆ ಎನುತ
ನಿರುತವು ನೆನೆವರ ದುರಿತಗಳ ಕಳೆದು
ಗುರುರಾಮವಿಠಲನ ಚರಣವ ತೋರಿಸೆ ೩

೧೨೦

ಸೀತಾದೇವಿಯೆ ಶ್ರಿತ ಸಂಜೀವಿಯೆ ಪ

ಮಾತೆಯೆ ಪಾಲಿಸು ಮೊರೆಯನು ಲಾಲಿಸು ಅ.ಪ

ಜನಕರಾಯನ ಪುತ್ರಿ ಜಗದೇಕ ಪವಿತ್ರಿ
ಜನನಿ ಜನಯಿತ್ರಿ ಘನ ಶೋಭನ ಗಾತ್ರಿ ೧

ಸಜ್ಜನರ ಪೊರೆಯೆ ಬಾರೆ ಗೆಜ್ಜೆ ಪಾದವ ತೋರೆ
ದುರ್ಜನ ದೈತ್ಯವಿದಾರೆ ದೂರೀಕೃತ ಸಂಸಾರೆ ೨

ಸಮ್ಮತದೊಳಿರಿಸು ದುರ್ಮತವ ಬಿಡಿಸು ಸು ।
ಬ್ರಹ್ಮ ಜ್ಞಾನವ ಪಾಲಿಸು ಮರ್ಮವನು ಬೋಧಿಸು ೩

ಹನುಮನ ಸೇರಿದವ ನಾನು ತ್ವತ್‌ಪದ
ವನಜದ ಸೇವೆ ಸದಾ ಎನಗೀಯೆ ತಾಯೆ ೪

ಕಲುಷ ಪರಿಹಾರಿಣಿ ಕಮಲಪಾಣಿ ರುಕ್ಮಣಿ
ಜಲಜಾಕ್ಷ ಗುರುರಾಮ ವಿಠಲನ ಪಟ್ಟದ ರಾಣಿ ೫

೧೨೧

ಹಸೆಗೆ ಬಾರೆ ಸುಂದರಿ ಓ ಪ

ಬಿಸಜಾಲಯೆ ಜನಕ ಕುಮಾರಿ ಅ.ಪ

ಮುತ್ತು ಮಾಣಿಕದ ಪೀಠವಂ
ಭಕ್ತಿಯಿಂದ ಅಲಂಕರಿಸಿ ಮಿತ್ರೆಯರೆಲ್ಲರು ಕರೆವರು ೧

ಸುತ್ತ ಜ್ಯೋತಿಯು ಬೆಳಗಲು
ಮತ್ತೆ ಮೆಲ್ಲಡಿಯಿಡುತಲಿ ಓ ಬಿಸಜಾಲಯೆ ೨

ಭೂಮಿಜೆ ಲೋಕಮಾತೆಯೆ
ಕಾಮಿತಪ್ರದೆ ಶ್ರೀ ಗುರುರಾಮ ವಿಠಲನರಸಿಯೆ ೩

೧೨೨

ಹಸೆಗೆ ಬಾರೆ ಬಿಸಜ ಮಂದಿರೆ
ಕುಸುಮಾಸ್ತ್ರನ ಜನನಿ ಬೇಗ ನೀ ಪ

ಎಸೆವ ಪೀಠಕೆ ನಸುನಗುತಲಿ
ದಶರಥ ನೃಪನ ಸೊಸೆಯೆ ಕರುಣದಿ ಅ.ಪ

ಮಾನಸಾಷ್ಟದಳ ಕಮಲ ಪೀಠಕೆ
ಸಾಸುರಾಗದಿ ಪತಿ ಸಹಿತವಾಗಿ
ಆನಳಿನಜಾದಿ ಪರಿವಾರದೊಡನೆ
ಆನಂದಾಮೃತ ವೃಷ್ಟಿಯ ಕರೆಸುತೆ ೧

ಕಾಲಲಂದಿಗೆ ಗೆಜ್ಜೆಗಳ್ ಮೆರೆಯೆ
ಮೇಲೆ ಸುರರು ತಾ ಹೊಮಳೆಯ ಸುರಿಯೆ
ಕಾಲ ಕಾಲದಿ ನಿನ್ನೋಲಗವಿತ್ತು
ಪಾಲಿಸಲ್ಕೆ ಭಕ್ತ ಜನರನು ೨

ಮಾಯೆ ಜಾಯೆ ಕೃತಿ ಶಾಂತಿ ರಮೆ ನಿರ ।
ಪಾಯ ಸೌಖ್ಯವನು ಪುತ್ರರಿಗೀವುತ
ಕಾಯುವಳು ನೀನೆಂದು ಶೃತಿ ನಿ ।
ಕಾಯ ಮುತ್ತೈದೆಯರ್ ಕರೆವರು ೩

ತಟ್ಟೆಯೊಳಗರಿಸಿನ ಕುಂಕುಮಾಕ್ಷತೆಗ
ಳಿಟ್ಟು ಗಂಧ ಪುಷ್ಪಗಳ ಸಹಿತ
ದಿಟ್ಟ ಮುತ್ತೈದೆಯರೆಲ್ಲ ಕರೆವರು
ಕೃಷ್ಣರಾಯನ ಪಟ್ಟದ ರಾಣಿಯೆ ೪

ಹತ್ತುವಿಧದ ವಾದ್ಯಗಳು ಮೊರೆಯೆ
ಚಿತ್ರಕಾಶ ಜ್ಯೋತಿಗಳು ಹೊಳೆಯೆ
ಮತ್ತೆ ಗುರುರಾಮ ವಿಠಲನ ಸಹಿತ
ಚಿತ್ತೈಸಮ್ಮ ಚಿತ್ರಮಂಟಪದಲಿ ೫

೧೨೩

ಹಸೆಗೆ ಬಾರೆ ಶುಭಾಂಗಿವಿಭಾವ ಪ

ರೀಶನ ಸೋದರಿ । ಜಗದಾಧಾರಿಯೆ ಸಿರಿ ಅ.ಪ

ಜೀವರ ಸ್ವಭಾವಗಳಂತೆಯೆ
ಫಲವ ಕೊಟ್ಟು ಕಾಪಾಡುವೆ
ಇಭರಾಜ ವರದನ ಮಾನಿನಿ ಜನನಿಯೆ ಬೇಗದಿ ೧

ದೇಶ ಕಾಲಾದಿ ಹರಿಗೆ ಸಮ
ಭಾಸುರಾಂಗಿಯೇ ಬಾರೇ ರಮಾ
ನೀ ಸಲಹಬೇಕು ನಮ್ಮಮ್ಮ ವಂದಿಸುವೆನೂ ೨

ಗುರುರಾಮ ವಿಠಲನ ಪ್ರಿಯೆ
ಕರುಣಾಬ್ಧಿಯೆ ಕಾಯೆ ಮಾಯೆ
ವರಗಳ ನೀ ಕೊಡು ತಾಯೆ ಮಹಾಲಕ್ಷ್ಮಿಯೇ ೩

೧೨೪

ಹಸೆಗೆ ಬಾರೆ ಬಿಸಜಾಲಯೆ
ಅಸುರಾಂತಕನರಸಿಯೆ ನೀಬೇಗ ಪ

ಕುಸುಮಾಕ್ಷತೆ ಲಾಜಗಳಿಂದಲಿ ಮೇ-
ಲೆ ಸುರಾರ್ಜ್ಞೆಲ್ಲಿ ಪ್ರಾರ್ಥಿಸುವರು ನಿನ್ನ ಅ.ಪ

ವೇದ ಘೋಷೆಯಿಂ ಧರಣೀ ಸುರರು
ಮೋದದಿಂದ ತಾವು ಪೊಗಳುತಿಪ್ಪರು
ಪಾದನೂಪುರವಲುಗದಂತೆ ನೀ ಸಂ–
ಮೋದವ ಬೀರುತ್ತ ಸುಜನರಿಗೆಲ್ಲ ೧

ಗಿರಿಜಾವಾಣೀಯಾರ್ಕರವ ಕೊಡಲು
ಅರುಂಧತಿ ಮುಖರೆಚ್ಚರಿಕೆ ಪೇಳಲು
ಕರುಣಾರಸವ ಸುರಿಸುತ್ತ ನೀ ಭ–
ಕ್ತರು ಬೇಡಿದಿಷ್ಟಾವರವ ನೀಡಲು ೨

ಜನಕನಸುತೇ ಜಕದೇಕ ಮಾತೆ
ಸನಕಾದಿ ಮುನಿಜನ ಸಂಸ್ತುತೆ
ವನಜಾಕ್ಷ ಗುರುರಾಮ ವಿಠ್ಠಲನ
ವಕ್ಷಮಂದಿರೆ ವಂದಿಪೆ ಇಂದಿರೆ ೩

ಬ್ರಹ್ಮದೇವರು

೧೨೫

ಪರಮೇಷ್ಠಿ ನಿನ್ನನಾ ಸ್ಮರಿಸುವೆನನುದಿನ
ಕರುಣದಿಂದ ಅಭಯವಿತ್ತು ಕಾಯೊ ಎಂದೆ ನಾ ಪ

ಸೃಷ್ಟಿ ಕರ್ತನೆ ಜಗಕೆ ವಸಿಷ್ಠನಯ್ಯನೆ
ಶ್ರೇಷ್ಠ ಮದ್ಯಮಾಧಮರಿಗಭೀಷ್ಟ ಕೊಡುವನೆ ೧

ಹಿರಣ್ಯಗರ್ಭನೆ ಸುರಾಸುರೇಶನೆ
ಸರಸ್ವತಿ ಮನೋಹರನೆ ದಯಾ ಸಮುದ್ರನೆ ೨

ಗುರುರಾಮವಿಠಲನಾ ನೆರೆ ನಂಬಿದವರನಾ
ಪರಮ ಸುಖದೊಳಿಟ್ಟು ಮುಕ್ತಿ ಪಥವ ತೋರ್ಪನಾ ೩

೧೨೬

ಪರಿಪಾಹಿ ಪದ್ಮಸಂಭವ । ದೇವ ದೇವ ಪ

ಪರಿಪಾಹಿ ಪದ್ಮಸಂಭವ ಸರಸ್ವತಿದೇವಿಧವ
ಕರುಣಾಂಬುನಿಧೆ ತವ ಚರಣವನ್ನು ನಂಬಿದವರ ಅ.ಪ

ಸೃಷ್ಟಿಸ್ಥಿತಿಲಯವ ನಿನ್ನಿಷ್ಟದಂತೆ ಮಾಡಿ ಪರ–
ಮೇಷ್ಟಿ ಪದದಲಿ ಬಹು ಶ್ರೇಷ್ಠನಾಗಿ ಶೋಭಿಸುವ ೧

ಮೂರುಲೋಕಗಳಿಗೆ ಆಧಾರ ನೀನೆ ಎಂದು ನಿನ್ನ
ಸೇರಿ ಭಜಿಸುವರಿಗೆ ಸಾರ ಸುಖವ ಕೊಡುವ ದೇವ ೨

ಸುರಾಸುರರೊಡೆಯನೆ ವರಮುನಿವಂದಿತನೆ
ಗುರುರಾಮವಿಠಲನ ಬಸುರೊಳು ಬಂದವನೆ ೩

ವಾಯು ದೇವರು – ಹನುಮಂತ

೧೨೭

ಅಂಜನಾ ಸುಕುಮಾರನೆ ಭವ ಪ

ದಂಜಿಕೆ ಬಿಡಿಸು ಬೇಗ ಸಂಜೀವರಾಯನೆ ಅ.ಪ.

ವಾಯುಪುತ್ರಾ ವಜ್ರಗಾತುರ
ನೋಯುವೆ ನಾ ಸಂಸಾರದೊಳ್
ಕೈಯಪಿಡಿದೆತ್ತುವರಾರ್‍ಯೆ ೧

ಗುರುವರೇಣ್ಯ ತವ ಪಾದಪಂ
ಕರುಹಯುಗವಾಶ್ರಯಿಪರ
ನೆರಲಿನೊಳಗಿಟ್ಟುಯನ್ನನು ೨

ಕ್ಷೇಮದಾತನೇ ಶ್ರೀ ಗುರು
ರಾಮ ವಿಠಲ ಕಿಂಕರ
ಭೂಮಿಜಾಶೋಕನಾಶನ ೩

೧೨೮

ಆಂಜನೇಯನೆ ಅನಿಲಸುತನೆ ಪ

ಸಂಜೀವರಾಯ ಮಂಜುಳ ವಜ್ರಕಾಯ ಅ.ಪ

ರಾಮದೂತ ಕ್ಷೇಮದಾತ ಕಾಮವಿರಹಿತ
ತಾಮರಸ ಭಾಂಧವ ಕಬಳೀಕೃತ ೧

ಸೋಮಕುಲಭೂಷ ಭೀಮವಿಕ್ರಮ ಧಾಮ ಸುನಾಮ
ತಾಮಸ ಕೌರವ ನಿರ್ನಾಮ ಕೃಷ್ಣಪ್ರೇಮ ೨

ಗುರುರಾಮ ವಿಠಲ ಕಿಂಕರ ಯತಿವರ ಮಧ್ವಾಭಿಧ
ಹರಿನಾನೇ ಯೆಂಬುವರ ಗರ್ವವ ಮುರಿದ ೩

೧೨೯

ಏನಯ್ಯ ಹನುಮ ನಮ್ಮನು
ನೀನೇ ಕಾಪಾಡಬೇಕು ನಿರುತವು ಬಿಡದೆಯ-
ಜ್ಞಾನಾಬ್ಧಿಯ ದಾಟಿಸು ಸೀ-
ತಾನಾಯಕ ನಂಘ್ರಿ ಕಮಲ ಭೃಂಗ ಶುಭಾಂಗ ೧

ಸುಗ್ರೀವನ ಮಂತ್ರಿವರ ದ-
ಶಗ್ರೀವನ ಗುದ್ದಿದವನೆ ಶತ್ರುನಿಕರವಂ
ಶೀಘ್ರದಿ ಗೆಲುವಂದದಲಿಯ-
ನುಗ್ರಹವ ಮಾಡುತಲೆಮ್ಮ ಕೈಪಿಡಿ ಹನುಮ ೨

ಮರವೆಯು ದುರಾಸೆ ಚಪಲ
ತ್ವರಿತವತಿ ನಿಧಾನವಲಸಿಕೆಗಳನು ಬಿಡಿಸಿ
ಪಿರಿಯರು ಪೇಳಿದ ಪರಿಯಲಿ
ನೆರೆನಡೆವಂದದಲಿ ಸುಮತಿಯನು ಕೊಡು ಹನುಮ ೩

ಹೊರಗಿನ ಶತ್ರುಗಳಂ ವಾ-
ಕ್ಪೌರುಷದಿ ವೋಡಿಸಲುಬಹುದು ಒಳಗಿನ ಕಾಮ್ಯಾ
ದ್ಯರ ಗೆಲುವುದಕೆ ಶಾಂತಿಯೆ
ಕ್ಷುರವಹುದು ದಯಮಾಡಿ ನೀನೆ ಕರುಣಿಸು ಹನುಮ ೪

ಕತ್ತಿಯಲಿ ಕಡಿದೆರೆರಡಾ-
ಗುತ್ತಿರುವುದು ಜಡವು ವಾಕ್‌ಕತ್ತಿಯ ದೆಸೆಯಲಿ
ನೆತ್ತಿಮೊದಲು ಪಾದವರಿಗು
ಕತ್ತರಿಸಿದರೀತಿಯಹುದು ಕಾಯ್ದೆ ಹನುಮ ೫

ಪರಧನ ಪರಾಕಾಮಿನಿಯರಿ
ಗೆರಗುವ ಮನವೆಂಬ ತೊಂಡು ಪಶುವಿಗೆ
ಕೊರಳೊಳರಿವೆಂಬ ರಜ್ಜುವಿಂದಲಿ
ವಿರಾಗ ದೊಣ್ಣೆಯನು ಕಟ್ಟಿ ಕೈಪಿಡಿ ಹನುಮ ೬

ಸಂಗವು ನಿತ್ಯಾಹ್ನೀಕಕೆ
ಭಂಗವು ಬರುತಿಹುದು ಸದ್ವಿಷಯವಾದರದೆ
ಬಂಗಾರವು ರತ್ನವು ತಾ
ಹಿಂಗದೆ ಸೇರಿಸಿದ ರೀತಿ ಹಿತವೈ ಹನುಮ ೭

ನವವಿಧ ಭಕ್ತಿಯ ಕೊಡು ರಾ–
ಘವನಂಘ್ರಿಪರಾಗದಲಿ ಕಡು ವಿರತಿಯನು ನೀಂ
ತವಕದಲಿ ಪಾಲಿಸುತಲಿ ನಿ–
ನ್ನವರಂ ಕೈಪಿಡಿವುದೆಂದಿಗೂ ಬಿಡದೆ ಹನುಮ ೮

ಹನುಮಾಷ್ಟಕವನು ಪೇಳುವ ಜನರಿಗೆ
ಗುರುರಾಮ ವಿಠಲನ ದೂತನು
ತಾನನುದಿನದಿ ಬರುವ ಕಷ್ಟಗಳನು
ಪರಿಹರಿಸುತ್ತ ಹಿಂದೆ ತಿರುಗುತಲಿರುವಂ ೯

೧೩೦

ಜ್ಞಾನ ಪ್ರದಾಯಕ ಪ್ರಾಣದೇವ ಪ

ಕಾಣೆ ನಿನಗೆ ಸಮಸತ್ವಭಾವ ಅ.ಪ

ಆಶೆಯೆಂಬ ಸಮುದ್ರವೆ ಸುತ್ತಳತೆಯಾಗಿರುವ
ಈ ಶರೀರದೊಳು ವಿಭೀಷಣನ ತೋರೊ ೧

ಕೋಪ ಕುಜನತ್ವ ದುರ್ ವ್ಯಾಪಾರಾದಿಗಳನ್ನೆಲ್ಲ
ರೂಪಡಗಿಸಿದೆ ನೀನೇ ಭೂಪನ್ಯೆಯ್ಯ ೨

ಇಪ್ಪತ್ತೊಂದು ವಿಧದ ತಪ್ಪುಗಳ ತಿದ್ದಿದೆ ತಿ–
ಮ್ಮಪ್ಪ ವೇದ ವ್ಯಾಸರ ಶಿಷ್ಯಾವರ್‍ಯಾ ೩

ಕಲಿಮಾರ್ಗದಲಿ ಪೋಪ ಹೊರೆ ಬುದ್ಧಿನಾಶಗೈಸಿ
ಒಳಗೆ ನೀ ಪೊಳೆವುದು ಜಲಜಾಪ್ತ ಪ್ರಿಯ ೪

ರಂಜೀತವಾದ ಕಣ್ಣಿಗೆ ಮಂಜು ಮುಚ್ಚಿಹುದು ದಿ–
ವ್ಯಾಂಜನ ಹಚ್ಚೈ ವೀರಾಂಜನೇಯಾ ೫

ಯೇಳಾರೊಳಗೆ ಹದಿನೇಳಾನೆಯವರನು
ಪಾಲಿಪ ದೊರೆ ನೀನು ಜಾಲವೇನು? ೬

ಸಿರಿಗುರುರಾಮ ವಿಠಲನ ಶರಣಾರಾಭರಣ ನೀನೆ
ಕರುಣೀಸದಿದ್ದರೆಮ್ಮನು ಕಾವರಾರ್‍ೈ ೭

೧೩೧

ತೋರೊ ತೋರೊ ನಿನ್ನ ಚರಣವ ಪ

ಮಾರುತಿ ಭಕ್ತರ ಸಾರಥಿ ನೀನೆಂದು
ಕೋರಿ ಭಜಿಪೆ ಬೇಗ ಬಾರೊ ಗುರುವರ ಅ.ಪ

ರಾಮನದೂತನೆ ಭೀಮಪ್ರಖ್ಯಾತನೆ
ವೋ ಮಧ್ವಮುನಿರಾಯ ವಂದಿಪೆ ಜೀಯ ೧

ಭಾವಿಬ್ರಹ್ಮನು ನೀನೆ ಜೀವರಾಧಾರ ನೀನೆ
ತಾವರೆಗಣ್ಣನದಾಸವರ್‍ಯನೆ ೨

ದಿಟ್ಟ ಶ್ರೀ ಗುರುರಾಮವಿಠ್ಠಲರಾಯನ
ಪಟ್ಟದಾನೆಯು ನೀನು ಪಾಲಿಸೆಮ್ಮನು ೩

೧೩೨

ಪಂಚಮುಖಿ ಆಂಜನೇಯ ಅಂಚಿತ ವಿಕ್ರಮನೆ ಪ

ಸಂಚಿತಗಾಮಿ ಕರ್ಮವ ಮುಂಚೆ ಕಳೆದು
ಪೊರೆಯೊಯೆನ್ನ ಅ.ಪ

ದುಷ್ಟರೊಳಗೆ ಸೇರಿಕೊಂಡು ಭ್ರಷ್ಟ ಮಾಡುತಿಹರ್‍ೈ
ಶ್ರೇಷ್ಠನು ನಾನೆಂಬಜ್ಞಾನವ ಕೊಟ್ಟು ಕೆಡಿಸುವರ್‍ೈ ೧

ದಾಸ್ಯ ಭಾವವನು ರಹಸ್ಯವಾಗಿ ತಿಳಿಯುವಂತೆ
ಹಾಸ್ಯಗಾರರಾಟ ನಿಲಿಸು ನೀ ಸಲಹಬೇಕು ಎನ್ನಗುರುವೆ ೨

ತಂದೆರಾಮಚಂದ್ರಗಾಗಿ ಮಂದಮತಿ ರಾವಣನ
ಮಂದಿ ಎಲ್ಲವನ್ನು ಕೊಂದು ದಂದುಗಾವ ಬಿಡಿಸಿದೆ ೩

ಸೀತೆಗೆ ಶೋಕಬಿಡಿಸಿ ಪಾತಕ ದಶಕಂಠನ
ಭೂತಗಳ ಪಾಲು ಮಾಡಿಸಿ ಖ್ಯಾತಿಯನ್ನು ಪಡೆದೆ ನೀಂ ೪

ಗುರುಗಳೆಲ್ಲರಿಗೂ ಗುರು ನೀನೆಂದು ನಂಬಿದೆ
ಗುರುರಾಮ ವಿಠಲಗೆ ಪರಮಾಪ್ತ ಹನುಮಂತ ೫

೧೩೩

ಪ್ರಾಣದೇವ ಚಿತ್‌ಸ್ವಭಾವ । ಕಾಣೆ ನಿನಗೆಣೆ ಪ

ಏಣಾಂಕಧರ ಪ್ರಮುಖ ಗೀರ್ವಾಣರಿಗತಿ ಪ್ರಿಯ ನೀನೆ
ಜಾಣ ಭಕ್ತಧುರೀಣ ತ್ರಿಜಗ ತ್ರಾಣ ಗುರುವರ ಅ.ಪ

ಮುಖ್ಯ ಪ್ರಾಣನೆಂದು ನಿನ್ನ ಅಕ್ಕರೆಯಿಂ ರಾಮ ಕರೆಯೆ
ಮಿಕ್ಕಾಮರರಿಗೀ ಭಾಗ್ಯವುಂಟೇ ಮಿಹಿರಜಾಮಾತ್ಯ ೧

ಧೀರತೆ ಪೌರುಷ ವಿಕ್ರಮ ದಾರಿಗಿಹುದೆಂದ್ಯೋಚಿಸುತ
ಧಾರುಣಿಜೆ ರತ್ನದ ಹಾರ ನಿನ್ನ ಕೊರಲಿಗೆ ಹಾಕಿ ಪರಸಿದಳ್ ೨

ಶ್ರೀ ಗುರುರಾಮ ವಿಠಲನು ಭಾಗವತಾಗ್ರಣಿ ನೀನೆನುತೆ
ರಾಗದಿ ಸತಿಸಹ ತತ್ವೋಪದೇಶವಾಗ ಕೊಟ್ಟನು ೩

೧೩೪

ಬೆಟ್ಟವಿಳಿದು ಬೇಗಬಾರೊ ಜಗ–
ಜಟ್ಟಿ ಹನುಮನೆ ನಿನಗೆ ಸರಿಯಾರೊ
ಕರುಣವ ಬೀರೊ ಚರಣವ ತೋರೊ ಪ

ದುಷ್ಟದಶಕಂಠನ ಪಟ್ಟಣದಿ ರಾಮನ
ಇಷ್ಟಸತಿಗೆ ನೀಕೊಟ್ಟೆಯುಂಗರವ
ತಿಳುಹಿ ಕುಶಲವ ಪಡಿಸಿದೆ ಮುದವ ೧

ವನವ ಭಂಗಿಸಿ ಬಂದು ದನುಜರ ಶಿಕ್ಷಿಸಿ
ವನಜಜಾಸ್ತ್ರಕೆ ಸಿಕ್ಕಿದಹಿಸಿ ಲಂಕೆಯನು
ತಾಳಿ ಚಿಂತೆಯನು ಕಂಡೆ ಸೀತೆಯನು ೨

ಸೀತೆ ಕುರುಹ ರಘುನಾಥಗೆವೊಪ್ಪಿಸಿ
ಪ್ರೀತಿಪೊಂದಿಸಿ ಬ್ರಂಹ್ಮಪಟ್ಟವ ಪಡೆದೆ
ಕೀರ್ತಿಯಂ ಮೆರೆದೆ ಸೇವೆಯಗೈದೆ ೩

ರಣರಂಗದೊಳಗೆ ರಾವಣನ ಗುದ್ದಿದ ಶೂರ
ಕ್ಷಣದಿ ಲಕ್ಷಣಗೆ ಪ್ರಾಣವನಿತ್ತೆ ಧೀರಾ
ವಾಯು ಕುಮಾರ ವಜ್ರ ಶರೀರ ೪

ಗುರುರಾಮವಿಠಲ ಬಂದ ಉರುತರ ವಾರ್ತೆಯ
ಭರತಗೆ ತಿಳುಹಿಸಿ ಹರುಷ ಪೊಂದಿಸಿದೆ
ಹಾರ ಕೈಕೊಂಡೆ ಘಟಿಕಾದ್ರಿಯೊಳ್ನಿಂದೆ ೫

೧೩೫

ಮಂಗಳಭಾರತಿರಮಣಗೆ ಜಯ
ಮಂಗಳ ಮುಖ್ಯ ಪ್ರಾಣೇಶನಿಗೆ ಪ

ಆಶಾ ಸಮುದ್ರವ ದಾಟಿ ಸಾಮರ್ಥ್ಯದಿ
ಶ್ರೀಸೀತಾದೇವಿಗುಂಗುರವಿತ್ತಗೆ
ಮೋಸಗಾರರ ಮುರಿದು ಮಮತೆಯ ದಹಿಸಿದ
ಭಾಸುರಾಂಗ ವಾನರೇಶನಿಗೆ ೧

ಕೋಪಾದುರ್ಗುಣ ಮೊದಲಾದ ನೂರ್ವರ ನಿರ್
ವ್ಯಾಪಾರ ಪೊಂದಿಸಿದಾತನಿಗೆ
ಪಾಪಿ ಕೀಚಕ ಮುಖ್ಯಪಾಮರರನು ಕೊಂದು
ದ್ರೌಪದಿಗಿಷ್ಟ ನೀಡಿದಾತಗೆ ೨

ಕಾಮ್ಯಕರ್ಮವ ಮಾಡಿ ಗ್ರಾಮಸುಖ ಬಯಸುವ
ತಾಮಸರನು ಗೆದ್ದ ತತ್ವಾರ್ಥಿಗೆ
ಭೂಮಿಗಧಿಕ ಶಿಡ್ಲಘಟ್ಟನಿಲಯ ಗುರು
ರಾಮವಿಠಲ ಪ್ರಿಯ ದೂತನಿಗೆ ೩

೧೩೬

ಮಾರುತೀ ಗುರುಮಾರುತಿ ನಿನ್ನ
ಕೀರತಿ ಭಕ್ತ ಸಾರಥಿ । ಜಯ ಪ

ಧೀರ ಶರಧಿ ಗಂಭೀರ ನತಜನೋ–
ದ್ಧಾರ ಪವಿನಿಭ ಶರೀರ ಮಹಾವೀರ ಅ.ಪ

ಸಂಜೀವರಾಯ ಆಂಜನೇಯ ಭವ
ಭಂಜಕ ನೀನೆ ಪ್ರಭಂಜನ ತನಯ ೧

ಸೀತಾದೇವಿಯ ಪ್ರೀತಿ ಪೊಂದಿಸಿದೆ
ದಾತ ಶ್ರೀರಾಮನ ದೂತಾಗ್ರಣಿಯೆ ೨

ರೋಮರೋಮಕೆ ಕೋಟಲಿಂಗವುದರಿಸಿ ಗುರು–
ರಾಮ ವಿಠಲನ ನಿಷ್ಕಾಮದಿ ಭಜಿಸುವ ೩

೧೩೭

ರವಿಸುತನ ಪ್ರಧಾನಿಯೆ ರಾ
ಘವ ಕಾರ್ಯ ಧುರಂಧರಾಗಣಿತ ವಿಕ್ರಮಯಂ–
ಮವಗುಣಗಳನೆಣಿಸದೆ ಕಾ
ಯುವದೈ ನೀಂ ಪುಟಪರ್ತಿ ವೀರ ಹನುಮನೆ ೧

ಮಾರುತನ ಕುಮಾರ ಪವಿ ಶ
ರೀರ ಕಪಿವರಾಗ್ರಗಣ್ಯ ವರದಾಯಕ ನೀ
ನಾರಾಧಕರಿಗೆ ಕೊಡು ದಿ
ವ್ಯಾರೋಗ್ಯವ ಪುಟಪರ್ತಿ ವೀರ ಹನುಮನೆ ೨

ಆರೋಗ್ಯ ಭಾಗ್ಯಂ ಮಿಗೆ
ವೈರಾಗ್ಯವು ಭಕ್ತಿ ಜ್ಞಾನವಂ ಪಾಲಿಸುವೈ
ಮಾರುತಿ ನಿನ್ನನು ಪೋಲುವ
ರಾರಿಳೆಯೊಳು ಪುಟಪರ್ತಿ ವೀರ ಹನುಮನೆ ೩

ಧರಣಿಜೆಯರಸನ ತಮ್ಮಗೆ
ನೆರೆ ಪ್ರಾಣಗಳಿತ್ತೆ ಧೀರನೊಲಿಯುವಲೀ
ತರಳನ ಜ್ವರಾದಿಗಳ ಪರಿ
ಹರಿಸುತ ಪೊರೆ ಪುಟಪರ್ತಿ ವೀರ ಹನುಮನೆ ೪

ರಾವಣನ ಗುದ್ದಿದಾತನೆ
ದೇವನಿಕರಕೆಲ್ಲ ಕಲ್ಪವೃಕ್ಷನು ನೀನೆ

ಪಾವನ ಪರಮ ಪವಿತ್ರ ಕೃ
ಪಾವನಧಿಯೇ ಪುಟಪರ್ತಿ ವೀರ ಹನುಮನೆ ೫

ಮರುತಜನ ಪಂಚರತ್ನದ
ನರಿತನುದಿನ ಪಠಿಸುವರಿಗೆಯಾರೋಗ್ಯಸುವು
ಸ್ಥಿರ ವೈರಾಗ್ಯಾಯುಗಳನು ಶ್ರೀ
ಗುರುರಾಮ ವಿಠಲನು ಬಿಡದೆ ಕರುಣಿಸುತ್ತಿರುವಂ ೬

೧೩೮

ರಾಮದೂತ ರಮ್ಯಚರಿತ ಸ್ವಾಮಿಹನುಮನೆ ಪ

ಕಾಮಿತಫಲದಾತ ನಮ್ಮ ಕಾವನು ನೀನೆ ಅ.ಪ

ಆಶಸಮುದ್ರವನ್ನು ದಾಟಿ ಮೋಸಗಾರರಂ
ನಾಶಗೊಳಿಸಿ ದಾಶರಥಿಯ ತೋಷ ಪಡದೆ ನೀಂ ೧

ಕುರುಭೂಪಾಲನ ತೊಡೆಗಳೊಡೆದು ಹರಿಯ ಮೆಚ್ಚಿಸಿದೆ
ತರುಣಿ ದ್ರೌಪದಿ ದೇವಿಯ ತಾತ್ಪರಿಯ ನಡೆಸಿದೆ ೨

ಕಲಿಯುಗದಲಿ ಹುಲುದನುಜರಗೆಲಿದೆ ಗುರುವರ
ಜಲಜನೇತ್ರ ಗುರುರಾಮವಿಠ್ಠಲನ ಕಿಂಕರ ೩

೧೩೯

ವಾಯು ಕುಮಾರನೆ ಧೀರಾಗ್ರೇಸರ
ವಂದಿಸುವೆನು ನಿನಗೆ
ಕಾಯುವರಾರು ಜಗದಿ ನೀನಲ್ಲದೆ
ಕಡೆಹಾಯಿಸು ಕೊನೆಗೆ ಪ

ಶರಧಿಯ ದಾಟಿಯಸುರನ ಪಟ್ಟಣದಿ
ಧರಣಿಜೆ ಸೀತೆಯನು
ಅರಸಿ ಉಂಗುರವನಿತ್ತು ಮಣಿಯ ಕೊಂ-
ದೊರಸಿದೆ ದನುಜರನು ೧

ರಾವಣನಿಗೆ ಬುದ್ಧಿಯ ಪೇಳಿ ಪುರವ
ಪಾವಕನಿಂ ಸುಟ್ಟೆ
ದೇವಿಯ ಮಾಣಿಕ್ಯವ ತಂದಾ ರಾಮ
ದೇವಗೆ ನೀ ಕೊಟ್ಟೆ ೨

ಭೂಮಿಯೊಳಗೆ ತಿರುಪತಿಯಲಿ ನೆಲಸಿದೆ
ಸ್ವಾಮಿ ಹನುಮರಾಯ
ಸಾಮಜರಾಜವರದನೆನಿಸುವ ಗುರು-
ರಾಮವಿಠಲ ಪ್ರೀಯ ೩

೧೪೦

ಶ್ರೀಮದಾಂಜನೇಯ ಸುಜನ
ಪ್ರೇಮ ಸದ್ಗುರುರಾಯ ಪ

ರಾಮದೂತಾ ಸೀತಾ ಮಹಾಸತಿ
ಕಾಮಿತದಾಯಕ ಕಡುಗಲಿ ಭೀಮ ಅ.ಪ

ಆಶಾಶರಧಿಯನು ದಾಟಿದ ಮ
ಹಾಶೂರನು ನೀನು
ಮೋಸಗಾರರಿಗೆ ಮೃತ್ಯುದೇವತೆಯೆ
ದಾಶರಥಿಯ ಕಾರ್ಯ ಧುರಂಧರನೆ ೧

ಧರ್ಮ ವಿಭೀಷಣನಾ ಮನೆಯನು
ಮರ್ಮವರಿತು ಪುಳುಹಿ

ನಿರ್ಮಲನೆಂದಾನಂದವ ಪಡುತ
ಧರ್ಮೇತರ ನಿಲಯಗಳ ದಹಿಸಿದ್ಯೆ ೨

ಧರಣಿ ಪುಟ್ಟಪರ್ತಿನಿಲಯ ಭಾ
ಸುರ ಕಪಿ ಚಕ್ರವರ್ತಿ
ಗುರುರಾಮ ವಿಠಲನ ದಾಸೋತ್ತಮ ಮ-
ಧ್ವರಾಜ ನಿಜ ಶರಣರ ಕಲ್ಪತರುವೇ ೩

೧೪೧

ಸಂಜೀವರಾಯ ಸಾಧುಜನಪ್ರಿಯ ಪ

ಅಂಜನಾದೇವಿತನಯ ಕಂಜಾಕ್ಷನ ನಾಮಾಮೃತ
ಭುಂಜಿಪ ಸದ್ಭಕ್ತರ ಸೇವೆಯೊಳಿರಿಸೆನ್ನನು ಅ.ಪ

ರಾಮನಾಜ್ಞೆಯಲಿ ಶರಧಿಯದಾಟುತಲಿ । ರಾವಣನ ಪಟ್ಟಣದಿ
ಭೂಮಿಜಾತೆಗುಂಗುರವನು ನೀಡುತಲಿ
ಆ ಮಹಾಶಿರೋ ಮಾಣಿಕ್ಯವ ಸೀ-
ತಾ ಮಹಾದೇವಿಯಿಂದ ಕೈಕೊಂಡ ೧

ವನವ ಕೀಳುತಕ್ಷಾದಿ ರಾಕ್ಷಸರನು ವಧಿಸಿ । ಮುದದಿ ದಶಕಂ-
ಠನ ತೃಣೀಕರಿಸಿ ವರಪುರವನುದಹಿಸಿ
ಇನಕುಲಂಗೆ ವಾರ್ತೆಯ ತಿಳುಹಿಸಿ ನೀ
ವನಜ ಸಂಭವನ ಪಟ್ಟವ ಪಡೆದೆ ೨

ಕೋಲಾಹಲನಗರ ನಿವಾಸವಗೈಯ್ವೆ ಕುಜನರನು ತರಿವೆ । ಕರು-
ಣಾಲವಾಲ ಭಕ್ತರಿಗೀಪ್ಸಿತವೀವೆ
ಶ್ರೀಲತಾಂಗಿಪತಿ ಗುರುರಾಮವಿಠಲ
ನೋಲಗಿಸುವ ಭಾಗ್ಯವಂತರೊಡೆಯನೆ ೩

೧೪೨

ಹನುಮಂತ ನಿನ್ನನು ನಂಬಿದೆ ಪ

ಇನವಂಶಭೂಷಣ ರಾಮ ಮುದ್ರೆ
ಯನು ಜಾನಕೀಗಿತ್ತನೆ ಲೋಕವೀರ ಅ.ಪ

ಪತಿಕ್ಷೇಮವಂ ಭೂಸುತೆಗರುಹುತ
ಹಿತದಿವನವ ಕೀಳುತ ರಾವಣಿಯಸ್ತ್ರ
ಹತಮಾಡಿ ಸುರರಿನ್ನುತಿಗೊಂಡೆ ವೀರ ೧

ತೃಣಿ ಕರಿಸಿ ರಾವಣನಂ ಕೋಪದಿ
ಅನಲಂಗೆ ತತ್‌ಪಟ್ಟಣ
ಯನುಗೈಸಿ ಮಣಿಯ ವನಜಾಕ್ಷಿಗಿತ್ತೆ ೨

ವಾಯುಪುತ್ರ ವಜ್ರ ಕಾಯ ಮೌನಿ ಗೇಯ
ರಾಯ ಶ್ರೀಗುರುರಾಮವಿಠ್ಠಲನ
ಪ್ರಿಯದೂತನೆ ಅಣುಪ್ರಸ್ಥಪುರಿನಿಲಯ ೩

ಮಧ್ವಾಚಾರ್ಯರು

೧೪೩

ಮಧ್ವಮುನಿರಾಯ ಭಕ್ತೋದ್ಧಾರನೆ ಪ

ಶುದ್ಧಮೂರ್ತಿಯಾದ ಕೃಷ್ಣ ದ್ವೈಪಾಯನರ ಶಿಷ್ಯ ಅ.ಪ

ರಾಮದೂತನಾಗಿ ಕಡಲ ದಾಟಿದೆ
ಭಾಮೆಸೀತಾದೇವಿಗುಂಗುರವ ತೋರಿದೆ

ತಾಮಸರ ಮುರಿದು ಚೂ
ಡಾಮಣಿಯ ಸ್ವಾಮಿಗಿತ್ತೆ ೧

ಭೀಮ ಕೀಚಕ ಬಕಾದಿ ದೈತ್ಯರ
ಭೂಮಿ ಆಶೆಯುಳ್ಳ ದುರ್ಯೋಧನಾದ್ಯರ ನಿರ್–
ನಾಮವ ಹೊಂದಿಸಿ ಕೃಷ್ಣನ
ಪ್ರೇಮಕೆ ನೀ ಪಾತ್ರನಾದೆ ೨

ಇಪ್ಪತ್ತೊಂದು ಭಾಷ್ಯಗಳಾ ಖಂಡಿಸೀ
ಸರ್ಪಶಯನ ಸರ್ವೋತ್ತಮನೆಂದು ಸಾರಿಸಿ
ಅಪ್ಪ ಗುರುರಾಮ ವಿಠಲನ
ತಪ್ಪಾದೆ ಪೂಜಿಸುತಿರ್ಪ ೩

೧೪೪

ಸರ್ವಜ್ಞ ಮುನಿರಾಯ ನಿನ್ನ ಪಾದ
ಸರೋಜಯುಗಳವ ನೆರೆ ನಂಬಿದೆ ಜೀಯ್ಯ ಪ

ದುರ್ವಾದಿ ತಿಮಿರ ದಿನಕರ ಶುಭಕರ
ಗರ್ವಿತದಾನವ ಕಾನನ ಕುಠಾರ
ಯತಿವರ್ಯ ಮಹಾಶೌರ್ಯ ಮೇರು ಸಮ ಧೈರ್ಯ
ತ್ರಿವಿಧ ಜೀವರಿಗೆ ಆಚಾರ್ಯ ಅ.ಪ

ರಾಮದೂತಾನಾಗಿ ಸೀತೆಗುಂಗುರವಿತ್ತೆ
ಭೀಮನಾಗಿ ಕೌರವರ ಸಂಹರಿಸಿದೆ
ಕಲಿಯುಗದಿ ಭೂಸುರಕುಲದಿ
ಪುಟ್ಟಿ ನೀ ಮೆರೆದಿ ಆರ್ತಜನ ಕೃಪಾಶರಧಿ ೧

ಸಂಜೀವನ ತಂದು ಬದುಕಿಸಿ ಕಪಿಗಳ
ಕಂಜಾಕ್ಷಿ ದ್ರೌಪದಿಯಭಿಮತ ಸಲಿಸಿದೆ

ಪವಮಾನ ಮಧ್ವಾಭಿದಾನ
ಅನುಸಂಧಾನ ಪೂರ್ವಕ ಕೊಡು ವಿಜ್ಞಾನ ೨

ಮೂರವತಾರದಿ ಶ್ರೀರಾಮ ಕೃಷ್ಣ ವ್ಯಾಸ–
ರಾರಾಧಿಸಿ ಗೈದ ಧೀರ ಶಿಖಾಮಣಿ
ಭಾರತೀಶ ಭವ ಭಯನಾಶ
ಕೊಡುವುದು ಲೇಸಾ ಗುರುರಾಮವಿಠಲನದಾಸ ೩

ಸರಸ್ವತಿ

೧೪೫

ದೇವಿ ಸರಸ್ವತೀ ಲೋಕಮಾತೆ ದೇವಿ ಪ

ಪರಮಕಲ್ಯಾಣಿ ಪಾವನೆವಾಣಿ
ಸುರುಚಿರ ಪುಸ್ತುಕಪಾಣಿ ದೇವಿ ಅ.ಪ

ಬುದ್ಧ್ಯಾಭಿಮಾನಿ ಬ್ರಹ್ಮನರಾಣಿ
ತಿದ್ದು ಮನದ ಸಂಶಯಗಳನು ದೇವಿ ೧

ಶ್ವೇತಾಂಬರ ಪಾತಕದೂರೆ
ಮಾತುಮಾತಿಗೆ ನಿನ್ನ ಬೇಡುವೆ ದೇವಿ ೨

ಗುರುರಾಮ ವಿಠಲನ ಹಿರಿಯ ಸೊಸೆಯ ನೀನು
ಶರಣಜನರ ಸುರಧೇನು ದೇವಿ ೩

೧೪೬

ಭಾರತಿದೇವಿ ಭಕ್ತಸಂಜೀವಿ ಪ

ಮಾರುತನರಾಣಿ ಮಾಮಮ ಕಲ್ಯಾಣಿ ಅ.ಪ

ಭಕುತಿ ವಿದೂರ ಕುಯುಕುತಿಗಳ ತರಿದು
ಯುಕುತ ಮಾರ್ಗದೊಳಗಿರಿಸುವದೆಮ್ಮನು । ಜನನಿ ೧

ಬುದ್ಧಿಯನು ಪರಿಶುದ್ಧಮಾಡಿಯನಿ-
ರುದ್ಧನ ತೋರಿಸೆ ಪ್ರದ್ಯುಮ್ನನ ಸುಕುಮಾರಿ ೨

ಗುರುರಾಮವಿಠಲನೆ ಸರ್ವೋತ್ತಮನೆಂದು
ಸ್ಮರಿಸುವ ಶರಣರ ಚರಣಸೇವೆಯ ಕೊಡುವುದು ೩

ರುದ್ರ (ಶಿವ) ಸ್ತುತಿ

೧೪೭

ಏಕೆ ನೀ ಬರಿದೆ ಮೆಚ್ಚಿದೆ ಭವಹರಗೆ
ಲೋಕರಕ್ಷಕನೆಂಬೊ ಹರ ಗಂಗಾಧರಗೆ ಪ

ನೀಕಮಲಮುಖಿ ಅಖಿವ್ವೈರಿ ಅ-
ನೇಕ ಮೈಯೊಳು ಸುತ್ತಿಕೊಂಡು ವಿ-
ವೇಕವಿಲ್ಲದೆ ವಿಷವನುಂಡ ಪಿ-
ನಾಕಧರನಿಗೆ ಸೋಲುವುದೆ ಅ.ಪ

ಶಿರದೊಳು ಶಶಿಯ ಕೆಂಜಡೆಯಿಪ್ಪಭೋಗಿ
ಸ್ಮರನದಹಿಸಿ ಭಸ್ಮ ಹಣೆಗಿಟ್ಟಯೋಗಿ
ಇರುವೊಡೆ ಸ್ಥಳವಿಲ್ಲ ದಂತೆ ತಾ ಪೋಗಿ
ಬೆರೆವ ಸ್ಮಶಾನ ಮಂದಿರ ಸುಖವಾಗಿ
ಮರುಳು ಭೂತ ಪಿಶಾಚಿ ಯಕ್ಷರ
ನೆರವಿಯೊಳು ಕುಣಿ ಕುಣಿದು ಬ್ರಹ್ಮನ
ಶಿರವಿಡಿದು ತಿರಿದುಂಬ ಗೊರವಗೆ
ಬರಿದೆ ಒಲಿವುದೆ ಗರುವೆ ಪಾರ್ವತಿ ೧

ಮಂಡೆಯೊಳ್ ಜಾಹ್ನವಿ ಶಶಿಯನ್ನೆ ಮಾಡಿ
ರುಂಡಮಾಲೆಗಳ ಕೊರಲೊಳಗಿಟ್ಟು ಆಡಿ
ಕುಂಡಲಗಳ ಧರಿಸಿರುವನ ನೋಡಿ
ಖಂಡಪರಶುವೆಂದು ಅವನ ಕೊಂಡಾಡಿ
ದಿಂಡೆಯಾಹ ಪ್ರಾಯದವಳು ನೀ
ಕೆಂಡಗಣ್ಣಿನ ಕ್ರೂರರೂಪನ
ಕಂಡು ನೀನವ ಗಂಡನೆಂದು ಪ್ರಾ-
ಚಂಡಗೊಲಿದಿಹೆ ಸರಿಯೆ ಪಾರ್ವತಿ ೨

ಕರದೊಳು ತ್ರಿಶೂಲ ಡಮರುಗ ಧರಿಸಿರುವ
ಕರಿಚರ್ಮಾಂಬರ ಹುಲಿದೊವಲುಟ್ಟು ಮೆರೆವ
ಹಿರಿಯತನಕೆ ವೃಷಭನ ಏರಿ ಬರುವ
ಸಿರಿಯ ಹೋಗಾಡಿ ಭಿಕಾರಿಯಾಗಿರುವ
ವಿರಚಿಸುವ ಲೀಲಾವಿನೋದನ
ಪರತರ ಶ್ರೀ ಪ್ರಣವ ರೂಪನ
ವರದ ಶ್ರೀ ಗುರುರಾಮವಿಠಲನ
ಪರಮ ಪ್ರಿಯ ಪರಮೇಶ ಶಿವಗೆ ೩

೧೪೮

ಗಿರಿಜೇಶಾ ಕರುಣಾ ಸಮುದ್ರ ಪರಿಪಾಲಿಸೆನ್ನನು ಓ ರುದ್ರ ಪ

ಹರಶಂಕರ ಪುರಹರ ಗಂಗಾಧರ
ಉರುಗಭೂಷಾ ಶರಣತೋಷಾಭವ ಭೂತೇಶಾ ಅ.ಪ

ಹಲವು ವಿಧದಲಿ ಚಪಲ ಚಿತ್ತನಾಗುತ
ಬಳಲುವೆನುಬೇಡಿಕೊಂಬೆನು ಪಾಲಿಸೊ ನೀನು ೧

ಅನುದಿನದಿ ಶ್ರವಣ ಮನನವ ಮಾಡಿಸಿ
ಘನಪಾಪವ ಖಂಡ್ರಿಸುದೇವ ಮೃತ್ಯುಂಜಯ ಶಿವ ೨

ಕಾಮನಗೆಲಿದಾ ಮಹಾಮಹಿಮನೆ ಗುರು–
ರಾಮವಿಠಲನ ಸಖನೆ ನಿನ್ನ ಪ್ರಾರ್ಥಿಸುವೆನಾ ೩

೧೪೯

ಚೂಡನಾಥೇಶ ನೋಡು ಕರುಣದಿ ಎನ್ನ ಪ

ಈಡು ನಿನಗೆ ಸರಿಯಾರು ಜಗದಿ ದಯ
ಮಾಡಿ ಸಲಹೊ ಮನ್ಮಥ ಸಂಹರನೆ ಅ.ಪ

ಸೀತಾಪತಿನಾಮಾತಿಶಯವನತಿ
ಪ್ರೀತಿಲಿ ಗೌರಿಗೆ ನೀ ತಿಳುಹಿಸಿದೆ ೧

ತ್ರಿಪುರಹರನೆ ಎನ್ನಪರಾದೆಣಿಸದೆ
ಕುಪಥಗಳ ಬಿಡಿಸಿ ಸುಪಥವ ತೋರೊ ೨

ಧರೆಯೊಳು ನೂತನಪುರದಿ ನೆಲೆಸಿರುವ
ಗುರುರಾಮವಿಠಲಗೆ ಪರಮಮಿತ್ರನೆ ೩

೧೫೦

ಪ್ರದೋಷಕಾಲವಿದೀಗ ನೀ ಮರೆ–
ಯದೇ ನೆನೆಯೊ ಶಿವನಾ ಶಂಕರನಾ ಪ

ಸದಾ ಸಕಲ ಸುರರಿಂದ ಕೂಡಿ ತಕ
ತಧಿಂ ಎನುತ ಕುಣಿಯುವ ಶಿವನೀಗಲೂ ಅ.ಪ

ತಂಬೂರಿ ವೇಣು ವೀಣಾ ತಾಳ ಮೃಂದಂಗಾದಿ
ಸಕಲ ವಾದ್ಯಗಳೂ
ಸಂಭ್ರಮದಿಂ ನಂದಿ ಭೃಂಗಿಗಳು ಶಿವ
ಶಂಭೋ ಎಂಬ ಸುವಾದಗಳೂ
ರಂಭಾದ್ಯಪ್ಸರರೂ ಪಾಡುತಿರೆ
ತುಂಬುರ ನಾರದರೂ ನುಡಿಸಿ ಹೇ-
ರಂಬ ಜನಕ ವಿಶ್ವಂಭರ ಎಂದು ದಿ-
ಗಂಬರನಾಗಿ ಚಿದಂಬರ ಕುಣಿಯುವ ೧

ಭೂತಿಯನು ಪೂಸಿ ಮೈಯ್ಯೊಳುರಗಗಳ
ಭೂಷಣಗಳ ಮಾಡಿ
ಪ್ರೀತಿಯಿಂದ ಗಜಚರ್ಮ ಪೊದ್ದು ತಾ
ಭಿಕ್ಷವನೂ ಬೇಡಿ
ಪಾತಕಗಳ ಕಳೆದೂ ಜೀವರಿಗೆ
ತಾತನಾಗಿ ಮೆರೆದು ಹಿಮ ಶೈಲ-
ಜಾತೆ ಸಹಿತ ಪ್ರಖ್ಯಾತನಾಗಿ ಭವ-
ಭೀತಿ ಬಿಡಿಸಿ ದುಃಖೇತರ ಕೊಡುವನು ೨

ಗಿರಿರಾಜಕುಮಾರಿ ಕೈಮುಗಿದು ತನಗರುಹು ತತ್ವವೆನಲು
ಪರಮ ಹರುಷದಿಂದ ನುಡಿದ ದೇವಗೆ ಸುರರು ಭಲಾ ಎನಲು
ಪರಮ ಗುಣಸಾಂದ್ರ । ಕೇಳು ದಿನ-
ಕರಕುಲಾಬ್ಧಿ ಚಂದ್ರ । ರಘುವರ
ಪರಾತ್ಪರನು ಶ್ರೀ ಗುರುರಾಮವಿಠಲ
ವರತಾರಕ ಮಂತ್ರವಿದೇ ಎಂದನು ೩

೧೫೧

ಮೃತ್ಯುಂಜಯ ಶಂಭೋಶಂಕರ ಪುರಹರ ಶಿವ ಪ

ಕೃತ್ತಿವಾಸ ದೇವೋತ್ತಮ ಭವಹರ ಅ.ಪ

ರಜತಗಿರಿನಿಲಯ ಭಜಕ ಜನಪ್ರಿಯ
ಭುಜಗಭೂಷಣ ಪಂಕಜಭವತನಯ ೧

ನಂದಿವಾಹನ ಪುರಂದರಾದಿ ಸುರ
ಬೃಂದವಂದ್ಯ ಹೃನ್ಮಂದಿರನಿಲಯ ೨

ಗುರುರಾಮವಿಠಲ ಪರನೆಂಬರ್ಥವ
ಅರಿಯುವಂತೆ ಮನದಿರವನು ಪಾಲಿಸು ೩

೧೫೨

ರಾಮೇಶ್ವರ ಜಗದಭಿರಾಮ । ಭಕ್ತ
ಕಾಮಿತ ಪ್ರದಾಯಕಧರ ಸೋಮ ಪ

ಪೂಜಿಸಿದ ನಿನ್ನ ಗಡ ರಘುರಾಮ
ನೀ ಜಪ ಮಾಡುವೆ ಅವನ ದಿವ್ಯನಾಮ ೧

ಸಾಧು ಶಿರೋಮಣಿ ಸರ್ವೇಶ
ಮೋದದಾಯಕ ಕೈಲಾಸವಾಸ ೨

ವೈರಾಗ್ಯ ಭೂಷಣ ವಾಮದೇವ
ಕೈರಾತವೇಷ ದಿವ್ಯಪ್ರಭಾವ ೩

ಚರ್ಮಧಾರಿಯೆ ಷಟ್ಕರ್ಮನಿರತರು
ನಿರ್ಮಲರರಿವರು ನಿನ್ನ ಚಿದ್ವಿಲಾಸ ೪

ಸಂಕರ್ಷಣಮೂರ್ತಿ ನೀ ಸಚ್ಚರಿತ್ರ
ಪಂಕಜಾಕ್ಷ ಗುರುರಾಮ ವಿಠಲ ಮಿತ್ರ ೫

೧೫೩

ವಿಶ್ವನಾಥ ವಿಶ್ವನಾಥ
ಸರ್ವೇಶ್ವರ ಕಾಶೀನಿವಾಸ ವಿಶ್ವನಾಥ ಪ

ಅನ್ನಪೂರ್ಣದೇವಿ ರಮಣ ವಿಶ್ವನಾಥ ದಿ
ವ್ಯಾನ್ನ ಕೊಟ್ಟುಯನ್ನು ಪಾಲಿಸು ವಿಶ್ವನಾಥ ೧

ತಾರಕೋಪದೇಶವನ್ನು ವಿಶ್ವನಾಥ । ನಿ
ನ್ನಾರಾಧಕರಿಗೆ ಈವೆ ವಿಶ್ವನಾಥ ೨

ಪಾಮರ ನಾನ್ಯೆಯ್ಯ ಕೇಳು ವಿಶ್ವನಾಥ ಗುರು
ರಾಮ ವಿಠಲನ ಚರಣವ ತೋರಿಸು ವಿಶ್ವನಾಥ ೩

೧೫೪

ಶಂಕರ ಕೃಪಾಸಾಗರ ಶಿವ ಮೃಗಾಂಕಾ ಶಶಿಶೇಖರಾ ಪ

ಪಂಕಜಭವನುತ ಭವವನಧಿಗೆತ್ರಾತ
ಕಿಂಕರರಿಗೆ ಬಂದ ಸಂಕಟವ ಬಿಡಿಸುವ ಅ.ಪ

ಬಾಗಿ ನಮಿಪೆ ತವ ಪಾದಗಳಿಗೆ ಭವ
ರೋಗಗಳ ಕಳೆವ ಭೋಗ ನಂಜುಂಡದೇವ ೧

ಸರ್ಪಭೂಷಣನೆ ನಮ್ಮಪ್ಪ ನೀನೆಂದು ನಾ
ತಪ್ಪದೆ ನಂಬಿದೆ ಕಂದರ್ಪ ಸಂಹಾರನೆ ೨

ಗಂಗಾಧರ ದೇವೋತ್ತುಂಗ ಮಹಾಲಿಂಗ
ಸಂಗರಹಿತ ಭಸಿತಾಂಗಲೇಪಿತ ಶಿವ ೩

ಗರಳಪುರದಿ ನೆಲೆಸಿರುವ ಶ್ರೀಕಂಠೇಶ
ಶರಣಾಗತರ ಸುರತರುವೆ ಮದ್ಗುರುವೆ । ಶಿವ ೪

ದಕ್ಷಸುತೆಯರಸ ದಾರಿದ್ರ್ಯವಿಧ್ವಂಸ
ಲಕ್ಷ್ಮೀಶನಾದ ಗುರುರಾಮವಿಠಲನ ಸಖ ೫

೧೫೫

ಶಂಭೋ ಚಂದ್ರಶೇಖರ ಪ

ವಂದಿಪೆ ನಿನ್ನಂಘ್ರಿಯುಗಳವ ಅ.ಪ

ರಜತ ಗಿರಿವರ ಮಂದಿರ
ಭಜಿಸುವೆ ನಾನ ನಿನ್ನ ಶಂಕರ ಶಂಭೊ ೧

ಶೈಲಸುತಾ ಚಿತ್ತಚೋರನೆ
ಶೂಲಧರಾಘ ವಿದೂರನೆ ೨

ಗುರುರಾಮವಿಠಲ ಮಿತ್ರನೆ
ಕರುಣಿಸೆನ್ನ ಸುಚರಿತ್ರನೆ ಶಂಭೊ ೩

೧೫೬

ಶಂಭೋಶಿವಶಂಕರ ಗೌರೀಶಾ ಲಂಬೋದರಜನಕ ಪ

ಸಾಂಬಾನಂದಿವಾಹನ ನಂಬಿರುವೆನೊ ನಾನಿನ್ನ
ಜಂಭವೈರಿಮುಖ್ಯದೇವ ಕದಂಬವಂದಿತಾಭಯದಾತ ಅ.ಪ

ಅಣಿಮಾ ಮಹಿಮಾ ಗರಿಮಾ ಲಘಿಮಾದ್ಯಷ್ಟ ಸಿದ್ಧಿಗಳಿದ್ದರು
ಘನವೈರಾಗ್ಯದಿಂದ ಚರ್ಮವನು ಪೊದ್ದು
ಭಸ್ಮವನು ಲೇಪಿಸಿರುವ ೧

ಮನದಭಿಮಾನಿ ಎನಿಸಿ ಸರ್ವರಿಗುಂ ನೆನೆದಿಷ್ಟಾರ್ಥಗಳೀವುತ
ಕೊನೆಗಾಣದಿಹ ದುರಾಶಾಬದ್ಧರ ಹನನಗೈಸಿ ನಸುನಗುತ
ವಿರಾಜಿಪ ೨

ದೇವ ಶ್ರೀಗುರುರಾಮವಿಠಲ ಸಖ ದೀನೋದ್ಧಾರ
ಪಂಚಮುಖಾ
ಪಾವನ ತ್ರಿಜಗಜ್ಜೀವನ ನೂತನಾವರಣ ಪುರೀಶಾ
ವಿಮುಕ್ತೇಶ ೩

೧೫೭

ಶಿವ ಶಂಭೋ ಮಹದೇವ
ಶಂಕರ ಭಗವತ್ ಪರಭಾವ ಪ

ಭವಹರ ಪುರಹರ ಕವಿಜನ ವಂದಿತ
ನವವಿಧ ಭಕುತಿಯ ಸವಿಯನು ತೋರಿಸು ಅ.ಪ

ಜೈಗೀಷವ್ಯ ಮುನಿಯು ನೀನೆ
ನಾಗೇಂದ್ರಾಭೂಷಣನೆ
ಆಗಮೋಕ್ತ ಶ್ರೀ ರಾಘವನಂಘ್ರಿಪ
ರಾಗದೆ ರತಿಯನು ಜಾಗು ಮಾಡದೆ ಕೊಡು ೧

ಮನಕಭಿಮಾನಿಯು ನೀನು ಮನ್ಮ
ನನಿರ್ಮಲ ಮಾಡುವುದಿನ್ನು
ಅನುದಿನದಿ ಶ್ರವಣ ಮನನ ನಿಧಿ ಧ್ಯಾ
ಸನ ಮೊದಲಾದ ಸಾಧನೆಯನು ಮಾಡಿಸು ೨

ಸುರಪತಿ ಮೊದಲಾದವರೆಲ್ಲ ನಿನ್ನ
ಚರಣವ ಧ್ಯಾನಿಪರೆಲ್ಲ
ಧರಣಿಜಾರಮಣ ಗುರುರಾಮ ವಿಠಲನ
ಮರೆಯದಿರುವ ಮಹತ್ತರ ಭಾಗ್ಯವ ಕೊಡು ೩

೧೫೮

ಸಂಕರುಷಣ ಮೂರ್ತಿಯೇ ಪ

ನಿಷ್ಕಳಂಕ ಬಿರುದಾಂಕ ।
ಶಶಾಂಕ ಶೇಖರ ಶ್ರೀ ಅ.ಪ

ಸದ್ಯೋಜಾತಾ ಘೋರಯೀಶಾನ ತತ್ಪುರುಷ
ಹೃದ್ಯವಾಮದೇವ ನಿರವದ್ಯ ಶೃತಿವಂದ್ಯ ೧

ಪಂಚಾತ್ಮನಾಗಿ ಪ್ರಪಂಚ ವ್ಯಾಪಿಸಿ ನಿ–
ರ್ವಂಚನೆಯಿಂದ ನೀ ವಂಚಿಪೆ ವಂಚಕರ ೨

ಶಿವರಾತ್ರಿದಿನದಿ ನಿನ್ನವರು ತವಪೂಜೆಯಿಂ
ಭವ ನೀಗುವರು ಓ ಗುರುರಾಮ ವಿಠಲ ಸಖ ೩

ಪಾರ್ವತಿ

೧೫೯

ಕೋರಿಕೆಗಳ ನೀಡಮ್ಮ ಕೋಳಾಲಮ್ಮ ಪ

ಕೋರಿಕೆಗಳ ನೀಡೆ ಗುಣವಂತೆ ದಯಾಮಾಡೆ
ಮಾರಮಣನ ಪಾದದಾರಾಧನೆ ಮಾಳ್ಪದಕೆ ಅ.ಪ

ಹಿಮಗಿರಿ ರಾಜಸುತೆ ಯಮ್ಮಯ ಮಾತೆ
ಕಮಲಾಪ್ತ ಶಶಿವಿನುತೆ ವಿಮಲರೂಪಳೆ
ಅಹಂಮಮಯೆಂಬುವುದ ಬಿಡಿಸಿ
ಕ್ರಮವಾದ ಪಥತೋರೆ ಸುಮ ಶರೀರೆ ೧

ನಿನ್ನುಪಾಸನದ ದೈವದಾಪೆಸರಿನ ಜಪ
ವನ್ನು ಮಾಳ್ಪ ಪುಣ್ಯದ ಲೇಶದ ಫಲ-
ವನ್ನು ನೀಯೆನಗಿತ್ತು ಯನ್ನಪಾಪವ ಕಳೆದು
ದುರ್ನಯಶಾಲಿಗಳನ್ನು ತರಿದು ಮುದದಿ ೨

ದುಷ್ಟ ವೃಶ್ಚಿಕ ಸರ್ಪದ ಬಾಧೆಯ ಬಿಡಿಸಿ
ಇಷ್ಟಾರ್ಥವ ಸಲ್ಲಿಸಿ
ಶಿಷ್ಟ ಜನರ ಕಾಯೆ ಶಿವನರಸಿಯೆ ತಾಯೆ
ದಿಟ್ಟ ಶ್ರೀ ಗುರುರಾಮ ವಿಠಲನ ತಂಗಿಯೆ ೩

೧೬೦

ಮಾತಾನ್ನಪೂರ್ಣೆ ಮಾಮಮಾಪರ್ಣೆ ಪ

ಪಾತಕವನು ಕಳೆದು ಪಾದಸೇವೆಯ ನೀಯೆ ಅ.ಪ

ಏನು ಅರಿಯದ ಮೂಢನು ನಾನು
ಜ್ಞಾನವೃಷ್ಟಿ ಪ್ರದಾಯಕಳು ನೀನು
ಮಾನಸವನು ನಿರ್ಮಲ ಮಾಡಿ ಕೈಪಿಡಿಯೇ ೧

ಅನ್ನವ ನೀಡೇ ದರ್ಶನ ಮಾತ್ರ
ಧನ್ಯನ ಮಾಡೇ ಕರುಣದಿ ನೋಡೇ
ಅನ್ಯರಿಗೀಪರಿ ಬನ್ನಪಡಲಾರೆನು ೨

ತಾಯಿಯು ನೀನು ನಮಗೆ ತಂದೆ
ರಾಯ ಶಂಕರನು ಭವಜಲಧಿಯೊ
ಳಾಯಾಸಪಡುತಲಿ ನೋಯುತಲಿರುವೆನು ೩

ಕಾಶಿನಿವಾಸೆ ಭಕ್ತ ಜನರ
ಕ್ಲೇಶವಿನಾಶೆ ವಿಶ್ವವಿಲಾಸೆ
ಭೂಸುರವಿನುತೆ ದೇವಾಸುರ ಪೂಜಿತೆ ೪

ಪ್ರೇಮದಿ ಭಿಕ್ಷ ನಿನ್ನಿಂದ ಪಡೆದು
ತಾಮರಸಾಕ್ಷ ಬಲಿಯ ಗೆದ್ದ
ವಾಮನ ಶ್ರೀ ಗುರುರಾಮ ವಿಠಲ ಸ್ವಾಮಿ ೫

೧೬೧

ಮಾಮವ ಶ್ರೀಗೌರಿ ಮಾರಜನಕ ಸೋದರಿ ಅಂಬ ಪ

ಸಾಮಜಗಮನೆ ಬುಧಜನ ಸನ್ನುತ ಪದಯುಗಳೆ ಅಂಬ ಅ.ಪ

ಪರ್ವತ ರಾಜಕುಮಾರಿ ಪಾತಕ ವಿಪಿನ ಕುಠಾರಿ
ಶರ್ವಾಣಿ ಶಂಕರಿ ವಿಶಾಲಾಕ್ಷಿ ತ್ರಿಪುರ ಸುಂದರಿ ೧

ದಾಕ್ಷಾಯಣಿ ದಯಯಾಮಾಂ ವೀಕ್ಷಸ್ವಾದ್ಯ ಭವಾನಿ
ರಾಕ್ಷಸಕುಲ ಸಂಹಾರಿ ರಾಜರಾಜೇಶ್ವರಿ । ಅಂಬ ೨

ಸಾಮಜರಿಪುಯಾನೆ ಸಕಲಗುಣನಿದಾನೆ
ಕಾಮಾರಿವಲ್ಲಭೆ ಗುರುರಾಮವಿಠಲ ಸಹಜೆ । ಅಂಬ ೩

೧೬೨

ಮೀನಾಕ್ಷಿದೇವಿ ಮಾಮಮ ಮಧುರ ಪ

ಸದಾ ನಿನ್ನ ಆನತರಿಗೆ ಡಿಂಗರಿಗನು ನಾನಮ್ಮ ಅ.ಪ

ಬಹು ಜನ್ಮದಿಂದ ಮಾಡಿದ ಪುಣ್ಯ
ವಿಹಿತ ಫಲದಿಂದ ತವಪದ ಪಂಕೇ
ರುಹವ ಕಂಡೆನು ಇಂದಿಗಹಹ ಧನ್ಯನು ನಾನು ೧

ಮಲಯರಾಜಸುತೇ ಮಾಂಪಾಹಿಮಾತೆ
ಕಲುಷವಿರಹಿತೆ ಕರಪಿಡಿದೀ
ಜಲಜಾಕ್ಷನಡಿದಾವರೆಗಳ ತೋರಮ್ಮ ೨

ಆಶಾಪಿಶಾಚಬಿಡಿಸಿ ತವ
ದಾಸರ ದಾಸ್ಯವನು ಕರುಣಿಸಿ
ಲೇಸುಪಾಲಿಸೆ ಸುಂದರೇಶನರ್ಧಾಂಗಿಯೆ ೩

ಹಿರಿಯರಿಗೆಲ್ಲಾ ವರಗಳ ಕೊಟ್ಟು
ಪೊರೆದುದನೆಲ್ಲ ಕೇಳಿ ನಿನ್ನ
ಚರಣವ ನಂಬಿದೆ ಸ್ಥಿರ ಮನವನು ಕೊಡೆ ೪

ಪಾಮರನು ನಾನು ಜ್ಞಾನ ಶೂನ್ಯನು
ತಾಮಸನರನು ಬಾಲಕನೆಂದು
ಪ್ರೇಮದಿ ನೋಡೆ ಗುರುರಾಮ ವಿಠಲನ ತಂಗಿ ೫

೧೬೩

ಶೈಲ ರಾಜಕುಮಾರಿ ಶಂಕರಿ ಪ

ಫಾಲಲೋಚನನರಸಿ ಭವಭೀತಿ ಬಿಡಿಸಿ ನಿ–
ನ್ನೋಲಗ ಸಂತತವೀವುದು ಅ.ಪ

ಕರಿಮಣಿ ಬಿಚ್ಚೋಲೆ ಹರಿದ್ರಾಕುಂಕುಮ ಬಳೆ
ಕರುಣದಿ ನಿರುತವು ಪಾಲಿಸೆ ೧

ನಿಜಪತಿಯಂಘ್ರಿ ನೀರಜ ಸೇವೆಯೊಳು ಮನ
ರುಜುವಾಗಿ ನಿಲುವಂತೆಮಾಳ್ಪುದು ೨
ಗುರುರಾಮ ವಿಠಲ ಸೋದರಿ ನಿನ್ನ ತುರುಬಿನ
ಪರಿಮಳ ಕುಸುಮವನೀಡುತ ಕಾಯ್ವುದು ೩

೧೬೪

ಹರನರಾಣಿ ಉರಗವೇಣಿ ಸ್ಮರಿಪೆ ನಿನ್ನನಾ ಪ

ಚರಣಸೇವೆ ಇತ್ತು ನಿರತ ಪೊರೆವುದೆಮ್ಮ ನೀಂ ಅ.ಪ

ಕರಿಗಮನೆ ಶುಭಾಂಗಿ ವರಗುಣಭರಿತೆ
ಸುರನರೋರಗವಿನುತೆ ಶೋಭನಚರಿತೆ ೧
ಸರ್ವಮಂಗಳೆ ಪಾರ್ವತಿ ಮದಗರ್ಮದಿಮೆರೆವ ದು–
ರ್ವಿನೀತರ ಛೇದಿಸುತ ಸುಪರ್ವರ ಪೊರೆವೆ ೨

ಮನದದುರ್ವ್ಯಸವ ಬಿಡಿಸೆ ಜನನಿ ಶಂಕರಿ
ವನಜನಯನೆ ಗುರುರಾಮ ವಿಠಲನ ಸೋದರಿ । ಗೌರಿ ೩

ಗುರುಸ್ತುತಿ

೧೬೫

ಗುರುರಾಮವಿಠಲ ಶ್ರೀರಾಮವಿಠಲ
ವರ ಭಾಗ್ಯನಿಧಿವಿಠಲ ಜಯತು
ಪರಮಾತ್ಮಭಿನವ ಜನಾರ್ದನ ವಿಠಲ ಸಿರಿಜನಾರ್ದನ
ವಿಠಲ ಜಯತು ೧

ಗುರುಗೋಪಾಲ ವಿಠಲ ಗೋಪಾಲ ವಿಠಲ
ವಿಜಯ ವಿಠಲ ಜಯ ಜಯತು
ಪುರಂದರ ವಿಠ್ಠಲ ಶ್ರೀಕೃಷ್ಣ ಪರಾತ್ಪರ ರಂಗ ವಿಠಲ ಜಯ
ಜಯತು ೨

ಜೈ ಜೈ ವಿಠ್ಠಲ ಜೈ ಜೈ ವಿಠ್ಠಲ ಜೈ ಜೈ ವಿಠ್ಠಲ ಜಯ ಜಯತು
ಜಯ ಪುಂಡರೀಕ ವರದ ಭಕ್ತಜನ ಭಯಹರ
ಗುರುರಾಮ ವಿಠಲ ಜಯತು ೩

೧೬೬

ಗುರುಸಂತತಿಗೆ ನಮೊ ನಮೊ ಶ್ರೀ
ಹರಿಶರಣರಿಗೆ ನಮೋ ನಮೋ ಪ

ಪರಮರಹಸ್ಯಾರ್ಥಗಳ ತಿಳಿದಿರುವ
ಧರಣೀಸುರರಿಗೆ ನಮೋ ನಮೋ ಅ.ಪ

ವಿಜಯರಾಮದಾಸಗುರುವೆ ನಮೋ ನಮ
ಭಜಕಜನರಸುರತರುವೆ ನಮೋ
ವೃಜಿನ ಕಳೆವ ಭಾಗ್ಯನಿಧಿದಾಸ ನಮೋ
ವಂದೇ ಸುಪ್ರೇಮದಾಸ ನಮೋ ೧

ತಿರುಮಲಾಖ್ಯದಾಸರಿಗೆ ನಮೋ ನಮ
ಗುರುಗೋಪಾಲರಾಯರಿಗೆ ನಮೋ
ವರ ಭಾಗಣ ವಿಜಯರಾಯರಿಗೆ ನಮೋ
ಪುರಂದರಾಖ್ಯ ಸುರಮುನಿಗೆ ನಮೋ ೨

ವ್ಯಾಸಾಭಿಧಮೌನೀಶನಮೋ । ಹರಿ
ದಾಸಶ್ರೀಪಾದರಾಯರಿಗೆ ನಮೋ
ಭೂಸುರ ಪ್ರಿಯಹನುಮತೇ ನಮೋ
ಸೀತೇಶ ಶ್ರೀಗುರುರಾಮ ವಿಠಲ ನಮೋ ೩

೧೬೭

ಗುರುರಾಯ ನಿನ್ನ ಸಮರನ್ಯಾರ ಕಾಣೆ ಪ

ತರತಮ ಪಂಚಭೇದವರ ಮಾರ್ಗವ ತೋರೋ ಅ.ಪ

ತ್ರಿವಿಧ ಜೀವರಿಗೆ ಹರಿ ಕಾರಣ ಕರ್ತನೆಂದು
ವಿವಿಧ ಗತಿಗಳೆಂದು ಶ್ರವಣ ಮನನ ಮಾಡಿಸೊ ೧

ಪರಮಾತ್ಮ ಜೀವಾತ್ಮ ಪರಸ್ಪರ ಭೇದವೆಂದು
ಅರುಹಿಸೊ ನಿನ್ನವರಿಂದನುದಿನ ಗುಣಸಿಂಧು ೨

ನಿಜ ಸಿದ್ಧಾಂತ ಸುಜನರಿಗೆ ಬೋಧಿಸಿದ
ಭುಜಗ ಶಯನನ ಭಕ್ತ ವಿಜಯ ರಾಮದಾಸವರ್ಯಾ ೩

ಶಂಕೆಗಳ ಬಿಡಿಸಿ ಮೊರೆಹೊಕ್ಕ ಶಿಷ್ಯರಿಗೆ
ಅಂಕಿತಗಳ ಕೊಟ್ಟು ಆದರಿಸುವೆ ಸದಾ ೪

ಭಾಗ್ಯನಿಧಿ ದಾಸರ ಶಿಷ್ಯಾಗ್ರೇಸರ ಎನ್ನ
ಯೋಗ್ಯತೆ ತಿಳಿಸಿ ಗುರುರಾಮವಿಠಲನ ತೋರೋ ೫

೧೬೮

ಗುರುರಾಯ ಕರುಣಿಸೊ ಶರಣಾಗತರಂ ಪ

ಸ್ಮರಣೆಮಾತ್ರದಿ ಸರ್ವದುರಿತಗಳ ಕಳೆದು
ಪರಮಪುರಷನ ದರ್ಶನವೀಯುತೆ ಅ.ಪ

ನಾನು ಎಂಬೊ ದುರಭಿಮಾನವ ಖಂಡಿಸು
ನೀನೇ ಸರ್ವತ್ರಯೆಂಬ ತತ್ವ ಬೋಧಿಸು ೧

ಆರು ಮಂದಿಯ ಹುಡುಗಾಟವು ಹೋಗಲಿಯಿ-
ನ್ನಾರುಮಂದಿಯೊಳು ಸ್ನೇಹವು ಬೆಳಿಯಲಿ ೨

ಗುರುರಾಮ ವಿಠ್ಠಲನೆ ಸರ್ವೋತ್ತಮನೆಂದು
ಇರುಳೂ ಹಗಲು ನೆನೆವ ಭಾಗ್ಯಕೊಡಿಸಿ ೩

೧೬೯

ಗುರುವೇ ಸುರತರುವೇ
ಹರಿಭಕ್ತಾಗ್ರೇಸರ ವಿಜಯರಾಯ ಪ

ಪುರಂದರದಾಸರ ಕರುಣಕೆ ಪಾತ್ರನೆ
ಮರುತ ಮತಾಬ್ಧಿಗೆ ಚಂದ್ರ ವಿಜಯರಾಯ ಅ.ಪ

ವಿಷ್ಣು ಬ್ರಹ್ಮ ಶಿವರನುಪರೀಕ್ಷಿಸುತು
ತ್ಕೃಷ್ಟ ಹರಿಯೆನುತ ಶಿಷ್ಟರಿಗರುಹಿದ ೧

ಜನುಮ ಜನುಮದಿಂದನುಸರಿಸುತಿಹ
ಘನದುರಿತವ ದರುಶನ ಮಾತ್ರ ಕಳೆವ ೨

ಪರಂಪರದಿ ತವಪಾದ ಸೇವಗೆ
ಗುರುರಾಮ ವಿಠಲನ ಚರಣವ ತೋರಿಸು ೩

೧೭೦

ಗುರುವೇ ರಾಘವೇಂದ್ರ ಪ

ಗುರುವೆ ಆಶ್ರಿತ ಸುರತರುವೆನುತಲಿನಿನ್ನ
ಚರಣ ನಂಬಿದವರಿಗೆ ಪರಮಾನುಗ್ರಹ ಮಾಳ್ಪ ಅ.ಪ

ಮಂತ್ರಾಲಯದಲಿ ನೀನಿಂತುನಿರಂತರ
ಸಂತರಿಷ್ಟಾರ್ಥವ ಸಲಿಸುತಲಿರುವೆ ೧

ಜಡಮೂಕಬಧಿರಾಂಧರು ನಿನ್ನ ಭಜಿಸಲು
ದೃಢ ಮಾಡಿ ಅವರ ಆದರಿಸುವೆ ಸತತ ೨

ಸ್ಮರಣೆ ಮಾಳ್ಪರ ಭವ ದುರಿತವ ತರಿವೆ
ಗುರುರಾಮವಿಠಲನ ಶರಣರಗ್ರಣಿಯೆ ೩

೧೭೧

ಪ್ರಾಣಪತೇ ಗುರುವರೇಣ್ಯಾಗ್ರಗಣ್ಯ ಪ

ಕಾಣೇ ನಿನಗೆ ಸರಿಜಾಣರ ತ್ರಿಜಗದೊಳು ಅ.ಪ

ರಾಮಕೃಷ್ಣ ವೇದವ್ಯಾಸ ನೀ ಮೂರವತಾರದಿ
ಪ್ರೇಮದಿ ಮಾಡಿದೆ ನಿಷ್ಕಾಮ ಮಾರ್ಗಸ್ಥಾಪಕನೆ ೧

ಪ್ರೇರಕ ಪ್ರೇರ್ಯನು ಶ್ರೀ ನಾರಾಯಣನೆಂಬೋ ಮತ
ಧಾರಾಳವಾಗಿ ನಿಲ್ಲಿಸಿ ಕ್ರೂರರೆದೆಯವೊಡೆದೆ ೨

ನಿನ್ನ ನಂಬಾದವ ಬನ್ನಬಡುವ ಭವದಿ
ಚೆನ್ನಗುರುರಾಮವಿಠಲನ್ನ ಮಚ್ಚಿಸಿದೆ ಧೀರಾ ೩

೧೭೨

ರಾಘವೇಂದ್ರ ಗುರುವರ್ಯ ಮಮಾಘನಾಶನಾ ಪ

ಬಾಗಿ ನಮಿಪೆ ನಿಮ್ಮ ಪಾದ ಪದ್ಮಕ್ಕನುದಿನ ಅ.ಪ

ಕನಕ ಕಶ್ಯಪನಾತ್ಮಜನೆಂದೆನಿಸಿ ಮೋದದಿ
ವನಜನಯನ ಸ್ಥಂಭದಿ ಬರುವಂದದಿ ಗೈದಿ ೧

ವ್ಯಾಸಮುನಿರಾಯ ಪುರಂದರದಾಸರ ಗುರುವೆ
ದೋಷರಹಿತ ಹರಿಭಕ್ತರಿಗೆ ಸುರತರುವೆ ೨

ಗುರುರಾಮ ವಿಠಲನ ಪ್ರಿಯಕಿಂಕರವರೇಣ್ಯನೆ
ವರಮಂತ್ರಾಲಯನಿಲಯ ನೀಂ ಕರುಣಿಸೆನ್ನನೆ ೩

೧೭೩

ಸೇವಿಸುವೆ ನಿನ್ನನು ಶ್ರೀಪಾದರಾಯ ಪ

ಭಾವವಿರತಿ ಕೊಡು ಭಾಗವತಗೇಯಾ ಅ.ಪ

ವ್ಯಾಸಮುನಿಗೆ ವಿದ್ಯಾಭ್ಯಾಸವಗೈಸಿದೆ
ದಾಸಕೂಟವೆಂಬುದ ಧರೆಯೊಳು ನಿಲಿಸಿದೆ ೧

ಸುವರ್ಣವರ್ಣತೀರ್ಥಸುತ ಸುಜನಾಪ್ತ
ಶ್ರೀವರ ನಾಮಾಮೃತದಾತ ಸುಮಿತ್ರ ೨

ಶತಕವಾಟಪುರ ನೃಸಿಂಹ ತೀರ್ಥವಾಸ
ಪತಿ ಗುರುರಾಮವಿಠಲಗೆ ಪ್ರಿಯದಾಸ ೩

೧೭೪

ಹರಿಗೆ ಶಿಷ್ಯನು ಬ್ರಹ್ಮ ಕಮಲಜಗೆ ಸನಕಾದಿ
ವರಋಷಿಗಳವರನಂತರದಿ ದೂರ್ವಾಸಮುನಿ
ವರನಿಗಾದರು ಜ್ಞಾನತೀರ್ಥರವರಿಗೆ ಶಿಷ್ಯ
ಗರುಡವಾಹನ ತೀರ್ಥರು ।

ತರುವಾಯ ಕೈವಲ್ಯನಾಥಯೋಗೀಂದ್ರರು ಮ
ವರಿಗೆ ಜ್ಞಾನೇಶ ತೀರ್ಥರು ಅವರ ಕರಜಾತ
ವರತೀರ್ಥರವರ್ಗೆ ಸತ್ಯಪ್ರಜ್ಞರಾಬಳಿಕ
ಪ್ರಾಜ್ಞತೀರ್ಥರುಮವರಿಗೆ ೧

ಘನ ತಪೋನಿಧಿಯೆನಿಸುವಚ್ಯುತ ಪ್ರೇಕ್ಷ್ಯರಾ
ಮುನಿಗೆ ಅನವರತ ತ್ರಿವಿಧ ಜೀವಗುರುವೆನಿಸು
ವನಿಲದೇವಂ ಶಿಷ್ಯನಾದ ಮಧ್ವಾಭಿದಾನದೊಳು
ದಶಮತಿಯೆನಿಸುವ ।
ಮುನಿಗೆ ನಾಲ್ವರು ಶಿಷ್ಯರುಗಳವರುಗಳ ಪೆಸರುಮಿಗೆ
ವನಜನಾಭಾಕ್ಷೋಭ್ಯಮಾಧವನೃಹರಿ ತೀರ್ಥ
ರಿನಿತು ನಾಲ್ವರೊಳಗಕ್ಷೋಭ್ಯ ತೀರ್ಥಯತೀಂದ್ರ
ಶ್ರೀಪಾದರಿಗೆ ಶಿಷ್ಯರು ೨

ಆನಂದತೀರ್ಥವಿರಚಿತ ಗ್ರಂಥಗಳಿಗೆ ತ
ತ್ವಾನುಸಾರಾರ್ಥಸುಧೆ ರಚಿಸಿದರ್ಜಯತೀರ್ಥ
ಜ್ಞಾನಸಿಂಧ್ವಾಖ್ಯ ಮುನಿನೃಹರಿ ತೀರ್ಥರ
ಶಿಷ್ಯರಾಜ್ಞಾನಸಿಂಧು ಮುನಿಗೆ
ಮೌನಿ ವಿದ್ಯಾಧಿರಾಜಂಬಳಿಕ ರಾಜೇಂದ್ರ

ಗಾನಕ ಜಯಧ್ವಜಗುರುಪ್ರವರವರಶಿ
ಷ್ಯಾನು ಶಿಷ್ಯರಲೆ ಪುರುಷೋತ್ತಮ ಬ್ರಹ್ಮಣ್ಯತೀರ್ಥರವರ
ಪ್ರಸಾದದಿಂ ೩

ವ್ಯಾಸಮುನಿರ್ಯರಾತರ್ವಾಯದಲಿ ಶ್ರೀನಿ
ವಾಸ ತೀರ್ಥರು ರಾಮತೀರ್ಥರಾ ಬಳಿಕ ಲ
ಕ್ಷ್ಮೀಶ ತೀರ್ಥರಿಗೆ ಶ್ರೀಪತಿ ತೀರ್ಥತದನಂತರದಿ
ರಾಮಚಂದ್ರತೀರ್ಥರ್ ।
ಲೇಸಾಗಿ ಮುಂದೆ ಲಕ್ಷ್ಮೀವಲ್ಲಭಾಖ್ಯಯೋ
ಗೀಶಂಗೆ ಶಿಷ್ಯ ಲಕ್ಷೀನಾಥ ಶ್ರೀಪಾದ
ರಾಸಂಮಿಮ್ಯಪಗೆ ಲಕ್ಷ್ಮೀಪತಿಯತೀಂದ್ರ
ಶ್ರೀನಾರಾಯಣಾಖ್ಯ ಬಳಿಕ ೪

ರಘುನಾಥ ತೀರ್ಥರಾದವರ್ಗನಂತರದಿ ಮಿಗೆ
ಜಗನ್ನಾಥ ಮುನಿಯವರ ಬಳಿಕ ಶ್ರೀನಾಥ ತೀ
ರ್ಥಗೆ ಶಿಷ್ಯರಾದ ವಿದ್ಯಾನಾಥ ಯೋಗೀಂದ್ರರವರ್ಗೆ
ವಿದ್ಯಾಪತಿಗುರು ।
ಜಗವರಿಯೆ ಮುಂದೆ ವಿದ್ಯಾವಲ್ಲಭಾಖ್ಯಯೋ
ಗಿಗೆ ಶಿಷ್ಯನಾದ ವಿದ್ಯಕಾಂತ ಮುನಿವರ್ಯ
ರಿಗೆ ಬಳಿಕ ಶಿಷ್ಯ ವಿದ್ಯಾನಿಧಿ ಮುನೀಂದ್ರ
ವಿದ್ಯಾಪೂರ್ಣರವರ ಬಳಿಕ ೫

ವಿದ್ಯಾಸಮುದ್ರ ತೀರ್ಥರವರ್ಗೆ ಶಿಷ್ಯನಾ
ಗಿದ್ದ ವಿದ್ಯಾಶ್ರೀಧರಾಖ್ಯ ತೀರ್ಥರು ಈಗ
ಪೊದ್ದಿಕೊಂಡಿರ್ಪ ವಿದ್ಯಾ ಶ್ರೀನಿವಾಸ
ತೀರ್ಥಯತೀಂದ್ರ ಶ್ರೀಪಾದರು
ಶುದ್ಧ ಮನದಲಿ ಗುರುಪರಂಪರೆ ಸ್ತೋತ್ರವಂ
ಪದ್ಮಾಕ್ಷ ಗುರುರಾಮವಿಠಲ ನುಡಿಸಿದ ತೆರದೊ
ಳಿದ್ದಂತೆ ಪೇಳ್ದೆನಾಂ ಸಜ್ಜನರು ತಪ್ಪಿರ್ದಡೆಯು
ತಿದ್ದುವುದು ಕರುಣದಿಂ ೬

ಆತ್ಮನಿವೇದನೆಯ ಹಾಡುಗಳು

೧೭೫

ಅಣುಗ ನಿನಗೆ ನಾನು । ಅಗಣಿತ
ಗುಣ ಸಮುದ್ರ ನೀನು ಪ

ಗಣಿಸಲಶಕ್ಯವು ನಿನ್ನ ಮಹಿಮೆಗಳು
ಕಮಲಭವಗೆ ಮಿಕ್ಕವರ ಪಾಡೇನು ಅ.ಪ

ನೀನುತ್ತಮ ಪುರುಷ । ನಿನ್ನಯ
ಧ್ಯಾನ ಸುಜನಕೆ ಹರುಷ
ಕಾಣೆ ನಿನಗೆ ಸರಿ ಮೂರು ಲೋಕದೊಳು
ಪ್ರಾಣಿಗಳ ಹೃದಯ ಕಮಲ ನಿವಾಸನೆ ೧

ಎನ್ನನಾದಿಕರ್ಮ । ಕಳೆಸುವುದು
ಮುನ್ನು ನಿನಗೆ ಧರ್ಮ
ಬನ್ನಬಡುತಿಹೆನು ಭವ ವಾರಿಧಿಯೊಳು
ಭಿನ್ನೈಸುವುದೇತಕೆ ನೀನರಿಯಾ ೨

ದ್ವಾಸುಪರ್ಣ ಶ್ರುತಿಯ । ಪ್ರಮಾಣದಿ
ದಾಸನು ನಾನೈಯ್ಯ
ಓ ಸೀತಾಪತಿ ಗುರುರಾಮ ವಿಠಲ
ಶ್ವಾಸ ಬಿಡುವದಕೆ ಸ್ವತಂತ್ರವೆನಗಿಲ್ಲ ೩

೧೭೬

ಆಧಾರ ನೀನೆ ಶ್ರೀಹರಿ ಕಾಯೊ ದೊರೆ ಪ

ನಾಶ ರಹಿತ ಚಾರು ಚರಿತ ಮೂರುಲೋಕಕಾಧಾರ ನೀನೇ ಅ.ಪ

ನಾರಿಮನೆ ಮಕ್ಕಳು ಅಪಾರವಾದ ಬಂಧುಗಳು
ಸ್ವಾರಸ್ಯನೋಡಿ ನಿರಾಶೆಯಿಂದ ದೂರಾಗುವರು ೧

ಧನಜನವು ಮನವು ಇಲ್ಲದವರೆಲ್ಲಾವನಜಾಕ್ಷ ನಿನ್ನ
ನೆನಪು ಮಾಡದೆ ತೃಣಕೂ ಬಾರರು ೨

ರೋಗದಿ ಬಳಲುತಾ ಕೂಗುವೆ ಬಾಯ್ಬಿಡುತ
ನಾಗೇಂದ್ರಶಯ್ಯ ಜಾಗುಮಾಡದೆ ಬೇಗಾ ಬಾರಯ್ಯ ೩

ನಿನ್ನವರಿಗೆ ಇಂಥಾ ಬನ್ನವ್ಯಾಕೆ ಶ್ರೀಕಾಂತ
ಚನ್ನಕೇಶವ ಮನ್ನಿಸೊದೇವ ನಿನ್ನವನಿವ ೪

ಪೊರೆಯುವನೀನಲ ಶರಣಜನರ ಪಾಲ
ಕರುಣಾಲವಾಲ ಗುರುರಾಮ ವಿಠಲ ಸಿರಿಲೋಲ ೫

೧೭೭

ಇವರೇ ನಮ್ಮವರೂ ಇದು ಭಾಗ್ಯವುನಮಗ್ಗಲಿರಳೂ ಪ

ಭವ ಸಮುದ್ರದಲಿ ಮುಳುಗಿಸಿ ಕಡೆಯಲಿ
ಜವನಾಳ್ಗಳ ಕೈಗೊಪ್ಪಿಸಿ ಕೊಡುವ ಅ.ಪ

ಧನಯೌವನ ಬಲವು । ದೇಹದ
ಅನುಬಂಧಗಳಿರುವು

ಘನಕಾಮಾದಿಗಳಧಿಕವಾಗಿದ್ದರೆ
ಮನೆಮಕ್ಕಳುವನಿತಾದಿಗಳೊಲಿವರೊ ೧

ಕೇಳಿದ್ದಿಲ್ಲೆನಲೂ । ಇವನ ಹೀ–
ಯಾಳಿಪರ್ ಸ್ವಜನಗಳೂ
ಕಾಲಕಾಲದಿ ಬಾಡಿಗೆ ಎತ್ತಿನ ಪರಿ
ಆಳಾಗಿದ್ದರೆ ಹಾ ಎಂದು ನಗುವ ೨

ಇವರಾಸೆಯ ಮಾಡೀ । ನಾವುನ–
ಮ್ಮವರನು ಹೋಗಾಡಿ
ಕವಳಕೆ ಗತಿಯಿಲ್ಲದೆ ಪರಿಯಾಯಿತು
ಕಡೆಹಾಯಿಸು ಗುರುರಾಮವಿಠ್ಠಲನೆ ೩

೧೭೮

ಇಹಸುಖ ಮೊದಲೇಯಿಲ್ಲ । ಕೃಷ್ಣ
ಅಹಹ ಪರಸುಖವಾಗುವುದ್ಯಾಗೊ ಪ

ಸಾಹಸಿನಾನೆನುತ ಜನರ ಮೆಚ್ಚಿಸುವೊಡೆ
ಕುಹಕ ಮಾತುಗಳ ಕೂಗಿ ಬಾಯಾರಿದೆ ಅ.ಪ

ಶ್ರವಣ ಮನನ ನಿಧಿ ಧ್ಯಾಸನ ವೊಂ–
ದೆವೆ ಮಾತ್ರವು ನಿಜವಾಗಿ ಕಾಣೆನುನಾ
ಬವನಾಶಿ ಧರಿಸಿ ದಾಸನೆಂದು ನಾ
ಬರಿದೆ ದೇಶಗಳ ತಿರುಗಿ ಬೆಂಡಾದೆನು ೧

ಯಮನಿಯಮಾಸನ ಯೋಗ । ಗಳ
ಕ್ರಮವರಿಯೆನು ನರಜನ್ಮದೊಳೀಗ
ಭ್ರಮೆಯ ಪಡುತ ಬಳಲುವೆಯಾವಾಗ
ಮಮಯೆಂಬುದರಿಂ ಬಂದಿತು ರೋಗ ೨

ಶಂಕರ ಮುಖ ಸುರವಂದ್ಯ । ಅರಿ
ಶಂಖ ಗದಾಧರ ಶ್ರೀಶ ಮುಕುಂದ
ಸಂಕಟ ಬಂದಾಗ ವೆಂಕಟರಮಣೆಂದು
ಮಂಕುಜನರು ಪೇಳ್ವಗಾದೆಯಂತಾಯಿತು ೩

ಕಾಸಿಗೆ ತಿರುಗಿದೆನಲ್ಲದೆ । ದಿವ್ಯ
ಕಾಶಿಗಯಾಯಾತ್ರೆಯ ಮಾಡಿದೆನೇ
ಯೇಸೆಂದ್ಹೇಳಲಿಯನ್ನ ತಪ್ಪುಗಳು
ಘಾಶಿಪಟ್ಟೆ ಸಾಕು ಸಾಕಿದರ ಗೊಡವೇ ೪

ಕೊಟ್ಟಿದ್ದರೆ ಹರಿಕೊಡುವ । ಯಂ
ದಷ್ಟು ಜನರು ಆಡುವ ಬರಿ ಪದವ
ಕೊಟ್ಟಿರುವದಕು ಕೊಡದಿರುವದಕೂ
ಕೃಷ್ಣ ನೀನರಿಯದೆ ನಾನು ಸ್ವತಂತ್ರನೇ ೫

ಕಣ್ಣಿಲ್ಲದ ಚಿಂತೆವಂದು । ಸದಾ
ಬನ್ನ ಬಡುವದು ಯೋಚನೆಯೆರಡು
ನಿನ್ನವನೆನಿಸೀ ಕಷ್ಟ ಬಿಡಿಸಿ ಒಳ-
ಕಣ್ಣು ಕೊಟ್ಟು ನಿನ್ನ ಸೇವೆಯ ಪಾಲಿಸೋ ೬

ಛಳಿ ಜ್ವರದ ಯಾತನೆ ಪಡುವೆ । ನಿನ್ನ
ಚಿತ್ತದಂತೆ ಮಾಡಿಸು ನಿನ್ನೊಡವೆ
ಖಳನೆ ನಾನು ಬ್ರಹ್ಮಾದ್ಯರ ಗುರುವೆ
ಕರೆಕರೆ ಪಡಿಸುವುದು ನಿನಗೆ ತರವೇ ೭

ಆರು ಜನರ ಸೇವೆ ಕೊಡಿಸೋ । ಯೀ
ಆರು ಜನರ ಸಂಘವ ಪರಿಹರಿಸೋ

ಮೂರು ಜನದ ಕೂಟ ಮೊದಲೇ ಬಿಡಿಸೋ
ತಾಳಲಾರೆಯಿವರು ಬಲು ಕ್ರೂರಾತ್ಮರು ೮

ಆಸೆಯ ಪರಿಹರಿಸಯ್ಯಾ । ನಿಜ
ದಾಸನೆನಿಸಿ ನೀ ಪಿಡಿಯೆನ್ನ ಕೈಯ್ಯಾ
ಈಶನೆ ಬಲು ಆಯಾಸವಾಗಿದೆ
ಈಸಲಾರೆ ಗುರುರಾಮ ವಿಠ್ಠಲ ಜೀಯಾ ೯

೧೭೯

ಎಂದಿಗೆ ಬಿಟ್ಟೀತು ಈ ಆಸೆ ಪ

ಕುಂದಿ ಕುಂದಿ ಕೊರಗುವ ಮನಸೆ ಅ.ಪ

ಸಾರವಿಲ್ಲದ ಸುಖಗಳ ಕೋರಿ । ಸಂ–
ಸಾರವೆಂಬ ಚಕ್ರದಿ ಸೇರಿ ೧

ಎಷ್ಟು ಬಂದರು ಸಾಲದು ನಿನಗೆ । ಈ
ಕಷ್ಟದಿಂದೇನು ಕಾಣುವೆ ಕೊನೆಗೆ ೨

ಹಿರಿಯರಾಡುವ ಮಾತ ಕೇಳದೆ
ಗರ್ವಹಂಕಾರಗಳಿಂ ಮೆರೆದೆ ೩

ಅದು ಇದು ಬೇಕೆಂದಪೇಕ್ಷಿಸುವೆ । ನಿನ್ನ
ಮೊದಲರಿಯದೆ ವೃಥಾ ಯೋಚಿಸುವೆ ೪

ಗುರುರಾಮವಿಠಲನ ನೆರೆ ನಂಬುತ
ಪರಮಸುಖವ ಪಡು ನೀ ಸತತ ೫

೧೮೦

ಎಂದಿಗೊ ಕಾಣೆ ಸುಖವು । ಜೀವಕೆ ಪ

ನೊಂದು ಹಗಲಿರುಳು ಹಿಂದು ಮುಂದರಿಯದೆ
ಬಂಧಕದೊಳು ಸಿಕ್ಕಿ ಬಾಧೆ ಪಡುತಿಹುದು ಅ.ಪ

ಜನುಮಗಳೆಂಬುವದು ಗಣನೆಗೆ ಸಾಧ್ಯವಲ್ಲ
ಜನರೂಢಿ ನೋಡಿದರೆ ಕೊನೆಗಾಣುವುದೇ ಇಲ್ಲ ೧

ಗರ್ಭಯಾತನೆ ಎಂಬೋದರ್ಭುದವಾಗಿಹದು
ನಿರ್ಭರ ದುಃಖಗಳಾವಿರ್ಭೂತವಾಗುವುದೊ ೨

ಬಾಲ್ಯದಿ ಪರಾಧೀನ ಯೌವನದಿ ಅಜ್ಞಾನ
ಬಾಳುವ ಕೌಮಾರ ಬಹುಚಿಂತೆಯನುದಿನ ೩

ಇದ್ದರು ದುಃಖವೆ ಇಲ್ಲದಿದ್ದರೂ ದುಃಖವೆ
ಬದ್ಧ ಸಂಸಾರಕೆ ಮದ್ದು ಮಾಡುವರಾರು ೪

ಯಾವಾವಸ್ಥೆಗಳಲ್ಲಿ ಜೀವಗೆ ಸುಖವಿಲ್ಲ
ಕಾವನು ಗುರುರಾಮವಿಠಲನೊಬ್ಬನೆ ಬಲ್ಲ ೫

೧೮೧

ಎಂದಿಗೆ ಪಾಲಿಪೆ ಎನ್ನ ಗೋ- ಪ

ವಿಂದ ಮುಕುಂದ ಆ-
ನಂದ ಮೂರುತಿ ಅ.ಪ

ಚರಣಸೇವೆಯ ಕೊಡಿಸಿ
ಪರಮಭಕ್ತರೊಳಿರಿಸಿ
ದುರಿತರಾಸಿಗಳ ಪರಿಹರಿಸಿ ೧

ಯಾರಿಂದಲೇನಾದರು ಮನಕೆ
ತಾರದೆ ಸಂತೋಷದಿ
ಮಾರಜನಕ ನಿನ್ನ ಧೇನಿಸುವಂತ ೨

ಗುರುರಾಮವಿಠ್ಠಲ ನಿನ್ನ
ಹೊರತು ಅನ್ಯರಿಲ್ಲ
ಕರುಣಿಸಿ ಕಾಯೊ ಸಿರಿನಲ್ಲ ೩

೧೮೨

ಎಲ್ಲವು ನಿನ್ನಾಧೀನ । ನಾ
ಬಲ್ಲೆನೆಂಬುದಜ್ಞಾನ ಪ

ಹುಲ್ಲು ಮೊದಲು ವಿಧಿ ಪರಿಯಂತವು ನೀ–
ನಿಲ್ಲದೆ ಕದಲದು ನಿಜವಿದು ನಿಜವಿದು ಅ.ಪ

ಸುಖವನಪೇಕ್ಷಿಸುತಿಹರು । ದು–
ಷ್ಟಖಳರು ಸಂಸಾರದೊಳು
ಸಖ ನೀನೆನ್ನದೆ ದಾರಾ ಪುತ್ರಾ–
ದ್ಯಖಿಳ ಸಂಪದವ ಬಯಸಿ ಕೆಡುವರು ೧

ಹಣ ಸಂಪಾದಿಸುವದಕು । ಸ–
ದ್ಗುಣ ವಂತನೆನಿಸುವದಕೂ
ಹಣಕೆ ಸಮಾನನು ಇವನೆಂಬುವದಕೂ । ಹಿರಿಯ–
ನೆನಿಸಿ ಪೂಜಿಸಿ ಕೊಂಬುವುದಕೂ ೨

ನೀನೊಲಿದರೆ ವಿಷವಮೃತ । ಬರಿ–
ದೆ ನಾನೆಂಬುವದ ಮೃತವಿಷ
ನೀನೆನ್ನೊಳಗೆ ನಾ ನಿನ್ನೊಳಗೆ
ಜ್ಞಾನಿಗಳರಿಯುವರೀ ನಾನಾ ಬಗೆ ೩

ಜ್ಞಾನ ಭಕ್ತಿಯು ವಿರಾಗ । ವೆಂ–
ಬೀನಿದಾನವೇ ಯೋಗ
ತಾನಾಗಿ ತನಗೆ ವದಗಿರಲಾಗ
ಆನಂದ ಪಡುವುದೇ ಬಲು ತ್ಯಾಗ ೪

ಕ್ಷೇಮದಿಂದಲಿರುವದಕೂ । ನಿ–
ರ್ನಾಮವೈದಿ ಕೆಡುವುದಕೂ
ಪಾಮರ ಜೀವರು ತಾವರಿಯರು ಗುರು
ರಾಮ ವಿಠಲ ನೀನಾ ಮಮತೆ ಕೊಡದಿರೆ ೫

೧೮೩

ಏನಿದು ಚಿತ್ರ ಎಲೋ ಕಂಜನೇತ್ರ ಪ

ದೀನನು ನಾನೆಂದು ದಿನ ದಿನ ಮೊರೆಯಿಡೆ
ನೀನು ಮಾಡಿದ ಕರ್ಮವೆಂದು ತಪ್ಪಿಸಿಕೊಂಬ ಅ.ಪ

ನೀನರಿಯದ ಹಾಗೆ ನಾನೇನು ಮಾಡಿದೆ
ಮಾನಸದಲಿ ಸಾಕ್ಷಿಯಾಗಿ ನೀನಿಲ್ಲವೇ ೧

ಸಕಲ ತತ್ವೇಶರು ಅನುಸರಿಸುವರು ನಿನ್ನ
ಯುಕುತಿ ಮಾತು ಇದಲ್ಲ ವೇದಶಾಸ್ತ್ರ ಪ್ರಮಾಣ ೨

ಸತ್ಯ ಸಂಕಲ್ಪನೆಂದು ಪೇಳುವರೆಲ್ಲರು
ಭೃತ್ಯರ ಸಲಹದ ಪ್ರಭುತ್ವವೇತಕೆ ನಿನಗೆ ೩

ಯಾವ ವಿಧದಿ ಸುಖ ಲೇಶಕಾಣೆನೋ ನಾನು
ದೇವ ನಿನ್ನ ಚಿತ್ತವೋ ಎನ್ನ ಪುರಾಕೃತವೋ ೪

ಕರಣಶುದ್ಧವಿಲ್ಲವೆಂದು ಕರಕರ ಪಡಿಸುವೆ
ಕರಣಾಭಿಮಾನಿಗಳಿಗೊಡೆಯ ನೀನಲ್ಲವೇ ೫

ಯಾವಾಗಲು ನಿನ್ನ ಮರೆಯದೆ ನೆನೆಯುವ
ಭಾವ ಕೊಡುವುದಕೆ ಬಡತನವೆ ನಿನಗೆ ೬

ಏನು ಅರಿಯೆ ನಾನು ಅಸ್ವಾತಂತ್ರನು ಜೀವ
ನೀನೆ ಸರ್ವ ಸ್ವತಂತ್ರ ಗುರುರಾಮ ವಿಠಲ ೭

೧೮೪

ಕೃಪೆಯಿಲ್ಲ ವ್ಯಾಕೊ ಎನ್ನ ಮ್ಯಾಲೆ ಕೃಷ್ಣಮೂರುತೀ
ಅಪರಾಧವೆಲ್ಲ ಕ್ಷಮಿಸಿ ಸಲಹೊ ಪಾರ್ಥಸಾರಥಿ ಪ

ನೀನಲ್ಲದನ್ಯರಿಲ್ಲವೆಂದು ನಿಖಿಲ ನಿಗಮವು
ನಾನಾ ಪರಿಯಲಿ ಸಾರುವದು ಸಕಲಶಾಸ್ತ್ರವು ೧

ಅನಾದ್ಯನಂತ ಕಾರಣ ನೀನೆಂದು ಸುಜನರು
ಮನಾದಿಗಳಿಗಗೋಚರನೆಂದೆಲ್ಲ ಪೇಳ್ವರು ೨

ಅನಾಥ ರಕ್ಷಕಾಪ್ರಮೇಯ ಆದಿಪುರುಷನೇ
ಸನಂದನಾದಿ ಸಕಲಯೋಗಿ ವಂದ್ಯ ಚರಣನೇ ೩

ನಿರಪರಾಧಿಗಳನು ಪೊರೆಯಲೇಕೆ ಸಂಶಯ
ಸುರೇಶರುದ್ರ ಬ್ರಹ್ಮಜನಕ ನೀನೆ ನಿಶ್ಚಯ ೪

ಕರುಣದಿ ನೀನೆ ಕಾಯಬೇಕು ಮರೆಯದೆನ್ನನು
ಗುರುರಾಮ ವಿಠಲ ಬಿಡದಿರುಕೈದಾಸದಾಸನು ೫

೧೮೫

ದೊರೆನೀನೆ ಮಾಧವ
ಮೊರೆ ಹೊಕ್ಕೆನೋದೇವ ಪ

ಕರಿರಾಜವರದನೇ
ಶರಣಾರ್ತಿಹರಣನೇ ಅ.ಪ

ಆರೊಂದುವ್ಯಸನದಿ
ಈರೊಂದು ತಾಪದಿ
ಗಾರಾದೆ ಮೋಹದಿ
ಕಾರುಣ್ಯವಾರಿಧಿ ೧

ಅನುಮಾನವೇತಕ್ಕೆ
ಎನಕಷ್ಟಬಿಡಿಸಲು
ಅನುದಿನದಿ ಬೇಡಲು
ಮನಸೇಕೆ ಬಾರದು ೨

ಸುರವಂದ್ಯ ಚರಣನೆ
ಗುರುರಾಮ ವಿಠಲನೆ
ಸರಿಯಾರೊ ನಿನಗೆಣೆ
ಪರಿಪಾಲಿಸೆನ್ನನೆ ೩

೧೮೬

ನಾಮರೆತರು ನೀಮರೆವರೆ ಹರಿಯೇ ಪ

ಬಲ । ರಾಮನನುಜ ಭವ್ಯಚರಿತ ಭದ್ರದಾಯಕ
ಅಭಿ । ರಾಮಪೂರ್ಣ ಕಾಮದುಷ್ಟರಾಕ್ಷಸಾಂತಕ ಅ.ಪ

ಸರ್ವತ್ರ ಸರ್ವವಾಗಿ ವ್ಯಾಪಿಸಿನೀನಿರುವೇ
ಸರ್ವೇಶ ಸರ್ವಾಧಾರಣಶರಣಜನ ಸುರತರುವೇ ೧

ಅಜ್ಞಾನಿ ನಾನು ಮೂಢ ಪಾಮರ ಅಲ್ಪಜೀವನು
ಸುಜ್ಞಾನಮಯ ಸ್ವರೂಪಾಂತರ್ಯಾಮಿಯು ನೀನು ೨

ಎಳೆ । ಗಂದಿಯ ತುರುವರಸುವ ಪರಿ ಎಲ್ಲ ಭಕ್ತರಾ
ತ್ವರ । ದಿಂದ ಬಂದು ಪೊರೆವೆ ನೀ ಕರುಣಾ ಸಾಗರಾ ೩

ಶುಕ । ಶೌನಕಾದಿ ಮೌನಿ ಹೃದಯ ಪದ್ಮಮಿತ್ರನೆ
ನಿನ್ನ । ಧ್ಯಾನ ಮಾಳ್ಪಗುಂಟೆ ಹಾನಿ ದೇವದೇವನೆ ೪

ಕರೆದರೆ ಬರದಿರಲು ನಮ್ಮ ಕಾವರ್‍ಯಾರೆಲಾ
ವಿಧಿ । ಹರಮುಖಾಮರವಂದಿತ ಗುರುರಾಮ ವಿಠ್ಠಲ ೫

೧೮೭

ನಿನ್ನ ಪೂಜೆ ಮಾಡುವುದಕನಾನುಕೂಲವು ಪ

ಎನ್ನದೇಹ ಪೋಷಣೆಗೆ ಎಲ್ಲ ಇರುವದು ಅ.ಪ

ತಾನು ಉಡುವುದಕ್ಕೆ ಹೆಚ್ಚುಧನದ ವಸ್ತ್ರವು
ದಾನ ಮಾಡುವುದಕೆ ನೀಚತರದ ಅರುವೆಯೂ ೧

ತನ್ನಸತಿಯು ಧರಿಸುವದಕೆ ಸ್ವರ್ಣದೊಡವೆಗಳು
ಘನ್ನಲೋಕ ಮಾತೆಗೆ ಗಿಲೀಟು ನಗಗಳು ೨

ಯಜಮಾನಗೆ ಘೃತದ ಪಕ್ವ ಭಕ್ಷ್ಯ ಭೋಜ್ಯವು
ಇತರ ಜನರಿಗೆಲ್ಲ ಎಣ್ಣೆಕರಿದ ಭಕ್ಷ್ಯವು ೩

ದೇಹ ಸಂಬಂಧಿಗಳಿಗೋಸುಗ ಸಾಲಗೈವುದು
ಶ್ರೀಹರಿ ನಿನ್ನವರು ಕೇಳೆ ಇದ್ದರು ಇಲ್ಲವೂ ೪

ತನ್ನಜನರು ತಪ್ಪುಗೈಯ್ಯೆ ಮನ್ನಿಸುವದು
ಅನ್ಯಜನರೊಳಿದ್ದಗುಣವು ದೋಷವೆಣಿಪುದು ೫

ಅನ್ಯರಿಗೆ ಆಶಾಶ್ವತವು ತನಗೆ ಶಾಶ್ವತ
ಯನ್ನುತೀ ಪರಿ ತಿಳಿದು ಕೊನೆಗೆ ನರಕ ಹೊಂದುತ ೬

ಇನಿತುಭೇದ ಬುದ್ಧಿಯಿಂದ ಜನರು ಕೆಡುವರು
ಘನಮಹಿಮೆ ಗುರುರಾಮವಿಠಲ ನಿನ್ನ ಮರೆವರು ೭

೧೮೮

ಪ್ರಾಣದೇವ ಜೀಯ್ಯಾ ದೇಹದಲಿ
ತ್ರಾಣ ತಗ್ಗಿತಯ್ಯಾ ಪ

ಕಾಣೆ ಕಾಯುವರ ನೀ ಕೈ ಬಿಟ್ಟರೆ
ಜಾಣರಾಮ ಕಾರ್ಯಧುರೀಣ ಗುರುವೇ ಅ.ಪ

ಕಾಲು ನೋಯುತಿಹುದು ಕೈಸೋತು
ಬೀಳಾಗಿರುತಿಹುದು
ಕಾಲಮೃತ್ಯುಬಹ ಕಾಲದಲ್ಲಿ ಗೋ
ಪಾಲನ ಸ್ಮೃತಿ ಕೊಡು ಜಾಲವ ಮಾಡದೆ ೧

ಜನರ ಬೇಡಲಾರೆ ನಿನಗಿದು
ವಿನೋದವೇನೋ ದೊರೆ
ಅನುದಿನದಲಿ ದುರ್ಜನರರಿಯದೆಯಿವ
ಧನಿಕನೆನ್ನುತಲಿ ಗೋಣಗಿ ಕೊಂಬುವರು ೨

ವರುಷವೈವತ್ತಾರು ಕಳೆದಿತು
ಪರಿಪಾಲಿಪರ್‍ಯಾರು
ಕರವಪಿಡಿದು ಶ್ರೀ ಗುರುರಾಮವಿಠಲನ
ಚರಣವ ತೋರಿಸಿ ದುರಿತವ ಕಳೆಯೈ ೩

೧೮೯

ಮರೆತೆ ಯಾಕೊ ಎನ್ನರಂಗ
ಮಾರಕೋಟಿ ಸುಂದರಾಂಗ ಪ

ನಿರತ ನಿನ್ನ ಚರಣ ಕಮಲಕ್ಕೆರಗಲಿಲ್ಲವೆ
ಸರುವಾಂತರಯಾಮಿಯೆಂದು ಶೃತಿಯು ನಿನ್ನ ಪೊಗಳವೆ ಅ.ಪ

ಎಲ್ಲಲೋಕ ತುಂಬಿರುವನು ಎನ್ನೊಳಿಲ್ಲವೆ
ಬಲ್ಲಿದನೀ ಒಳಗೆ ಇದ್ದು ಬರಿದೆ ಬನ್ನಬಡಿಸುವರೆ ೧

ಸಿರಿಯ ಮದದಿ ಸೊಕ್ಕಿ ದೀನರ ಪೊರೆಯದಿದ್ದರೆ
ಶರಣಾಗತ ಪ್ರಾಣನೆಂಬ ಬಿರುದು ಪೋಗದೆ ನಿನಗೆ ೨

ತಪ್ಪುನನ್ನದು ಒಪ್ಪುನಿನ್ನದು ಸರ್ಪಶಯನನೆ ನ-
ಮ್ಮಪ್ಪಕಾಯೊ ಶ್ರೀ ಗುರುರಾಮ ವಿಠಲರಾಯ ಸ್ವಾಮಿ ೩

೧೯೦

ಯಾರಲ್ಲಿ ಪೋದರು ನೀರಾದರೂ ಕೊಡರು ಪ

ದೂರ ಹೋಗೆಂಬರು ಬದಿಸೇರಲೀಸರು ಅ.ಪ

ಹಸಿವು ತೃಷೆಗಳಿಂದಲಿ ವ್ಯಸನವಪಡುತಲಿ
ಉಸುರುಸುರೆನುತಲಿ ಬಸವಳಿದು ಭಯದಲಿ ೧

ರೋಗದಲಿ ಬಳಲುತ ಹ್ಯಾಗಿನ್ನು ಎನ್ನುತ
ಕೂಗುತ್ತ ಬಾಯ್ಬಿಡುತ ಎಲ್ಲರನು ಬೇಡುತ ೨

ಗುರುರಾಮವಿಠಲನ ನೆರೆ ನಂಬದಿರುವನ
ಪರಿಪರಿಯಲಿ ಜನ ಬಯ್ಯುವರನುದಿನ ೩

೧೯೧

ರೋಗದಿ ಬಳಲಲಾರೆ ನಾಗಶಯನ
ಹ್ಯಾಗಾದರು ಮಾಡು ನಿನ್ನ ಸಂಕಲ್ಪ ಪ

ವಾತಪಿತ್ತದ ರೋಗ ಬಾಯಿಗೆ ಅನ್ನಸೇರದು
ಸೋತಿಹುದು ಕೈಕಾಲು ಬಾಯಾರಿಕೆ
ಶೀತೇಶನುತ್ಸವವು ಬಹುಸಮೀಪಕೆ ಬಂತು
ನಾಥನೈಯ್ಯ ನೀನು ಅನಾಥನು ನಾನು ೧

ಹತ್ತು ಮಾಸಗಳಿಂದ ಹಾಸಿಗೆಯಲಿ ಬಿದ್ದು
ಬತ್ತಿ ಬಾಯಿಬಿಡುತಿರುವೆ ಭಯವಾಗಿದೆ
ಭಕ್ತರ ವಿಪತ್ತುಗಳು ಪರಿಹರಿಪೆ ನೀನೆಂದು
ಬಹಳ ಹಿರಿಯರು ನಿನ್ನ ಕೊಂಡಾಡುತಿಹರು ೨

ಹಿತವಾಗಬೇಕೆಂದು ನುತಿಸುವನು ನಾನಲ್ಲ
ಪತಿತ ಪಾವನನೆ ಭಾರವು ನಿನ್ನದು
ಪೃಥಿವಿಜೆಯರಸ ಶ್ರೀ ಗುರುರಾಮ ವಿಠಲನೆ
ಮತಿವಂತರಾನುಡಿ ಸಟೆ ಮಾಳ್ಪುದುಚಿತವೆ ೩

೧೯೨

ಸಾಕು ಸಾಕು ಸ್ವಾಮಿ ಸಂಸಾರವು ಪ

ಸಾಕಿದರೊಳು ಲೇಶ ಸೌಖ್ಯವು ಕಾಣೆನು
ಬೇಕು ನಿನ್ನ ಪಾದಭಜನೆ ನಿರಂತರ ಅ.ಪ

ಚತುರಶೀತಿ ಲಕ್ಷಯೋನಿಗಳಲಿ ಪು-
ಟ್ಟುತ ಬೆಳೆಯುತ ಮೃತಿ ಪೊಂದುವ ಕಷ್ಟವು ೧

ಮಾಂಸರಕ್ತ ಪೂರಿತ ಕೂಪದಿ ನವ-
ಮಾಸ ಮಾತೃಗರ್ಭಯಾತನೆಯಿನ್ನು ೨

ಬಾಲರ ಕೂಡುತ ಬಾಲ್ಯದಲ್ಲಿ ಚೆಂಡು
ಗೋಲಿ ಗಜ್ಜುಗಗಳಾಡಿದ ಆಟವು ೩

ಹಿರಿಯರ ಮಾತನು ಕೇಳದೆ ಯೌವನ
ಗರ್ವದಿಂದ ಮೈಮರೆತು ತಿರುಗುವುದು ೪

ನಾರೀಮಕ್ಕಳು ಮನೆ ಧನ ಪಶುಗಳು
ಸೇರಿ ಇರುವ ಕೌಮಾರಾವಸ್ಥೆಯು ೫

ಕಿವಿಗಳು ಕೇಳದು ಕಣ್ಕಾಣದು ಬಾಂ-
ಧವರಧೀನದಲಿ ಬಾಳುವ ಕಷ್ಟವು ೬

ಮರಣವಾದ ಮೇಲೆ ನರಕವು ಸ್ವರ್ಗವು
ಧರಣಿಯಲಿ ಪುಟ್ಟುವುದೋ ತಿಳಿಯದು ೭

ಎಂತಾದರು ನಿನ್ನವರೊಳಿಡು ಸದಾ
ಪಂಥವೆ ದೀನರ ಮೇಲೆ ದಯಾನಿಧೆ ೮

ಭಾಗ್ಯವಲ್ಲಿ ಹನುಮಂತನೊಡೆಯ ಶರ-
ಣಾಗವತ್ಸಲ ಗುರುರಾಮವಿಠಲ ೯

೧೯೩

ಹ್ಯಾಗಾಗುವುದೊ ತಿಳಿಯದು ಈಶನಜ್ಞೆ ಪ

ಭಾಗವರತ ಸೇವೆಯಲ್ಲಿ ಬಹು ಪ್ರವೀಣವೆನೆಪುದೊ
ರಾಗಲೋಭದಲ್ಲಿ ಮುಳುಗಿಸಿ ರಚ್ಚೆಗಿಕ್ಕಿ ಬಿಡುವುದೊ ಅ.ಪ

ಕೋರಿಕೆಗಳ ಬಿಡಿಸಿ ಸದಾ ಗುಣವಂತನೆನಿಸುವುದೊ
ನಾರಿ ಮಕ್ಕಳಾಸೆಯಲಿಯನಾಥವ ಮಾಡಿಸುವುದೊ ೧

ದ್ವಂದ್ವಗಳಲಿಲೇಪವಿಲ್ಲದಾನಂದವ ಪೊಂದಿಸುವುದೊ
ಇಂದುಮುಂದು ತಿಳಿಯಗೊಡದೆ
ಮಂದಮತಿಯನಿಸುವುದೊ ೨

ಶ್ರವಣಮನನ ಸಾಧನೆಗಳ ಸದಾ ಮಾಡಿಸುವುದೊ
ಭವಭವದಲಿ ಮೂಢನೆನಿಸಿ ಪಾಪರತನ ಮಾಳ್ಪದೊ ೩

ಸರ್ವರಲ್ಲಿ ಗುಣವೆ ಕಾಣಿಸಿ ಸಂತೋಷಪಡಿಸುವುದೊ
ದುರ್ವಿನೀತನೆನಸಿ ಸದಾ ದುಷ್ಕಾರ್ಯ ಮಾಡಿಸುವುದೊ ೪

ತರತಮ ಪಂಚಭೇದ ಜ್ಞಾನ ತತ್ವ ತಿಳಿಸಿ ಸುಖಿಪುದೊ
ದುರಹಂಕಾರರಲ್ಲಿ ಮೆರೆಸಿ ನರಕದಿ ಬೀಳಿಸುವುದೊ ೫

ದಾನಧರ್ಮ ಪರೋಪಕಾರ ದಯಾವಂತನೆನಿಪುದೊ
ಹೀನನೆನಸಿ ಸಕಲರಿಂದ ಹೀಯ್ಯಾಳಿಸಿಬಿಡುವುದೊ ೬

ಭವಹರ ಗುರುರಾಮವಿಠಲ ಭಾರ ಕರ್ತನಾದವ
ಅವರವರಧಿಕಾರದಂತೆ ಎಲ್ಲರಿಗೂ ನಡಿಸುವಾ ೭

೧೯೪

ಹ್ಯಾಗೆ ಮುಕ್ತಿಯಾಗುವುದು ಕೂಗಿದರೇನು ಫಲ ಪ

ಯೋಗವರಿತು ತನ್ನಲಿರುವ ನಾಗಶಯ್ಯನನ ನೋಡದೆ ಅ.ಪ

ಗುರುಸೇವೆ ಮಾಡಲಿಲ್ಲ ಗುರುತು ತಿಳಿಯಲಿಲ್ಲ
ಅರಿತೆವೆಂದು ಹಾರಾಡುವ ಅಹಂಕಾರಿಗಳಿಗೆ ೧

ವೇದಶಾಸ್ತ್ರ ಓದಲಿಲ್ಲ ವಾದವಿಲ್ಲಿ ಸಲ್ಲ
ಬೋಧೆ ಮನಸಿಗಂಟಲಿಲ್ಲ ಬುದ್ಧಿಶೂನ್ಯರಿಗೆಲ್ಲ ೨

ಜೀವರಕ್ಷಣ ತಿಳಿಯದೆ ದೇವರನ್ನು ನಂಬದೆ
ನಾವು ನಮ್ಮದೆಂಬುದು ಬಿಡದೆ ಸಾವ ಕುನ್ನಿಗಳಿಗೆ ೩

ಬಾಯಿಮಾತಿಲಿಂದಲೇನು ಮಾಯವಾದಗಳೇನು
ನ್ಯಾಯಮಾರ್ಗವರಿತವನು ಕಾಯದಾಸೆಮಾಡನು ೪

ಗುರುರಾಮವಿಠ್ಠಲನ ಸ್ಮರಣೆಯ ಮಾಡದೆ
ಗರುವದಿ ಮೆರೆಯುವ ದುರುಳ ನರರಿಗೆ ೫

ಲೋಕನೀತಿ (ಅ)

೧೯೫

ಅಂಟಿ ಅಂಟದ ಹಾಗೆ ಇರಬೇಕು ಪ

ಈ ತಂಟೆ ಸಂಸಾರದ ಬುದ್ಧಿ ಉಂಟಾದವರಿಗೆಲ್ಲಾ ಅ.ಪ

ಎಂಟು ಮದಗಳನ್ನು ಬಿಡಬೇಕು । ಹದಿ–
ನೆಂಟನೇ ತತ್ವ ತಿಳಿಯಬೇಕು

ಮೂರೆಂಟು ಜಯಿಸಿ ನಿಜನೆಂಟನ ಕಂಡವನ
ಭಂಟನಾಗಿ ವೈಕುಂಠ ಸೇರುವದಕೆ ೧

ಶತ್ರುಗಳಾರ್ವರ ಗೆಲ್ಲಬೇಕು । ನಿಜ–
ಮಿತ್ರರಾರ್ವರೊಳು ನಿಲ್ಲಬೇಕು
ರಾತ್ರಿ ಹಗಲು ಪತ್ನೀಪುತ್ರರೊಡನೆ ಕಮಲ–
ಪತ್ರದಿ ನೀರಿದ್ದ ರೀತಿಯಿಂದಲಿ ತಾನು ೨

ಮಾನವಮಾನ ಒಂದಾಗಬೇಕು । ಅನು–
ಮಾನವಿಲ್ಲದೆ ತಿರುಗಲುಬೇಕು
ಇನ್ನೇನಾದರು ಗುರುರಾಮವಿಠಲನಾ–
ಧೀನನೆನುತ ಮದ್ದಾನೆಯಂದದಿ ತಾನು ೩

೧೯೬

ಅತ್ಯಾಸೆಪಡಬೇಡ ಅಸ್ಥಿರ ಸಂಸಾರ ಮತ್ತನಾಗದಿರೆಲವೊ ಪ

ಬತ್ತಿದ ಕೊಳದಂತೆ ಬರಿದಾಗುವದು ಮುಂದೆ
ವೆತ್ಯಸ್ತ ಸ್ಥಿತಿಯಿಂದಾನಿತ್ಯಾ ಶರೀರವಿದು ಅ.ಪ

ಜನರಾಡುವುದು ಕೇಳಿ ಮನಕೆ ಬಂದುದ ಕೋರಿ
ಅನುಮಾನ ಚಿತ್ತನಾಗಿ
ವನಿತೆಯರ ಬಲೆಯೊಳು ಸಿಲುಕಿ ಮೋಹಭ್ರಾಂತಿ
ವಶನಾಗಿ ಧರ್ಮಾಧರ್ಮಗಳ ತಿಳಿಯದೆ ೧

ಹೇಯ ಸುಖವ ಬಯಸಿ ಆಯಾಸ ಪಡುತಲಿ
ಬಾಯ ಬಿಡುತ ಸತತ
ನೋಯುತಾ ನುಡಿಯುತ ಕ್ರೋಧ ಲೋಭದಿ ಮುಳುಗಿ
ನಾಯಿಯಂದದಿ ತಿರಿಗಿ ನಾನಾ ವಿಧದಲಿ ೨

ದಾನಧರ್ಮಗಳಿಲ್ಲ ಜ್ಞಾನಸತ್ಯಗಳಿಲ್ಲ
ಧ್ಯಾನವು ಮೊದಲೇ ಇಲ್ಲ
ಹೀನರ ಸಂಗದಿ ಇರುಳು ಹಗಲೆನ್ನದೆ
ಮಾನಾಭಿಮಾನ ಅಜ್ಞಾನದಿ ಮುಳುಗಿ ೩

ಪರರೊಡೆವೆಯ ತಂದು ಒಡಲ ಹೊರೆಯುತಲ-
ಪಾರ ಚಿಂತನೆ ಪಡುತ
ಹರಿಕೊಡಲಿಲ್ಲೆಂದು ದೈವವ ದೂರುತ
ನೆರೆಹೊರೆ ನೋಡಿ ಅವರಂತೆ ನಾನಿರಬೇಕೆಂದ ೪

ಭಿನ್ನ ಜೀವರು ಕರ್ಮ ಭಿನ್ನಇವರಿಗೆಲ್ಲ
ಮುನ್ನಿನ ಕರ್ಮದಿ ಫಲ
ಬೆನ್ನಬಿಡದು ಎಂದು ಪೇಳುವ ಶಾಸ್ತ್ರಗ-
ಳನ್ನು ನಂಬದಲೆ ನಿನ್ನನ್ನೆ ನೀ ಪೊಗಳಿ ಕೊಂಡು ೫

ನ್ಯಾಯಾರ್ಜಿತ ದ್ರವ್ಯದಿಂದ ಕಾರ್ಯಗಳವು-
ಪಾಯದಂದಲಿ ನಡೆಸಿ
ತಾಯಿ ಮಕ್ಕಳ ನೋಡುವಂತೆ ದೀನರಿಗೆ ಸ-
ಹಾಯ ಮಾಡುತ ಜ್ಞಾನಿಗಳ ಸೇವಿಸುತಿಹರು ೬

ಪೊರೆವೊ ಭಾರಕರ್ತ ಗುರುರಾಮವಿಠಲ ತಾ
ಹೊರವಳಗಿರುತಿಹನು
ಶರಣಾದವರಿಗೆ ಭಯವೇನು ಸ್ವಾಮಿ
ಸರ್ವರ ಪಾಲಿಸುವನು ನಿನ್ನನು ಮಾತ್ರ ಬಿಡುವನೆ ೭

೧೯೭

ಅಭಿಮಾನವ್ಯಾಕೊ ಮಾನವಾ ಪ

ಸಭಯ ದುಃಖದೊಳಗಿರುವಾ ದುರಭಿ ಅ.ಪ

ನೀರ ಮೇಲಿನ ಗುಳ್ಳೆಯಂದದಿ ತೋರ್ಪ ಶ–
ರೀರ ಭೋಗಾಪೇಕ್ಷಿಸಿ । ನಾನು ನನ್ನದೆಂದು ೧

ಅನ್ನರಸದಿ ದೇಹ ಅಧಿಕವಾಯಿತಲ್ಲದೆ
ತನ್ನನೇನು ತಾ ಬಲ್ಲದೆ । ನಾನು ನನ್ನದೆಂದು ೨

ಊರಿನ ಜನಗಳು ಹೊರ ಪ್ಯೆಣ ಮಾಡಲು
ದಾರಿಗೆ ದಾರಿಯಾವುದು । ನಾನು ನನ್ನದೆಂದು ೩

ಶುಭ ಸಂತೋಷಗಳಿದರೊಳು ಕಾಣೆನು
ಇಭದಂತೆ ಮದವೇರುತಾ । ನಾನು ನನ್ನದೆಂದು ೪

ಇದು ಸ್ಥಿರವಿಲ್ಲ ಇನ್ನೊಂದು ತಪ್ಪುವುದದಲ್ಲ
ಪದರದೆ ನೀ ಕೇಳೀಸೊಲ್ಲ । ನಾನು ನನ್ನದೆಂದು ೫

ವೇದಶಾಸ್ತ್ರ ಪುರಾಣವ್ಯಾರ ಪೊಗಳುವುದು
ಶೋಧನೆ ಮಾಡಿ ತಿಳಿಯದೆ । ನಾನು ನನ್ನದೆಂದು ೬

ಗುರುರಾಮವಿಠಲನು ಗುರುತಾಗಿರುವ ನೆಲೆ
ಅರಿತುಕೊಂಡವ ಧನ್ಯ । ನಾನು ನನ್ನದೆಂದು ೭

೧೯೮

ಆಸೆಪಡಬೇಡ ಮನುಜ ತಿಳಿಯದೆ ದುರಾಸೆ ಪಡಬೇಡ ಪ

ಮೋಸ ಮಾರ್ಗಪಿಡಿದು ಮೂಢರನ್ನು ನೋಡಿ ನೋಡಿ ಅ.ಪ

ಚಿಂತಿಸಿ ಭ್ರಾಂತನಾಗಿ ಸಂತೋಷವಿಲ್ಲದೆ ಸದಾ
ಶಾಂತಚಿತ್ತರ ಕೂಡದೆ ಸಂತೆ ಕೂಟವನ್ನು ನಂಬಿ ೧

ಇಂದ್ರಿಯಂಗಳ ಸುಖ ಪೊಂದಿಸುತ್ತ ನೀನಿರಲು
ಮುಂದಿನ ಗತಿ ಗೋತ್ರವು ಸಂದೇಹವಾಗುವದೆಲೊ ೨

ಹೊರ ಒಳಗು ತುಂಬಿಹ ಗುರುರಾಮವಿಠಲನ
ಶರಣರನಾಶ್ರಯಸದೆ ಕರೆ ಕರೆ ಸಂಸಾರದಿ ೩

೧೯೯

ಇದು ಮುಖ್ಯಸಾರ ಮನುಜರಿಗೆ ಪ

ಇದು ಮುಖ್ಯಸಾರವೆಂದೊದರುತಿಹುದು ವೇದ
ಸದುಮಲಾತ್ಮಕನಾದ ಪದುಮಾಕ್ಷನಲಿ ಭಕ್ತಿ ಅ.ಪ

ಕೇಳಿಪೇಳುತಮನದಿ ತಾಳಿ ಸೇವಿಸಿ ಪೂಜಿ-
ಸೋಲಾಡುತೊಂದಿಸಿ ಕಾಲವ ಕಳೆಯುವ ೧

ದಾಸ್ಯಸಖ್ಯಾತ್ಮನಿವೇದನಗಳಿಂದ ಆ-
ಲಸ್ಯವಿಲ್ಲದೆ ಪರಮಾತ್ಮನ ತಿಳಿಯುವ ೨

ತೃಟಿಕಾಲವಾದರು ನಟಿಸದೆ ಮಾಯದಿ
ಹಟದಿ ಶ್ರೀಗುರುರಾಮವಿಠಲನ ಭಜಿಸುವ ೩

೨೦೦

ಇದೇ ಪರಮಸುಖವೆಂದಿರಬೇಡಿ ಮುಂದಿನ ಗತಿ ನೋಡಿ ಪ

ಒದಗಿ ಯಮನವರು ಎಳೆಯುವಾಗ ನಿಮ
ಗಿದರಿಂದೇನು ಪ್ರಯೋಜನ । ಜನರೇ ಅ.ಪ

ಜಿಹ್ವೋಪಸ್ಥಪರಾಯಣರಾಗುತ ಬಹ್ವಾಶನರೆನಿಸಿ
ಗಹ್ವರ ಈ ಸಂಸಾರವೆಂದರಿಯದೆ ಗಾದೆಗಳ್ಹೇಳುತ
ಗತಿಶೂನ್ಯರಾಗಿ ೧

ಸಾಲವ ಮಾಡುತ ಸತಿಸುತರನು ಪರಿಪಾಲನಗೈಯುತಲಿ
ಲೋಲರು ತಾವೆಂದರಿದು ಕಷ್ಟದಲಿ ಮೇಲೆ
ದೈವಕಾಪಾಡುವುದೆನ್ನುತ ೨

ಆಟಪಾಟದಲಿ ಕಾಲವ ಕಳೆಯುತ ಪೋಟಿಗಾರರಾಗಿ
ನಾಟಕಧರನಾಡಿಸುತಿಹ ಬೊಂಬೆಯ ಆಟವಿದೆನ್ನದೆ
ಅತಿಗರ್ವದಿನೀವು ೩

ಎಷ್ಟು ಜನ್ಮಗಳು ಕಳೆದುಹೋಯಿತು ಈ ಅಜ್ಞಾನದಲೀ
ಶಿಷ್ಟರು ಬೋಧಿಸೆ ಉಪಹಾಸಿಸುತಲಿ ನಷ್ಟಜ್ಞಾನವುಳ್ಳತರಾಗುತ ೪

ಕಾಮಕ್ರೋಧದೊಳೀಜುತ ಶ್ರೀಗುರುರಾಮವಿಠಲ ಎನ್ನದೆ
ತಾಮಸರೊಳಗಗ್ರೇಸರರಾಗುತ ಕೋಮಲಾಂಗಿಯರ
ಸೊಬಗಿಗೆ ಹಿಗ್ಗುತ ೫

೨೦೧

ಉದಯ ಕಾಲವದಗಿತೀಗಲೂ ನಿನ್ನಿನ್ನಂತೆ ರವಿ ಪ

ಪದುಮನಾಭನ ಸ್ಮರಿಸುತ ಮೋ–
ದದಿಯಾನ್ಹೀಕ ಬುಧರು ಮಾಳ್ಪ ಅ.ಪ

ಅಪರಾತ್ರಿಯಲ್ಲಿ ಎದ್ದು
ಚಪಲಚಿತ್ತರಾಗದಲೆ ಸು–
ರಪನ ದೆಸೆಯ ನೋಡಿ ನಮಿಸಿ
ಸುಫಲಗಳನು ಪಡೆಯುವರಿಗೆ ೧

ಕಣ್ಣುತೆರೆದು ಕೈಗಳುಜ್ಜಿ
ಕನ್ನಡಿಯನು ನೋಡಿ ಶೌಚ
ವನ್ನು ತೀರಿಸಿ ಸ್ನಾನ ಸಂಧ್ಯೆಗ–
ಳನ್ನು ಮಾಳ್ಪ ಸದ್ವಿಜರಿಗೆ ೨

ಬ್ರಂಹ್ಮಯಜ್ಞ ಜಪವು ಮುಖ್ಯ
ಕರ್ಮಗಳಿಂ ಸವಿತೃನಾಮಕ
ಧರ್ಮ ಮೂರುತಿ ಗುರುರಾಮವಿಠಲನ
ಒಮ್ಮನದಲಿ ಧ್ಯಾನಿಸುವರಿಗೆ ೩

೨೦೨

ಎಲ್ಲಾರಂತೆ ನೀ ಮಾತನಾಡು । ಸಿರಿ ಪ

ನಲ್ಲನವರ ಸಂಗದಿ ಕೂಡು ಅ.ಪ

ಉಪದೇಶ ಮಾಳ್ಪುದಕೆ ಹೋಗಬೇಡ ನೀ
ಚಪಲಚಿತ್ತನು ತಿಳಿದಿರು ಮೂಢ–
ಗುಪಿತವಾಗಿರಲಿ ಧ್ಯಾನ । ಹೊರಗೆ
ತೋರ್ಪದಿರು ಕೋಣ ೧

ಹಿಂದೆ ಹೋದರು ಬಹಳ ಮಂದಿ । ಸ್ಥಿರ–
ವೆಂದು ತಿಳಿದು ನೀದುಃಖ ಹೊಂದಿ
ಮುಂದಾಗುವುದುಕ್ಕೆಲ್ಲಾ
ಕಂದರ್ಪ ಕಾರಣನಲ್ಲಾ ೨

ಕಳ್ಳರಿಗೆ ಊರುದಾರಿ ತೋರೆ ಇನ್ನು
ಎಲ್ಲಾ ಜನರನು ಸುಲಿವರು ಮುನ್ನು
ಕ್ಷುಲ್ಲಕರಿಗೆ ತತ್ವವ ಪೇಳೆ
ಸುಳ್ಳೆಂದು ನಿಂದಿಸುವರು ೩

ಪ್ರಶ್ನೆಗೆ ತಕ್ಕ ಉತ್ತರವಾಡು । ಸೂರ್ಯ-
ರಶ್ಮಿಯೊಳಗಿರುವ ಲವಣಿಯ ನೋಡು ನಿ_
ನ್ನಸ್ವರೂಪವದರಂತೆ । ಯಾತಕೆ
ಇನ್ನು ಅಗಾಧ ಭ್ರಾಂತಿ ೪

ಅನಂತ ಪ್ರಾಣಿಗಳೊಳಗೆ ನಿವಾಸ । ನಮ್ಮ
ವನಜಾಕ್ಷ ಗುರುರಾಮವಿಠಲೇಶ
ಅನಿಮಿತ್ತ ಬಂಧುವನು ಬಿಡಿಬಿಡಿರೋ ದುರಾಶಾ ೫

೨೦೩

ಏತಕೆ ಸಂತತ ಚಿಂತಿಸುವೆ ಪ

ಕೋತಿಗೆ ಮದ್ದಿಕ್ಕಿದ ರೀತಿಲಿ ಮನವೆ ಅ.ಪ

ಹಾನಿ ವೃದ್ಧಿಗಳು ತಾನಾಗಿ ಬರುವುದು
ಏನೇನು ಮಾಡಲು ಬಿಡಲೊಲ್ಲದು
ಜ್ಞಾನವಿಲ್ಲದೆ ವೃಥಾ ಧೇನಿಸಿ ಧೇನಿಸಿ ೧

ದೇಹಸಂಬಂಧಿಗಳ ಮೋಹ ಪಾಶಕ್ಕೆ ಸಿಕ್ಕಿ
ಸಾಹಸ ಮಾಡುವುದೇನು ಫಲ
ಊಹಿಸಿ ನೋಡಲು ಭ್ರಾಂತಿಯದಲ್ಲವೆ ೨

ಸರ್ವ ಪ್ರಾಣಿಗಳನು ಸೃಷ್ಟಿಸಿ ಇರುವನು
ಪೂರ್ವ ಕರ್ಮಾನುಸಾರ ನಡೆಸುವನು
ಗರ್ವವಿರಹಿತನು ಗುರುರಾಮವಿಠಲನು ೩

೨೦೪

ಏತಕೆ ನೀ ಚಿಂತಿಸುವೆ ಹೇಡಿ ಜೀವವೇ ಪ

ವೀತಮೋಹರಾಗನಾಗಿ ವಿಧಿಪಿತ
ದಾತತಾನೆಂದು ತಿಳಿಯಲು ಹೃತ್ತಾಪನಾಶನಾ ಅ.ಪ

ಹೊನ್ನು ಹೆಣ್ಣು ಮಣ್ಣು ಮೂರು ನಂಬಬ್ಯಾಡಲೊ
ನಿನ್ನೊಳಿರುವ ಮೂರ್ತಿಯನ್ನು ಅರಿತು ಬಾಳೆಲೊ ೧

ವಂದಿಸುತ ಸಜ್ಜನರ ಕಂಡರಾನಂದ ಪೊಂದುತ
ಸಂದೇಹಗಳೆಲ್ಲ ತೊರೆದು ಸತತ ನಲಿಯುತ ೨

ಆತ್ಮವತ್ ಸರ್ವಭೂತನೆಂಬೊ ವಚನವು
ಆತ್ಮನಲ್ಲಿ ಸಮರ್ಪಿಸಿದರೆ ಪಡೆವೆ ಸೌಖ್ಯವು ೩

ಸಾಮಜೇಂದ್ರ ವರದ ಶ್ರೀ ಗುರುರಾಮವಿಠಲನ
ಪ್ರೇಮದಿಂ ನಿಷ್ಕಾಮನಾಗಿ ಸೇವಿಸುನುದಿನ ೪

೨೦೫

ಏತಕೀ ಭಯ ನೀತಿಯೇನಯ್ಯ ಪ

ಕೋತಿಯಂತೆ ನೀ ಕುಣಿದು ಜನರಾಡುವ
ಮಾತುಕೇಳು ತಾಮನದಲ್ಲಿನೊಂದು ಅ.ಪ

ತಬ್ಬಿಕೊಂಡಿರ್ಪ ಪ್ರಾರಬ್ಧ ಬಿಡುವುದೆ
ಅಬ್ಜನಾಭನಿರುವ ನಮ್ಮರಕ್ಷಿಸಲು ೧

ಬೊಬ್ಬೆರೋಗ ಬಂತೆಂದಬ್ಬರ ಜನಗೈಯ್ಯೆ
ಉಬ್ಬಿಉಬ್ಬಿನೀ ಊರಬಿಟ್ಟೋಡಲು ೨

ಹುಲಿಗಳಂಥನರರು ಇಲಿಯ ನೋಡಿ ಬೆದರಿ
ಕಳೆದುಕೊಂಬರು ತಮ್ಮ ಸರ್ವಸ್ವವ ೩

ಛಳಿ ಮಳೆಯು ಬಿಸಿಲು ಗಾಳಿಯೊಳು
ಬಳಲುವುದ್ಯಾಕೆ ಬುದ್ಧಿಯಿಲ್ಲದೆ ೪

ಕುನ್ನಿ ನಿನ್ನಂಥವರೆಷ್ಟುಮಂದಿ ಪೋದರು
ಘನ್ನಗುರುರಾಮವಿಠಲನ್ನ ನಂಬು ೫

೨೦೬

ಏನಿದು ಸಂಸಾರ ನೋಡಿದರಿದುವೆ ಮಹಾಘೋರ ಪ

ನಾನಾವಿಧ ಕೋರಿಕೆಯಿಂದನುದಿನ ನರಳುತ
ನೀರೊಳು ಕೈಬಿಟ್ಟಂತೆ ಅ.ಪ

ಒಂದು ಲಾಭ ಬರಲು ನಷ್ಟ ವೆರ-
ಡೊಂದಾಗುವುದಿದರೊಳ್
ಹಿಂದಿನ ಬವಣೆಯ ಮರೆತೆಲ್ಲರು ತಾವು
ಮುಂದೆ ಸುಖವಪಡುವೆವೆಂದರಿತಿರುವರು ೧

ತನ್ನಿಂತಾನಾಯಿತೆಂಬರು
ಕುನ್ನಿಗಳರಿಯದಲೆ
ಬನ್ನಬಡುವರೆಲ್ಲ ಬ್ರಹ್ಮರಾದರೆ
ಇನ್ಯಾತಕೆ ಶೃತಿ ಸ್ಮೃತಿ ಪುರಾಣಗಳು ೨

ಗುರುರಾಮವಿಠಲನು ಒಳಗೆ ಹೊರಗೆ
ಇರುತೀ ಜಗವನ್ನು
ಕರುಣದಿ ಪ್ರೇರಿಸುವವನ ತಿಳಿದರೆ
ಬರುವುದು ಲೆಕ್ಕಾಚಾರಕೆ ಸರ್ವವು ೩

೨೦೭

ಏನಿದು ಮನವೆ ಹೀನ ವಿಷಯಗಳ
ನೀನೆ ಕಾಮಿಸಿ ನಿರುತವು ಕೆಡುವೆ ಪ

ಪರರರಂತೆಯೆ ತಾನಿರಬೇಕೆನ್ನುತ
ಸ್ವರೂಪವರಿಯದೆ ನೀ ಕರೆಕರೆ ಪಡುವೆ ೧

ನಿಂತಲಿ ನಿಲ್ಲದೆ ಚಿಂತಿಸುತನುದಿನ
ಭ್ರಾಂತಿಯಪಡುತಲಿ ಬಾಯಿ ಬಾಯಿ ಬಿಡುವೆ ೨

ನಾಯಂದದಿ ಪರಸ್ತ್ರೀಯರ ಬಯಸುತ
ಹೇಯನೆನಿಸಿಕೊಂಡು ನೊಯ್ಯುವೆಯಲ್ಲದೆ ೩

ಮಲಮೂತ್ರದಿ ನೀ ಮಲಗಿರಲಿಲ್ಲವೇ
ಮರೆತು ಯೌವ್ವನ ಗರ್ವದಲಿ ತಲೆ ತೂಗುತ ೪

ಪರಿಪರಿವಿಧದಲಿ ಭಕ್ತರ ಪಾಲಿಪ
ಗುರುರಾಮವಿಠಲನ ಚರಣವ ನಂಬದೆ ೫

೨೦೮

ಏನು ಮಮತೆ ಏನು ಕತೆ ಇದೇನು ಜೀವವೇ
ಸಂಸಾರದೊಳ್ ಪ

ನಾನುನನ್ನದೆಂದು ವೃಥಾ ನರಳಿಬಳಲುವೆ ಅ.ಪ

ತಂದೆ ತಾಯಿಯು ಬಂಧು ಬಳಗವು ಸಂ
ಬಂಧಿಗಳೆಲ್ಲರು ಸತಿಸುತರೂ
ಎಂದಿಗು ರಕ್ಷಕರೆಂದು ನೀ ತಿಳಿದು
ಮಂದಮತಿಯೆ ಮುಂದೇ ಕೆಡುವೆಯೊ ೧

ದುರ್ವಿಷಯವನೀ ಸರ್ವದ ಕೋರುತ
ದುರ್ವಿದಗ್ಧ ವಿಜ್ಞಾನನಾಗಿ
ನಿರ್ವಹಿಸುವೆ ನಾನಿದರೊಳೆನ್ನುತ
ಗರ್ವಪಡಲೂ ಸುಪರ್ವರ್ ನಗರೇ ೨

ಸತ್ಯವೆಂಬುವದು ಮಾತೃ ಪಿತನು ಸ-
ರ್ವೋತ್ತಮ ಜ್ಞಾನವು ಭೂತದಯೆಯು ಸ-
ನ್ಮಿತ್ರಧರ್ಮವು ಭ್ರಾತೃಗಳ್ ಶಾಂತಿಯು
ಪತ್ನೀ ಕ್ಷಮೆಯೂ ಪುತ್ರರ್ ನಿತ್ಯರಿವರು ೩

ನಡೆವುದು ಯಾತ್ರೆಯು ನುಡಿವುದು ಮಂತ್ರ
ಕೊಡುವುದು ಯಜ್ಞ ಬಿಡುವುದು ತ್ಯಾಗ
ಒಡೆಯ ಹರಿ ನಿಮ್ಮೊಡನೆ ತಿರುಗುತ
ನಡೆಸುವನು ಎಂದು ಧೃಡವಾಗಿ ನಂಬದೆ ೪

ಧ್ಯಾನನದೀಯೊಳು ಸ್ನಾನಮಾಡಿಸು-
ಜ್ಞಾನಾಮೃತವನು ಪಾನವಗೈಯುತ
ಏನೇನು ಮಾಡುವುದೆಲ್ಲವು ನಿರುತ
ಶ್ರೀನಿವಾಸನ ಸೇವೆಯಿದೆನ್ನದೆ ೫

ಮೂರು ವಿಧವಾದ ಜೀವ ಕೋಟಿಯೊ-
ಳಾರು ನಾನೆಂದು ದೂರದೃಷ್ಟಿಯಿಂ
ಸಾರ ಸಂಗ್ರಹಿಸಿಯಸಾರವ ತ್ಯಜಿಸಿ
ಧೀರ ನಾಗಿದರ ಪರವ ಗಾಣದೆ ೬

ಹೇಮ ಭೂಮಿಯು ಭಾಮಾಮಣಿಯರನು
ನೀಮನವಲಿದು ವ್ಯರ್ಥನಾದೆ
ಕ್ಷೇಮವೀವಾ ಗುರುರಾಮ ವಿಠ್ಠಲನ
ನಾಮಾ ಜಪಿಸೀ ಕಾಮಿತ ಪಡಿಯದೆ ೭

೨೦೯

ಏನು ಸುಖವಯ್ಯ ಪ

ಇನ್ನೇನು ಪರಗತಿಯಹುದು ಮುಂದೆ ಅ.ಪ

ನಾನಾವಿಧ ದುಃಖಗಳಲಿ
ತಾ ನರಳುತ ಹಗಲಿರುಳೆನ್ನದೆ
ಜ್ಞಾನಶೂನ್ಯನಾಗುತ ವಿಷ-
ಯಾನುಭವದಿ ವ್ಯಥೆ ಪಡುವವಗೆ ೧

ಮಾಳಿಗೆ ಮೇಲೋಡಾಟವು
ನಾಳೆಬಹುದು ಕಷ್ಟವು ಎಂ-
ದ್ಹೇಳುವ ಹಿರಿಯರ ಮಾತನು
ಕೇಳದೆ ಗರ್ವಿಸಿ ಮೆರೆವವಗೆ ೨

ನಿದ್ರಾ ಭೋಜನ ಮೈಥುನ
ಭದ್ರವು ತನಗೆಂದು ತಿಳಿದು
ಕ್ಷುದ್ರ ಮಾರ್ಗದಲಿ ತಿರುಗಿದ ದ-
ರಿದ್ರದಿ ಹಂಬಲಿಸುವವಗೆ ೩

ಕಡುನಾರುವ ಹೊಲೆ ಗುಡಿಸಲಿಗೆ
ಒಡವೆ ವಸ್ತ್ರ ಬೇಕೆನ್ನುತ
ಮಡದಿ ಮಕ್ಕಳೆಂತೆಂಬುವ
ತೊಡರೊಳು ಬಾಯ್ಬಿಡುತಿರುವವಗೆ ೪

ಹರಿಕೊಟ್ಟ ಮಹಾಭಾಗ್ಯದಿ
ಪರಮತೃಪ್ತನಾಗಿರದಲೆ
ಗುರುರಾಮವಿಠಲನ ಮರೆದು
ಇರುಳು ಹಗಲು ಚಪಲ ಪಡುವಗೆ ೫

೨೧೦

ಕರೆಕರೆಯಿದು ಸಂಸಾರವತಿ ಘೋರ ಪ

ಹರಿಯನು ನೆರೆನಂಬಿ ಪರಮಸುಖವ ಪೊಂದು ಅ.ಪ

ಚರಣ ಸೇವಕರಾ ಪೊರೆವನು ಶ್ರೀಧರ
ದುರಿತವು ಪರಿಹರವಾಗುವದು ಅರಗಿಗೆ ಬೆಂಕಿಯಿಟ್ಟ
ತೆರನಾಹುದು ಮುಂದೆ ೧

ಎಷ್ಟು ಗಳಿಸಿದರೂ ಸಾಲದು ಎಂದು
ಕಷ್ಟವ ಪಡುವೆಯೊ ಅನುದಿನದಿ
ಕೃಷ್ಣಗೆ ಪ್ರೀತಿ ಮಾಡು ಶಿಷ್ಟರಂಘ್ರಿಯ ಬೇಡು ೨

ಸಂದೇಹವಿಲ್ಲದೆ ಗುರುರಾಮವಿಠಲನ
ಒಂದೇ ಭಕುತಿಯಿಂದ ಕೊಂಡಾಡೊ
ಅಂಥ ಪರಂಪರ ನೋಡಿದರೆ ಅಪಾರ ೩

೨೧೧

ಕಳೆಯ ಬ್ಯಾಡವೋ ಕಾಲ ಪ

ಹಲವು ವಿಧದಲಿ ಚಂಚಲ ಪಡುತಲಿ
ತತ್ವ ತಿಳಿಯದೆ ಅ.ಪ

ಈ ನರಜನ್ಮವು ನಾಳೆಬಾರದು
ಕೇಳೊ ಜ್ಞಾನಿಯಾಗದೆ ೧

ಹೇಯ ಸುಖವು ಕೋರಿ ನ್ಯಾಯ ಬಿಟ್ಟು ನಡಿಯೆ
ದಾಯ ತಪ್ಪುವುದು ೨

ಗುರುರಾಮವಿಠ್ಠಲನ ಗುರುತರಿಯದೆ
ಬರಿದೆ ಕರೆಕರೆಯಲೀ ಕಾಲ ೩

೨೧೨

ಕಾಮ ಕ್ರೋಧವನು ಬಿಡು ತಾಮಸಗುಣವ ಸುಡು ಪ

ರಾಮನಾಮ ಜಪಿಸಿ ರಾಜಯೋಗದಲ್ಲಿ ಸೇರು ಅ.ಪ

ಜ್ಞಾನಭಕ್ತಿ ವೈರಾಗ್ಯವೆಂಬಾನಂದದಿ ಮಗ್ನನಾಗಿ
ಹೀನದುರ್ವಿಷಯಗಳೇನು ಕೋರದಿರೆಲವೊ ೧

ತತ್ವೋಪದೇಶವ ತೋರು ಸಾತ್ವಿಕರೊಳಗೆ ಸೇರು
ದ್ವಿತ್ವವಿಲ್ಲದಂಥ ಸುಖಮತ್ತನಾಗೋ ಮಾನವ ನೀ ೨

ಪರಮಬೊಮ್ಮನಾದ ಸಿರಿ ಗುರುರಾಮವಿಠಲನ
ಚರಣಗಳ ಭಜಿಸಿ ಪರಮ ಸುಖಿಯಾಗೆಲೋ ೩

೨೧೩

ಕೋರಬೇಡ ದುರ್ವಿಷಯಸುಖಗಳನು ಕೋತಿಮನವೆ ನೀನು ॥ಪ॥
ಯಾರಿದ್ದರೇನು ನಿನ್ನ ಯೋಗ್ಯತೆಯ
ಮೀರಿನಡಯಲಸಾಧ್ಯ ಶತಕಲ್ಪಕು ಅ.ಪ

ಕಷ್ಟ ಒದಗಲಿ ನಿಷ್ಠುರ ನುಡಿಯಲಿ ಕೆಟ್ಟವನಿವನೆನಲಿ
ಇಷ್ಟ ಬಂಧುಗಳು ಶತ್ರುಗಳಾಗಲಿ ಇಲ್ಲದೆ ನಿಂದಿಸಲಿ
ಹೊಟ್ಟೆತುಂಬ ಆಹಾರವಿಲ್ಲದಿರಲಿ ಹುಚ್ಚನೆಂದು ಬೈಯಲಿ
ಹುಟ್ಟಿಸಿದವ ತಾ ಕಟ್ಟೆ ಮಾಡಿರುವ ನಷ್ಟವಾಗದಾತನ
ಸಂಕಲ್ಪವು ೧

ನಿನ್ನ ನಿಜವ ನೀ ಪರರಿಗೆ ಬೋಧಿಸಿ ಬನ್ನ ಬಡಲಿ ಬೇಡ
ದೈನ್ಯರಿಂದ ತಲೆಬಾಗುತ ನೀ ಖಳರನ್ನು ಕೇಳಬೇಡ

ಅನ್ಯರಂತೆ ತಾನಿರಬೇಕೆಂದಾಯಾಸ ಹೊಂದಬೇಡ
ತನ್ನತಾನೆ ಹೊಗಳಿಕೊಂಬ ಮನುಜನ
ತತ್ವನಂಬಬೇಡ । ಮೂಢಾ ೨

ಹಿರಿಯರು ಆಡುವ ಮಾತಿಗೆ ಮಾರುತ್ತರವನು ಕೊಡಬೇಡ
ಪರಿಪರಿ ಸಂಕಟ ಬಂದರೂ ನೊಂದು ಪರರ ದೂಷಿಸಬೇಡ
ಸ್ಥಿರವೀ ಶರೀರವೆಂದು ನಂಬಿ ಛೀ ಎನಿಸಿಕೊಳ್ಳಬೇಡ
ಗುರುರಾಮವಿಠಲ ಕೊಟ್ಟಭಾಗ್ಯವೆ ಪರಮಸುಖವೆನುತ
ತಿಳಿಯಲೊ ಮೂಢಾ ೩

೨೧೪

ಜಯ ಜಯ ನಿಮಗೆ ಜಯವಣ್ಣ
ಭಯವಿಲ್ಲೀನುಡಿ ಕೇಳ್ ಚೆಣ್ಣ ಪ

ಶ್ರೀ ಮನೋಹರನ ಲೀಲೆಯಿದು ಸು
ಕ್ಷೇಮವಹುದು ಸತ್ಪುರುಷರಿಗೆ ೧

ಈ ಜಗತ್ತನೂ ಈಶ್ವರನೂ ತಾ
ರಾಜನಾಗಿ ಕಾಪಾಡುವನು ೨

ಎರೆಡು ಮಾರ್ಗವಿಹುದಿದರೊಳಗೆ
ಕುರುಡರು ತಾವ್ ಕೆಡುವರು ಕೊನೆಗೆ ೩

ಇದರೊಳುಂಟು ಬಹುವಿಧ ಭೇದ
ವದರುತಿಪ್ಪದು ಸಕಲವೇದ ೪

ಅಂತ್ಯವಿಲ್ಲದಿಹ ಕಾರಣದಿ ಅ
ನಂತ್ಯವೆಂದು ಪೇಳ್ವರು ಭರದಿ ೫

ಮನುಜ ಜನ್ಮ ಬಹುದುರ್ಲಭವು
ಮನನಶೀಲರಿಗಹುದು ಶುಭವು ೬

ಮರೆಯಬೇಡಿ ಜನರೆ ನೀವು
ಅರಿತು ಅರಿಯದವರಿಗೆ ನೋವು ೭

ನಿತ್ಯವಲ್ಲ ಯೀ ಸಂಸಾರ
ಕತ್ತಲೆ ಕೊನೆಯಿಲ್ಲದ ಘೋರ ೮

ಘಳಿಸಿ ಘಳಿಸಿ ಗಂಟಿಕ್ಕಿದರೆ
ವುಳಿಯದು ನಿಮಗದು ಕೇಳ್ ಜನರೆ ೯

ಧರ್ಮವೆಂಬ ಮೂಟೆಯ ಕಟ್ಟೆ
ಮರ್ಮವಿದೇ ಮುಕ್ತಿಗೆ ಬಟ್ಟೆ ೧೦

ಗುರುವಾಜ್ಞೆಯ ಮೀರುವುದು ಸಲ್ಲ ಈ
ದುರುಳತನ ನಿಮಗೆ ಸರಿಯಲ್ಲ ೧೧

ನಾನೇ ಶ್ರೇಷ್ಠನೆಂಬುವ ಮಾತು
ಶಾನೆ ವಡಕು ಗಡಿಗೆಯು ತೂತು ೧೨

ಹಿಂದಿನವರ ಕಷ್ಟವ ನೋಡಿ
ಮುಂದಕೆ ಸತ್ ಸಾಧನೆ ಮಾಡಿ ೧೩

ಮೂರು ಕರಣ ಶುದ್ಧಿಯು ಬೇಕು
ಧೀರ ಜನರಿಗಿಷ್ಟೇ ಸಾಕು ೧೪

ಜನರ ನೋಡಿ ನಡೆಯಲಿಬೇಡಿ
ಕೊನೆಗೆ ನಿಮಗೆ ಕಾಲಿಗೆ ಬೇಡಿ ೧೫

ಹೆಚ್ಚಪೇಕ್ಷಿಸೆ ಬರುವುದಿಲ್ಲ
ಮೆಚ್ಚನು ನಿಮಗೆ ಸಿರಿಯನಲ್ಲ ೧೬

ಕರ್ಮವೆಂಬ ಕಾನನದೊಳಗೆ
ನಿರ್ಮಲ ಮಾರ್ಗ ಹುಡುಕಿದಿರಾ ೧೭

ಜ್ಞಾನರತ್ನ ಸಂಪಾದನೆಯು
ಹೀನ ಜನರಿಗಾಗದು ಕೊನೆಯು ೧೮

ದುರಾಸೆಯಲಿ ಕೆಡುವರು ಕೆಲರು
ನರಾಧಮರು ಎಂದೆನಿಸುವರು ೧೯

ಬ್ರಹ್ಮಮೊದಲು ತೃಣ ಪರಿಯಂತ ತಂ
ತಮ್ಮಟ್ಟಿಗಿಹುದು ಅಂತ ೨೦

ಗೂಡಿನ ಮೇಲೆ ದುರಭಿಮಾನ
ಮಾಡಿ ಮಾಡಿ ಕೆಡುತಿಹರು ಜನ ೨೧

ಯೀಗೂಡಿಗೆವೊಂದಾಧಾರ
ಯೋಗಿಗಳರಿವರಿದರಸಾರ ೨೨

ಎರೆಡು ಫಲವು ಮೂರದೆ ಬೇರು
ವರ ರಸಗಳು ನಾಲ್ಕು ತೊಗರು ೨೩

ಪಂಚ ಶಿಖರಗಳಾರು ಸ್ವಭಾವ
ಹಂಚೇಳರಿಂ ಮಾಡಿಹದೇವ ೨೪

ವಿಟಪವೆಂಟು ನವ ಛಿದ್ರಗಳು
ಘಟಿಸಿರುವುದು ಪತ್ತಲೆಯಿದರೊಳ್ ೨೫

ಮರನಿದೆಂದು ಶಾಸ್ತ್ರದ ಮೂಲ
ಅರಿಯದೆ ನಾನೆಂಬೆನು ಬಾಲ ೨೬

ಪಕ್ಷಿಗಳೆರಡೀ ಮರದಲ್ಲಿ
ಸಾಕ್ಷಿ ಒಂದು ಒಂದಕೆ ಅಲ್ಲಿ ೨೭

ಮರದ ಪಣ್ಣು ತಿಂಬುವದೊಂದು
ನಿರುತವು ನೋಡುತಿರುವದೊಂದು ೨೮

ದ್ವಾಸುಪರ್ಣ ಶೃತಿ ಇದರರ್ಥ
ದಾಸನಾಗದಿರುವನು ವ್ಯರ್ಥ ೨೯

ಆತ್ಮಜೀವ ಪಕ್ಷಿಗಳು ಇವೆ
ಅಧ್ಯಾತ್ಮ ವಿದ್ಯದಲಿ ತೋರುವುದೇ ೩೦

ಜೀವನಾಮ ಆತ್ಮನಿಗುಂಟು
ದೇವತಾನು ತಬ್ಬಿದ ಗಂಟು ೩೧

ಅಭೇದ ಶೃತಿಗಳೇನಕ ವಿಧ
ಸ್ವಭಾವದಿರುನಡೆ ತೋರುವದ ೩೨

ಸುರರುತ್ತಮರು ನರರಾನಿತ್ಯ
ಸುರೇತರರು ನೀಚರು ಸತ್ಯ ೩೩

ನೂರು ವರುಷ ಬದುಕುವರೆಂದು
ಮೀರಿ ಮನದಿ ಯೋಚಿಸಿ ಮುಂದು ೩೪

ಬಹು ಪ್ರಯತ್ನಗಳ ಮಾಡುತಲಿ
ಬಹು ಧನಾರ್ಜನೆಯ ವ್ಯೂಹೆಯಲಿ ೩೫

ಮೊದಲು ಅನ್ನಕಿಲ್ಲೆಂದು ಮತಿ
ವಿಧ ವಿಧ ವಸ್ತ್ರಗಳಲಿ ಪ್ರೀತಿ ೩೬

ಆಭರಣಗಳಲಿ ಆಸೆಯು ಬಲು
ನಾಬಡವನು ಎಂದಗಲಿರುಳು ೩೭

ಮನೆಯು ತೋಟ ಹೊಲಗದ್ದೆಗಳು
ತನಗೆ ಬೇಕಂತ ಚಿಂತೆಯೊಳು ೩೮

ಇತರರ ನೋಡಿ ತನಗಪೇಕ್ಷೆ
ಗತಿ ಇಲ್ಲದೆ ಇರುವುದೆ ಶಿಕ್ಷೆ ೩೯

ವ್ಯಾಸವಾಲ್ಮೀಕಾದಿ ಮಹಿಮರು
ತಾವ್ ಸಮಂಜಸದಿ ಪೇಳಿದರು ೪೦

ಪ್ರವೃತ್ತಿ ಮಾರ್ಗದ ಸಂಪತ್ತು
ಭವಾಂಬುಧಿ ಸುಳಿಯು ವಿಪತ್ತು ೪೧

ಫಲವ ಕೋರಿ ಕರ್ಮವ ಮಾಡಿ
ಹಲವು ಯೋನಿಗಳೊಳೋಡಾಡಿ ೪೨

ಮರಳಿ ಮರಳಿ ಜನನ ಮರಣದೆ
ದರಿಯ ಕಾಂಬ ಬಗೆ ದಾರಿಯದೆ ೪೩

ಇದುವೆ ದೊಡ್ಡ ಸಂಸೃತಿ ವೃಕ್ಷ
ತುದಿ ಮೊದಲಿಗು ದೊರಕದು ಮೋಕ್ಷ ೪೪

ಅಣ್ಣ ತಮ್ಮ ತಾಯ್ತಂದೆಗಳು
ಇನ್ನು ಅಕ್ಕ ತಂಗಿಯು ಮೊದಲು ೪೫

ಅತ್ತೆ ಮಾವ ಭಾವ ಮೈದುನರು
ಮತ್ತೆ ಸತಿ ಸುತರು ಬಳಗಗಳು ೪೬

ಇವರು ತನ್ನವರಿತರರಲ್ಲ
ಭವ ಜಲಧಿಯ ಜಂತುಗಳೆಲ್ಲ ೪೭

ಒಡವೆ ವಸ್ತ್ರಧನ ಧಾನ್ಯಗಳ
ಕೊಡದಿದ್ದರೆ ಕೋಪವು ಬಹಳ ೪೮

ವಿತ್ತವಿರಲು ಬಂಧುಗಳೆಲ್ಲ
ಹತ್ತಿ ಇವನ ಬಾಧಿಪರೆಲ್ಲ ೪೯

ಒಳ್ಳೇನುಡಿ ರುಚಿಸದು ಜನಕೆ
ಸುಳ್ಳುಹೇಳಿದರೆ ಬಹುನಂಬಿಕೆ ೫೦

ಹಿತೋಪದೇಶದಿ ಬಹುಕೋಪ
ಪತಿತ ಜನರಿಗೆ ಇದು ಪಾಪ ೫೧

ಒಬ್ಬ ದೈವಲೋಕಕೆ ಸತ್ಯ
ಹಬ್ಬವವನ ಭಜಿಪುದಗತ್ಯ ೫೨

ಕಾಮುಕರಿಗೆ ಕಡೆಗೂ ದುಃಖ
ನೇಮವದಕೆ ಮೂಲವುರೊಕ್ಕ ೫೩

ಸ್ಪೃಹದಿಂದಲೆ ಕೋಪವು ಬಹುದು
ವಿಹಿತವೆಂದು ನಗುವನೆ ಸಾಧು ೫೪

ಲೋಭದಿಂದ ಮೂಲಕೆ ನಾಶ
ಸ್ವಾಭಾವ್ಯದಿ ದುರ್ಜನಕಾಶಾ ೫೫

ಕಾಸಿಗಾಗಿ ಕೈಬಿಗಿ ಪಿಡಿವ
ರಾಶಿ ಧನವ ಕೊಳ್ಳೆಯು ಕೊಡುವ ೫೬

ದಾನಕೆಂದರಿಲ್ಲವು ಕಾಸು
ದಂಡಕೊಡುವುದಕೆ ಬಹುಲೇಸು ೫೭

ನಷ್ಟವಾದರೂ ಮನಕಿಷ್ಟ
ದುಷ್ಟಾತ್ಮರು ಪಡುವರು ಕಷ್ಟ ೫೮

ಆರ್ಯರುಕ್ತಿ ಕೇಳುವುದಿಲ್ಲ
ಕಾರ್ಯದಲಿ ವಿಘಾತವೆ ಎಲ್ಲ ೫೯

ಧನವಿದ್ದರು ಸೌಖ್ಯವು ಕಾಣೆ
ಘನದುರಾಸೆ ಕುಜನರಿಗೆ ಆಣೆ ೬೦

ಭೂಮಿ ಉಂಟು ತನಗೆಂಬುವರು
ನೇಮದಿ ದಂಡವ ತೆರುತಿಹರು ೬೧

ಮಳೆಬೆಳೆಯನು ನಿಂದಿಪರು ಕೆಲರು
ಖಳರು ಸುಮನಸರ ದೂಷಿಪರು ೬೨

ಅದರಲ್ಲಿ ನಾಸ್ತಿಕರಧಿಕ ಜನ
ಮೊದಲು ತುದಿಯಲಿ ದುರಭಿಮಾನ ೬೩

ವ್ಯಾಪಾರದಿ ಧನ ಕಳಕೊಂಡು
ಕೋಪ ವ್ಯಾಜ್ಯಕೆಳೆವದೆ ಫಂಡು ೬೪

ಬಹಳ ದಿನವು ಬದುಕುವೆನೆಂದು
ಬಲುಧನವ ಕೂಡಿಸುತಲಿ ಮುಂದು ೬೫

ಮುಖದಾಕ್ಷಿಣ್ಯದಿ ಮಾತಾಡಿ
ವಿಕಲರನರ ಸ್ನೇಹದಿ ಕೂಡಿ ೬೬

ದೊಡ್ಡದಾಗಿ ಮನೆಯನು ಕಟ್ಟಿ
ದುಷ್ಟತನದಿ ವಾದಿಸಿ ಬಿಟ್ಟಿ ೬೭

ಕೂಲಿಯವರ ಹೊಟ್ಟೆಗೆ ಕೊಡದೆ
ಲೋಲನಾಗಿ ವಂಚನೆ ಬಿಡದೆ ೬೮

ಸಂಸಾರವಿದೆ ಸ್ಥಿರವೆಂದು
ಹಿಂಸೆಪಡುತಲಿ ಸದಾನೊಂದು ೬೯

ಚತುರ ಶೀತಿ ಲಕ್ಷಯೋನಿಗಳೊಳ್
ಮತಿಹೀನರಾಗಿ ಜನಿಸುತಲೂ ೭೦

ನಿದ್ರಾಶನನ್ಯ ವಾಯುಗಳು
ಭದ್ರವು ತಮಗೆಂದು ಪ್ರಾಣಿಗಳು ೭೧

ಇದಕ್ಕಾಗಿ ಪರಾಧೀನದಲಿ
ಪದೇ ಪದೆಗೆ ತಾವು ನೋಯುತಲಿ ೭೨

ಮನುಜ ಜನ್ಮ ಬರುವುದೆ ಕಷ್ಟ
ಮಾನಿತನಾದವನೆ ಅತಿ ಶ್ರೇಷ್ಠ ೭೩

ವೇದವೋದುವವನುತ್ತಮನು
ಭೋಧಿಸುವಾತನೆ ಶುಭತಮನು ೭೪

ನಿಜಧರ್ಮದೊಳಿರುವವಗಿಂತ
ಸುಜನರಿಲ್ಲವವರದೆ ಪಂಥ ೭೫

ಕರ್ಮಾರ್ಥ ಶೃತಿ ಗಹನದಲಿ
ನಿರ್ಮಲರಾಗದೆ ಚಿಂತೆಯಲಿ ೨೬

ಮರಳಿ ಮರಳಿ ಜನನ ಮರಣದಿ
ಪರಿ ಪರಿ ವಿಧದಲಿ ಸಂಶಯದಿ ೨೭

ಧೂಮ ಮೇಘ ಭೂ ಪುರುಷ ಸ್ತ್ರೀ
ನೇಮಕ ಪಂಚಾಗ್ನಿಯೆ ಸೃಷ್ಟಿ ೨೮

ಬ್ರಹ್ಮಪ್ರಳಯದ ಪರಿಯಂತ
ಕರ್ಮಗಳನುಭವಿಸುತ ಸ್ವಂತ ೨೯

ದಕ್ಷಿಣಾಯನೆಯ ಮಾರ್ಗದಲಿ
ವೀಕ್ಷಣೆಯುಳ್ಳವರು ತಿರುಗುತಲಿ ೩೦

ಇದು ಪಿತೃಯಾನವು ಜಗದೊಳಗೆ
ತುದಿಗೆ ಚಂದ್ರಲೋಕವು ಹೀಗೆ ೩೧

ಇದೇ ಪ್ರವೃತ್ತಿ ಪಥವು ನೋಡಲ್
ವಿಧ ವಿಧವಾಗಿಹ ಕಷ್ಟಗಳು ೩೨

ನಿವೃತ್ತಿ ಪಥ ಜನರೆ ಕೇಳಿ
ಸುವಿಮಲಾತ್ಮವಿವರಿಗೆ ಚಾಳಿ ೩೩

ಹರಿಕೃಪೆಯಿಂದಲಿ ಸಕಲ ಸುಖ
ನಿರುತವವನ ಪೂಜಿಪುದೆ ಮುಖಾ ೩೪

ದ್ವಂದ್ವಸಹಿಷ್ಣುತೆ ಇರಬೇಕು
ತಂದೆ ತಾಯಿ ಹರಿಯೆ ಸಾಕು ೩೫

ಜನ್ಮಜನ್ಮದೊಳವನೆ ಬಂದು
ಘನ ಚಿಂತೆಯ ಮನಕ್ಕೆ ತಂದು ೮೬

ಮದ್ದಾನೆಯ ಓಲ್ ಸಂಚರಿಸಿ
ಇದ್ದಷ್ಟಕೆ ತೃಪ್ತಿಯವೆರಸಿ ೮೭

ಜನರಾಚರಣೆಗಳನು ಬಿಟ್ಟು
ಮನದಿ ತತ್ವಚಿಂತೆಯ ತೊಟ್ಟು ೮೮

ಸಾಧನ ಚತುಷ್ಟಯಗಳಿಂದ
ಮೋದ ಹೊಂದುತ ನಿಜಾನಂದ ೮೯

ಹುಚ್ಚನಂದದಿ ಜನಕ್ಕೆ ತೋರಿ
ಇಚ್ಛೆಯಂತೆ ತಿರುಗುತ್ತ ಬಾರಿ ೯೦

ಭಿಕ್ಷದಲ್ಲಿ ಜೀವನ ಮಾಡಿ
ರಕ್ಷನ ವಳಗಣ್ಣೊಳಗೆ ನೋಡಿ ೯೧

ಕಾಮಾದಿಗಳೀ ಮೊದಲೆ ಸುಟ್ಟು
ಪಾಮರರಿಗೆ ತಿಳಿಸದ ಗುಟ್ಟು ೯೨

ಸೂರ್ಯಮಂಡಲದೊಳಿಹ ಹರಿಯು
ಕಾರ್ಯಕಾರಣಗಳಿಗೆ ದೊರೆಯು ೯೩

ಗಾಯತ್ರಿಯುಪಾಸನೆಯಿಂದಾ
ನ್ಯಾಯವಾಗಿ ನಿತ್ಯಾನಂದಾ ೯೪

ಹಿಂದು ಮುಂದಿನ ಯೋಚನೆ ಬಿಟ್ಟು
ಬಂದುದಕ್ಕೆ ಸಂತಸಪಟ್ಟು ೯೫

ಬಾಲೋನ್ಮತ್ತ ಪಿಶಾಚಗಳೋಲ್
ಲೀಲೆಯಿಂದ ತಿರುಗುತ ಬಹಳ ೯೬

ಎಲ್ಲರಲಿ ಹರಿಯನು ನೋಡಿ
ನಿಲ್ಲದೆ ಬಹುಸಂತಸಗೂಡಿ ೯೭

ಶ್ರವಣ ಮನನ ನಿಧಿ ಧ್ಯಾಸನದಿ
ಶಾಸ್ತ್ರ ಚಿಂತನೆ ಕ್ಷಣದಿ ಬಿಡದೆ ೯೮

ಸಾಧ್ಯಾವಾದ ಮಟ್ಟಿಗೆ ಕರ್ಮ
ಸಾತ್ತ್ವಿಕವೃತ್ತಿಹುದು ಧರ್ಮ ೯೯

ಕನಸಿನೊಳಾದರು ಕಾಮ್ಯಫಲ
ನೆನಸದಿ ಧೈರ್ಯದಲಿಹದೆ ಬಲ ೧೦೦

ಪರದೇಶಿ ಜೀವ ದೊರೆ ಆತ್ಮ
ಸರ್ವತ್ರ ವಿಧೇಯಧ್ಯಾತ್ಮ ೧೦೧

ಜೀವನಾಮದಾತ್ಮನಿಗುಂಟು
ಭಾವದಲಿಯನಾದಿಯು ಗಂಟು ೧೦೨

ನಾನೆಂಬುವುದರಲಿಯೆ ಬಂಧ
ನೀನೆ ಗತಿಯೆನೆ ನಿಜಾನಂದ ೧೦೩

ಆತ್ಮನ ಸೇವೆ ಮಹಾಲಾಭ
ತತ್ವಚಿಂತನೆ ನಿರುತವು ಶುಭ ೧೦೪

ಕೋರಬೇಡಿ ದುರ್ ವಿಷಯಗಳ
ಸೂರ್ಯನಮಗೆ ಹಿಂಸಿಪ ಬಹಳ ೧೦೫

ರವಿಮಂಡಲ ಹೊಂದುತ ಸುಖವ
ಪ್ರವಿಲಾತ್ಮನಾಗಿ ಶೋಭಿಸುವ ೧೦೬

ಮತ್ತೆ ಬುವಿಯಲಿ ಜನನವಿಲ್ಲ
ಹತ್ತುವರೆ ಮೋಕ್ಷ ಪದವಿಯಿಲ್ಲಾ ೧೦೭

ನಿವೃತ್ತಿ ಮಾರ್ಗದ ಸೌಖ್ಯವಿದೆ
ಸವಿಯಾದವಗಿಲ್ಲವು ಬಾಧೆ ೧೦೮

ಬುಡುಬುಡುಕೆಯವ ನುಡಿದ ಮಾತು
ದೃಢದಿನಂಬಿ ಮನದೊಳಗರಿತು ೧೦೯

ಶ್ರೀಗುರುರಾಮ ವಿಠಲ ತಾನು
ಯೋಗ ಸೌಖ್ಯಮಿತ್ತು ಪೊರೆಯುವನು ೧೧೦

೨೧೫

ತತ್ವ ಚಿಂತನೆ ಮಾಡು ಮನುಜಾ
ವ್ಯರ್ಥಕಾಲವು ಕಳೆಯದೆ ಪ

ಮೃತ್ಯುಬರುವದು ಮುಂದೆ ಕೇಳಿದು
ಮೂರುಬಾರಿಗೆ ಸಾರಿದೆ ಅ.ಪ

ಮನೆಯು ಉರಿಯುವಾಗ ಭಾವಿ–
ಯನು ತೆಗೆವ ನರನಂದದಿ
ಕೊನೆಗೆ ಯಮನವರೆಳೆವ ಕಾಲದಿ
ಕೋರಿದರೆ ಸುಖ ಬಾರದು ೧

ಈಷಣತ್ರಯದಾಸೆಯಿಂದಲಿ
ಮೋಸಹೋಗದೆ ಸಂತತ
ರೋಷದೋಷಕೆ ಕಾರಣವು ಸಂ-
ತೋಷದಿಂದರು ನಲಿಯುತ ೨

ಎಲ್ಲಿ ನೋಡಿದರಲ್ಲಿ ಹರಿಯನು
ಸೊಲ್ಲು ಸೊಲ್ಲಿಗೆ ತುತಿಸುತ
ಬಲ್ಲ ಹಿರಿಯರ ಕೇಳಿ ಸಂಶಯ
ವೆಲ್ಲ ಕಳೆ ದೃಢವಾಗುತ ೩

ನಾನು ನನ್ನದು ಎಂಬುವ ದುರಭಿ-
ಮಾನ ನಿನಗೆ ಬೇಡೆಲೊ
ಸ್ವಾನುಭವಕಿದು ಹಾನಿ ತರುವದು
ನೀನೆ ನಿನ್ನೊಳು ನೋಡೆಲೊ ೪

ಪ್ರೇಮದಲಿ ಗುರುರಾಮವಿಠಲನ
ನಾಮಸ್ಮರಣೆಯ ಮಾಡುತ
ಕಾಮನಾಟಕೆ ಮನವ ಸೋಲದೆ
ನೇಮಗಳನು ಪರಿಸುತ ೫

೨೧೬

ತಿಳಿಯದೆ ಕಾಲ ಕಳೆವರೆ ಮನವೆ ಪ

ಖಲಜನಸಂಗದಲಿ ಸದಾ
ಕಲ್ಮಶಭಾಜನನಾಗುತ
ಹಲಧರಾನುಜನ ಶ್ರೀ ಪದ
ಜಲಜಯುಗಳವ ಸುಜ್ಞಾನದಿ ಅ.ಪ

ಇಂದ್ರಿಯಗಳ ಬಂಧಿಸಿ ಮನ–
ಸೊಂದಾಗಿ ನಿಲಿಸಿ ಒಳಗೆ ಮು–
ಕುಂದನ ದರುಶನ ಮಾಡದೆ
ಮಂದಬುದ್ಧಿಯಾಗಿ ನೀನು ೧

ಯಮನವರೋಡಿ ಬರುತ ನಿ–
ನ್ನೆಳದೆಳದೊಯ್ಯುವ
ಸಮಯದಿ ಭ್ರಮೆಯಿಂದಲ್ಲಿ
ಕಾಲ್ಗೆರಗಲು ಬಿಡುವರೆ ನಿನ್ನ ೨

ತಾಮಸನಾಗುತ ಶ್ರೀಗುರು–
ರಾಮವಿಠಲ ಶರಣೆನ್ನದೆ
ಹೇಮಭೂಮಿ ಕಾಮಿನಿಯರ
ಕಾಮಿಸುತಲಿ ಸೊಕ್ಕುತ ನೀ ೩

೨೧೭

ತಿಳಿಯದಾಯಿತು ವಯಸು ಕಳೆದು ಹೋಯಿತು ಪ

ಖಳರ ಸಂಗದಲ್ಲಿ ಸೇರಿ ಕಂಡ ಕಂಡದನು ಬಯಸಿ
ಕಳವಳಿಸುತ ಕಡೆಗಾಣದೆ ಬಳಲಿ ತೊಳಲಿ ಪಾಪ ಹೆಚ್ಚಿ ಅ.ಪ

ಹಿತವ ಕೇಳದೆ ದುಷ್ಟಧಿಕನೆನಿಸಿದೆ
ಸತಿಸುತರೆಂಬ ಬಲೆಗೆ ಸಿಲುಕಿ
ಅತಿಶಯ ಮೋಹದಲಿ ಮುಳುಗಿ ಪಥಿಕರಾಡುವಂತೆ ನಡೆದು
ಪತಿತನಾಗಿ ನಿಜದ ಮರ್ಮಾ ೧

ಕೆಲದಿನ ಆಟದಿ ಲಲನೆಯರ ಕೂಟದಿ
ಹಲವು ವಿದ್ಯೆಯ ಕಲಿತು ಪರರ
ಒಲಿಸಿ ಸ್ತೋತ್ರಮಾಡಿ ಬೇಡಿ ಫಲವ ಕಾಣಲಿಲ್ಲ ಕೊನೆಗೆ
ಹಲುಬಿ ಹಲುಬಿ ಬಾಯಿನೊಂದು ೨

ನೀತಿ ಹೇಳುತಾ ಪರರ ನಿಂದೆಗೆಯ್ಯುತಾ
ಸ್ವಾತುಮದಲಿ ಜ್ಞಾನವಿಲ್ಲದೆ
ಮಾತಿನಲ್ಲಿ ನಿಸ್ಪೃಹನಾಗಿ ಕೋತಿಯಂತೆ ಕುಣಿದೆನಲ್ಲದೆ
ಗುರುಮುಖದಲಿ ಪರಮತತ್ವ ೩

ಮತ್ತನಾಗುತ ದುರಾಸಕ್ತನೆನಿಸುತ
ನಿತ್ಯಕರ್ಮವನ್ನು ತೊರೆದು
ಸತ್ಯಶಮದಮಗಳ ಮರೆದು ಚಿತ್ತದಲಿ ನಿರ್ಮಲನಾಗದೆ
ಚಿಂತಿಸುತಲಿ ನಿಜದ ನೆಲೆಯ ೪

ಪರಮಬೋಧೆಯ ಕೇಳಿ ಕರಗಿ ಮನದಲಿ
ಗುರುರಾಮವಿಠಲನ ಶ್ರೀಚರಣಕಮಲ
ಸ್ಮರಣೆಗೈದು ಹೊರಗು ಒಳಗು ಒಂದೆ ವಿಧದಿ
ಚರಿಸಿ ಸೌಖ್ಯಪಡೆವ ಬಗೆಯ ೫

೨೧೮

ದಾಸನು ನಾನೆಂಬ ಧೈರ್ಯವಿದ್ದರೆ ನಿನಗೆ
ವಾಸುದೇವನ ಭಜಿಸೊ ಪ

ಕಾಸಿಗೋಸುಗ ಪರರ ಕಾಡಿಬೇಡಿವೆ ಬರಿದೆ
ವೇಷಹಾಕಿದರೇನು ವೇದಾರ್ಥ ತಿಳಿದೀತೆ ಅ.ಪ

ಉದರಂಭರಣಕ್ಕಾಗಿ ಪದ ಪದ್ಯಗಳ ಹೇಳಿ
ಉಂಟಾದುದಿಲ್ಲವೆನ್ನುವೆ
ತುದಿಮೊದಲಿಲ್ಲದ ದೋಷಕೆ ಗುರಿಯಾಗಿ
ಸದಮಲನೆಂದರೆ ಸರ್ವರು ನಗರೇನೊ ೧

ಹರಿಸ್ಮರಣೆಯಿಂದಾ ದುರಿತ ಪರಿಹರವೆಂದು
ಆಡುತಲಿದೆ ಶೃತಿಯು

ಕರಣತ್ರಯವು ಶುದ್ಧಿಯಿರ ಬೇಕದಕೆ ಮುಖ್ಯ
ಕಾರಣ ಬಾಯಿಂದ ನುಡಿದರೇನಾಯಿತು ೨

ಪಂಚಸದ್ವರ್ಣವು ಪರಮಾತ್ಮನ ನಾಮ
ವಂಚನೆ ಇದರೊಳಿಲ್ಲಾ
ಸಂಚಿತಾಗಾಮಿ ಪ್ರಾರಬ್ಧಗಳನುಸಾರ
ಸರ್ವರು ನುಡಿವರು ಗರ್ವವೇತಕೆ ನಿನಗೆ ೩

ಕಾಲಕಾಲಕೆ ಹರಿಯೋಲಗವ ಮಾಡಿ
ಸಾಲಗೀಲ ಮಾಡದೆ
ವೇಳೆಗೆ ದೊರೆತದ್ದು ಭುಂಜಿಸುತಲಿ ಲಕ್ಷ್ಮೀ-
ಲೋಲನ ಕಂಡ ಕಂಡಲಿ ಸ್ಮರಣೆಗೈದೂ ೪

ಹೊರಗೆ ಡಂಭವ ಬಿಡು ಒಳಗೆ ನಿಶ್ಚಲನಾಗು
ಪರರಿಗೆ ಹಿತವ ತೋರು
ಗುರುರಾಮವಿಠಲನು ಕರುಣದಿ ಕೈಪಿಡಿದು
ಪರಮಸೌಖ್ಯವನೀವ ನಿಜಭಕ್ತನಾದರೆ ೫

೨೧೯

ದಾರಿ ಒಳ್ಳೇದಾಗಿರಬೇಕೂ ಹರಿದಾಸನಾದ ಮೇಲೆ ಪ

ಯಾರೇ ಬಂದರೂ ಸರಿ ಯಾವ ಕಾಲದಲ್ಲಿಯು
ಪಾರಗಾಣದಂಥಾ ಈ ಸಂಸಾರವಾರ್ಧಿ ದಾಟುವದಿಕ್ಕೆ ಅ.ಪ

ಜ್ಞಾನ ಭಕ್ತಿ ದಾನಧರ್ಮ ವೈರಾಗ್ಯದಿ ಸದ್ಗುಣಂಗಳು
ತಾನೆ ತಾನಾಗೆಲ್ಲವು ಸ್ವಾಧೀನವಾಗಿರಬೇಕಾದರೆ ೧

ಓದಿದರ್ಥ ಮನಕೆ ತಿಳಿದು ನಿರತವು ಸಾಧನವು ಮಾಡುತ ಅ-
ನಾದಿ ಸಿದ್ಧವಾದ ತತ್ವದ ಹಾದಿ ಕಾಣಬೇಕಾದರೆ ೨

ಕಾಮ ಕ್ರೋಧ ಲೋಭ ಮೋಹ ಮತ್ಸರ
ತಾಮಸಾದಿ ದುರ್ಗುಣ
ನಿರ್ನಾಮವಾಗಿ ಪ್ರೇಮದಿಂ ಗುರುರಾಮವಿಠಲನ್ನ ನೆನೆವದಕ್ಕೆ ೩

೨೨೦

ದೇವರ ದಿವ್ಯಗುಣಗಳ ಪೊಗಳುವದು
ಜೀವರಿಗಿದುವೆ ಪ್ರಯೋಜನವು ಪ

ಭಾವದಿ ತೋರುವ ವಿಷಯಗಳೆಲ್ಲವು
ಭಕ್ತಿಯೊಳರಿತು ಸಮರ್ಪಿಸುತಂ ಅ.ಪ

ನಡೆವದು ನುಡಿವದು ಕೊಡುವದು ಬಿಡುವದು
ಒಡೆಯ ಹರಿಯ ಪ್ರೇರಣೆಯೆಂದು
ದೃಢಮನದಲಿ ತಿಳಿದಾವಾಗಲು ತಾ
ಮೃಢ ಸಖನಡಿ ಧ್ಯಾನಕೆ ತಂದು ೧

ಅರಿಯದೆ ಪಾಮರರೊರಲುವ ಬೋಧೆಯ
ತರತರದಿ ತಿರಸ್ಕರಿಸುತಲೀ
ಪರಮಾನಂದದಿ ಕುಣಿ ಕುಣಿದಾಡುತ
ಭವ ಭಯಗಳನೀಡಾಡುತಲಿ ೨

ಜನನ ಮರಣ ದೂರ ಪರಾತ್ಪರ ಪಾ–
ವನ ಚರಿತ್ರ ಭಾಸುರ ಗಾತ್ರಾ
ವನಜನಯನ ಗುರುರಾಮವಿಠಲ ಎಂ–
ದನುದಿನ ಭಜಿಸುವನೆ ಪವಿತ್ರ ೩

೨೨೦

ನಮಗ್ಯಾಕೀ ಸಂಸಾರ ಚಿಂತೆ ಕ್ರಮವಾಗಿ ಧರ್ಮದೊಳಿದ್ದರೆ ಪ

ಸಮನಾಗಿ ಬಾರದು ಮಮತೆ ಅಧಿಕವಾದ
ಭ್ರಮೆಯುಯಿದು ಶ್ರಮವಾಗೋದು
ಕ್ಷಮೆಬಾರದು ಇದರಲ್ಲಿ ಅ.ಪ

ಇವರಾರು ನಮಗೆ ನಾವಾರಿವರಿಗೆ
ಜವನವರು ಎಳೆಯುವರು ಯಾರು ಬರರು । ಸಂಗಡ ೧

ಅನುಸಾರಿಗಳಲ್ಲ ಮನಸೇ ಜಿತವಿಲ್ಲ ಕೊನೆಗೆ ದಿಕ್ಕಿಲ್ಲ
ನೀನೆ ಸಿರಿನಲ್ಲ ಕಾಯಬೇಕಲ್ಲ । ನಿಜವು ೨

ತಾಯಿತಂದೆ ಅಣ್ಣ ತಮ್ಮ ಸತಿಸುತರು ಕಾಯಕಲ್ಲದೆ
ಮಾಯ ಬರಿದೆ ಜೀವಗೆಲ್ಲದೆ । ಶಾಸ್ತ್ರದಿ ೩

ದ್ವಾಸುಪರ್ಣವೆಂಬೊವಾಶೃತಿ ನೋಡಲು
ಈಶನಾಧೀನ ಸಕಲ ಜೀವನ ಯಾತಕ್ಕಭಿಮಾನ । ಅಜ್ಞಾನ ೪

ಗುರುರಾಮವಿಠಲ ಹೊರವೊಳಗಿದ್ದೆಲ್ಲ ಕರುಣಿಸುವನು
ಸರ್ವಾಧಾರನು ತನ್ನವರನು ಭಯವೇನು ೫

೨೨೨

ನರದೇಹ ನಿತ್ಯವಲ್ಲ ನಾಳೆ ಮೃತ್ಯು ಬಿಡುವದಲ್ಲ ಪ

ಮರುಳುಮನವೆ ಕೇಳು ಸೊಲ್ಲ
ಹರಿಯ ಮರೆವುದುಚಿತವಲ್ಲ ಅ.ಪ

ಹಿಂದಿನವರು ಪಟ್ಟಪಾಡು
ಇಂದು ನೀನು ತಿಳಿದು ನೋಡು
ಸಂದೇಹಗಳೀಡಾಡು
ಒಂದೇ ಮನದಿ ಹರಿಯ ಕೊಂಡಾಡು ೧

ಹರಿ ನಮಗನಾದಿ ಮಿತ್ರ
ವರಶೋಭನ ಚಾರಿತ್ರ
ಪೊರೆವದೇನು ನಮ್ಮ ಚಿತ್ರ
ಕರುಣಿಸುವನು ಕಮಲನೇತ್ರ ೨

ಹೊನ್ನು ಹೆಣ್ಣು ಮಣ್ಣು ಮೂರು
ನಿನ್ನದೆಂದು ಹಿಗ್ಗದಿರು
ಜನ್ಮ ಜನ್ಮವೆತ್ತಿದರು
ಬೆನ್ನು ಹೊಡೆವರು ಯಮನವರು ೩

ಏಕೆ ಪಡುವೆ ವೃಥಾಯಾಸ
ಏನು ಸುಖವು ಕಾಣಲೇಶ
ಜೋಕೆ ಬಿಡುಬಿಡು ದುರಾಶಾ
ಬೇಕು ಸುಜನರ ಸಹವಾಸ ೪

ಕರಿಯು ಕೂಗೆ ಭರದಿ ಬಂದ
ತರುಣಿ ಕರೆಯೆ ಅಕ್ಷಯವೆಂದ
ಹರಿಕೊಡುವನು ಆನಂದ
ಗುರುರಾಮವಿಠಲ ಮುಕುಂದ ೫

೨೨೩

ನಿನಗ್ಯಾಕೀ ಚಿಂತೆ ಮಾನವ ವನಜನಾಭನೆ ಕಾಯುವ ಪ

ಅಣುರೇಣು ತೃಣಕಾಷ್ಠ ಕೊನೆ ಮೊದಲುಗಳೊಳ–
ವನ ನೋಡಿ ಹರುಷಿಸದೆ ಅ.ಪ

ಈ ಶರೀರದೊಳಗೆ ಶ್ರೀ ತರುಣಿ ಸಹಿತ ಅವ–
ನಿರುವದು ಗುರುಮುಖದೊಳರಿಯದೆ ಬರಿದೆ ೧

ಇಂದ್ರಿಯಂಗಳಿಗೆ ಬ್ರಹ್ಮೇಂದ್ರಾದಿ ಸುಮನಸ
ವೃಂದವಿರುವುದು ಗೋವಿಂದನೆ ದಣಿ ೨

ಬಲಜ್ಞಾನೈಶ್ವರ್ಯಾದಿಗಳು ಯೋಗ್ಯತನುಸಾರ
ಒಳಗೆ ಗುರುರಾಮವಿಠಲ ಕೊಡುವನು ೩

೨೨೪

ನಿನಗ್ಯಾಕೆ ದುರ್ಮತಿ ಎಲೆ ಕೋತಿ ಪ

ಅನುದಿನದಿ ನಾನು ನನದೆಂಬ ಅ.ಪ

ಮೊದಲಿಂದಲಿ ಅವಿವೇಕದಿಂದ ಮೋಹಪಡುತ ನೀನಿರಲ್
ತುದಿಗೆಯಮನ ಬಾಧೆಯಹುದು ಬಲು ೧

ಚಪಲಾತ್ಮರಾದವರಲಿ ಸೇರಿ
ಚಾಟು ಮಾತುಗಳಾಡುವೇ ವಿಪರೀತ ಜ್ಞಾನವಿದಲ್ಲವೇ ೨

ನಡೆನುಡಿಗಳಾದಿಯಾದ ಎಲ್ಲಕು ನಾಥ ನೀನೆಯೇನಲಾ
ದೃಢವಾಗಿ ನಿನ್ನೊಳು ತಿಳಿದು ನೋಡೋ ೩

ತತುವಾಭಿಮಾನಿ ಸುರರು ಒಳಗೆ ತಾವು ಪ್ರೇರಿಸದಿರ್ದರೆ
ಹಿತವಾಗದೆಂದಿಗು ನೀನಲ್ಲ ದೊರೆ ೪

ಸರ್ವಕ್ಕು ಭಾರ ಕರ್ತನಾಗಿ ಸೂತ್ರವಿಡಿದಾಡಿಸುವನು
ಗುರುರಾಮವಿಠಲ ಪೊರೆಯುವನು ೫

೨೨೫

ನೀನಾಗಿ ನಿನ್ನೊಳಗಿರುತಿರುವನ
ಧ್ಯಾನಿಸುತಿರು ಜೀವಾ ಎಲ್ಲ ಅವನ ಸೇವಾ ಪ

ಜ್ಞಾನಿಗಳೊಡನಾಡದೆ ಸಂಸಾರದಿ
ನಾನೆಕರ್ತನೆಂದು ನರಕ ಪೊಂದುವೆ ಯಾಕೆ ಅ.ಪ

ಜಾಗರ ಸ್ವಪ್ನಸುಷುಪ್ತ್ಯವಸ್ಥೆಗಳನು
ಜಾಗುಮಾಡದೆ ನಿರತಾ
ನಾಗಶಯನ ವಿಶ್ವತೈಜ ಪ್ರಾಜ್ಞ
ನಾಗಿನಿನಗೆ ಕೊಡುವನು ಎಂದರಿಯೊ ೧

ಬಿಂಬನವನು ಪ್ರತಿಬಿಂಬನು ನೀನೆಂದು
ಹಂಬಲಿಸುವುದುಚಿತಾ
ಉಂಬುಡುವುದು ಮೊದಲಾದ ಕ್ರಿಯೆಗಳನು
ಅಂಬುಜಾಕ್ಷಗರ್ಪಿಸಿ ಸುಖಿಯಾಗೊ ೨

ಆ ಬ್ರಹ್ಮಸ್ತಂಬಾದಿ ಜೀವರೊಳಗೆ
ಸ್ವಾಭಾವ್ಯದಿ ಸತತಾ
ಶೋಭಿಸುತಿಹನವಗಿಲ್ಲ ವಿಭೇದ ಲ-
ಕ್ಷ್ಮೀಭೂರಮಣ ಶ್ರೀಗುರುರಾಮವಿಠಲನು ೩

೨೨೬

ಪರಸೌಖ್ಯವಿದೆ ಮಾನವ ನಿನಗೆ ಪ

ನಿರತಂ ಹರಿಪಾದ ಭಜನೆ ಅ.ಪ

ಸುಜನಂಗಳ ಸಂಗದಲೀ । ಬೆರೆಯುತಲಿ
ನಿಜರಾಜಯೋಗದಲಿ
ಗಜರಾಜರಕ್ಷಕನೇ ಹರಿ ಪೊರೆಯೆಂಬುವುದು ೧

ಶರಣಾರ್ತಿಭಂಜನಾಯೆನುತಾ । ಹರುಷಿಸುತ
ಗುರುವಾಕ್ಯವನು ನಂಬಿ
ವರಭಕ್ತಿಯಿಂ ರೋಮಾಂಚನದಿ ಕುಣಿದಾಡುವದು ೨

ಹೇಮಭೂಮಿ ಕಾಮಿನೀಯರನು । ಕೋರದಲೇ ತಾ
ಕ್ಷೇಮಿಯಾಗುತ್ತಾ ಗುರು–
ರಾಮವಿಠಲನೇ ದೊರೆ ನಮಗೆಂಬುವದು ೩

೨೨೭

ಬರಿದೆ ಭ್ರಾಂತಿಯಾತಕೆ ಎರಡು ದಿನದ ಬಾಳಿಗೇ ಪ

ಕರೆಕರೆ ಸಂಸಾರಕೆ ಕೆಲಕಾಲವಿರಲಿ ಎಚ್ಚರಿಗೆ ಅ.ಪ

ಹಿಂದಿನವರ ಪಾಡನು ಮುಂದರಿಯದ ಮೂಢನು
ಸಂದೇಹವ ಪಡುವನು ಎಂದಿಗು ಸುಖಿಯಾಗನು ೧

ಶಾಸ್ತ್ರವೇನು ಪೇಳ್ವುದು ಸ್ಥಿರವೆ ಅಲ್ಪ ಸುಖವಿದು
ಗಾತ್ರವ ನೋಯಿಸುವದು ರಾತ್ರಿಪಗಲು ದಣಿವುದು ೨

ಹಿತದ ಮಾರ್ಗ ತ್ಯಜಿಸುವೆ ಅತಿಶಯಗಳ ಬಯಸುವೆ
ಪಥಿಕರಂತೆ ನುಡಿಯುವೆ ಪಾಪಿಯಾದೆ ಛೀ ಮನವೆ ೩

ಸಂಸಾರವೆಂಬೋ ವಾರಿಧಿ ಹಿಂಸೆಪಡುತ ಸೇರಿದಿ
ಸಂಶಯಾತ್ಮನೆನಿಸಿದಿ ಕಂಸ ವೈರಿಯ ಮರೆದಿ ೪

ಯೋಗಸಿದ್ಧಿಯೇ ಬಲಾ ಕೂಗಿದರದು ನಿಷ್ಫಲಾ
ಹ್ಯಾಗು ನಮ್ಮ ಕೈ ಬಿಡನಲಾ ಶ್ರೀಗುರುರಾಮ ವಿಠಲಾ ೫

೨೨೮

ಬರಿದೆ ಕಾಲಕಳೆಯ ಬ್ಯಾಡ
ದುರುಳ ಮಾನವಾ ಪ

ನರರು ಹಿಂದೆ ಪಟ್ಟಪಾಡು
ಮರವರೇಜೀವಾ ಅ.ಪ

ಝಷದ ತೆರದಿ ಬಾಯಿ ಬಿಡುವೆ
ವಿಷಯದಾಸೆಯೋಳ್
ವಿಷಮ ಸಂಸಾರದಲ್ಲಿ
ವಿವಿಧ ಚಿಂತೆಯೋಳ್ ೧

ಹೇಮಭೂಮಿ ಕಾಮಿನಿಯರ
ನೀಮನದಿ ಕೋರಿ
ಕಾಮಕ್ರೋಧಲೋಭಾದಿಗಳು
ಕಲುಷದದಾರಿ ೨

ನಡೆನುಡಿ ಮೊದಲಾದುದೆಲ್ಲ
ವಡೆಯಗೊಪ್ಪಿಸೊ
ಧೃಡಮನದಿ ಗುರುರಾಮವಿಠಲ
ನಡಿಗಳಸ್ಮರಿಸೂ ೩

೨೨೯

ಬಿಡು ಬಿಡು ಮನದ ಸಂಶಯವನು ಪ

ನಡಿ ನಡಿ ಪಿಡಿಯೊ ಗುರುಪಾದವನು ಅ.ಪ

ಶ್ರವಣ ಮನನ ಧ್ಯಾನ ಶಾಸ್ತ್ರಾನುಸಂಧಾನ
ಎವೆ ಮಾತ್ರ ವ್ಯತ್ಯಾಸವಿಲ್ಲದಿರು ೧

ಯೋಗ್ಯತಾನುಸಾರ ಭಾಗ್ಯಬರುವದದು
ಶ್ಲಾಘ್ಯವೆನ್ನುತ ದಾಸನಾಗಿರು ೨

ಎರಡು ಸುಖಗಳನ್ನು ಗುರುರಾಮವಿಠಲನೇ
ಕರುಣಿಸುವನು ಎಂದರಿತು ನಂಬು ೩

೨೩೦

ಬೆಳಗಾಯಿತೇಳಿರಯ್ಯಾ ಜನರೆ ಪ

ಒಳಹೊರಗೆ ಅಂಧಕಾರವು ವ್ಯಾಪಿಸಿರೆ ರಾತ್ರಿ
ಲಲನೆಯರ ತೆಕ್ಕೆಯಲಿ ನಿದ್ರಾಭರದಿ ಕಾಲ
ಕಳೆದುಹೋಯಿತು ಕೋಳಿ ಕೂಗುತದೆ ಪೂರ್ವದೆಸೆ
ಕೆಂಪ್ಪರಿದು ಪಕ್ಷಿನಿಕರ
ತಳಮಳದೆ ತಮ್ಮ ಸ್ಥಳಗಳನು ಬಿಟ್ಟು ತಾವ್
ಕಲಕಲಧ್ವನಿಯಿಂದ ದೆಸೆದೆಸೆಗೆ ಪೋಗುತವೆ
ಜಲಜಾಪ್ತನೈತರುವನದ ನೋಡಿ ನೀವಿನ್ನು
ಮಲಗಿರುವುದುಚಿತವಲ್ಲ ಜನರೆ ೧

ಮರೆವೆಯನು ಬಿಟ್ಟು ಕಣ್ದೆರದು ಕೈಯುಜ್ಜಿ ಶ್ರೀ-
ಹರಿಯ ಸಂಸ್ಮರಿಸಿ ಗುರುಹಿರಿಯರಡಿಗಳಿಗೆರಗಿ
ದೊರೆಭಾಗ್ಯವಂತಗೋಸತಿಯರಿಗೆ ನಮಿಸಿ ದರ್ಪಣ
ನೋಡಿನಿತ್ಯ ಕೃತ್ಯ
ತ್ವರದಿಂದ ನಡಸಿ ನಿನ್ನಿನ ಕಾರ್ಯಗಳ ನೆನದು
ಹರುಷದಲಿ ನಿಮ್ಮ ನಿಮ್ಮನುಕೂಲದಂತೆ ಆ-
ಚರಿಸುತ್ತ ಶ್ರವಣ ಮನನಾದಿ ಸಾಧನದಿ ಇಹಪರ
ಸುಖಂಗಳ ಪಡಿಯಿರೈ ೨

ವ್ಯರ್ಥಕಾಲಕ್ಷೇಪ ಮಾಡದಿರಿಯಿದರಿಂದ-
ನರ್ಥ ಬರದಂತೆ ಯೋಚಿಸಿ ಈಗ ನಾವೇ ಕೃ-
ತಾರ್ಥರೆಂದಿರಬೇಡಿ ಈ ದೇಹ ಸ್ಥಿರವಿಲ್ಲ ಮರ್ತ್ಯ
ಜನ್ಮವು ದುರ್ಲಭ
ಕರ್ತರಾವೆಂದಹಂಕರಿಸದಲೆ ಸಕಲವನು
ತೀರ್ಥಪಾದಗೆ ಸಮರ್ಪಣೆಗೈಯ್ಯೆಮನದಿಷ್ಟ
ಪೂರ್ತಿಯಾಗುವದು ಸಂಶಯವಿಲ್ಲ ಸಕಲ ವೇದಗಳು
ಸಜ್ಜನರು ಸಾಕ್ಷಿ ೩

ನರಹುಲಿಯ ನೋಡಿ ತಾ ಬರೆಯಿಟ್ಟು ಕೊಂಬಂತೆ
ನೆರೆಹೊರೆಯ ನೋಡುತಾಭರಣ ವಸ್ತ್ರಗಳು ಬಹು
ಪರಿಭಕ್ಷಗಳ ಬಯಸಿ ಋಣ ಮಾಡಿ ಜೇನಿನಲಿ ಬಿದ್ದ
ನೊಣದ ತೆರದಲೆ
ದೊರೆತ ಮಟ್ಟಿಗೆ ಭೋಗ ಭಾಗ್ಯಗಳನನುಭವಿಸಿ
ಅರುಣಿಯಾಗುತ ದುರ್ವಿಷಯ ಚಿಂತೆಗಳ ಮರೆತು
ಗುರುರಾಮವಿಠ್ಠಲನ ಚರಣ ಸೇವೆಯಗೈದು
ಪರಮಧರ್ಮವ ಘಳಿಸಿರೈ ೪

೨೩೧

ಬೇಡಿ ಬೇಡಿ ಬೆಂಡಾದರೆ ನಿನಗೆ
ನೀಡುವರು ಮತ್ಯಾರಿಲ್ಲ ಪ

ಬೇಡದಿರುವ ಸಜ್ಜನರಡಿಗಳ ಕೊಂ-
ಡಾಡುತಲಿರು ನೀ ಹಗಲೆಲ್ಲ ಅ.ಪ

ಕಾಸಾದರು ಹಿಡಿಕಾಳಾದರು ಹರಿ-
ದಾಸರಿಗೋಸುಗ ಕೊಡಲಿಲ್ಲ

ಲೇಸು ದೊರೆವುದೆಂದ್ಹಾರಾಡಿದರಾ-
ಯಾಸವಲ್ಲದೆ ಫಲವಿಲ್ಲ ೧

ನಿನ್ನಂತೆಯೆ ಪರರನು ನೋಡಿ ದಯೆ-
ಯನ್ನು ಅವರಲ್ಲಿ ಇಡಲಿಲ್ಲ
ಖಿನ್ನವಾಗಿ ನೀ ಬಾಯ್ಬಿಡುತ್ತಿದ್ದರೆ
ಮುನ್ನಿನ ಕರ್ಮವು ಬಿಡದಲ್ಲ ೨

ಗಳಿಸಿ ಗಳಿಸಿ ಗಂಟ್ಹಾಕುವೆಯಲ್ಲದೆ
ತಿಳಿವಳಿಕೆಯು ಸ್ವಪ್ನದಲಿಲ್ಲ
ನೆಲದೊಳು ಬಚ್ಚಿಟ್ಟಿರುತಿಹ ದ್ರವ್ಯವು
ಎಲೊ ನಿನಗದು ಸ್ವಾಧೀನವಲ್ಲ ೩

ಸತ್ಪಾತ್ರದಿ ಅಣುಮಾತ್ರವು ಕೊಟ್ಟರೆ
ವ್ಯಾಪ್ತವಾಗಿ ಹೆಚ್ಚುವದೆಲ್ಲ
ಆಪ್ತರು ದಾರಾ ಪುತ್ರಾದ್ಯರು ನಿ-
ನ್ನಾದರಿಸುವರೊಬ್ಬರು ಇಲ್ಲ ೪

ಕಾಮಕ್ರೋಧದೊಳಗೆ ಮುಳುಗಿ ನೀ
ಕಂಡ ಕಂಡದು ಕೋರುವೆಯಲ್ಲ
ಕ್ಷೇಮವೀವ ಗುರುರಾಮವಿಠಲನ
ಕ್ಷಣವಾದರು ನೆನೆ ಭಯವಿಲ್ಲ ೫

೨೩೨

ಭಕ್ತಿಮಾಡದವನೇ ನಿರ್ಭಾಗ್ಯ
ಭಾರಿಬಾರಿಗು ಹರಿ ಪಾದದಲಿ ಪ

ಭಕ್ತಿಮುಕ್ತಿಗಳು ಭುವಿಸಾಧನೆಗಳು
ಯುಕ್ತಿಯಾಗಿ ರಕ್ತಿನೀಗಿ । ಶಕ್ತಿಯೊದಗಿ ೧

ಸ್ನಾನ ಸಂಧ್ಯಾಧ್ಯಾನ ದಾನಜಪಂಗಳು
ಯೇನು ಮಾಡಲಿ ಮಾನಸದಲಿ । ಜ್ಞಾನದಿಂದಲಿ ೨

ತಾಮಸದೂರ ಗುರುರಾಮವಿಠಲ ನಮಗೆ
ಸ್ವಾಮಿಯೆನ್ನುತ ನೇಮ ವಿಡುತ । ಕಾಮಬಿಡುತ ೩

೨೩೩

ಭಕ್ತಿ ಒಂದೇ ಸಾಕು ಸಜ್ಜನರಿಗೆ । ಕು
ಯುಕ್ತಿಯಾತಕೆ ಹಲವು ಬಗೆ ಪ

ಭಕ್ತಿಯೊಂದಿದ್ದರೆ ಭವಗಳು ಬಂದರು
ರಕ್ತಿ ಪುಟ್ಟದುದುರ್ವಿಷಯದೊಳು
ಶಕ್ತರಾಗಿಹ ಅಧಿಕಾರಿಗಳಿಗೆ ಕು–
ಯುಕ್ತಿ ಏತಕೆ ಹಲವು ಬಗೆ ಅ.ಪ

ಏನೇನು ಮಾಡಲು ಶ್ರೀನಿವಾಸನ ಸೇವೆ
ದೀನರು ನಾವೆಂದು ದಿನ ದಿನದೀ
ನಾನು ಎಂಬುದು ಬಿಟ್ಟಿರುವವಗೆ ೧

ಆಸೆಯು ಇಲ್ಲದೆ ಮೀಸಲು ಮನದಲಿ
ಶ್ರೀಶನ ಪದವನು ಚಿಂತಿಸುತ
ಲೇಸಾದ ದಾರಿಯೊಳ್ ನಡಿಯುವರಿಗೆ ೨

ಹರುಷ ಶೋಕಗಳೊಂದೆ ಸಮನಾಗಿ ತಿಳಿದು
ಪುರುಷ ಪ್ರಯತ್ನಗಳನು ಮರೆದು
ಗುರುರಾಮವಿಠಲನ ಸ್ಮರಿಪರಿಗೆ ೩

೨೩೪

ಭಾಗ್ಯವಂತರಾರು ಪೇಳಿರೈ ಸದ್ಭಕ್ತರೆಲ್ಲರು ಪ
ಭಾಗ್ಯವೊ ವೈರಾಗ್ಯವೊ ನಿಮ್ಮ
ಯೋಗ್ಯತಾನುಸಾರ ಶ್ಲಾಘ್ಯವೆಂದರಿತವರು ಅ.ಪ

ಧನಿಕನು ಪರರನು ಗಣಿಸದೆ ತ-
ನ್ನನು ಸದಾ ಕೊಂಡಾಡಿಕೊಂಬನು
ಹಣವುಯಿಲ್ಲದ ಸುಗುಣವಂತನು ತಾ
ವನಜಾಕ್ಷನನೆನದೂ ಅನುದಿನದಿ ಸುಖಿಸುವನು ೧

ಭೋಗದಲಿಯನುರಾಗವುಳ್ಳವ
ರೋಗಿಯಾಗಿಯೆ ಕೂಗುವ ಕೊನೆಗೆ
ಯೋಗವಂತರಾದ ಭಾಗವತ ಜನ ವಿ-
ರಾಗ ವೈಭೋಗದಿ ತ್ಯಾಗಿಗಳೆನಿಪರು ೨

ತಾಮಸ ಜನರು ಕಾಮಾದಿಗಳಿಗೆ
ತಾಮನೆಯೆನಿಸಿ ಧಾಮರಾಗಿಹರ್
ಕ್ಷೇಮವುಳ್ಳ ಸಾಧುಗಳು ನಿರತ ಗುರು-
ರಾಮವಿಠಲನ ನಿಷ್ಕಾಮದಿ ಭಜಿಸುವರು ೩

೨೩೫

ಭಾರತ ಕಥಾಶ್ರವಣವನುದಿನ ಜನತತಿಗೆ ಭವಭಯ ಹರಣ ಪ

ಜಗದಿ ಧರ್ಮಾ ಧರ್ಮವೆಂಬ ಅನುವರವು ಹುಟ್ಟುವ ಕಾರಣ
ಅಗಣಿತಾಘಘನ ನಿವಾರಣ ಅರಿನಿಕರ ಸಂಹಾರಣ ೧

ಸುಗುಣ ದುರ್ಗುಣಗಳ ಸಮೂಹಕೆ ಸುಲಭವಾಗಿಹುದೀ ಕಥಾ
ಮಿಗೆ ಸುಜನ ದುರ್ಜನರಿಗೆಲ್ಲವು
ಮೇಲುಪಂಕ್ತಿಯೆನಿಸುತಿಹುದು ೨

ತಾಮಸರ ನಿರ್ನಾಮ ವೈದಿಸಿ ತಾಮನವಲಿದ ಸುಜನಕೆ
ಸ್ವಾಮಿ ಶ್ರೀಗುರುರಾಮ ವಿಠಲನ ಪ್ರೇಮ ಸಂಪಾದಿಸುವುದಕೆ ೩

೨೩೬

ಮಂದಮತಿಯೇ ಮಾನವಾ ಪ

ಹಿಂದೊ ಮುಂದೊ ಎಂದು ಯೋಚಿಸದಿರು ಅ.ಪ

ಶೃತಿತಾಳಂಗಳ ಗತಿಯನುಸರಿಸುತ
ಸತತವು ಲಕ್ಷ್ಮೀಪತಿಯ ಭಜಿಸು ೧

ದೇವರನಾಮವೆ ಜೀವನವೆನ್ನುತ
ಭಾವದಿ ತಿಳಿದತಿಭಕ್ತಿಯೊಳಿರು ೨

ಈ ಚರಾಚರಕು ಗೋಚರಿಸುವ ಕಂಜ–
ಲೋಚನನೆಂದು ನಿನ್ನ ನಾಚಿಕೆ ಬಿಡು ೩

ದುರಭಿಮಾನ ಬಿಟ್ಟು ಹರಿಹರಿ ಎನ್ನುತ
ಕೊರಳು ನೋಯುವಂತೆ ಕೂಗುತಲಿರು ೪

ಪರದಲಿ ಮುಕ್ತಿಯು ಇಹದಲಿ ಸೌಖ್ಯವು
ಗುರುರಾಮವಿಠಲನೆ ಕರುಣಿಸುವನು ೫

೨೩೭

ಮನವೇ ಎಂದಿಗೆ ಇದು ಕೊನೆಯ ಕಾಣುವುದೊ ಪ

ಘನವಿಷಯ ಶರಧಿಯೊಳು ಮುಳಿಗಿ ಮುಂದರಿಯದೆ
ತನಗೆ ತಾನೆ ಚಿಂತೆಗೈಯ್ಯುತ ಜನರ ನೋಡಿ ಹಿಗ್ಗುತ ಅ.ಪ

ಮಂಗಳಾಂಗಿಯರ ನೋಡುತ ಮಾರಶರಕೆ ಗುರಿಯಾಗುತ
ಬಂಗಿತಿಂದ ಮಂಗನಂದದಿ ಭಂಗಕೆ ಒಳಗಾಗುವಿ ೧

ಎಷ್ಟುದಿನಗಳಾದರೂ ಪುಟ್ಟುವುದಿಲ್ಲ ವಿರಕ್ತಿ
ಭ್ರಷ್ಟನಾಗಿ ಕೆಟ್ಟು ಪೋಗುವೆ ಶ್ರೇಷ್ಠ ನೀನೆಂದು ಕೊಂಬುವೆ ೨

ಕಾಮನಯ್ಯನಾದ ಶ್ರೀಗುರುರಾಮವಿಠಲನ ನಾಮ
ಪ್ರೇಮದಿಂದಾ ಜಪಮಾಡದೆ ತಾಮಸರೊಳು ಸೇರಿದೆ ೩

೨೩೮

ಮನವೆ ಸದಾ ಚಿಂತಿಸುವೆ ವನಜನಾಭನ ನಂಬದೆ ಪ

ಅನುದಿನ ನೀ ಮಾಳ್ಪ ಕಾರ್ಯವೆಲ್ಲವು
ಕೊನೆಗಾಣುವದೇನೊ ಫಲವೇನೊ ಅ.ಪ

ಅಧಿಕನು ತಾನೆನುತ ಅಸ್ಥಿರವಾದ
ಪದವಿಗಳನು ಕೋರುತ
ಮದಮತ್ಸರ ಕಾಮಕ್ರೋಧ ಲೋ-
ಭದಿ ಮಮತಾಸ್ಪದವಾಗಿ ಮರತೋಗಿ ೧

ಗುರುಹಿರಿಯರು ನೋಡಿ ವಂದಿಸದೆ ನೀ
ಮರುಳಾಟಗಳಾಡಿ

ಪರರನಪಹಾಸಿಸಿ ಪಾಪಿ ಇವನೆನಿಸಿ
ನರಕಕ್ಕೆ ಗುರಿಯಾಗುವೆ ವೋ ಚಪಲ ಮನವೇ ೨

ವೇದಮಾರ್ಗವ ಬಿಟ್ಟು ಯಾವಾಗಲು ದು–
ರ್‍ವಾದಗಳನು ಕೊಟ್ಟು
ಆದಿಯನುತಲಿ ಅನಾದಿಯನುತಲಿ
ಮುದಗೂಡಿ ಅತಿಭಾಷೆಗಳಾಡಿ ೩

ತತ್ವ ತಿಳಿಯಬೇಕು ಜ್ಞಾನವೆಂಬೋ ಸಂ–
ಪತ್ತಿನೊಳಿರು ಸಾಕು
ನಿತ್ಯಾನಿತ್ಯವಿವೇಕ ಶ್ಯೂನವಾಗಿ
ನಿತ್ಯ ಕೆಡಬೇಡೆಲವೋ ಚಪಲಾ ೪

ಪರಿಪರಿ ಲೀಲೆಯಿಂದಾ ತ್ರಿವಿಧ ಜೀ–
ವರೊಳಿರುವನು ಮುಕುಂದ
ಗುರುರಾಮವಿಠಲ ನಿಜ ಶರಣರಿಗೆಲ್ಲ
ಪರಮಪದವಿ ಈವಾ ದೇವದೇವ ೫

೨೩೯

ಮಮತೆ ಯಾಕೆ ಸಂಸಾರದಿ ನಿನಗೆ
ಮರುಳು ಜೀವ ಏನು ಕಾಣುವೆ ಕೊನೆಗೆ ಪ

ಸಮಾಧಿಕ ಶೂನ್ಯನ ಚರಣಕಮಲಗಳಿಗೆ
ಸರ್‍ವಸಮರ್ಪಣೆ ಮಾಡದೆ ಇದರೊಳು ಅ.ಪ

ಯಮನಿಯಮಾಸನ ಪ್ರಾಣಾಯಾಮಗಳು
ಕ್ರಮ ತಿಳಿಯಲಿಲ್ಲಾ ನೀ ಹಗಲಿರುಳು
ಸಮರಾರೆನಗೆಂದು ಗರ್ವದಿ ಮೆರೆಯಲು
ಯಮನವರೆಳೆಯದೆ ಬಿಡುವರೆ ಛೀ ಹುಚ್ಚಾ ೧

ಇಂದ್ರಿಯಂಗಳು ನಿನ್ನಾಧೀನವಲ್ಲ
ಬಂದಮಾರ್ಗ ಸುಖ ಮರೆತು ಹೋದೆಯಲ್ಲ
ಮುಂದಿನ ಗತಿ ಗೋತ್ರ ಮೊದಲಿಗೆ ಇಲ್ಲ
ಮುಪ್ಪುತನವು ಹತ್ತಿರೇ ಬಂದಿತಲ್ಲ ೨

ಕರ್ಮವೆಂಬುವುದೊಂದು ಅನಾದಿಯಾಗಿ
ಧರ್ಮವ ಗಳಿಸುವವನೆ ಪರಮತ್ಯಾಗಿ
ನಿರ್ಮಲ ಮನದಿ ದುರಾಶೆಯ ನೀಗಿ
ಮರ್ಮವನರಿತುಕೊಂಡವನೇ ಮಹಾಯೋಗಿ ೩

ಆಗುವ ಕಾರ್ಯವು ನಿಲ್ಲದು ಕೇಳು
ಭೋಗದಾಸೆಯ ಬಿಡು ಮೂರುದಿನದ ಬಾಳು
ರಾಗದ್ವೇಷವು ಅವಗೆ ಮನೆ ಹಾಳು
ಕೂಗುತಿಹವು ಶೃತಿ ಸ್ಮೃತಿಪುರಾಣಗಳು ೪

ಸತಿಸುತರನು ನಾನೆ ಸಾಕುವೆನೆಂದು
ಮತಿಗೆಟ್ಟು ಭ್ರಾಂತಿ ಹೊಂದುವೆ ನೀ ಮುಂದು
ಮಿತಿಯ ಬರಹ ತಪ್ಪುವುದಿಲ್ಲ ಎಂದು
ಸತತವು ಪೊರೆವ ಶ್ರೀ ಪತಿ ಗುಣಸಿಂಧು ೫

ಆಹಾರ ನಿದ್ರೆಯಲ್ಲವೆ ನಿನ್ನ ಆಟ
ಸಾಹಸ ನೋಡೆ ಮಾಳಿಗೆಯ ಓಡ್ಯಾಟ
ಮೋಹದಿಂದಲಿ ಮುಂದೆ ಬರುವುದು ಗೂಟ
ಮೂಜಗದೊಳಗೆಲ್ಲಾ ಇದು ಗೊಂಬೆ ಆಟ ೬

ಕಾಮಕ್ರೋಧಗಳು ಬಿಡಲಾರೆಯೇನೊ
ಪಾಮರ ಜೀವ ಅಸ್ವಾತಂತ್ರಾ ನೀನೊ
ಯಾಮಯಾಮಕೆ ಗುರುರಾಮವಿಠಲನಂಘ್ರಿ
ನೇಮದಿಂದಲಿ ಭಜಿಸಿ ಸುಖವಾಗುವುದು ಕಾಣೊ ೭

೨೪೦

ಮರಿಯಾದೆ ಅಲ್ಲವೊ ನಿನಗೆ ಮನವೆ ಪ

ಸರಿಯಾಗಿ ನಡೆಯದೆ ನೀ ಚಪಲ ಪಡುವದು ಅ.ಪ

ಪರಧನ ಪರಕಾಮಿನಿಯರ ನೋಡಿ
ಎರಗುತ ತನಗದು ಬೇಕೆಂಬದು ೧

ಆಶೆಯಿಂದಲಿ ವೃಥಾಯಾಸವಲ್ಲದೆ ಏನು
ಲೇಸು ಕಾಣೆನು ಬಲು ಘಾಸಿಪಡುವೆ ೨

ಕೋತಿಯಂದದಿ ನೀನೇತಕೆ ಕುಣಿಯುವೆ
ಮಾತು ಮಾತಿಗೆ ನಾನು ನನ್ನದೆಂಬೋದು ೩

ನಿಂತಲ್ಲಿ ನಿಲ್ಲದೆ ಸಂತತ ದುರ್‍ವಿಷಯ
ಭ್ರಾಂತಿಯೊಳು ಮುಳುಗಿ ಚಿಂತಿಸುವದು ೪

ಗುರುರಾಮವಿಠಲನ ಸಿರಿನಾಮದ ರುಚಿ
ಸುರಿದು ತೃಪ್ತಿಗೊಳದೆ ಬರಿದೆ ಮರುಗುವೆ ೫

೨೪೧

ಮರುಳು ಮನುಜ ಹರಿಯ ಧ್ಯಾನಿಸೋ
ಸ್ಥಿರವಿಲ್ಲವೀದೇಹ ಪ

ಬರಿದೆ ಹೊನ್ನು ಮಣ್ಣಿಗಾಗಿ
ಪರರ ಸೇವೆ ಮಾಡಿನೊಂದು
ಇರುಳು ಹಗಲು ವ್ಯರ್ಥವಾಗಿ
ಕರೆಕರೆಯನು ಪಡುವೆಯಲ್ಲೊ ಅ.ಪ

ತಂದೆ ತಾಯಿ ಸತಿಯು ಸುತರು
ಬಂಧು ಬಳಗಗಳಾರಿದ್ದರು
ಮುಂದಿನ ಕರ್ಮ ತಪ್ಪಿಪರಾರು
ಸಂದೇಹವಿಲ್ಲೆಂದು ತಿಳಿದು ೧

ಧನವ ಸಂಪಾದಿಸುವವರೆಗೆ
ಜನರು ನಿನ್ನ ಸೇರುತಿಹರು
ಕೊನೆಗೆ ಯಾರು ದಿಕ್ಕು ಕಾಣೆ
ಮನೆಯಬಿಟ್ಟು ಹೋಗುವಾಗ ೨

ಗುರುರಾಮವಿಠಲನಂಘ್ರಿ
ಸ್ಮರಿಸಿ ಸ್ಮರಿಸಿ ಹರುಷ ಪೊಂದಿ
ಪರಮಸುಖವ ಪಡೆಯದೆ
ಪಾಪಿಯೆನ್ನಿಸಿಕೊಳ್ಳಬೇಡವೊ ೩

೨೪೨

ಮಾತು ಆಡುವೆ ಯಾತಕೆ ಮನವೆ ನೀ
ಸೋತು ಸುಮ್ಮನಿರು ಜೋಕೆ ಪ

ಮಾತು ಆಡುವೆ ಯಾಕೆ ಮಮತಾ ಅಹಂಕಾರದಿ
ಶ್ರೀತರುಣಿವರನ ಸಿರಿನಾಮವಿಲ್ಲದೆ ಅ.ಪ

ಕಾಯ ಅಸ್ಥಿರವೆನ್ನದೆ । ಇಹ ಪರಕೆ ಸ-
ಹಾಯವಾಗುವದೇ ಮುಂದೆ
ನ್ಯಾಯ ತಿಳಿಯದೆ ಅನ್ಯಾಯದಿ ಕೂಗುತ
ಮಾಯವಾದಗಳಾಡೆ ಬಾಯಿ ನೋವಲ್ಲದೆ ೧

ವೇದ ಪುರಾಣವಿಲ್ಲ । ಶಾಸ್ತ್ರವೆ ಬ್ರಹ್ಮ-
ವಾದವೇ ಮೊದಲೇಯಿಲ್ಲಾ

ಸಾಧನೆಯೆಂಬುವದು ಲೇಶಯಿದರೊಳಿಲ್ಲಾ
ಹಾದಿಹೋಕರ ಕೂಡಿ ಪ್ರೌಢನು ನಾನೆಂದು ೨

ಗುರುಹಿರಿಯರ ನಿಂದಿಸಿ । ಬಾಯಿಗೆ ಬಂದ
ಹರಟೆ ಹರಟೆ ಮೋದಿಸಿ
ಪರಗತಿ ಚಿಂತೆ ಬಿಂದು ಮಾತ್ರವು ಕಾಣೆ
ಹರಿವ ನೀರೊಳು ಬೂದಿಹಾಕುವಂದದಿ ವ್ಯರ್ಥ ೩

ಒಂದಕ್ಕೊಂದ್ಹೆಚ್ಚಿಸುತ । ಶುಷ್ಕವಾದ-
ದಿಂದ ಕಾಲವ ಕಳೆಯುತ
ಹಿಂದು ಮುಂದರಿಯದೆ ಹಿತಾಹಿತ ಕಾಣದೆ
ನಿಂದಿಸಿ ಪರರ ಸ್ವಯೋಗ್ಯತೆ ತಿಳಿಯದೆ ೪

ಬಲ್ಲೆನಾ ಬಿಡು ಎಂಬುವೆ । ಸದಾ ಒಬ್ಬ-
ರಲ್ಲಿ ದೋಷವ ಎಣಿಸುವೆ
ಪುಲ್ಲಲೋಚನ ಗುರುರಾಮವಿಠಲನ ಕಾಣ-
ಲಿಲ್ಲ ಶೋಧಿಸಿ ತಿಳಿಯಲಿಲ್ಲ ಬರಿದೆ ಬಾಯಿ ೫

೨೪೩

ಮಾನವನೆ ನೀ ಮರುಗದಿರೈ ಪ

ದೀನನಾಗಿ ಸದಾ ಹೀನರ ಬೇಡುತ
ನಾನು ನನ್ನದೆಂಬಭಿಮಾನದಲಿ ಅ.ಪ

ಹೊಟ್ಟೆಗೋಸುಗ ಪರರಿಷ್ಟಾನು ಸಾರದಿ
ಕೆಟ್ಟ ನುಡಿಗಳನು ನುಡಿಯುತಲಿ ೧

ಸಾವುತಪ್ಪದೆ ಮುಂದೆ ಭಾವಿಸಿ ನೋಡದೆ
ಜೀವನಕ್ಕಿಲ್ಲದೆ ನಿರ್ಜೀವಿ ನಾನೆಂದು ೨

ದುಷ್ಟರ ಓಲಗ ಕೆಟ್ಟ ಭೂಮಿಯ ಬೆಳೆ
ನಷ್ಟವಾಗೋದಲ್ಲದೆ ಲಾಭವುಂಟೇನೋ ೩

ಹರಿಕೊಟ್ಟಭಾಗವು ಪರಿಪೂರ್ಣವಾಗಿರೆ
ದುರುಳರ ಬೇಡುವರೆ ಕರೆಕರೆ ಯಾಕೆ ೪

ಹಿರಿಯರು ಪೇಳಿದ ಪರಮಬೋಧೆಯಿಂದಾ
ಗುರುರಾಮವಿಠ್ಠಲನ ಚರಣವ ನಂಬಿದೆ ೫

೨೪೪

ಮೂಢನಾಗಿ ಕೆಡಬೇಡವೊ ಪ

ರೂಢಿ ಜನಂಗಳನ್ನು ನಂಬಿ ಅ.ಪ

ಆಡಬಾರದ ಮಾತುಗ-
ಳಾಡಿ ಎನಗೀಡಿಲ್ಲೆಂದು
ಖೋಡಿ ಎನಿಸಿಕೊಂಡು ಕೊಂ-
ದಾಡಿನರರನು ೧

ತತ್ವದರ್ಶಿಯಾದವರ
ಹತ್ತರಿದ್ದು ಗ್ರಹಿಸದೆ
ಸತ್ತು ಹುಟ್ಟುತೀರುವ ಸಂ-
ಸಾರದಿ ಮುಳುಗಿ ೨

ತಾರತಮ್ಯ ಜ್ಞಾನದಿಂದ
ಗುರುರಾಮವಿಠಲನ
ಅರಿಯದ ಹುಲು ಪಾ-
ಮರರೊಳು ಸೇರಿ ೩

೨೪೫

ಮೊದಲಿಂದ ನೀ ಕೆಟ್ಟೆ ಮನುಜ ಪ

ಬುಧರಾಡುತಿಹ ನುಡಿಯನು ಕೇಳದೆ ಅ.ಪ

ಹಗಲಿರುಳು ದುರ್ವಿಷಯದಲಿ ಬಿದ್ದು
ಹಗರಣಕೆ ಗುರಿಯಾಗುತ
ಮಿಗೆ ದುರಿತಗಳ ಗಳಿಸಿ ಮುಂದೆ ಯ-
ಮಗೆ ನಿರುತ್ತರನಾದೆಯಲೊ ೧

ಹೆಣ್ಣು ಹೊನ್ನು ಮಣ್ಣುಗಳ ಬಯ
ಸಿನ್ನು ದುರ್ಜನ ಸೇವೆಯಿಂ
ಜನ್ಮವ ನಿರರ್ಥಕವ ಗೈಯುತಾ
ರಣ್ಯದೊಳಿಹ ಪಿಶಾಚದೋಲ್ ೨

ನಿರತವು ಸಜ್ಜನರಡಿಯ ಕಿಂ-
ಕರನೆನಿಸಿ ನೀ ಬಾಳೆಲೊ
ಕರುಣದಲಿ ಗುರುರಾಮ ವಿಠ್ಠಲ
ಕಾಯುವನು ಸಂದೇಹ ಬಿಡು ೩

೨೪೬

ಯುಕ್ತ ಕರ್ಮಮಾಡುವರಿಗೆ ಮುಕ್ತಿಯೇ ಫಲ ಪ

ಶಕ್ತರಾದ ಸಜ್ಜನರಿಗೆ ಶಾಂತಿಯೆ ಬಲ ಅ.ಪ

ಆರ್ಯರ ಪಥ ಪಿಡಿದು ಕಾರ್ಯಕಾರಣವರಿದು
ಸೂರ್ಯ ಮಂಡಲದಲಿ ಮೆರೆವ ನಾರಾಯಣನಂ ಭಜಿಸುತ್ತ ೧

ವೇದ ಶಾಸ್ತ್ರಗಳ ನೋಡಿ ಮಾಯಾವಾದಗಳೀಡ್ಯಾಡಿ
ಖೇದ ಮೋಹ ಸಮವೆಂದರಿತು ಸಾಧನಾನುಷ್ಠಾನದಿಂದ ೨

ಕಾಮ ಕ್ರೋಧ ಬಿಟ್ಟು ನಿತ್ಯ ನೇಮದಿ ಮನವಿಟ್ಟು
ತಾಮಸ ಗುಣವಿಲ್ಲದ ಗುರುರಾಮವಿಠಲನ ನಂಬಿ ೩

೨೪೭

ರಾಮನಾಮ ಸ್ಮರಣೆಯ ಮಾಡದೆ ನೀ
ಪಾಮರನಾಗದಿರೊ ಮನುಜ ಪಾಮರನಾಗದಿರೊ ಪ

ಕಾಮಕ್ರೋಧದಿಂದ ಕೆಟ್ಟರು ಬಹುಜನ
ತಾಮಸಗುಣಬಿಟ್ಟು ಪ್ರೇಮದಿಂದಲಿ ನಮ್ಮ
ಸ್ವಾಮಿಯ ನೆರೆ ನಂಬಿರೋ ಅ.ಪ

ದೇಹವನಿತ್ಯವೋ ಮೋಹಪಡಬ್ಯಾಡವೋ
ಅಹಾ ಇದರೊಳು ಸಾಹಸವೇನು
ಲೇಶ ಸುಖ ಕಾಣೆನು ೧

ತೊಗಲುಬೊಂಬೆಗಳಂತೆ ನೆಗೆದಾಡುತಿರುವ
ಹಗರಣವಹ ವ್ಯಕ್ತಿಗಳನು ನಂಬುತಾ
ನಗೆಗೀಡಾಗದಿರೊ ೨

ಹೊರಗೊಳಗಿದ್ದು ನಮ್ಮ ಗುರುರಾಮವಿಠ್ಠಲ
ಕರುಣಿಸುವನು ಎಂದರಿತರೆ ಮುಕ್ತಿಯು
ಕರತಳವಾಗುವುದು ೩

೨೪೮

ವಾರಿಧಿ ದಾಟಲುಬಹುದು ಈ ಸಂ-
ಸಾರವದಾಟುವುದೆ ಕಷ್ಟವೊ ಪ

ಬಂಧುಗಳು ಬಳಗಗಳು
ತಂದರೆ ಬಂದರೆ ಹಿಗ್ಗುವರು ೧

ಖೇದದಲಿ ಭೇದದಲಿ
ವಾದಗಳಾಡುವರೆಲ್ಲರಲೀ ೨

ಪಾಮರರು ಇವರುಗಳು ಗುರು-
ರಾಮವಿಠ್ಠಲ ಬಲ್ಲ ೩

೨೪೯

ವಿರೋಧವ್ಯಾತಕಯ್ಯ ನಿಮಗಿದರೊಳು ಪ

ಪರಂಪರದ ಸಂಪ್ರದಾಯಕೆ ನಿಮಗೆ ಅ.ಪ

ಈಶ ನಾನೆಂಬುವದೊಂದು ಸರ್ವೇಶ ಹರಿಯಂಬೊದೊಂದು
ಲೇಸಾಗಿ ಹೆಚ್ಚು ಕಡಮೆಗಳ ತಿಳಿಯುವದಿನ್ನೊಂದು ೧

ಈ ಮೂರು ಮತಗಳಿಗೆ ಪ್ರೇಮವಾದಭಿಪ್ರಾಯಗಳು
ನೇಮನೇಮವಾಗಿಟ್ಟು ಕೊಂಡಿರುತಿಹರೆಲ್ಲರು ೨

ನಿಮ್ಮ ನಿಮ್ಮ ಮನಗಳಿಗೆ ಸಮ್ಮತವಾಗುವ ಪರಿ
ಬ್ರಹ್ಮ ಜ್ಞಾನವೊಂದು ಸಂಪಾದಿಸಿದರೆ ಸಾಕು ೩

ಪುರಾಣ ಶಾಸ್ತ್ರವೇದ ಮೂರು ಮತಗಳಿಗೆ
ಸರಿಯಾದರ್ಥ ತೋರಿ ದಾರಿಯ ಕೊಡುವುದು ೪

ಮೂರು ಮತಗಳಿಗೆ ಮೂರಾಗಿ ತೋರುವ
ಧೀರ ಶ್ರೀಗುರುರಾಮವಿಠ್ಠಲನೊಬ್ಬನೆ ೫

೨೫೦

ಷಷ್ಠಿ ವರ್ಷಗಳಾದ ಮೇಲೆ
ಪುಷ್ಟಿ ಎಲ್ಲಿಯದು ಪ

ದೃಷ್ಟಿ ಕಡಿಮೆಯು ಕಿವಿಯು ಕೇಳದು
ಶ್ರೇಷ್ಠ ನಾನೆಂದು ಕುಣಿವುದಕೆ ಅ.ಪ

ವರುಷವರವತ್ತಾದ ನಂತರ
ಪರಿವ್ರಾಜಕನಾಗಬೇಕೆಂ–
ದುರುತರಾಶ್ರಮ ಧರ್ಮಶಾಸ್ತ್ರಗ–
ಳೊರೆಯುತಿಹುದದರರ್ಥ ತಿಳಿಯದೆ ೧

ಕಾಮ್ಯಕರ್ಮಗಳನು ತ್ಯಜಿಸಿ
ಭ್ರಾಮ್ಯಜನಗಳ ನಡತೆ ಬಿಟ್ಟು
ಸೌಮ್ಯನಾಗುತ ಹರಿಯಧ್ಯಾನವೆ
ರಮ್ಯವೆಂದರಿಯುವುದು ಸೌಖ್ಯವು ೨

ಎಮ್ಮೆಯೋಲ್ ತಿನ್ನುತಲಿ ಬಾಯಲಿ
ಹೆಮ್ಮೆ ಮಾತುಗಳಾಡುತಿರುತಿಹ
ಗ್ರಾಮ್ಯ ಜನಗಳ ಸಂಗವೆಂದಿಗು
ಗತಿವಿದೂರನ ಮಾಡದೆ ಬಿಡದು ೩

ಗಣ್ಯತಾನೆಂದುಕೊಳ್ಳದೆ ದಾ–
ಕ್ಷಿಣ್ಯ ಜೀವನವನ್ನು ಮಾಡದೆ
ಅನ್ನಕೋಸುಗ ಪರರ ಪೊಗಳದೆ
ಧನ್ಯರಡಿಗಳ ಠಾವಿನಲಿ ನಲಿ ಸುಖ ೪

ಪಾಮರರು ಪ್ರತಿದಿನವು ದುಸ್ತರ
ತಾಮಸ ನರಕದೊಳು ಮುಣುಗುತ್ತ
ಸ್ವಾಮಿಯಾಗಿ ಮೆರೆವ ಶ್ರೀಗುರು–
ರಾಮವಿಠಲನ ಮರೆತು ಕೆಡುವರು ೫

೨೫೧

ಸಂಗಬೇಡವ್ವೆ ಆಶಾ ಪ

ಸಂಗದಿಂದ ನಿನಗೆ ಅಂಗವೇ ಭಂಗವಾಹುದ್ವೆ ಅ.ಪ

ಇದ್ದ ಕಡೆ ಇರಲೀಸದು । ಅ
ಬದ್ಧವ ಪೇಳಿಸುವುದು
ಶುದ್ಧ ಮನುಜನಾದರೆಯು ಅ –
ವಿದ್ಯದಿ ಮುಳುಗಿಸುವುದು ೧

ನೋಡಿದುದು ಬಯಸುವುದು । ಬಲು
ಮೋಡಿಯಿಂ ತಿರುಗಿಸುವುದು
ಬೇಡವೆಂಬ ಕಾರ್ಯಗಳನ್ನು
ಮಾಡಿಸಿ ಮಾಡಿಸಿ ದಣಿಸುವುದು ೨

ಹಣವಿದ್ದರು ಕಳೆವುದು । ದುರ್
ಮನದಿ ಸಾಲ ಮಾಡಿಸುವುದು
ಗುಣಿಯಲಿ ದುರ್ಗುಣವೇ ಕಾಣಿಸಿ
ಹೆಣಕೆ ಸಮವೆಂದೆನಿಸುವುದು ೩

ಬೋಧೆಯ ಕೇಳಲೀಯದು । ಮನೋ
ವ್ಯಾಧಿಯಲ್ಲಿ ಕೃಶಿಸುವುದು
ಹಾದಿ ಹೋಕರ ಕಂಡವರಂತೆ
ಸಾಧನವ ಮಾಡಿಸುವುದು ೪

ಅನ್ನಬಾರದನ್ನಿಸುವುದು
ತಿನ್ನಬಾರದ್ದು ತಿನ್ನಿಸುವುದು
ನನ್ನದೂ ನಾನೆಂಬ ಗರ್ವದಿ
ಇನ್ನೂ ಮುನ್ನೆ ಕೆಡಿಸುವುದು ೫

ಆಗೋ ಕಾರ್ಯ ಮಾಡಲೀಯದು
ಹೋಗದೂರಿಗೇ ಹೊರಡಿಸುವುದು
ಭೋಗಗಳೊಳಪೇಕ್ಷೆ ಪುಟ್ಟಿಸಿ
ರೋಗದಿ ಬಳಲಿಸುವುದು ೬

ಕೋಪಾದಿಗಳು ಹೆಚ್ಚುವುದು
ಪಾಪಬುದ್ಧಿ ಪುಟ್ಟುವುದು
ಶ್ರೀಪತಿ ಗುರುರಾಮ ವಿಠಲನ
ಶರಣರಿಗಿದು ಸಲ್ಲದು ೭

೨೫೨

ಸನ್ಮಾರ್ಗ ಸನ್ಮಾರ್ಗಯಿದು ಪ

ಮನ್ಮಥ ಜನಕನ ಮನದಿ ಭಜಿಸುವುದು ಅ.ಪ

ಕರ್ತ ನೀನು ಹರಿಭೃತ್ಯನಾನು ಯೆಂ–
ದತ್ಯಂತ ಮನೋಹರುಷದಿ ಕುಣಿವದು ೧

ಪದದಿಯಾತ್ರೆ ಮೊದಲಾದ ಕರ್ಮಗಳು
ಪದುಮ ನಾಭನಿಗೆ ಪೂಜೆಯೆಂದರಿವುದು ೨

ಛಳಿಮಳೆಗಾಳಿ ಬಿಸಿಲುಗಳೊಳಗೆ ಶ್ರೀ
ಲಲನಾಧಿಪನ ವಿಭೂತಿ ತಿಳಿಯುವುದು ೩

ಕರೆಕರೆ ಸಂಸಾರದ ಭಾರದೆ ತಾ
ಮರೆಯದೆ ನಿರತವು ಹರಿಗರ್ಪಿಸುವುದು ೪

ಪಾಮರಜನದೊಳು ಸೇರದೆ ಶ್ರೀಗುರು–
ರಾಮ ವಿಠ್ಠಲನ ನಾಮ ಜಪಿಸುವುದು ೫

೨೫೩

ಸಾಲದೆ ನಿನಗಾಗಿರುವ ಮರಿಯಾದೆ ಪ

ಮೇಲುಕೀಳೆನ್ನದೆ ಮರುಗುವೆ ಮನವೇ ಅ.ಪ

ಕಾಲಕಾಲದಿ ನಿತ್ಯಕರ್ಮ ಮಾಡದೆ ಹೀ–
ಯಾಳಿಕೆಗೀಡಾಗಿ ಬೇಳಾಡುತ್ತಿರುವುದು ೧

ತ್ರಿವಿಧ ಜೀವರೊಳು ಯಾವದ ನುವೆಂದು
ತಾ ತನಗೆ ಯೋಚಿಸದೆ ಪಾಪವಗಳಿಸುವೆ ೨

ತನ್ನಯೋಗ್ಯತೆಯನು ತಾ ತಿಳಿಯದೆ ಪರ–
ರನ್ನು ನಿಂದಿಸಿ ನಾ ಧನ್ಯನೆಂದುಕೊಂಬುವೆ ೩

ಈಷಣತ್ರಯಗಳ ಆಸೆಯಿಂದಲಿ ನರರ
ದೂಷ್ಯರಭೂಷಿಸಿ ಘಾಸಿ ಹೊಂದುವಿ ೪

ಪರಮಶಾಂತನಾಗಿ ಗುರುರಾಮವಿಠಲನ
ಚರಣವ ಭಜಿಸದೆ ಬರಿದೆ ಧಾವತಿಯಾಕೆ ೫

೨೫೪

ಸುಳ್ಳುಗಳ ಬೋಧಿಸಿ ನೀ ಪೊಳ್ಳಾಗದಿರಲೊ ಪ

ನೀರ್ಗುಳ್ಳೆಯಂಥ ದೇಹ ನಂಬಿ ನಿಜಭಕ್ತ ನಾನೆಂದೂ ಅ.ಪ

ಎಳ್ಳುಕಾಳಿನಷ್ಟಾದರೂ ಈಶನಲ್ಲಿ ಭಕ್ತಿಕಾಣೆ
ಡೊಳ್ಳುತುಂಬುವದಕೆ ನಾಲ್ಕಲ್ಲಿ ಇಲ್ಲಿ ಕಲಿತುಕೊಂಡು ೧

ಪರರಿಗೆ ಹೇಳುವಂತೆ ನೀ ನಡೆಯುವೆಯೇನೊ
ಪರಗತಿಯಾಗದು ನಿಜ ನಿಜ ನಿಜ ಕಾಣೊ ೨

ನಿನ್ನಯೋಗ್ಯತಾನುಸಾರ ನೀನರಿಯಲೊ
ಬನ್ನಬಡುವದೆ ಸಾಕ್ಷಿ ಪುಣ್ಯವೇನಿದರೊಳು ೩

ಬಿಡು ಬಿಡು ಬಿಡು ಬಿಡು ಬಯಲಿನ ಡಂಭವ
ಹಿಡಿ ಹಿಡಿ ಹಿಡಿ ಹಿಡಿ ಹಿರಿಯರ ಪಾದವ ೪

ಶರಣ ಜನರ ನೋಡಿ ಶಾಂತನಾಗುತ
ಗುರುರಾಮವಿಠಲನ ಗುರುತರಿಯದೇ ನೀ ೫

೨೫೫

ಹಣವೆನಲು ಹಣವಲ್ಲ ಹಣವಿಲ್ಲದವರಿಲ್ಲ ಪ

ಗಣಿಸಲು ಮಹಾತ್ಮರೆ ಹಣವಂತರಯ್ಯ ಅ.ಪ

ಹಣವು ವಿದ್ಯೆಯು ತಪಸು ಊಂಛ ವೃತ್ತಿಗಳು ಬ್ರಾ–
ಹ್ಮಣಗೆ ಕ್ಷತ್ರಿಯರಿಂಗೆ ಶೌರ್ಯಾದಿಗಳ್
ಘನಚಮತ್ಕೃತಿ ಯುಕ್ತಿಗಳು ವೈಶ್ಯರಿಗೆ ಶೂದ್ರ
ಜನಕೆ ಭೂಪರಿಚರ್ಯ ಕೃಷ್ಯಾದಿಗಳೆ ಹಣವು ೧

ಮೋಸವತಿಲಾಭ ಸಟೆ ಕಪಟ ಬಾಯಬಡುಕತನ
ದೋಷ ತಸ್ಕರ ಅಧರ್ಮಗಳಿಂದಲಿ
ಘಾಸಿಯಿಂ ಗಳಿಸಿರುವ ಲೇಶವಾದರು ಪುಣ್ಯ-
ರಾಶಿಯನು ಕೆಡಿಸದೇ ಲೇಸು ಮಾಡುವದೇ ೨

ಸತ್ಯರಿಗೆ ಯಾಚನೆಯು ನಿತ್ಯಯಾಚನೆ ರಜಕೆ
ಅತ್ಯಾಸೆ ಪಿಶುನತೆಯು ತಾಮಸರಿಗೆ
ಸತ್ಯ ಸಂಕಲ್ಪ ಗುರುರಾಮ ವಿಠಲನ ಸ-
ರ್ವತ್ರ ಚಿಂತಿಸುವವಗೆ ಕೈತುಂಬ ಹಣವೂ ೩

೨೫೬

ಹೇಳುವುದು ಬೇಡ । ಜನರ ನುಡಿ
ಕೇಳದಿರಲೋ ಮೂಢ ಪ

ಶ್ರೀಲೋಲನ ಕಿಂಕರರ ಬಾಗಿಲಲಿ
ಬೀಳುನಾಯಿಯಂದದಲಿ ಕೆಲಕಾಲ ಅ.ಪ

ದ್ರವ್ಯದಾಸೆಗಾಗಿ । ನಾರಕೀ
ಭವಿತವ್ಯರಲ್ಲಿಗೆ ಹೋಗಿ
ಸೇವ್ಯನೀನು ಸೇವಕನಾನೆನ್ನುತ
ಕಾವ್ಯನಾಟಕ ಸ್ತುತಿ ಪದ್ಯಗಳನು ೧

ನಾನು ಯೋಗ್ಯನೆನ್ನುತ । ತೋರಿಸಿ
ಶಾನೆ ಮಾತನಾಡುತ
ಮಾನವಾಗಿದಿರದಲ್ಲಿ ನಿನಗೆ ದುರಭಿ-
ಮಾನಿಯಾಗಿ ನೀ ಕೆಡುವೆಯೊ ನಿಜ ನಿಜ ೨

ಉಂಛ ವೃತ್ತಿ ಸಾಕು । ಜೀವನಕೆ
ಕೊಂಚ ಬೇಡಬೇಕು
ಪಂಚಶರಜನಕ ಗುರುರಾಮವಿಠಲನ
ವಂಚನೆಯಿಲ್ಲದೆ ಭಜಿಸು ರಹಸ್ಯವ ೩

೨೫೭

ಹೊಟ್ಟೆ ನಿನ್ನಿಂದಲೆ ನಾ ಕೆಟ್ಟೆ ನಮಗೇಕೀ ಬಟ್ಟೆ ಪ

ಸಿಟ್ಟ ಮಾಡಿ ಪರರ ಕಷ್ಟವನರಿಯದೆ
ಕೆಟ್ಟವನೆಂಬಪಕೀರ್ತಿಯ ಪಡಿಯುವ ಅ.ಪ

ಒಂದು ಹೊತ್ತಿಲ್ಲದಿರುಲು ತಾಳಲಾರೆ । ನಿನಗಾಗಿ ನೀಚ-
ವೃಂದವ ಯಾಚಿಸಿ ನಾ ಬಳಲಲಾರೆ
ತಂದೆ ತಾಯಿಗಳನ್ನಾದರೂ ವಂಚಿಸಿ
ಮುಂದಾಗುವ ಕೇಡರಿಯದಿರುವ ಹಾಳು ೧

ಹೆಚ್ಚು ಕೊಟ್ಟರು ಒಲ್ಲೆಯೆಂಬೆ । ಕಡಿಮೆಯಾದರೂ ಬಾಯಿ
ಮುಚ್ಚಲೀಸದೆ ದೇಹಿ ಎಂಬೆ
ತುಚ್ಛರ ಸೇವಿಸಿ ಅನ್ಯಾರ್ಜಿಸಿ
ಹುಚ್ಚು ಹಿಡಿಸುವೆಯೇನೊ ನೀ ಕೊನೆಗೆ ೨

ನಿನಗಾಗೀ ಸಕಲ ವಿದ್ಯೆಗಳರಿತು । ಸಭೆಯೊಳು ವಾದಿಸಿ
ಜನವ ಮೆಚ್ಚಿಸಿ ಹಣವ ತೆಗೆದು
ದಿನ ದಿನ ತುಂಬುತಲಿದ್ದರು ಝಾವಕೆ
ಮನಸು ಚಪಲ ಮಾಡಿ ತಹ ತಹ ಪಡಿಸುವ ೩

ವ್ಯವಸಾಯಯೋಗ್ಯ ವ್ಯಾಪಾರಗಳು । ಯಾಚನೆಕಷ್ಟ
ಬವಣೆ ಭಾರವಾಹತ್ವ ಮೊದಲು

ದಿವಸ ದಿವಸ ಮಾಡುತ ನಿನ್ನೊಲಿಸಲು
ಜವನಾಳ್ಗಳ ಕೈಗೊಪ್ಪಿಸಿಸುವೆ ಕಡೆಗೆ ೪

ಜ್ಞಾನ ನಿಷ್ಕಾಮ ಕರ್ಮದಾನ । ಸಂಧ್ಯಾಜಪತಪ
ಸ್ನಾನಾನುಷ್ಠಾನ ಸತ್ಸಾಧನಾ
ಏನು ನಡೆಯಲೀಸದೆ ದಿನದಿನದಲಿ
ನಾನು ನನಗೆ ಎನ್ನಿಸಿ ಬಾಯಿಬಿಡಿಸುವ ೫

ಮುಷ್ಕರದಿಂದ ನಿನ್ನ ನೋಯಿಸಲು । ಕರಗಿಯೆಲ್ಲ
ಶುಷ್ಕವಾಗುವದು ತೃಪ್ತಿಪಡಿಸಲು
ಪುಷ್ಕಳವಾಗಯುಷ್ಕರ ಮಾಡುವೆ
ನಿಷ್ಕಾರಣವಲ್ಲವು ನೀ ಜಗದೊಳು ೬

ಕೊಟ್ಟಷ್ಟರಲ್ಲೆ ತೃಪ್ತಿಯ ಹೊಂದು । ಸಾಲದಿರಲು
ಸಿಟ್ಟೇಕೆನ್ನೊಳು ದಯಮಾಡಿಂದು
ದಿಟ್ಟ ಶ್ರೀ ಗುರುರಾಮವಿಠಲನಂಘ್ರಿಯ
ಮುಟ್ಟಿ ಭಜಿಸೆ ಸಂತುಷ್ಟಿಯ ಪಡೆವೆ ೭

೨೫೮

ಹ್ಯಾಗಿದ್ದರೂ ಸುಖವೇ ಜ್ಞಾನಿಯಾದವಗೆ ಪ

ನಾಗಶಯನನಂಘ್ರಿ ನಳಿನ ನಂಬಿರುವಗೆ ಅ.ಪ

ಬಂಧುಬಳಗವೆಲ್ಲ ಸಂದಣಿಯಾಗಿದ್ದರು
ಹಿಂದುಮುಂದಿಲ್ಲದೆ ತಾನೊಬ್ಬನಾದರು ೧

ಹೊನ್ನು ಹೆಣ್ಣು ಮಣ್ಣು ಹೊಂದಿಕೊಂಡಿದ್ದರು
ಅನ್ನಕಿಲ್ಲದೆ ತಾ ನರಳುವಂತಾದರು ೨

ಬೇಡದೆ ಸಕಲೈಶ್ವರ್ಯ ತಾನೆ ಬಂದರು
ಬೇಡಿದರೊ ಹೊಟ್ಟೆ ತುಂಬ ದೊರಕದಿದ್ದರು ೩

ಯೋಗ್ಯನೆನ್ನುತ ಜನರು ಶ್ಲಾಘ್ಯವ ಮಾಡಿದರು
ಭಾಗ್ಯಹೀನನಿವನೆಂದು ಬೈಯ್ಯುತಲಿದ್ದರು ೪

ಕೊಟ್ಟಷ್ಟರಲ್ಲೆ ತೃಪ್ತಿಪಟ್ಟು ಶ್ರೀ ಗುರುರಾಮ–
ವಿಠ್ಠಲನ ಮನಮುಟ್ಟ ಭಜಿಸುವಗೆ ೫

ಲೋಕನೀತಿ (ಆ)

೨೫೯

ಇರುವುದೆಲ್ಲ ಮನೆಯೊಳಗಿದ್ದರೆ ಆಡಿಗೆಗೆ
ಯಾತಕ್ಕೆ ತಡವಾಗೋದು । ಪ

ತರಬೇಕೇಂದು ನೂರು ತಡವೆ ನಾ ನುಡಿದರು
ಅರಿಯದವರ ಪರಿತಿರುಗುತ್ತಲಿರುವದು ಅ.ಪ

ಮನೆ ಮನೆಯಲಿವಂದು ಮಾನಾರ್ಧಮಾನಗಳು
ಮೆಣಸಿನಪುಡಿ ಉಪ್ಪು ಅಕ್ಕಿ ಸಾಲ
ದಿನ ದಿನ ಮಧ್ಯಾಹ್ನ ತಿರುಗಿದ ಮೇಲೆ
ಮನೆಗೆ ಬಂದು ಹಸಿವೆನುತ ಪೇಳುವದು ೧

ಎಣ್ಣೆವಗ್ಗರಣೆಯಲ್ಲದೆ ಕಾಣೆನಭಿಗಾರ
ಮುನ್ನೆ ಪಿತ್ಥ ಹೆಚ್ಚಿ ತಲೆ ನೋಯ್ವುದು
ನಿನ್ನೆಮೊನ್ನೆ ಹೇಳಿದುದಕೆ ಹೊಡೆಸಿಕೊಂಡೆ
ದೊಣ್ಣೆಪೆಟ್ಟಿನಿಂದ ಬೆನ್ನು ಬಾತಿರುವದು ೨

ವರುಷಕ್ಕಾಗುವ ಮಟ್ಟಿಗೆಲ್ಲಾ ಪದಾರ್ಥ ಶೇ-
ಖರವ ಮಾಡುವುದು ಈ ಮನೆಯೊಳಿಲ್ಲಾ
ಹಿರಿಯರಿಂದ ಬಂದ ಸಂಪ್ರದಾಯವಿದೇನೊ
ಇಂಥಾಮನೆಯ ಸೇರಿ ಈ ಸುಖ ಪಡುವೆ ೩

ಮದುವೆಯಲ್ಲಿದ್ದದ್ದು ಪ್ರಸ್ತದೊಳಗೆಯಿಲ್ಲ
ಬದಲು ಸೀರೆಯು ನಾನುಟ್ಟರಿಯೆ
ವಿಧಿಲಿಖಿತವು ತಪ್ಪುವುದೆಯೆಂದಿಗಾದರು
ವದರಿ ಕೊಂಡರೆಯೇನು ಇದರೊಳು ಫಲವುಂಟು ೪

ನಾನಾಡಿದ ಮಾತು ನಾನೆ ಕೇಳಬೇಕು
ಜ್ಞಾನ ಶೂನ್ಯರು ಮನೆಯೊಳಿಹರೆಲ್ಲರು
ಈ ನರಜನ್ಮವು ಇಷ್ಟಕ್ಕೆಸಾಕೆಂದು
ಧೇನಿಸಿ ಗುರುರಾಮವಿಠಲನ ಬೇಡುವೆ ೫

೨೬೦

ಇಲ್ಲದ ಪದಾರ್ಥಕ್ಕೆ ಏನೇನೋ ಹೆಸರು ಬಿಡಿ ಪ

ಬಲ್ಲೆ ಇವೆಲ್ಲಾ ನಾನೆಂಬುವರು ದುರ್ಜನರು । ನಿಜ ಅ.ಪ

ನಾವೇ ದೇವರ ಮಾಡಿದೆವೋ
ದೇವರು ನಮ್ಮನು ಮಾಡಿದನೋ
ಭಾವಿಸಿ ನೋಡಿದರೆ ದೈವ ನಾವಲ್ಲದ್ಯಾರು ೧

ವಿಷ್ಣು ಈಶ್ವರನು ಬ್ರಹ್ಮ
ಎಲ್ಲಿರುವರು ನಾವೆ ವಿಶ್ವವ್ಯಾಪಕರು
ವಿವಿಧ ರೂಪವಾಗಿಹೆವು ೨

ಗುರುವೇ ಶಿಷ್ಯನಾಗಿರುವ
ಅರಿತ ಮೇಲೆ ಗುರುವೇತಾನಾಗುವ
ಸರ್ವವೂ ಸುಳ್ಳವನಿಗೆ ೩

ಬೆಳಕಿಗೆ ಕತ್ತಲು ವೈರಿ
ಕತ್ತಲಿಗೆ ಬೆಳಕು ಶತ್ರು
ಹೊಳವಿಗಿಂತಲೂ ಕತ್ತಲೆಯೇ ಲೇಸು ನಮಗೆ ೪

ಗುರುರಾಮವಿಠಲನ್ನ ಮರೆತು ಈ
ಪರಿಯಲಿ ನಿರುತ ಸಂಸಾರ ಚಕ್ರದಿ
ದುರುಳರು ತೊಳಲುವರು ೫

೨೬೧

ಏಳೇಳೇಳೆಲೆ ಮಾಮ । ಆರೋ
ರೇಳೋದು ಸುಳ್ಳು ಬಂತು ಕ್ಷಾಮ ಪ

ಹಾಳಾಗಿ ಹೋಯ್ತು ಮಳೆಬಳೆ
ಕಾಳೆಲ್ಲ ಕಸವಾಯಿತು ಅ.ಪ

ಭೂಮಿ ಒಕ್ಕಲಮಗನದು ಭೂಮೆಮ್ಮನ ಮಕ್ಕಳು ಒಕ್ಕಲಿಗರು
ಭೂಮಿ ಬೆಳೆದರೆ ಅರ್ಧವನ್ನು ಬ್ರಾಹ್ಮಣರಿಗೇಕೆ ಕೊಡಬೇಕು ೧

ಆರೋರು ಹೊಲ ಮಾಡಬಾರದು ಮಾಡಿದರೆ ಬಲು ಪಾಪ
ಮಾರಲಿ ನಮಗೆ ಮೂರಕ್ಕೆ ನಾಲ್ಕಕ್ಕೊ ಏನಲಾ ಯೀರ್ಕೆಂಪ ೨

ಎದ್ದುಕು ರೂಪಾಯಿಲು ಕಾವಾಲೆ ಎರವು ಇಸ್ತೆ ಚೇಸ್ತಾನು
ಒದ್ದಂಟೆ ವಾಡೆ ಪೋನಿ ವಲ್ಲ ಬಾ ಪ್ನೋಳ್ ಚೇನು ೩

ಹೊಲಕುಯಿದು ಕಟ್ಟುವಾಗ ಛಲದಿ ಹಾರುವೈಯ ಬೇಗ
ಒಕ್ಕಲಿಗನ ಕಾಯಬೇಕಂತಾನೆ ಬಲು ಭ್ರಾಂತನು ತಾನೆ ೪

ಖಂಡುಗವರೇ ಕಾಳಿಗೆ ಎರಡು ಕೊಳಗ ಕೊಡುವವೇಳು
ದಂಡು ತರ್ತಾನೇನೋ ನೋಡಾಣಿ ದರ್ಪ
ನಮ್ಮಲ್ಲಿ ನಡೆಯದು ೫

ಕಂದಾಯ ಕೊಡುವಮಟ್ಟಿಗೆ ಕಾಳುಕೊಟ್ಟರೆ ಸಾಕು
ಮುಂದಲು ಬಾರಿಗೆ ಸಾವೇ ಹಾಕಿ ಮೂಗಳಕ್ಕೆ ಗುತ್ತಿಗೆಬೇಕು ೬

ನಾವು ತಿಂದು ಮಿಕ್ಕದರೊಳಗೆ ಹಾರೋರಿಗೆ ಸರಿಪಾಲು
ದೇವರಾಣೆ ಸತ್ಯವಾಗಿ ಹೇಳ್ತೀನಿ ಕಾಲ ಕಳ್ಳೋದೆ ಮೇಲು ೭

ಹೆಂಡಿರು ಹಿಟ್ಟು ಹೊರಲಿಲ್ಲ ಈ ಪುಂಡುತನ ನಮ್ಮಲಿ ಸಲ್ಲಾ
ಭಂಡಿಸೌದೆ ಬೇಕೆಂದು ಬರುತಾನೆ ಭಲೆ ಭಲೆ ಹಾರೋನೆ ೮

ಹನ್ನೆರಡು ವರುಷ ಆದಮೇಲೆ ಉಳುಮೆ ಹಕ್ಕುದಾರಿ
ನಮ್ಮದುಕೇಳಲೆ
ಇನ್ನು ಉಳುಮೆಯಿಲ್ಲ ಹಾರುವೈಯಂಗೆ ರಾಜಿನಾಮೆ
ಕೊಡಲಿ ಬಿಡಲೆ ೯

ಎಷ್ಟು ಧರ್ಮದೊಳಿದ್ದುರು ರೈತರು ಕಷ್ಟಪಡುವರು ನಾವೆ
ಬಿಟ್ಟಿ ಹಾರುವಯ್ಯ ಬಲ್ಲೆನೆ ಗುರುರಾಮವಿಠಲಗಾಗಲಿ ಸೇವೆ ೧೦

೨೬೨

ಕಲಿಪುರುಷನಿಗತಿಹರುಷ
ಬಲುಸಜ್ಜನಗಳುಬಾಯ್ಬಾಯ್ಬಿಡುವುದು ಪ

ಅಲಕ್ಷ್ಮೀರಮಣ ಅಖಿಲ ದುರ್ಗುಣಂ
ಗಳಕೊಟ್ಟೆಲ್ಲರ ಗಾಳಿಗೆ ತೂರುವೆ ಅ.ಪ

ರಾವಣಾಸುರಗೆ ಮಗನೆನಿಸಿ
ದೇವತೆಗಳ ಸೆರೆಯಲ್ಲಿಡಿಸಿ

ಭಾವಜ್ವರನು ನಿರಾಕರಿಸಿ
ಸಭಾಸ್ಥಾನಗಳ ಭಂಗಪಡಿಸಿ
ಭೂವಲಯದಿ ಧಾರ್ತರಾಷ್ಟ್ರನಾಗುತ
ಬಹುದುಃಖ ಪಡಿಸಿ ಪಾಂಡುಕುಮಾರರ
ಪಾವನಿಯಿಂತೊಡೆಯೊಡೆದು ಬೀಳುತ
ಬಗೆಯ ನೆನದುಯೀಗೆಮ್ಮ ಬಾಧಿಸುವೆ ೧

ಆಗಮಗಳು ಸುಳ್ಳೆಂಬುವದು । ನಾ
ಯೋಗಿಯೆಂದು ಹಿಗ್ಗುತಲಿಹುದು
ಭಾಗವರತ ನಿಂದನೆಗೈದು । ನಿರ್
ಭಾಗ್ಯತನ್ನತಾನೆ ಪೊಗಳುವದು
ಸಾಗರದಂತಿಹ ದುರಾಸೆಯೊಳಗಾ
ವಾಗಲು ಜನ ಮುಳುಗುತ ತಿಳಿಯದೆ
ರಾಗದ್ವೇಷದಿ ಪಾಪವಗಳಿಸಿ ಮ
ಹಾಗರ್ವದಿ ನಿಷ್ಫಲವ ಪೊಂದುವರಿದು ೨

ನೀತಿ ತಪ್ಪಿತಾವ್ನಡೆಯುವುದು । ದು
ರ್ಜಾತಿಗಳುತ್ತಮರೆಂಬುವದು
ಆತುರದಲಿಮನವಳುಕುವುದು । ಬಲು
ಘಾತಕತನದಲಿತಿರುಗುವದು
ಗಾತುರಸುಖವೇ ಮೋಕ್ಷವೆಂದು ವಿಷ
ಯಾತಿಶಯದಿಯರಿಷಡ್ವರ್ಗಗಳೊಳು
ರಾತಿರಿಪಗಲೆನ್ನದೆ ಬೀಳ್ವುದುನಿ
ನ್ನಾತಗಳಿಂಗೆ ಸ್ವಭಾವಗುಣಂಗಳು ೩

ಕ್ಷಾಮಡಾಂಬರಗಳ್ಹೆಚ್ಚುವದು । ನಿ–
ಷ್ಕಾಮರ ಹಾಸ್ಯವಮಾಡುವದು
ಕಾಮದಿಜನಗಳ ಬಾಧಿಪದು
ನಿಷ್ಕಾರಣರೋಗದಿ ಸಾಯುವದು
ಪಾಮರರೆಲ್ಲರು ಪಂಡಿತರಾವೆಂ–

ದೀಮಹಿಯೊಳುಮನಬಂದಂತೆಸದಾ
ತಾಮಸಗಳಬೋಧಿಸುತಲಿಜಗದೊಳು
ದ್ರವ್ಯಾರ್ಜನೆಮುಖ್ಯಸಾಧನವೆಂಬುದು ೪

ವಿಪರೀತ ಫಲಗಳಾಗುವುದು
ಚಪಲಹೊಂದಿಚಿಂತಿಸುತಿಹುದು
ಜಪಹೋಮಗಳನು ತ್ಯಜಿಸುವದು
ಬಲುಜಾಡ್ಯಂಗಳನನುಭವಿಸುವದು
ಉಪಕಾರಗಳನುಮಾಳ್ಪರಲ್ಲಿ ಪ್ರ
ತ್ಯಪಕಾರಗಳೆಣಿಸುತಲಾವಾಗಲು
ಕಪಟದುರ್ಮತಗಳ್ಹೆಚ್ಚಿಭುವಿಯೊಳಗೆ
ಕಾಲಕಳೆಯುತ ವ್ಯಥಾನೋಯುವದು ೫

ಶೂದ್ರರುವೇದವ ಪಠಿಸುವದು । ನಿರು
ಪದ್ರವನುದಂಡಿಸುತಿಹುದು । ಹರಿ
ರುದ್ರವಿಧಿಗಳದೂಷಿಪದು । ಅ–
ಬದ್ಧವೆಬಲುರುಚಿಯೆಂಬುವದು
ಕ್ಷುದ್ರಕುನಾಸ್ತಿಕಮತವನಂಬಿ ದೇ–
ವದ್ರೋಹಗಳನುಮಾಡುತ ಬಾಯಲಿ
ಯದ್ವಾತದ್ವದಿ ಹಿರಿಯರ ಬೈಯ್ಯುತ
ಇದ್ದದ್ದಾದರುಯಿಲ್ಲೆಂಬುವದು ೬

ಪರರೊಡವೆಗಳಪಹರಿಸುವದು । ನೆರೆ–
ಹೊರೆಯಂತಿರಬೇಕೆಂಬುವದು
ಗುರುವಿನಲ್ಲಿ ದ್ವೇಷವೆಣಿಸುವದು । ಸತಿ–
ಯರುಪತಿಯಲಿದ್ವೇಷಿಸುತಿಹುದು
ಗುರುರಾಮವಿಠ್ಠಲಪೋಷಕನೆನ್ನದೆ
ನಿರತವುಜೀವನಕಿಲ್ಲೆಂದುಬಳಲಿ
ದುರ್ವಿದ್ಯಗಳಭ್ಯಾಸಿಸಿಕಡೆಯಲಿ
ನರಕಂಗಳಿಗೆ ಪ್ರಯಾಣಮಾಡುವದು ೭

೨೬೩

ಕ್ಷಣದಲಿ ಸೌಖ್ಯ ಕ್ಷಣದಲಿ ದುಃಖ
ಬಣಗು ಸಂಸಾರದಿ ಎಣಿಸಿದರೆ ಪ

ಕೊಟ್ಟರೆ ತಂದರೆ ಸಂತೋಷ
ಬಿಟ್ಟರೆ ಕೊಡದಿರೆ ಬಲುರೋಷ ೧

ಎರೆಡು ಘಳಿಗೆ ಬಹಳಾಯಾಸ
ಏನು ಇಲ್ಲ ಕೊನೆಗೆ ನಿರಾಶ ೨

ತಾನೇಕಾದಶಿ ಪಿಕ್ನಿಕ್‌ವೂಟ
ಭಾನುವಾರ ಇಸ್ಪೇಟಾಟ ೩

ಕೋಟುಷರಟು ಜುಬ್ಬ ಇಜಾರು
ನೋಟಕೆ ಮೇಲೆ ಕಾರ್ಬಾರು ೪

ಕರುಡು ಕುಂಟ ಮೂಕರು ಮಾತ್ರ
ನಿರುತವು ದಾನಕೆ ಸತ್ಪಾತ್ರ ೫

ಪತಿವ್ರತೆಯರಿಗೆ ಬಿಚ್ಚೋಲೆ
ಅತಿಜಾರಿಗೆ ಕೆಂಪು ಬೆಂಡೋಲೆ ೬

ಹಾದರಗಿತ್ತಿಗೆ ದೂದ್‌ಫೇಢ
ಸಾಧುಸ್ತ್ರೀಗನ್ನವು ಬೇಡ ೭

ಹಿರಿಯರ ಮಾತಿಗೆ ನಾಸ್ಸೆನ್ಸು
ದುರುಳರ ಬೋಧೆಗೆ ತಾ ಒಳ್ಳೆಮನಸು ೮

ಮೋಕ್ಷವಿದ್ಯೆ ಕೆಲಸಕೆ ಬಾರದು
ಕುಕ್ಷಿಂಬರ ವಿದ್ಯೆ ಬಲು ದೊಡ್ಡದು ೯

ಹರಿಕಥೆ ಕೇಳ್ವುದು ಬೇಜಾರು
ಹರಟೆ ಹರಟುವುದು ಬಲು ಜೋರು ೧೦

ಪರರ ನೋಡಿ ನನ್ನಾಚರಣೆ
ಗುರುರಾಮ ವಿಠಲನಲಿಲ್ಲ ಸ್ಮರಣೆ ೧೧

೨೬೪

ಗಂಡನೆ ಪ್ರಾಣಗಂಡನೇ ಪ

ತಿಂಡಿಬಟ್ಟೆಗೆ ತಂದು ಹಾಕದೆ ಜಿಣುಗುವ ಅ.ಪ

ಹಬ್ಬಬಂದರೆ ಕಣ್ಣು ಹುಬ್ಬುಗಂಟಿಕ್ಕುವ
ಲಿಬ್ಬಿಯಿದ್ದರೆ ತೆಗೆದು ತಾರೆಂಬನು
ಅಬ್ಬರಿಸುತ ಕೂಗಿ ಕೈಯ್ಯೆತ್ತಿ ಬರುವನು
ಒಬ್ಬರಗೊಡವೆ ನಮಗ್ಯಾಕೆ ಎಂಬುವನು ೧

ಸೀರೆ ಕುಪ್ಪಸಕೇಳೆ ಚೀರುತ್ತಯಿಲ್ಲೆಂಬ
ಯಾರೆ ನಿನಗೆ ಬಲಯೆಂಬುವನು
ಮೋರೆ ಮುಚ್ಚಿಕೊಂಡು ನೆಲವ ಬರೆಯುವನು
ಸೋರುವ ಮನೆಯಂತೆ ಎನ್ನ ಸಂಸಾರ ೨

ಅನ್ನಮೊದಲೇ ಇಲ್ಲ ಬಟ್ಟೆ ಮಾತಿನ್ನೇನು
ಯಣ್ಣೆಕಾಣದು ತಲೆಯೇನ್ಹೇಳಲಿ
ಕಣ್ಣುಕಾಣದೆ ನಮ್ಮಪ್ಪಯಿವಗೆ ಕೊಟ್ಟ
ಗನ್ನಘಾತಕನಿವ ಕಲಿಕಾಲಜಗಳ ೩

ಓದುಬರಹಗಳೆಂಬ ಹಾದಿಯ ತಾಕಾಣ
ಶೋಧನೆ ಮಾಡುವ ಕ್ಷಣಕ್ಷಣಕೆ
ಸಾಧುಗಳು ಮನೆಗೆ ಬಂದರೆ ಸೇರನು
ಆದದ್ದಾಗಲಿಯಿನ್ನೇನು ಮಾಡುವೆನಾನು ೪

ಇರುಳು ಹಗಲುಯನ್ನ ಕರೆಕರೆ ಪಡಿಸುವ
ಹಿರಿಯರ ಮಾತನು ತಾ ಕೇಳನು
ತರುಣಿ ಮಣಿಯೆ ಕೇಳು ಗುರುರಾಮವಿಠಲನ
ಚರಣಕಮಲವೆನಗೆ ದೊರೆಯುವುದ್ಹ್ಯಾಗೆ ೫

೨೬೫

ಜನ್ಮವ್ಯರ್ಥವಾಯಿತು ಶಾರ್ಙ್ಗಧನ್ವ ನಿನ್ನನಂಬದೆ ಪ

ಮನ್ಮಥನಾಟದಲ್ಲಿ ಮರೆತು ಹೋಗಿಕಾಲ ನಾಕಳದೇ ಅ.ಪ

ಹೊಟ್ಟೆಗೋಸಗ ಕಾಡಿಬೇಡಿ ನಿಷ್ಠುರಗಳನಾಡುತಾ
ಕೆಟ್ಟವನಿವನೆನಿಸಿ ಕೊಂಡು ಕೀರ್ತಿಶೂನ್ಯನಾಗುತಾ ೧

ನಿತ್ಯಕರ್ಮಮಾಡದೆ ಗೃಹಕೃತ್ಯದಲ್ಲಿ ಬಳಲುವೆ
ಸತ್ಯವೆಂಬುದು ಸ್ವಪ್ನದಲ್ಲಿಯು ಸಾಧ್ಯವಾಗದು ಜನರಿಗೆ ೨

ಸುಳ್ಳು ಹೇಳುವವನ ಜನರು ಒಳ್ಳೆವನಿವನೆಂಬರು
ಬಲ್ಲ ಹಿರಿಯರಾಡುವ ನುಡಿ ಭಕ್ತಿಯಿಂದನಂಬರು ೩

ಖಲರು ನಡಿಯಲಾರದೆಯಿದು ಕಲಿಯುಗವೆಂದು ನಿಂದಿಸೀ
ಕೊಲೆಗೆ ಗುರಿಯಾಗಿ ಕಾಮ ಕ್ರೋಧಗಳಿಂದ ಬಂಧಿಸಿ ೪

ಹೀನ ವಿದ್ಯಗಳೆಚ್ಚಿತು ಸುಜ್ಞಾನಬೋಧೆ ತಗ್ಗಿತು
ಸ್ವಾನುಭವಕೆ ಹಾನಿಕರ ನಿಧಾನಿಸೇ ಧರ್ಮ ಕುಗ್ಗಿತು ೫

ದುರ್ಗುಣಿಗಳ ತೃಪ್ತಿಪಡಿಸೆ ಭರ್ಗಗಾದರು ಸಾಧ್ಯವೇ
ನಿರ್ಗಮಿಸುವಧ್ಯಾಗೆ ನಾವಿನ್ನಿರುವುದು ಭೂಮಿಭಾರವೆ ೬

ಲೇಶ ಸಾಧನವಾಗುವದಿಲ್ಲ ಆಸೆ ಅಧಿಕವಾದುದರಿಂದ
ಘಾಶಿಪಡುವದಲ್ಲದೆ ದೇಹಾಯ್ಸವೇಕೆ ಪಡುವೆನಾಂ ೭

ಮಾನವಿಲ್ಲ ಜ್ಞಾನವಿಲ್ಲ ಮಮತೆಯೆಂಬೋದು ಬಿಡದಲ್ಲಾ
ಹೀನಾರನಾಸೇವಿಸಲಾರೆ ಹಿತವ ಕಾಣೆ ಸಿರಿನಲ್ಲಾ ೮

ಇರುಳು ಹಗಲು ನಿನ್ನ ದಿವ್ಯ ಚರಣಸೇವೆ ಪಾಲಿಸೊ
ಗುರುರಾಮ ವಿಠಲನೆ ಪಾಮರರ ಬಿನ್ನಹ ಲಾಲಿಸೊ ೯

೨೬೬

ತಿಂದು ಹೋಗುವರೆಲ್ಲ ಹೊರತು ತಂದು ಕೊಡುವರಿಲ್ಲ ಪ

ಹಿಂದಿನ ಕರ್ಮಪಾಶದಿಂದ ನಾವಿಡದೇ ತೊಡದೇ
ಕಷ್ಟಪಡುವೆವು ಅ.ಪ

ಊರಿನ ಜನವಷ್ಟು । ಒಳ್ಳೆಯ
ಶೀರೆ ಕುಪ್ಪಸ ತೊಟ್ಟು
ನೀರಿಗೆ ಪೋಗುವ ದಾರಿಯಲಿ ಬಹರು
ವಾರಿಗೆಯವರಂತಿಹುದಾನೆಂದಿಗೂ ೧

ಅತಿಥಿ ಅಭ್ಯಾಗತರು । ತಾವಂತೆ
ಪ್ರತಿದಿನ ಬರುತಿಹರು
ಹಿತವಾದಡಿಗೆಯ ಮಾಡಿಡಬೇಕು
ಗತಿಗೆಟ್ಟ ರೋಗಿಗಳಿಗೆ ಅಕಟಾ ೨

ಗಂಡನ ಕಡೆಯವರ । ಸೇವಿಸಿ
ಬೆಂಡಾಯ್ತು ಶರೀರ
ಉಂಡೇನೇ ಉಟ್ಟೇನೇ
ಯಾವ್ಯಾವ ಊರಿಗೊ ರೋಕಲಾರೆ ಹಾ ೩

ನೀರು ಸೇದಲಾರೆ । ವುಂಡು
ದೂರುವರು ಬೇರೆ
ಸೋರುವುದು ಮನೆಯು ಸುಖವು ಕಾಣೆ
ತೌರುಮನೆಯಾಸೆ ತಪ್ಪೆ ಹೋಯಿತು ೪

ಅಕ್ಕಿಬೇಳೆಯಿಲ್ಲ । ಮುಗಿದಿತು
ರೊಕ್ಕಮೂಲವೆಲ್ಲ
ಇಕ್ಕಿ ಇಕ್ಕಿ ಕೈಬರಿದಾಯಿತು ಪೊಂ–
ಬಕ್ಕಿದೇರ ಗುರುರಾಮ ವಿಠಲ ೫

೨೬೭

ದೈವಕೃಪೆ ಇದಲ್ಲಾ
ಇವರಿಗೆ ಭಾವ ಶುದ್ಧಿಯಿಲ್ಲಾ ಪ

ದೇವತೆಗಳು ಸಂತೋಷಿಸರೆಂದಿಗು
ನಾವೆಂಬಹಕಾರದಿ ಮಾಳ್ಪದರಲಿ ಅ.ಪ

ಮದುವೆಯ ಪೆಸರಿರಿಸಿ । ದೂರದಿಂ
ವಿವಿಧ ಬಂಧುಗಳ ಕರಸಿ
ವಧುವರರಿಗವರು ವುಡುಗೊರೆ ವೋದಿಸ–
ಲದನೇಯವರಿಗೆ ಹಿಂದಕ್ಕೆ ಕೊಡುವುದು ೧

ಕೊಡದಿದ್ದರೆ ಕೋಪಾ । ಕೊಟ್ಟರೆ
ನುಡಿಯು ನಾನಾ ರೂಪಾ । ಈ

ಕಡು ಮೂಢರಿಗೆ ಪುಣ್ಯವೆಲ್ಲಿಹುದು
ಸಡಗರ ಭ್ರಾಂತಿಯು ಡಂಬವು ಬರಿದೆ ೨

ಮಂತ್ರದಿ ಪೇಳದಿಹ ಬಾಹ್ಯವಾದ
ತಂತ್ರಗಳಾಚರಿಸೆ
ಯಂತ್ರೋದ್ಧಾರಕ ಗುರುರಾಮವಿಠಲಾ
ಸಂತಸಡುವನೆ ಧನವ್ಯಯ ಬರಿದೆ ೩

೨೬೮

ದೈವ ಭಕ್ತಿ ಸಂಸಾರದೊಳಿಲ್ಲ ಪ

ಜೀವಗಭಿಮಾನವು ಬಿಡದಲ್ಲ ಅ.ಪ

ತನಗೆ ಸಂಕಟ ಬಂದರನುದಿನ ಜಾಗ್ರತೆ
ವನಜಲೋಚನನ ಅರ್ಚನೆಗೆ ಆಲಸ್ಯ ೧

ದಾನಕ್ಕೆ ದಾರಿದ್ರ್ಯ ತನಗೋಸುಗ ಸಾಲ
ಮಾನವಂತೆ ಈ ಮಾನವ ಜನಕೆ ೨

ಮಕ್ಕಳ ಮದುವೆಗೆ ರೊಕ್ಕಸಾವಿರ ಹೊನ್ನು
ಪಕ್ಕಿವಾಹನಗೆ ದೊರೆಯದೊಂದು ಕಾಸು ೩

ಮತ್ತೆ ತನ್ನ ಹೆಂಡತಿಗೆ ಹತ್ತುವರಹದ ಸೀರೆ
ಮುತ್ತೈದೆಗೀವರೆ ಮೂರಾಣೆಯ ಕುಬಸ ೪

ಮದುವೆ ಮುಂಜಿಗೆ ಸಾಲ ಮಾಡದಿದ್ದರೆ ಹ್ಯಾಂಗೆ
ಬುಧರು ಯಾಚಿಸಿದರೆಯಿಲ್ಲ ಎಂಬುವುದೇ? ೫

ಎಷ್ಟು ಬಂದರು ಸಂಸಾರಕ್ಕೆ ಸಾಲದು
ಭ್ರಷ್ಟ ಯಾಚಕರಿಗೇತಕೆ ಕೊಡಬೇಕು ೬

ಸತಿಸುತನು ನಾವು ಸಲಹಿದರೆ ಸಾಕು
ಅತಿಶಯದಾನ ಧರ್ಮಂಗಳು ಬೇಡ ೭

ದಾಕ್ಷಿಣ್ಯಗಾರರಿಗೆ ಭಕ್ಷ್ಯ ಭೋಜ್ಯಗಳ ಊಟ
ಕುಕ್ಷಿಂಭರರು ಕೇಳೆ ಭಕ್ಷ್ಯವೂ ಇಲ್ಲ ೮

ತಾನಾಧಿಕನು ಹರಿಹೀನನೆಂದರಿತವಗೆ
ಶ್ರೀನಿಧಿ ಗುರುರಾಮ ವಿಠಲ ವಲಿವನೆ? ೯

೨೬೯

ಪ್ರಸ್ತದ ವಿಚಾರವು
ಶಿಸ್ತಿಗೆ ಅಲಂಕಾರವು ಪ

ಗೃಹಸ್ಥರಲ್ಲಿ ವ್ಯಾಜ್ಯವು
ನಾಸ್ತಿ ಭಕ್ಷ್ಯ ಭೋಜ್ಯವು ಅ.ಪ

ಭಾರಿ ಬಾಳೆಲೆ ಹಾಕುತ
ನೂರಾರುಜನರ ಕರೆಸುತ
ಹಾರಿ ಹಾರಿ ಕುಣಿಯುತ
ನೀರು ತುಪ್ಪ ಬಡಿಸುತ ೧

ಹಪ್ಪಳ ಮುರಿದು ಹಾಕಿಸಿ
ಅತಿಥಿಗಳನು ನೂಕಿಸಿ
ತುಪ್ಪದ ಸೌಟು ತೋರಿಸಿ
ಉಪ್ಪು ಚಟ್ನಿ ಹೆಚ್ಚಿಸಿ ೨

ಮೂರು ಗಂಟೆಯೂಟವು
ಮೂಢತನದೋಡಾಟವು
ವೋರೆ ವೋರೆ ನೋಟವು
ಸಾರು ಅನ್ನಾ ಕಾಟವು ೩

ಎಣ್ಣೆ ವಗ್ಗರಣೆ ಎಲ್ಲಕು
ಅನ್ನ ಹೊತ್ತಿ ಇರುವುದು
ದೊನ್ನೆಯಿಲ್ಲ ತುಪ್ಪಕೆ
ಸನ್ನೆ ಸೈಯಿಗೆಯೇ ಬಲ ೪

ಸಾಲದಡಿಗೆ ಕಾಯಿಪಲ್ಯ
ಬೇಯಲಿಲ್ಲ ವೊಂದಾದರು
ರಾಯ ಗುರುರಾಮವಿಠಲ ಬಲ್ಲ ಉ-
ಪಾಯಗಾರರು ಬೀಗರು ೫

೨೭೦

ಬ್ರಾಹ್ಮಣನುಣಲಿಕೆ ರಾಗಿ ಹಿಟ್ಟು
ತನ್ನ ಬಂಧು ಜನಕ್ಕೆ ಒಬ್ಬಟ್ಟು ಪ

ಪಾಮರ ಜನರಲಿ ವಾಡಿಕೆಯಿದು । ಶ್ರೀ
ರಾಮನೊಲಿವನೆ ಎಂದಿಗಾದರು ಅ.ಪ

ಮಾತು ಮಾತಿಗೆ ಸಾಲಮಾಡಿ । ಬಹ
ಳಾತುರದಲಿ ಓಡಾಡಿ
ಜಾತುಕನಂದದಿ ಜನಗಳ ಮೆಚ್ಚಿಸಿ
ಪಾತಕವಾದರು ಲಾಭವಧಿಕ ೧

ದೊಡ್ಡದಾಗಿ ಮನೆಕಟ್ಟಿದರೆ –ಸಾಲ
ಹೆಡ್ಡಗಾದರು ಹುಟ್ಟುವುದು
ದುಡ್ಡುದೇವರಿಗಿಂತ ದೊಡ್ಡದೇವರು ಯಾವುದು?
ಬಡ್ಡಿ ಹಚ್ಚು ಬರುವನೆ ಮಹರಾಯನು ೨

ಹೊಟ್ಟೆಗೆ ತಿಂಬುವದ್ಯಾರು ಬಲ್ಲರು?
ವುಟ್ಟ ಬಟ್ಟೆಯಲ್ಲರು ನೋಡುವರು

ಸಿಟ್ಟು ಬಂದರೆ ಬೆಂಕಿಯಂತವ ನಾನು
ಹೊಟ್ಟೆ ಚಿಕ್ಕದು ಕಣ್ಣು ದೊಡ್ಡದು ೩

ಪರಲೋಕವು ಉಂಟೆಂದು ಪೇಳು
-ವರರಿಯದವರು ತಾವು ಮುಂದು
ನರಕವುಸ್ವರ್ಗವು ಯಾರು ನೋಡಿರುವರು
ಪುರಾಣ ಶಾಸ್ತ್ರಗಳು ಯಾತಕೆ ಬಿಡಿ ೪

ಅತಿಥಿಗಳಿಗೆ ನೀರುಮಜ್ಜಿಗೆ । ಮೊಸರು
ಸತಿಸುತರಿಗೂ ಮತ್ತು ತನಗೆ
ಯಿತರರಿಗೆಲ್ಲಾ ಎಣ್ಣೆಕರೆದ ಭಕ್ಷ್ಯ
ಘೃತಭಕ್ಷ ತನಗೆ ಮಾತ್ರ ೫

ಎಣ್ಣೆಯು ಬಲುರುಚಿ ನಮಗೆ । ತುಪ್ಪ
ವಿನ್ನೇತಕೆ ಹೆಚ್ಚು ಬೆಲೆಗೆ
ಕಣ್ಣಲಿ ಕಂಡದು ಮಾತ್ರ ಸತ್ಯ । ನಾ
ವನ್ಯರ ನುಡಿ ನಂಬುವುದಿಲ್ಲವು ೬

ವೊರಿಗೆಲ್ಲ ನಾ ಮೇಟಿ । ಯನ್ನ
ನಾರು ಪೋಲುವರು ಸಾಟಿ
ನೂರೆಲೆ ಬೀಳ್ವುದು ನಮ್ಮ ಮನೇಲೀ
ಘೋರ ಕ್ಷಾಮದಲಿ ನಾನೆ ಪೊರೆವೆ ೭

ಪರರಂತೆ ನಾನಿರಬೇಕು । ಶ್ರೀ
ಹರಿ ಇಷ್ಟು ಕೊಟ್ಟರೆ ಸಾಕು
ಗುರುಹಿರಿಯರು ನುಡಿಯೇತಕವರು ಮುದು–
ಕರು ಏನು ಬಲ್ಲರು ಲೌಕೀಕವ ೮

ಗುರುರಾಮವಿಠಲೆಲ್ಲಿ ಭ್ರಾಂತು –ಈ
ಕರೆಕರೆ ನಮಗೇಕೆ ಬಂತು
ಪರಸ್ವತ್ತೆದುರು ಮನೆಯವಗೆ
ಸೇರಿತು ಬಡವರಾವು ೯

೨೭೧

ಯಾವಾಗ ಮಾಡುವದು ಅಡಿಗೆ
ಜೀವವು ತಲ್ಲಣಿಸುವುದು ಪ

ದೇವರ ಪೂಜೆಯಿಂದು ಮಾಡೋದಿಲ್ಲ
ನೀವೆಲೆಯ ಹಾಕಿ ಕರೆದರೆ ನಾ ಸಿದ್ಧ ಅ.ಪ

ಮನೆ ಕಲಸವು ಕೊನೆಗಾಣಲಿಲ್ಲ
ಜಣುಗಿ ಜಣುಗಿ ಕಾಲಕಳೆಯುವುದಲ್ಲ ೧

ಮುಸುರೆತೊಳೆಯದೆ ಕಸವತೆಗೆಯದೆ
ಮುಸುಕನಿಟ್ಟುಕೊಂಡು ಮಲಗಿದ್ದರಿನ್ನು ೨

ಕುಟ್ಟಿ ಬೀಸೋರಿಲ್ಲ ಅಟ್ಟುಂಬೋದೆ ಭಾರ
ಇಷ್ಟು ನುಡಿದುದಕೆ ಸಿಟ್ಟು ಬಹುಪೂರ ೩

ಹತ್ತುಗಂಟೆಯಾಯ್ತು ಹೊತ್ತು ಬಹಳ ಹೋಯ್ತು
ಬತ್ತಿ ಹಚ್ಚಿ ಒಲೆಯ ಹೊತ್ತಿಡ ಬಾರದೆ ೪

ಹಸಿವಿಗಿಲ್ಲದೂಟ ವಸತಿಯಾಗದ ಕೂಟ
ಬಿಸಜಾಕ್ಷಾಗುರುರಾಮ ವಿಠಲನಾಣೆ ಬ್ಯಾಡ ೫

೨೭೨

ರಚ್ಚೆ ಕಟ್ಟೆ ಪುರಾಣ ರಾದ್ಧಾಂತವು –ಇದು ಪ

ಹುಚ್ಚುತನದಲಿ ನೀ । ಚೋಚ್ಚ ನುಡಿಗಳನಾಡುವುದು ಅ.ಪ

ಇವನು ಸಾಹುಕಾರ ಮತ್ತವನು ಹಣಗಾರ
ನವನವ ಆಸ್ತಿಗಳೆಲ್ಲ । ಇವನ ಮನೆಗೆ ಸೇರಿ ಬಂತು ೧

ಪುಟ್ಟಣ್ಣನ ಹೆಂಡತಿ ಕಿಟ್ಟಣ್ಣನ ಅತ್ತಿಗೆ
ಸೊಟ್ಟಮೂತಿ ನಾಗಪ್ಪನ ಸೋದರಿಯರು ಏನು ಹೇಳಲಿ ೨

ಹತ್ತು ಖಂಡುಗ ಅವನಿಗೆ ಬಂತಿಪ್ಪತ್ತು ಖಂಡುಗ
ಇವನಿಗೆ ಬಂತು
ಮತ್ತೆ ನಾವು ಬಡವರು ನಮಗೆಲ್ಲಿಂದ ಬಹುದು? ೩

ದುರ್ಯೋಧನ ಯೋಗ್ಯ ಕುಂತೀತರಳರದೇ ಅನ್ಯಾಯ
ಕೃಷ್ಣನು ನೆರೆ ಮೋಸಗಾರನು ಭಾರತ ಕಥೆಯೆಂಬುವುದು ೪

ವೇಷಹಾಕಿರುವ ಈ ದಾಸ ಬಹು ಧನಿಕನು
ಮೋಸಗಾರರೀವೂರೆಲ್ಲ ಆಶೆ ಪಾತಕರು ೫

ತಂಗಿ ಆಸ್ತಿ ಸೇರಿತಿವಗೆ ಭಂಗಿ ಕೋರ ವೆಂಕಟರಾಯ
ಮಂಗಿ ಸಂಗದಿಂದಲೀ ಕಮಂಗನಾನನು ೬

ಸಿದ್ಧ ಹೆಂಡತೀನ ಹೊಡೆದನಂತೆ ಶೀನ ಸೂಳೆಯ ಇಟ್ಟಿಹನಂತೆ
ಮಧ್ವರಾಯನ ಮಗನ ಕಥೆ ಏನು ಹೇಳೋಣ ೭

ದಾಸಕಾಶಿಗೆ ಹೋದ ಶ್ರೀನಿವಾಸ ರಾಮೇಶ್ವರಕೆ ಹೋದ
ಕಾಸಿದ್ದವರೇನು ಮಾಡಿದರೂ ಮಾಡಬಹುದು ೮

ದಾರಿಹೋಕರೆಲ್ಲ ಕೂಡಿ ಭಾರಿ ಭಾರಿ ಮಾತುಗಳಾಡಿ
ಸೂರೆಗೊಂಬುವರು ಪಾಪ ಶರಧಿಯನ್ನು ೯

ಧೀರ ಗುರುರಾಮವಿಠಲನ ದಾರಿಯ ಕಾಣದೆ
ಶರಣರ ದೂರಿಪಾತಕಕ್ಕೆ ಭಾಗಿಗಳಹರು ೧೦

೨೭೩

ಸೂಳೆಯನಿಟ್ಟದ್ದೇವೆ ಕೇಳ್ಳೈ ಆಶಾ ಪ

ಸೂಳೆ ಮಾತುಗಳನ್ನು ಕೇಳಿ ಕೇಳಿ ದೇಹ
ಜಾಳಾಗಿ ಹೋಯಿತು ಬೀಳೋಕಾಲವು ಬಂತು ಅ.ಪ

ಮನೆಯ ಯೋಚನೆ ಬಿಡಿಸಿ ವಿಧವಿಧ ತಿಂಡಿ-
ಯನು ತಾತಂದು ಕೊಡಿಸಿ
ಮನುಮಥನಾಟವೆಘನ ಬೋಧೆಯೆನ್ನಿಸಿ
ಕೊನೆಗೆ ರೋಗಗಳಿತ್ತು ಗತಿಶೂನ್ಯ ಮಾಡುವ ೧

ಸತಿಯ ಬಿಡಿಸಿ ಬಿಟ್ಟಳು ಆತ್ಮಜರಲ್ಲಿ
ಅತಿದ್ವೇಷವೇ ಕೊಟ್ಟಳು
ಪಿತೃಮಾತೃಗಳಿಗಿಲ್ಲ ಒಡಹುಟ್ಟಿದವರಿಗಿಲ್ಲ
ಪ್ರೀತಿ ಹುಟ್ಟಿಸಿಯಿದ್ದದ್ದೆಲ್ಲಾ ಸೆಳಕೊಂಬುವ ೨

ಇತರ ಚಿಂತೆ ಹೋಯ್ತು ಕುಲದಪ-
ದ್ಧತಿಯ ಮರಿಯ ಲಾಯ್ತು
ಮತಿಗೆಟ್ಟು ದುಶ್ಶಾಸ್ತ್ರಗಳೋದಿದರಿಂದ
ಹಿತವೇ ಪೇಳಿದರ ಹಿತವಾಗಿ ತೋರುವೆ ೩

ಒಡವೆ ವಸ್ತ್ರವು ಬೇಕಂತೆ ಕೇಳಿದ್ದನೆಲ್ಲ
ಕೊಡುತಾಯಿದ್ದರೆ ಸಾಕಂತೆ
ಕಡುಚಲ್ವೆ ಅವಳೆಂದು ಕಥೆಗಳ ಹೇಳುತ್ತ
ಮಡದಿ ಮಕ್ಕಳ ಬಿಟ್ಟುಮನಸು ಅವಳಿಗೆ ಕೊಟ್ಟು ೪

ಸ್ಮರನಾಟಯಾವಾಗಲು ಅವಳನೋಡಿ
ಕರಗುತ್ತ ಹಗಲಿರುಳು
ಪರಗತಿ ಕೊಡುವಂಥ ಗುರುರಾಮ ವಿಠಲನೆ
ಅರಿಯವ ಸಂಸಾರ ತೊರೆದು ತುಂಟರಾಗಿ ೫

ತತ್ವಚಿಂತನೆ

೨೭೪

ಅತಿಭಯಪುಟ್ಟುವುದಡವಿಯ ನೋಡಲ್ ಪ

ಮತಿ ಮಂದವಾಗಿಯೆ ಮಾರ್ಗತಪ್ಪುವುದು ಅ.ಪ

ಹುಲಿಸಿಂಹಶಾರ್ದೂಲ ಗಂಡಭೇರುಂಡ
ಬಲುದುಪ್ಪೆ ಆನೆ ಕಾಡ್ಗೋಣದ ತಂಡ ೧

ಝಿಲ್ಲಿಕದಿಂದೆದೆ ತಲ್ಲಣಿಸುವದು
ಎಲ್ಲೆಲ್ಲಿಗಿಡಮರ ಮುಳ್ಳುಕಲ್ಲುಗಳು ೨

ಅಲ್ಲಲ್ಲಿರಾಕ್ಷಸರಾರ್ಭಟದಿಂದ
ನಿಲ್ಲಗೊಡದ ದುಷ್ಟಕೀಟಕ ವೃಂದ ೩

ಸಂಸಾರಟವಿಯನ್ನು ಸೇರಿ ನಾ ಕೆಟ್ಟೆ
ಕಂಸಾರಿ ಸ್ಮರಣೆಗೆ ಕಾಣೆನು ಬಟ್ಟೆ ೪

ದೇಹ ಸಂಬಂಧ ಮೋಹ ಕಾಡ್ಗಿಚ್ಚು
ದಾಹಗೊಳಿಸಿ ಕೊಲ್ಲುತಿರುವುದು ಹೆಚ್ಚು ೫

ಮೃಗತೃಷ್ಣೆಯನು ಕಂಡುವೋಡಿ ಪೋಪಂತೆ
ಹಗಲು ಇರುಳು ಇದರೊಳಗಿದೆಚಿಂತೆ ೬

ದಾರಿಯ ತೋರುವ ಗುರುರಾಮ ವಿಠಲಾ
ಕಾರಣ ಕರ್ತನ ನಾ ನೋಡಲಿಲ್ಲ ೭

೨೭೫

ಅದ್ವೈತಿ ನಾನೆನ್ನ ಬೇಡ । ನಿರವದ್ಯ ಪ

ಸದ್ಗುಣಪೂರ್ಣ ನೀನೇನೊ ಮೂಢ ಅ.ಪ

ಬ್ರಹ್ಮಜಿಜ್ಞಾಸದ ಕ್ರಮವ । ನಿರ-
ಹಮ್ಮಿನೊಳಲ್ಲದೆ ತೋರ್ಪುದೆ ನಿಜವ
ಸಮ್ಯಕ್ ಶೋಧಿಸದೇ ಅಹಂ ಬ್ರಹ್ಮಾಸ್ಮಿ ಎಂಬುವ
ಆಮ್ನಾಯ ವಾಕ್ಯಕೆ ಅರ್ಥವ ತಿಳಿಯದೆ ೧

ಏಕಮೇವಾದ್ವಿತೀಯ ಬ್ರಹ್ಮ । ಶೃತಿಗೆ
ಕಾಕುಮಾಡುತಲರ್ಥ ಪೇಳ್ವುದಧರ್ಮ
ಏಕವಾವುದು ಇನ್ನು ಏಕವಾವುದು ಎಂದು
ನೀಕಳವಳಿಸುತ ನಿಜತತ್ವವರಿಯದೆ ೨

ಆತ್ಮನಾತ್ಮಗಳೆಂದರೇನೊ । ಪರ-
ಮಾತ್ಮ ಜೀವಾತ್ಮರೊ ಜೀವದೇಹಗಳೊ
ಸ್ವಾತ್ಮಾನುಸಂಧಾನದಿಂದಲಿ ನೋಡ-
ಧ್ಯಾತ್ಮ ವಿದ್ಯಾಭ್ಯಾಸ ಮಾಡದೆ ಬಾಯೊಳು ೩

ರವಿ ಗಣಪತಿ ಶಿವ ಶಕ್ತಿ । ಭೈ-
ರವ ವಿಷ್ಣು ಎಂಬುವ ಷಣ್ಮತಯುಕ್ತಿ
ಎವೆ ಮಾತ್ರ ಸ್ವಾತಂತ್ರ್ಯವಿಲ್ಲ ಕೇಳ್ ಸರ್ವಶ-
ಬ್ದವುಯಾವನಲ್ಲಿ ಸಮನ್ವಯವರಿಯದೆ ೪

ಜೀವ ಜೀವರಿಗೆಲ್ಲ ಭೇದ । ವಿದುಸ್ವ
ಭಾವವಾಗಿರುವುದು ಯಾತಕೀವಾದ
ಜೀವರೂಪದಿ ಸರ್ವಜೀವರೊಳಗಿದ್ದು
ದೇವಸಕಲ ಕರ್ಮಗಳ ಮಾಡಿಸುವನು ೫

ಕರ್ಮಬದ್ಧರು ಜೀವರೆಲ್ಲ । ಈ
ಕರ್ಮವೆಂಬುದು ಅವನಿಗೆ ಲೋಪವಿಲ್ಲ
ನಿರ್ಮಲ ಸಚ್ಚಿದಾನಂದ ಬ್ರಹ್ಮ ಎಂದು
ನೀನೆ ಪೇಳುವೆಯಲ್ಲ ನಿನಗೆ ನಿಜವಿಲ್ಲ ೬

ಹರಿಹರಬ್ರಹ್ಮೇಂದ್ರ ಸೂರ್ಯ । ಚಂದ್ರ
ಗರುಡ ಗಂಧರ್ವ ಕಿನ್ನರ ಸಿದ್ಧ ಸಾಧ್ಯ
ನರತಿರ್ಯಕ್ ಪಶುಪಕ್ಷಿ ಕೀಟಾದಿ ನಾಮಗಳು
ಪರಮಾತ್ಮನಲಿ ಸಮನ್ವಯವರಿಯದೆ ೭

ಮಾಯಾ ಪ್ರಪಂಚವಿದೆನ್ನುತ । ನಿ–
ರ್ಮಾಯಕ ಬ್ರಹ್ಮನೊಬ್ಬನು ನಾನೆ ಎನುತ
ಮಾಯೆಯಧಿಷ್ಠಾನದೊಳನಂತ ಜೀವನಿ–
ಕಾಯವು ಗುಣಗಳಿರುವ ಮರ್ಮವರಿಯದೆ ೮

ವೇದೋಪನಿಷತ್ ಶಾಸ್ತ್ರ । ಸಾರ
ಭೇದಾ ಭೇದ ಪೇಳ್ವುದು ತತ್ತತ್ಕಾರ್ಯಾನುಸಾರ
ಭೇದವಬದ್ಧ ಅಭೇದ ನಿಶ್ಚಯವೆಂದು
ವಾದಿಸುವುದಕೇನಾಧಾರ ನಿನಗುಂಟೊ ೯

ಜೀವಬ್ರಹ್ಮೈಕ್ಯವೆ ಮುಕ್ತಿ । ವೇ–
ದಾವಳಿಗಳ ಪರಮಾರ್ಥದ ಉಕ್ತಿ
ಜೀವದೊಳಗೆ ಆತ್ಮವಿಲ್ಲದಿರಲು ಯಾವ
ಜೀವನಿಂದೇನಾಗುವುದೆಂಬುದರಿಯದೆ ೧೦

ದ್ವಾಸುಪರ್ಣವೆಂಬುವುದಕೆ । ವಿಷ–
ಯಾಸಕ್ತ ಜೀವ ಆತ್ಮನು ಸಾಕ್ಷಿಯದಕೆ
ನೀಸರ್ವೋತ್ತಮನಾದರೆ ಇನ್ನು ಮಹದಾದಿ
ಈ ಸೃಷ್ಟಿ ಸ್ಥಿತಿಲಯವೇತಕೆ ತಿಳಿ ಜೋಕೆ ೧೧

ಅಂಥ ಪರಂಪರವಾದ । ಬಿಟ್ಟು
ಚಂದಾಗಿ ಪರಿಶೋಧಿಸು ಭೇದಾಭೇದ
ತಂದೆತಾಯಿಗು ಮಗನಿಗೂ ಎಷ್ಟು ಭೇದ ಆ-
ನಂದದೊಳೀ ಪರಿ ತಿಳಿದರೆ ನಿರ್ವಾದ ೧೨

ಪೂರ್ವೋತ್ತರ ವಿರೋಧವಿಲ್ಲ । ದಂತೆ
ಸರ್ವಶೃತಿಗಳರ್ಥ ತಿಳಿದು ನುಡಿಸೊಲ್ಲ
ಗರ್ವವೇತಕೆ ನಿನಗಿದರೊಳೇನಿಲ್ಲ ನೀ
ಸರ್ವಜ್ಞನೊ ಕಿಂಚಜ್ಞನೊ ನೋಡು ದೃಢಮಾಡು ೧೩

ಈಗ ಬ್ರಹ್ಮನು ನಾನು ಬೇರೆ । ಮುಂದೆ
ಯೋಗ ಒದಗಿದಾಗ ಒಂದೆ ಎಂಬುವರೆ
ಈಗೇನು ಆಗೇನು ಇಲ್ಲೇನು ಉಂಟೆ ನಾ-
ವಾಗಲು ಜೀವರಿಗೆ ಹರಿಕರ್ತನಾಗಿರೆ ೧೪

ಕಾಲಕರ್ಮ ಸ್ವಭಾವ ಜೀವ । ಹರಿಯ
ಲೀಲೆಯಿಂದಾಡಿಸುವನೊಬ್ಬ ದೇವ
ಪಾಲಿಸುವನು ಸಂಹರಿಸುವ ಸೃಜಿಸುವ
ಆಲಸ್ಯ ಬಿಟ್ಟು ಅವನಿಗೆ ದಾಸನಾಗದೆ ೧೫

ಸಾಲೋಕ್ಯ ಸಾರ್ಷ್ಟಿ ಸಾಮೀಪ್ಯ । ಇನ್ನು
ಮೇಲೆ ಸಾರೂಪ್ಯ ಸಾಯುಜ್ಯಗಳೆಂಬ
ನಾಲ್ಕೊಂದು ವಿಧ ಮುಕ್ತಿಗಳ್ಯಾವನಿಗೆ
ಆಲೋಚಿಸಿದರರ್ಥ ನಿಜವಾಗಿ ತಿಳಿಯದೆ ೧೬

ಜ್ಞಾನ ಕರ್ಮಗಳೆರಡಿಹುದು । ಕಾಂಡ
ಜ್ಞಾನವೆ ನಾನು ಕರ್ಮವೆ ಮಿಥ್ಯವೆಂದು
ನೀನಾಡುವುದಕೇನು ನೆಲೆ ಮೂಲ ಯಾವುದು
ಸ್ವಾನುಭವವೋ ಶಾಸ್ತ್ರವೊ ಮನಕೆ ತೋರಿದ್ದೊ ೧೭

ಹೋಮ ಜಪವು ಸ್ನಾನ ದಾನ । ನಿತ್ಯ
ನೇಮ ನಿಷ್ಠೆಗಳಿಂದ ಮಾಡಲಿಧ್ಯಾನ
ಸ್ವಾಮಿ ಭೃತ್ಯ ನ್ಯಾಯವರಿಯದವನು ಶುದ್ಧ
ತಾಮಸನಲ್ಲದೆ ತತ್ವಾರ್ಥಿ ಎನಿಸುವನೆ ೧೮

ಸ್ಮಾರ್ತ ಕರ್ಮವ ಮಾಡಿ ಸತತ । ಹರಿಗೆ
ಆರ್ತನಾಗುತ ಫಲಗಳ ಸಮರ್ಪಿಸುತ
ಕರ್ತನು ನೀನೆಂದು ಭೃತ್ಯನು ನಾನೆಂದು
ತೀರ್ಥಪಾದನ ದಿನದಿನದಿ ಸಂಸ್ತುತಿಸದೆ ೧೯

ಅನುಭವಿಸುವುದೆಲ್ಲ ಹರಿಯ । ಪಾದ
ವನಜಕೊಪ್ಪಿಸಿ ಸಂಸಾರದ ಕರಕರೆಯ
ಮನದಿ ಲೆಕ್ಕಿಸದೆ ಚಿಂತನಗೈದು ಸರ್ವತ್ರ
ಘನಮಹಿಮನ ದಿವ್ಯಗುಣರಾಶಿ ಪೊಗಳದೆ ೨೦

ಹೊರಗಣ್ಣ ಮುಚ್ಚಿ ಮೋದದಲಿ । ಒಳ-
ಗಿರುವಾಧಾರಾದಿ ಚಕ್ರಗಳ ಸ್ಥಾನದಲಿ
ಸರಸಿಜಭವ ಶಂಕರಾದಿ ಸುರರ ನೋಡಿ
ತರತಮವಾಗಿ ಮುಂದಿನ ಪರಿಯ ತಿಳಿಯದೆ ೨೧

ಗಂಗೆಯಮುನೆ ಸರಸ್ವತಿಯಾ । ಒಳಗೆ
ಹಿಂಗದೆ ಸ್ನಾನವ ಮಾಡಿ ಶುದ್ಧಿಯಲಿ
ಮಂಗಳ ಮೂರ್ತಿಯ ನೋಡಿ ಕೊಂಡಾಡಿ ಅ-
ನಂಗಗೆ ಸಿಲುಕದೆ ಅರ್ಥಿಯ ಪೊಂದದೆ ೨೨

ಎಪ್ಪತ್ತೆರಡು ಸಹಸ್ರನಾಡಿ । ಗಳೊ-
ಳೊಪ್ಪುವ ಭಗವದ್ರೂಪಗಳನು ನೋಡಿ
ಅಪ್ಪ ನೀನೆಂದು ಭಕ್ತಿಯಲಿ ಕೊಂಡಾಡಿ ಪುನ-
ರಾವರ್ತಿರಹಿತ ಶಾಶ್ವತ ಸುಖಿಯಾಗನೆ ೨೩

ವಿಪರೀತ ಮತಿಪುಟ್ಟದಂತೆ । ಧ್ಯಾನ-
ಗುಪಿತವಾಗಿರುತ ಜನರಿಗೆ ಹುಚ್ಚನಂತೆ
ಸುಪಥವ ಪಿಡಿದು ನಿಷ್ಕಪಟನಾಗುತ
ಅಪವರ್ಗಾಪೇಕ್ಷಯಿಂ ನಿಷ್ಕಾಮಿಯಾಗದೆ ೨೪

ಆಪಾದಮಸ್ತಕ ದೇಹ । ದಿಸು
ರಾಪದಜನಕ ಶ್ರೀಗುರುರಾಮವಿಠಲ
ವ್ಯಾಪಾರವೆಲ್ಲ ಮಾಡಿಸುವನೆಂದರಿತರೆ
ಸಾಫಲ್ಯನಾಗಿ ಜೀವನು ಧನ್ಯನಾಗುವ ೨೫

೨೭೬

ಅಭಾಗ್ಯಾದ ಲಕ್ಷ್ಮಿ ಹೋಗಮ್ಮ ದೊಡ್ಡಮ್ಮ ನೀ ಪ

ಪೀಡೆಕಾಲುಗಳ ಮುಚ್ಚುತ ನೀವೋ
ಡೋಡಿ ಪೋಗುತಲಿ ನಿಲ್ಲದೆ ವ್ಯಾಜ್ಯಗ-
ಳಾಡುವ ಸ್ಥಳದಲಿ ನೆಲೆಯಾಗುತ ಹಾಳ
ಗೋಡೆಯೊಳಿರುತಿಹ ಕತ್ತೆಯಂತೆ ೧

ದೀಪದ ನೆರಳಲಿ ಕೋಪಿಯಮನದಲಿ
ಲೋಪವಾದಕರ್ಮದಿ ಸಂತತವು
ನಾಪರನೆಂಬುವ ಮಾಢನಲ್ಲಿ ನಿ-
ರ್ವ್ಯಾಪಾರಿಯ ಚಿತ್ತದಿ ಯಾವಾಗಲು ೨

ವಿಧವಾಸ್ತ್ರೀಯರ ಪಾದ ಧೂಳಿಯಲಿ
ಗದರಿಸುತಾಡುವ ಬಿರುನುಡಿಯಲಿ ನಿಂ-
ದ್ಯದ ಮಾತಾಡುವವರ ಬಾಯಲಿನೀ
ಮುದದೊಳಿದ್ದು ಅಜ್ಞಾನವ ಪಾಲಿಸೆ ೩

ಪತಿಗಲ್ಲದ ನಾರಿಯೊಳು ಬಿಡದಲೆ
ಪ್ರತಿದಿನದಲಿ ಅಳುತಿಹ ಸಂಸಾರದಿ ನೀ
ಪತಿಯೊಡನವರೊಳಿರುತ ಮೂರ್ಖರಲಿಯ-
ನೃತವಾಡಿಸಿ ನರಕವ ಪೊಂದಿಸಲು ೪

ಮರವೆ ಸುಷುಪ್ತಿಯು ಬಹುವಿಧ ಮೋಹವು
ಪರಿಪರಿ ಕಾಮಕ್ರೋಧ ಲೋಭಗಳು
ನೆರೆನಂಬಿದವರಿಗೀವುತ ನೀಹಗ-
ಲಿರುಳು ಕಲಿಯೊಡನೆ ಯೆಡೆಬಿಡದಲ್ಲಿಗೆ ೫

ಪೇಳುವ ಬೋಧೆಯ ಕೇಳದೆ ಜನ್ಮವ
ಹಾಳುಮಾಡಿಕೊಂಬುವ ಜನಗಳು ನಿ-
ನ್ನಾಳುಗಳವರಿಂದಲಿ ನೀ ಪ್ರತಿದಿನ
ವೂಳಿಗವನು ಕೈಕೊಳ್ಳುತ ಬಿಡದೆ ೬

ಗುರುರಾಮ ವಿಠಲನ ಶರಣ ಜನರ ಕ-
ಣ್ದೆರದು ನೋಡದಿರು ಬೇಡುವೆ ನಿನ್ನನು
ನಿರುತವು ನಿರ್ದಯ ಮಾಡುತ ದುರುಳರ
ಪರಮ ಕೃಪಾದೃಷ್ಟಿಯಲಿ ನೋಡಲು ೭

೨೭೭

ಅವರೆ ಕಾಯ್‌ಬೇಕು ಕಾಲದಿ
ಅವರೇಕಾಯ್‌ಬೇಕು ಪ

ಅವರೆ ಬಹುರುಚಿಯವರೆ ಸಂಪದ
ಅವರಿಂದಲಿ ಮೋಕ್ಷಾದಿ ಸಾಧನವು ಅ.ಪ

ಯುಕ್ತರಾಗಿ ಇರುವ ಜನರಿಗೆ
ಭುಕ್ತಿಯನು ಕೊಡುವ

ಭಕ್ತರಿಗೆಲ್ಲಾ ಬಾಯ್ಸವಿಯಾದಾ-
ಸಕ್ತಿಪುಟ್ಟಿಸುವ ಸರ್ವೋತ್ತಮವಾದ ೧

ಇವರೆಲ್ಲ ಬೆಳೆದು ಬಿತ್ತಿ
ವಿವರವಾಗಿ ಅಳದು
ತವಕದಿ ಮೂಟೆಯ ಕಟ್ಟಿಟ್ಟಿದ್ದರೆ
ಜವನವರೆಳೆಯುವ ಕಾಲಕ್ಕೊದಗುತ ೨

ಹಿತರಾಗೀ ಅವರೆ ಮಾತಾ-
ಪಿತಾರಾಗೀ ಅವರೆ
ಗತಿದಾಯಕರಾಗಿ ಅವರೆ ಭೂ-
ಸುತೆ ಗುರುರಾಮವಿಠಲರೀರ್ವರು ೩

೨೭೮

ಅಸುರರ ತಾಯಿಯು ದೊಡ್ಡಮ್ಮಾ ಸುಮ
ನಸರಿಗೆ ಮಾತೆಯು ಚಿಕ್ಕಮ್ಮಾ ಪ

ನೋಡಿದದು ಬಯಸುವುದು ದೊಡ್ಡಮ್ಮಾ
ಬೇಡವೆಂದದ್ದು ಬಿಡುವುದು ಚಿಕ್ಕಮ್ಮಾ ೧

ಹೇಳಿದಂತೆ ಕೇಳುವುದಿಲ್ಲ ದೊಡ್ಡಮ್ಮಾ
ಆಳಿನಂತೆ ನಡೆದುಕೊಂಬವದು ಚಿಕ್ಕಮ್ಮ ೨

ಅನಾರೋಗ್ಯ ವಸ್ತುಗಳು ದೊಡ್ಡಮ್ಮಾ
ದಿವ್ಯಾರೋಗ್ಯ ಪದಾರ್ಥಗಳು ಚಿಕ್ಕಮ್ಮ ೩

ಕ್ಷುಕ್ಷಿಂಬರ ಯೋಚನೆ ದೊಡ್ಡಮ್ಮಾ
ಅಕ್ಷರಾಭ್ಯಾಸಸಕ್ತಿ ಚಿಕ್ಕಮ್ಮ ೪

ಒಬ್ಬನೆ ತಿನ್ನುವುದು ದೊಡ್ಡಮ್ಮಾ
ಹಬ್ಬ ಮಾಡಿ ಇತರರಿಗಿಡುವುದು ಚಿಕ್ಕಮ್ಮ ೫

ಸಿಟ್ಟು ಮಾಡಿ ಬಯ್ಯುವುದು ದೊಡ್ಡಮ್ಮಾ
ಜ್ಞಾನಿಗಳ ಸೇವಿಸುವುದು ಚಿಕ್ಕಮ್ಮ ೭

ಅಪಕಾರ ಮಾಡುವುದು ದೊಡ್ಡಮ್ಮಾ
ಉಪಕಾರ ವೆಣಿಸುವುದು ಚಿಕ್ಕಮ್ಮ ೮

ಉಸುರೆಂದು ಅಳುವುದು ದೊಡ್ಡಮ್ಮಾ
ಹಸನ್ಮುಖರಾಗಿರುವುದು ಚಿಕ್ಕಮ್ಮ ೯

ಮರೆತು ಹೋಗುವುದು ದೊಡ್ಡಮ್ಮಾ
ನೆರೆ ಜ್ಞಾಪಕ ಶಕ್ತಿ ಚಿಕ್ಕಮ್ಮ ೧೦

ಅರರೆ ಕಲಿಯ ಪತ್ನಿ ದೊಡ್ಡಮ್ಮಾ
ಗುರುರಾಮ ವಿಠಲನರಸಿ ಚಿಕ್ಕಮ್ಮ ೧೧

೨೭೯

ಆಸ್ಥಾನ ಮಾಡೋಣ ಆತ್ಮ ವಿಚಾರ ದಾಸ್ತಾನ ಮಾಡೋಣ ಪ

ಸ್ವಸ್ತಿ ಆಯುಷ್ಕೀರ್ತಿ ಧರ್ಮಯಶೋಕಾಮ
ಹಸ್ತಿವರದನಾಧೀನವೆಂದು ನಾವೆಲ್ಲ ಅ.ಪ

ಶಮದಮಶ್ಯಾಂತಿ ವಿರಕ್ತ್ಯುಪರತಿಯಂಬೋ
ಕ್ರಮಮಂತ್ರಿಗಳು ವಿಜ್ಞಾನಿ ಪ್ರಧಾನಿಯು
ಸಮಾಧಿಕ ಶೂನ್ಯವೆಂಬುವ ರಾಜನು ವಿಷಯ
ಭ್ರಮೆ ಎಂಬೊ ಕಟ್ಟು ವಿಚಾರಣೆಯಾಗುವ ೧

ಸತ್ಕರ್ಮವೆಂಬೊ ಭೂಮಿಯನು ಸಾಧುಗಳೆಂಬ
ವಕ್ಕಲುಗಳಿಗಿತ್ತು ಸಿದ್ಧಾಯವ ತೆಗೆದು
ಭಕ್ತಿ ಜ್ಞಾನ ವೈರಾಗ್ಯ ಬಂಡಿಗಳಲಿ ತುಂಬಿ
ಭಗವಂತನೆಂಬ ರಾಜಗೆ ಒಪ್ಪಿಸುವಂಥ ೨

ಸ್ವಾಮಿ ಭೃತ್ಯನ್ಯಾಯ ಎಂಬೋ ಡಂಗುರವನು ಹೊಯಿಸಿ
ತಾಮಸರಿಗೆ ನಿತ್ಯದಂಡನೆಯನು ವಿಧಿಸಿ
ಕಾಮಕ್ರೋಧಗಳೆಂಬೋ ಖಳರ ಶಿಕ್ಷಿಸಿ ಗುರು–
ರಾಮವಿಠಲನ ಕರುಣವೆಂಬೋ ಸಂಬಳ ಪಡೆದು ೩

೨೮೦

ಇಲ್ಲದ ಸ್ವಾತಂತ್ರ್ಯವೆಲ್ಲಿ ಬಂತು ನಾ ಪ

ಬಲ್ಲೆನೆಂಬುವುದು ಬಲು ಭ್ರಾಂತು ಅ.ಪ

ಪರಮಾತ್ಮನು ಜೀವನಾದರೆ
ನರರು ನೆನೆದ ಪರಿ ನಡೆಯದೇಕೆ ೧

ಜೀವದೇವಗೆ ಭೇದವೇ ಸಿದ್ಧ
ದೇವರಸನು ಜೀವಕರ್ಮಬದ್ಧ ೨

ಹ್ಯಾಗಾದರು ಗುರುರಾಮವಿಠಲ
ತಾ ಘನಜೀವನು ಅಲ್ಪತೃಣ ೩

೨೮೧

ಇಸ್ಪೀಟಾಡಬೇಕು ನಮ್ಮಯ ತಸ್ಪೀರ್ ನೋಡಬೇಕು ಪ

ನಿಸ್ಪೃಹರಾಗದ ಜನರಿಗೆ ಕಡೆಯಲಿ
ಸಸ್ಪೆಂಟಾದೀತೆಂದು ತಿಳಿದು ಅ.ಪ

ಆಸೆಂಬುವದಾತ್ಮ । ರಾಜಾ
ತಾಸಗುಣ ಬ್ರಹ್ಮ
ಲೇಸಾಗಿ ರಾಣಿಯು ಮೂಲ ಪ್ರಕೃತಿ
ಗುಲಾಮನೆಂಬುದು ಚತುರ್ಮುಖನೆನ್ನುತ ೧

ದಹಿಲವೆಯಿಂದ್ರಿಯಗಳು । ದ್ವಾರವು
ನಹಿಲವಿದು ಭುವಿಯೋಳು
ಅಹಹಾ ಅಷ್ಟವು ಮದಗಳು ನೋಡಲು
ವಿಹಿತವೇಳನೆ ಬಂದು ವೆಸನಗಳು ೨

ಕಾಮಾದಿಗಳಾರು । ಅವ್ವೆದೆ
ಈ ಮಹಾ ವಿಷಯಗಳು
ನೇಮಕೆ ನಾಲ್ಕೇ ಪುರಷಾರ್ಥಗಳು
ನಿಜವಿದು ಮೂರನೆ ಬಂದು ತ್ರಿಕಾಲಗಳ್ ೩

ಎರಡು ಜೀವ ಪರಮಾ । ಯಿದರೊಳು
ಯಿಲ್ಲದಿಹದು ಮರ್ಮ
ತುರುಫೆಗುಣರಾಶಿಗಳೆಂದೀಪರಿ
ಅರಿತಾಡಲದೆ ಪರಮಾರ್ಥವಹದು ೪

ಕ್ಲಾವ್ರಿಸ್ಪೀಟಾಟೀನ್ । ಡೈಮಂಡ್
ಈ ವಿಧ ಪೆಸರಿರಲೇನ್
ಭಾವದಿ ಸಾಧನೆ ಯಿಂದಾಡುವ ನಿಜ
ಭಕ್ತರ ಗುರುರಾಮ ವಿಠಲ ಕೈಬಿಡ ೫

೨೮೨

ಈ ಊರೊಳ್ಳೇದು । ನಮಗೆ
ಈ ಊರೋಳ್ಳೇದು ಪ

ಜೀವನ ಯೋಗ್ಯತೆ ಚನ್ನಾಗಿದ್ದರೆ
ದೇವರ ಕೃಪೆ ಒಂದಾದರೆ ಸಾಕು ಅ.ಪ

ಎಂಟು ಆನೆಗಳ ಸಂಹರಿಸಿದರೆ
ಉಂಟಾದ ಶತೃಗಳಿಲ್ಲೆನಿಸಿದರೆ
ತಂಟೆ ಮಾಳ್ಪ ಭಂಟರೈವರ ಗೆದ್ದರೆ
ತಾನೆಲ್ಲಿದ್ದರು ಭಯವಿಲ್ಲಣ್ಣ ೧

ಜಲತೃಣ ಕಾಷ್ಟಕೆ ವಸತಿ ಈ ಊರು
ಬಲು ಸಜ್ಜನಗಳ ನೆರೆ ಈ ಊರು
ಫಲಗಳುಂಟು ಮಾಡುವುದೀ ಊರು
ಹೊಲಗದ್ದೆ ತೋಟಗಳಿಹ ಊರು ೨

ಕೇಳಿದ ಪದಾರ್ಥ ದೊರೆಯುವ ಊರು
ವೇಳೆಗೆ ಅನುಕೂಲವು ಈ ಊರು
ತಾಳ ಮೇಳ ವಾದ್ಯಗಳಿಹ ಊರು
ಸೂಳೆ ಬೋಕರಿಗೆ ಕಷ್ಟದ ಊರು ೩

ಎಷ್ಟು ಪುಣ್ಯದಿಂದೀ ಊರಿಗೆ ಬಂದು
ಕಷ್ಟಪಡುವ ನರ ಭ್ರಷ್ಟನಲ್ಲವೇ
ಮುಷ್ಟಿಯತ್ತಾದರು ಒಡಲನು ಹೊರೆಯುತ
ಮೂರು ಬಿಟ್ಟು ತಿರುಗುವ ಜನರಿಗೆ ೪

ಮರ ಕ್ರಿಮಿ ಪಕ್ಷಿಗಳಲಿ ಬಾರದೆ ಈ
ನರಜನ್ಮವೆಂಬ ಊರಿಗೆ ಬಂದು
ಗುರುರಾಮವಿಠ್ಠಲನ ಕರುಣನ ಪಡದರೆ
ಕರತಲಾಮಲಕವಿದು ಕೈವಲ್ಯಕೆ ೫

೨೮೩

ಎಂಟಚ್ಚಮ್ಮ ಎಂದಿಗು ಬರಬೇಡಮ್ಮ ಪ

ತುಂಟ ಪಟಿಂಗರ ಬಳಿಗೆ ಹೋಗಮ್ಮ ಅ.ಪ

ನಿನ್ನ ಗಂಡ ಪಾಂಡವರನ್ನು ಬಾಧಿಸಿ
ತನ್ನ ಬಾಯೊಳು ಹುಡಿಮಣ್ಣು ಹಾಕಿಕೊಂಡ ೧

ದೊರೆಯಾಗಿ ಮಿಗೆ ಪಾಮರರ ಮಾಡಿ ಎಲ್ಲರ
ಹುರಿದು ತಿಂಬ ಕಲಿಪುರಷ ಅಯ್ಯಯ್ಯೋ ೨

ಗುರುರಾಮವಿಠಲಗೆ ಪರಮದ್ವೇಷಿಯು ಹರಿ
ಶರಣರ ಬಾಧಿಸಿ ದುರಿತಗಳಿಸುವನು ೩

೨೮೪

ಎಂದಿಗೋ ಆಗುವುದಕೆ ಈಗ್ಯಾಕೆ ವ್ಯಾಜ್ಯ ಪ

ಮುಂದೆ ನೋಡಿ ನಡಿಯದಿರೆ ಮುಕ್ತಿ ಪೂಜ್ಯ ಅ.ಪ

ಬ್ರಹ್ಮಗೆ ಜೀವತ್ವ ಯಾವಾಗ ಬಂತು
ನಮ್ಮೊಳಗೆ ಗೊತ್ತಿಲ್ಲದ ಭ್ರಾಂತು ೧

ಜೀವಾತ್ಮ ಮಾಯಾ ಬ್ರಹ್ಮ ಮಿಥ್ಯ ಸತ್ಯ
ನಾವು ನೋಡಿಕ್ಕೊಂಡರೆರಡು ಅಗತ್ಯ ೨

ಎರಡಿದ್ದಮೇಲೆ ಅದ್ವೈತವಿಲ್ಲಾ
ಗುರುರಾಮವಿಠಲ ಇದರ ಕುರುಹಲ್ಲಾ ೩

೨೮೫

ಎನಗೊಬ್ಬರು ಇಲ್ಲಾ ನೋಡಿ
ಕ್ಷಣ ಕ್ಷಣದಲಿ ಪಾಲಿಸು ಸಿರಿನಲ್ಲ ಪ

ಮನದಿ ಯೋಚಿಸಲು ತಂದೆ ತಾಯಿಸತಿ
ತನಯ ಸಹೋದರ ಮಿತ್ರರೆಂಬುವರು ಅ.ಪ

ಒಬ್ಬರಾದರೂ ಇವರಲಿ ಇದ್ದರೆ
ಹಬ್ಬವಾಗಿ ಸಂತೋಷ ಪುಟ್ಟುವುದು
ತಬ್ಬಲಿಯಾದೆನು ಸಂಸ್ಮರಣವೆಂಬ
ಹೆಬ್ಬುಲಿಯಕೈಗೆ ಸಿಕ್ಕಿರುವೆನು ನಾಂ ೧

ಆರುಮಂದಿ ಶತ್ರುಗಳು ನಿರಂತರ
ಗಾರು ಮಾಡುತಿರುವರುಯನ್ನ ಬಿಡದೆ
ಯಾರಿಗೆ ಮೊರೆಯಿಡಲೀ ಕಷ್ಟ ಕಿವಿ-
ಯಾರ ಕೇಳಿ ಪರಿಹರಿಸುವರಾರು ೨

ತಾಯಿಯೆಂಬುವದೆ ಸತ್ಯ ಜ್ಞಾನಮಹ
ರಾಯ ತಂದೆ ಧರ್ಮವೆ ಸೋದರರು
ನ್ಯಾಯವಾಗಿ ಶಾಂತಿಯು ಸತಿ ಕ್ಷಮೆ ಸುತ
ನೋಯಿಸದಿರುವುದು ಮಿತ್ರನು ಇವರೊಳು ೩

ಈ ಬಂಧುಗಳುಳ್ಳವಗೆ ನಿರುತವು ಮ-
ಹಾಭಾಗ್ಯವುಯಿಹಪರ ಸೌಖ್ಯವು

ನಾ ಭ್ರಾಂತಿಯೊಳೆಲ್ಲೆಲ್ಲಿ ತಿರುಗಿದರು
ವೋ ಭಗವಂತ ಮಹಂತಾನಂತನೆ ೪

ಹೊರಗಿನವರ ಬಾಲ್ಯದಿ ಕಾಣದೆ ಕರೆ
ಕರೆಯಾಗಿದೆ ಒಳಗಿನವರುಯಿಲ್ಲದೆ
ಗುರುರಾಮವಿಠಲ ಹೊರವೊಳಗೂನೀ
ನಿರುವೆ ಕರುಣಿಸೈ ಸರ್ವವು ನೀನೆ ೫

೨೮೬

ಎಲ್ಲರ ಮಾತು ನಿಜ । ಇದು
ಅಲ್ಲ ಎಂಬುದು ಸಜ ಪ

ಬಲ್ಲವರು ಮನದಲಿ ಯೋಚಿಪುದು ಸು-
ಳ್ಳಲ್ಲವಾವುದು ಸೂರಿ ಜನಗಳಿಗೆ ಅ.ಪ

ಅಂತರ್ಯಾಮಿಯ ವೀಕ್ಷಾ । ಇದು ಅ
ದ್ವೈತ ಮತದ ದೀಕ್ಷಾ
ಸ್ವಾಂತದಿ ನೋಡೆ ಪ್ರಪಂಚಕಾಯ ಭಗ
ವಂತನೆಂಬುದು ವಿಶಿಷ್ಟಾದ್ವೈತವು ೧

ಅಣುರೇಣು ತೃಣಕಾಷ್ಠದಲಿ । ನೋಡೆ ಅ-
ವನೇ ವ್ಯಾಪಿಸಿಹನಲ್ಲಿ
ಅಣು ರೇಣು ಬೇರೆ ಅವನೇ ಬೇರೆ
ಅನಿಲಾಂತರ್ಗತನಾಗಿ ಸಮಸ್ತದಿ ೨

ಮೂರು ವಿಧದ ಜೀವಗಳು ಕರ್ಮ
ಮೂರು ಗುಣದ ಕಾರ್ಯಗಳು
ಮೂರು ಮೂರ್ತಿಗಳು ಮೂರು ಕಾಲಗಳು
ಮೂರಾಗಿ ತೋರುವ ಗುರುರಾಮ ವಿಠಲನು ೩

೨೮೭

ಎಲ್ಯಾದರು ಮಾಡಬೇಕು ಕೆಲಸ ಪ

ಅಲ್ಲೇನು ಇಲ್ಲೇನು
ಬಲ್ಲಂಥಾವನಾದರೆ ತಾನು ಅ.ಪ

ಶರೀರ ಸಂಬಂಧಿಗಳಿಗಾಗಿ । ಮೂರು
ಕರಣದಿಂದಲಿ ಅನುವಾಗಿ ಕರೆಕರೆಪಡುತಲಿ
ಅರೆನಿಮಿಷವಾದರೆ ಬಿಡದೆ ೧

ಪರಿಪರಿ ದಾಕ್ಷಿಣ್ಯ ಇಲ್ಲಿ । ಬಲವ
ತ್ತರವಾದ ಕಟ್ಟಾಜ್ಞೆ ಅಲ್ಲಿ ನ-
ರರ ಕಾಟವು ಇಲ್ಲಿ ಸುರರ ನಿಬಂಧನೆಯಲ್ಲಿ ೨

ಬಾಲ್ಯ ಯೌವನ ಕೌಮಾರ । ಮುಪ್ಪು
ಕಾಲಗಳಲ್ಲಿ ಶಕ್ತ್ಯಾನುಸಾರ
ಲೀಲೆಯಿಂದಲಿ ಕೆಲವರು ಗೋಳಾಡುತಲಿ ಕೆಲವರು ೩

ಸ್ವಲ್ಪಾದರು ಸತ್ಕರ್ಮ ಮಾಡೆ । ಫಣಿ-
ತಲ್ಪಗರ್ಪಿತವೆಂದಾಡೆ ಕಲ್ಪಕಲ್ಪಕು ಸಾಧನೆ
ಅಲ್ಪರಿವುದು ಯಾಕೆ ೪

ಇಪ್ಪತ್ತು ನಾಲ್ಕು ತತ್ವಗಳಿಂದ । ನ-
ಮ್ಮಪ್ಪ ಗುರುರಾಮ ವಿಠಲ ಗೋವಿಂದ
ಕ್ಲುಪ್ತಗೈದಿರುವನು ಆಪ್ತ ಎಂದಿಗೂ ನಮಗವನು ೫

೨೮೮

ಏಕಾದಶೀ ಉಪವಾಸ
ಬೇಕಾದವನೇ ಹರಿದಾಸ ಪ

ಏಕಾದಶಿ ಉಪವಾಸ ಮಾಡಿದರೆ
ನಾಕಿಗಳಿಗೆ ಆಗದು ವಿಶ್ವಾಸ ಅ.ಪ

ಏಕಾದಶಿಯೆ ಯೋಗಸಿದ್ಧಿ
ಏಕಾದಶಿಯೆ ಭೋಗಪ್ರಾಪ್ತಿ
ಏಕಾದಶಿಯಲಿ ಎರೆಡು ಕಾರ‍್ಯಲ-
ಕ್ಷೀಕಾಂತನ ಭಜನೆ ರಾತ್ರಿ ಜಾಗರವು ೧

ಉಪವಾಸ ವ್ರತವೆ ವ್ರತವು
ಜಪಶೀಲರ ತಪವೇ ಸುಖವು
ಅಪರಿಮಿತವಾದ ಸತ್ಕರ್ಮಗಳೆಲ್ಲಾ
ಚಪಲದಿ ಓಡುವುದುಪವಾಸದ ಹಿಂದೆ ೨

ಅನ್ನಸಾರು ಕಾಯಿಪಲ್ಯ ಒಬ್ಬಟ್ಟು
ಘನರುಚಿಯ ಚಿತ್ರಾನ್ನ ಭಕ್ಷ್ಯಗಳು
ಇನ್ನುರುಚಿಯ ವಸ್ತುಗಳು ನೋಡಿದರೆ
ತಿನ್ನುವುದೇ ಪ್ರತ್ಯಕ್ಷ ನರಕವು ೩

ಅನಗ್ನಿಕವಾದ ಆಹಾರಗಳು
ಪನಸಾಂಬ್ರವು ಇಕ್ಷು ಫಲಗಳು
ಘನಮೋದದಲಿ ಪವನಜನಾದ ಭೀ-
ಮನೇ ಸ್ವೀಕರಿಸಿರುವನು ಪೂರ್ವದೊಳು ೪

ರುಕುಮಾಂಗದ ಭೂಪಾಲಕನು
ಸುಖದಿಂದಾಚರಿಸಿದ ತಾನು

ವಿಕಳ ಬುದ್ಧಿಯಾಗದೆ ಸಮಯದಿ ತನ್ನ
ಸುಕುಮಾರನ ಕಡಿಯಲೆತ್ನಿಸಿದನು ೫

ನಿರಾಹಾರವು ನಡೆಯಲುತ್ತಮವು
ಎರಡನೇಯದು ಮೇಲ್ಫೇಳಿದುದು
ನರಾಧಮನು ವ್ರತನಮಗಿಲ್ಲೆನುತ
ಪರಿಪರಿ ಅನ್ನೋತ್ಸವದಿ ಕೆಡುವನು ೬

ಹೊರಗೊಳಗುಪವಾಸ ವ್ರತವ
ಮರೆಯದೆ ಮಾಡುತಿರುವ ಮಾನವ
ಗುರುರಾಮ ವಿಠಲನ ಕರುಣಾ ಪಡೆಯುವ
ಕರಾಮಲಕ ಮುಕ್ತಿಯಲಿ ಸುಖಪಡುವನು ೭

೨೮೯

ಕೋಟಿ ಪೂಜೆಗೆ ಸಮವು ಸ್ತೋತ್ರವು
ಕೋಟಿ ಸ್ತೋತ್ರಕೆ ಸಮವು ಜಪಶತ
ಕೋಟಿ ಜಪಕೆ ಸಮಾನ ಧ್ಯಾನವು ಧ್ಯಾನ ಕೋಟಿ ಸಮ
ನಾಟಿಸುವುದು ಮನವನು ಹರಿಯಲಿ
ಸಾಟಿಯಿಲ್ಲ ಮನಾಲಯಕ್ಕೆ ಭ
ವಾಟವಿಯ ದಾಟುವರು ಸುಲಭದಿ ಪರಮ ವೈಷ್ಣವರು ೧

ಕರಿ ಕನಕಕಶಿಪುಸುತಜಾಮಿಳ
ನರಪ ರುಕ್ಮಾಂಗದನು ದ್ರೌಪದಿ
ದುರುಳ ರಾವಣನನುಜ ಮನು ಪೌತ್ರನು ವಶಿಷ್ಠ ಮುನಿ
ಮರುತಜ ಮಹಾರುದ್ರ ನಾರದ
ನರನು ನಾಭಾಗಜನುದಾಲ್ಭ್ಯನು
ಸುರನದೀಸುತ ಶುಕನು ಶೌನುಕ ಬಲಿ ಕಿರೀಟಿಗಳು ೨

ಇವರು ಮೊದಲಾದವರು ಭಕ್ತ
ಪ್ರವರರೆಂದಿಗು ಕೆಡದ ಸುಖವನು
ತವಕದಲಿ ಸಂಪಾದಿಸಿದರಿವರಂಘ್ರಿಯ ಸ್ಮರಣೆ
ಭವವ ನೀಗಿ ಮಹಾಸುಕೃತವನು
ತವತವಗೆ ಕೊಡುತಿಹುದು ನಿತ್ಯದಿ
ಕವಿವಿನುತ ಗುರುರಾಮ ವಿಠಲನ ದಯೆ ಪಡೆಯಬಹುದು ೩

೨೯೦

ಜೀವನೇ ಶಶಿಹಾಸ ಕೇರಳ
ಭೂವರನಹಂಕಾರ ದಾಸಿಯು
ಕೋವಿದ ಜಡಪ್ರಕೃತಿ ಕುಂತಳಪುರ ಶರೀರವಿದು
ಈವ ಸಮ್ಯಕ್ ಜ್ಞಾನ ರಾಜನು
ಪಾವನದ ಶಾಸ್ತ್ರಗಳು ಗಾಲವ
ಭಾವಿಸಲು ಶುಭಫಲವು ಚಂಪಕ ಮಾಲಿನಿಯು ಕನ್ಯೆ ೧

ಚಂದನಾವತಿ ಧ್ಯಾನಸ್ಥಾನ ಕು
ಳಿಂದ ಸಾಧನೆ ದುಷ್ಟಬುದ್ಧಿಯು
ನಿಂದ್ಯ ಸಪ್ತಜ್ಞಾನಕಧಿಪತಿ ತತ್ಸುತನು ಮದನ
ಚಂದ್ರಮುಖಿ ವಿಷಯೆಯು ವಿಷಯವುಮು
ಕುಂದನಾತ್ಮನು ಸಾಲಿಗ್ರಾಮವು
ಕಂದನೊಯ್ದ ಕಟುಕರು ಪಂಚಾಘಗಳು ತಿಳಿಯುವುದೂ ೨

ಕೆಟ್ಟಕರ್ಮವು ಕಾಲೊಳಾರನೆ
ಬೆಟ್ಟುನೋಡಲು ಕಾಳಿಕೆಯು ತಾ
ಶ್ರೇಷ್ಠಮೂಲಪ್ರಕೃತಿ ಖಡ್ಗವು ನಿಷ್ಠೆಯೆನಿಸುವುದೂ
ಸೃಷ್ಟಿಯೊಳಗೀ ವಿವರ ತಿಳಿದು
ತೃಷ್ಟವೆಂದಾಲಿಪರ ಗುರುರಾಮ
ವಿಠ್ಠಲನು ಕೈಪಿಡಿದು ಕೊಡುವನಭೀಷ್ಟಸಿದ್ಧಿಗಳಾ ೩

೨೯೧

ಡಂಬವಿಲ್ಲದೆ ಹರಿಯ ಭಜಿಸಿ ನಂಬಿ ಮನದಲಿ ಪ

ಹಂಬಲಿಸದೆ ದುರ್ವಿಷಯವ ಹರುಷ ಪಡುತಲಿ ಅ.ಪ

ಶಮದಮಾದಿ ಸದ್ಗುಣಗಳ ಕ್ರಮದಿ ಕಲಿಯುತ
ಸಮಚಿತ್ತದಿ ವರ್ತಿಸಿ ಸಜ್ಜನರ ಕೂಡುತ ೧

ತನಗೆ ತಾನೆ ಬರುವ ಫಲದಿ ಮನದಿ ಸುಖಿಸುತ
ಮನುಮಥನಾಟಕೆ ಸಿಲುಕದೆ ಮಮತೆಯ ಬಿಡುತ ೨

ಕಾಮ ಮುಖ್ಯರಿಪುಗಳನ್ನು ಕಡೆಗೆ ನೂಕಲು
ಸ್ವಾಮಿ ಶ್ರೀ ಗುರುರಾಮವಿಠಲ ತೋರ್ಪನವರೊಳು ೩

೨೯೨

ತತ್ವಮತವೇ ಮತವು ಸಾತ್ವಿಕರಿಗೆ ಪ

ನಿತ್ಯ ನಿರ್ಮಲರಾದ ಮುಕ್ತಿಜೀವರಿಗೇ ಅ.ಪ

ಜೀವಗಂತರ್ಯಾಮಿ ನರಸಿಂಹ ಚಿತ್ತದಲಿ
ಶ್ರೀವನಿತೆ ಮತಿಗೆ ವಾರಿಜಸಂಭವಾ
ಆವಂಗಜರಿಪು ಮನಕೆ ಅಹಂಕಾರದಲಿ
ಯೀವಿಧ ದಶೇಂದ್ರಿಯಕೆ ಸೂರ್ಯಾದಿಗಳು ಎಂಬೋ ೧

ಪಂಚಭೇದವನು ತರತಮಗಳನು ತಿಳಿಯುತಂ
ವಂಚನಾದಿಗಳಿಂದ ರಹಿತರಾಗಿ
ಪಂಚ ಸಂಸ್ಕಾರದಿಂ ಪರಿಶುದ್ಧರಾಗುತೆ ಪ್ರ–
ಪಂಚವನು ದಾಟಿರುವ ಪರಮ ಭಕ್ತರಿಗೆ ೨

ತನ್ನತೆರದಲಿ ಇತರರನ್ನು ನೋಡುತ ತ್ರಿಕರಣ
ವನ್ನು ಒಂದೇ ಬಗೆಯ ಗೈದು ಮುದದಿ
ಪನ್ನಗಾದ್ರಿನಿವಾಸ ಗುರುರಾಮ ವಿಠಲನ ಅ-
ಹರ್ನಿಶಿಯು ಬಿಡದೆ ಪೂಜಿಸುವ ಸುಜನರಿಗೆ ೩

೨೯೩

ತತ್ತ್ವೇಶರಿಗೆ ನಮಸ್ಕಾರ ಪ

ಸತ್ತ್ವಗುಣಿಗಳಾದ ಸಾಧುಜನರಿಗೂ ಅ.ಪ

ಮರತನುತ್ವಕ್ಕಿಗೆ ಶ್ರವಣದಿ ದಿಗ್ದೇ
ವರು ಕಣ್ಣಲಿ ಭಾಸ್ಕರನಿರುವಾ
ಕರ ಇಂದ್ರನು ಪದಕಿಂದ್ರಜ ವೈಶ್ವಾ
ನರವಾಕ್ಕಿಗೆ ಗುಹ್ಯದಿ ಮನುಪತಿ ೧

ಗುದಕೆ ಮಿತ್ರ ರಸನದಿ ವರುಣನು ಘ್ರಾ
ಣದಿ ದಸ್ರರು ಯೀಪತ್ತು ಜನಂ
ವಿದುಧರ ಹಂಕಾರದಿ ಮನಕಿಂದು ಮ
ತಿದಾತ ಚಿತ್ತದೊಳುದಧಿಜೆ ಕರ್ತಳು ೨

ಐದು ಭೂತದೊಳಗೈದುರೂಪ ಮ
ತ್ತೈದು ವಿಷಯದೊಳು ತದ್ರೂಪ
ವೈದುತಲಿಪ್ಪತ್ತೈದಕೆ ಸಾಕ್ಷಿಯು
ಮೋದಮಯನು ಶ್ರೀಗುರುರಾಮ ವಿಠಲನು ೩

೨೯೪

ತಿರುಪೆಗಾರರಯ್ಯಾ ನಾವು
ತಿಳಿದುಕೊಳ್ಳಿರೀ ಜೀಯಾ ನೀವು ಪ

ತಿರುಪೆಗಾರರನು ತಿರಸ್ಕರಿಸದಿರಿ
ತಿರುಪಿಲ್ಲದಿದ್ದರೆ ತೀರಹುದು ಅ.ಪ

ತಿರುಪುವಾಲೆ ಬುಗುಡಿ । ಚಂದ್ರಮುರವು
ತಿರುಪಿಲ್ಲವೇ ಧಗಡಿ
ತಿರುಪು ವಡವೆಗಳು । ತಿರುಪುಹೂಜಿಗಳು
ತಿರುಪು ಭರಣಿಗಳು । ತಿರುಪು ರಕ್ಷಣೆಯು ೧

ತಿರುಪು ಹಿತ್ತಾಳೆಯದು । ವಾಲಿಯು
ನೆರೆ ಭಂಗಾರವದು
ತಿರುಪು ಬಿದ್ದೋದರೆ ವಾಲೆ ಏನಾಯಿತು
ಅರಿತು ನೋಡದೇ ಮೂರ್ಖರಾಗದಿರೀ ೨

ಹಣವಂತರು ನಾವೂ । ಎಂದು
ಗೊಣಗಬೇಡಿರಿ ನೀವೂ
ಹಣವು ನಿಮಗು ನಮಗುಂಟು ವಿಚಾರಿಸೆ
ಹಣವಿಲ್ಲದ ನರ ಹೆಣಕಿಂತ ಕಡಿಮೆ ೩

ರಾಶಿಯೊಳೊಂದು ಹಿಡಿ । ತೆಗೆಯಲು
ಹ್ರಾಸವೇನೋ ನೋಡಿ
ಆಸೆಪಟ್ಟು ಧರ್ಮಬಿಟ್ಟರೆ ಮೊದಲಿಗೆ
ಮೋಸವೆ ಬರುವುದು ಓಸುಜನರೇ ಕೇಳಿ ೪

ನಿಮ್ಮ ದೊರೆ ಶ್ರೀಮಂತ । ನೋಡಲು
ನಮ್ಮ ಗುರು ಹನುಮಂತ
ನಿಮ್ಮ ದೊರೆಗಾಳು ನಮ್ಮ ಗುರುವಲ್ಲವೇ
ನಿಮಗೆ ನಾವಾಳಾದರೂ ದಯೆಯಿಲ್ಲವೇ ೫

ತ್ಯಾಗ ಭೋಗವುಳ್ಳ । ನರನು
ಧೀರನು ಬಹುಬಲ್ಲ
ಭೋಗದಿಂದಲೆ ರೋಗ ಬರುವುದು
ತ್ಯಾಗದಿಂದಲೆ ಯೋಗ ಒದಗುವುದು ೬

ಸತಿಗೆ ಒಡವೆಯಿಟ್ಟು । ಕಳೆಯಲು
ಹಿತವೇ ನಿಮಗಷ್ಟು
ಗತಿಯೇನು ನಿಮಗೆ ಎಂದು ಯೋಚಿಸದೆ
ಅತಿಶಯ ಭೋಗಗಳಪೇಕ್ಷಿಸುವಿರ್ಯೆ ೭

ಮರವೆಯೆ ಬಹುಕಷ್ಟ । ನಮಗೆ
ಮರವೆಯೆ ಅತಿ ಕಷ್ಟ
ಮರವೆಯೆ ದುಃಖವು ಮರವೆಯೆ ನರಕವು
ಹರಿ ಕೃಪೆಪಡೆದು ಅರಿವು ಸಂಪಾದಿಸಿ ೮

ತಿರುಕನು ಈಶ್ವರನೂ । ಇಂದ್ರಗಾಗಿ
ತಿರುಗನಾದ ವಿಷ್ಣು
ತಿರುಕರೊಡೆಯ ಗುರುರಾಮವಿಠಲನು
ತಿರುಪುಹಾಕಿರುವ ತ್ರಿಲೋಕಗಳಿಗೂ ೯

೨೯೫

ದುರ್ಯೋಧನ ಮಹರಾಜನೆ । ಅ
ನಾರ‍್ಯ ಜನರ ಕಲ್ಪಭೂಜನೆ ಪ

ಧೈರ‍್ಯ ಧರ್ಮಜ್ಞಾನ ಸೌಂದರ‍್ಯ ನೀತಿಗಳಲ್ಲಿ
ನಿರ್ಹೇತುಕ ದ್ವೇಷ ಮಾಡುವೆ । ಹಾ ಹಾ ಅ.ಪ

ಹರಿಭಕ್ತಿಗೆ ಮಾನಭಂಗ ಮಾಡಲಾಪೆಯ
ದುರುಳ ಘೋಷಯಾತ್ರೆಯ ಜ್ಞಾಪಿಸಿಕೊ ದುಷ್ಟ ೧

ಜಲದೊಳು ಮುಳುಗಿ ಸ್ವಬಲವನೆಬ್ಬಿಸುವೆನೆಂ
ದೆಲೆ ಭೀಮಗೇಕಿದಿರಾದಯ್ಯ ನೀನು ೨

ಕೋಪ ಸ್ವರೂಪನೆ ಪಾಪಸ್ವಭಾವನೆ
ಶ್ರೀಪ ಗುರುರಾಮ ವಿಠಲಗೆ ದೂರನೆ । ಹಾ ಹಾ ೩

೨೯೬

ನಮ್ಮ ತಂದೆಯು ರಾಮನು
ಜಾನಕಿಯು ನಮ್ಮಮ್ಮ
ನಮಗೆ ಭಯವೇನು ಪ

ಬ್ರಹ್ಮಾದಿ ದಿವಿಜರು ಬಂಧುವರ್ಗಂಗಳು
ಪವಮಾನ ತನಯನು ಪಾಲಿಪ ಗುರುವಯ್ಯಾ ಅ.ಪ

ಕಾಲಕಾಲದಿ ತಪ್ಪದೆ । ಭತ್ಯವ ಹಾಕಿ
ಬಾಲಲೀಲೆಗಳಾಡಿಸಿ
ಮೇಲೆ ತುಡುಗಾಟವಾಡಿದರೆ ಕೆನ್ನೆಯ ಹಿಂಡಿ
ಹಾಲ ಕುಡಿಸಿ ಮಕ್ಕಳರ್ಥಿಯ ನೋಡುವ ೧

ಇತರ ಮಕ್ಕಳಿಗೆಲ್ಲಾ । ಅವರ ಮಾತಾ
ಪಿತರು ಪಡವೆಗಳಿಟ್ಟು
ಮತಿ ಹೀನರಾಗಿ ಕಳೆಯಲು ಶಿಕ್ಷೆಗೈವರು
ಮಿತಿಯಿಲ್ಲದೆ ಬೈದು ಬಲು ಚಿಂತೆಯ ಪಡುವರು ೨

ಕಳ್ಳರಿಗೆ ಸಿಕ್ಕದೈಯ್ಯ । ನಮ್ಮೊಡವೆಗಳ್
ಕಳಚುವುದಕೆ ಬಾರದು
ಒಳ್ಳೆ ವಸ್ತ್ರವ ಉಡಿಸಿ ಉಚಿತ ತಿಂಡಿಯ ಕೊಡಿಸಿ
ಸುಳ್ಳಾಡದಂದದಿ ಸುತ್ತಿಸಿ ನಗುವರು ೩

ಓದು ಬರಹವ ಕಲಿಸಿ । ನಮ್ಮನು ಕೆಲವು
ಹೊತ್ತು ಆಟಗಳಾಡಿಸಿ
ಆದರಿಸುತ ಜನ್ಮ ಜನ್ಮಗಳಲಿ ಬಿಡದೆ ಕಾದು
ಕೊಂಡಿರುವರು ಕಡೆಗೂ ನಮ್ಮಗಲರು ೪

ಇಂತಹ ನಮ್ಮವರ ಬಿಟ್ಟು । ಬರಿದೇ ಲೋಕ
ಸಂತೆಯವರನು ನಂಬುವರೆ
ಎಂತಾದರೂ ಗುರುರಾಮ ವಿಠಲನ ನಾಮ
ಸ್ವಂತವಾದರೆ ಮುಕ್ತಿ ಸ್ವಾಧೀನವಾಗುವುದು ೫

೨೯೭

ಪತಿಯೆ ಪಾಲಿಸು ಎನ್ನ ಪತಿಯೇ ಮೂಲ ಪ್ರಕೃತಿ ಪ

ಪತಿಯೆ ಸದ್ಗತಿಯೆ ಇದನಿತರರಾ ಬೇಡೆ ನಾಂ
ಹಿತಮಾಡುವನು ನೀನು ಸತತಾಯನ್ನಗಲದಿರು ಅ.ಪ

ತತ್ವಾಮಂಗಳದ್ರವ್ಯ ಸಾತ್ವೀಕ ವೃತ್ತಿ ಸಂ
ಪತ್ತಿನೋಳ್ ಹಿಗ್ಗುವ ಮುತ್ತೈದೆಯೆನಿಸೆನ್ನ ೧

ಗುರುಭಕ್ತಿಯೆಂಬ ಭರ್ಜರಿಸೀರೆಯನುಡಿಸಿ
ಅರಿವೆ ಕಂಚುಕ ತೊಡಿಸಿ ಹರುಷದಿ ಕೊಡು ಮುಕ್ತ ೨

ಕಳ್ಳರಿಗೆ ಕಾಣದ ಒಳ್ಳೆ ವಡವೆಗಳಿಟ್ಟು ಚೆಲ್ವನಿ
ನ್ನೊಳು ಬೆರೆಸುನಲ್ಲಾ ಗುರುರಾಮವಿಠಲ ಪತಿಯೆ ೩

೨೯೮

ಪ್ರಣವ ಪ್ರತಿಪಾದ್ಯನು ಶ್ರೀನಾರಾ-
ಯಣನೊಬ್ಬನೆ ಧ್ಯೇಯನುಜಗಕೆ ಪ

ತೃಣವಾದರು ಕದಲದು ಅವನಿಲ್ಲದೆ
ಎನುತ ಪೊಗಳುವದು ಶೃತಿ ತತಿಯೂ ಅ.ಪ

ಮೊದಲು ಮಧ್ಯಕಡೆ ನೋಡಲು
ನಿಸ್ಸಂಶಯವಾಗಿರುವುದು ಸದ್ಬೋಧೆ
ಮೊದಲು ಮಧ್ಯಕಡೆ ಗೊತ್ತಿಲ್ಲದಲೆ ಅಪಾರ್ಥ
ಪೇಳುವದು ದುರ್ಬೋಧೆ
ಸದಮಲರಾವಾಗುವೆವೆಂಬುದು ರಾಜಸ
ಜೀವರಿಗೊಂದೇ ವೇಧೆ
ತುದಿಗೆ ಎರಡು ಗುಂಪಿನವರನು ವಿಚಾರಿಸಿ
ಮಾಳ್ಪೆನು ಕಾಲನು ಬಾಧೆ ೧

ತಾಯಿ ಒಬ್ಬಳಿಗೆ ಮಕ್ಕಳು ಮೂವರು ತತ್ವವಿದೇ ನಿಶ್ವಯ ದಾರಿ
ನ್ಯಾಯ ಕಲಿ ಪುರಂಜನ ಬ್ರಂಹ್ಮರು
ಇವರಾಯತವಿವರಿವರಿಗೆ ಬಾರಿ
ದಾಯ ಭಾಗ ತಮಗುಂಟೆಂದಾಡುವರ್ದೈತ್ಯರು
ತಮ್ಮೊಳು ತಾವ್‌ಹೋರಿ
ರಾಯರ ಬಲವಿಲ್ಲದವರಿಗೆ ಬರಿದೆ ರಾದ್ಧಾಂತ ಪರಸ್ಪರ ಸೇರಿ ೨

ತಾಮಸ ಜೀವರ ಮತ ಸರಿಯೆಂಬುದು
ನೇಮವಾಗಿ ವೇದದೊಳಿಲ್ಲ
ಕಾಮುಕರಿಗೆ ಸದ್ಬೋಧೆ ಪೇಳುವದು
ಖಂಡಿತವಾಗಿ ಉತ್ತಮವಲ್ಲ
ಪಾಮರರಾಗಿಹ ಮಧ್ಯಮಜನ ಸಂಪಾದಿಸಿದರೆ ದಕ್ಕುವದಿಲ್ಲ
ಸ್ವಾಮಿಯಾದ ಶ್ರೀ ಗುರುರಾಮವಿಠಲ ತಾನೀ
ಮೂವ್ವರ ಮರ್ಮವು ಬಲ್ಲಾ ೩

೨೯೯

ಬಡವರೆಲ್ಲ ಬದುಕಿ ಸುಖದಲಿ ಬಹುಕಾಲ ಪ

ಬಡವರೆಲ್ಲ ಸುಖದಲಿ ಜಗ
ದೊಡೆಯ ಸಿರಿಮಡದಿಯರಸನ
ಕಡುಕರುಣಕೆ ಪಾತ್ರರಾಗಿ
ದೃಢದಿ ಬಾಳಿ ಸಡಗರದಲಿ ಅ.ಪ

ಭಿಕ್ಷವಾದರು ಕೂಲಿಯಾದರು
ಕುಕ್ಷಿಗಾಗಿ ಗೈದು ಬಂದುದು
ಲಕ್ಷವೆಂದು ತಿಳಿದು ನಮ್ಮ
ಲಕ್ಷ್ಮಣಾಗ್ರಜನಾಜ್ಞೆಯೆಂದು ೧

ಮಾನರಕ್ಷಣೆಗೆ ವಸ್ತ್ರವುಟ್ಟು
ಪ್ರಾಣಧಾರಣೆಗನ್ನ ಭುಜಿಸಿ
ನಾನು ಎಂಬ ಮಮತೆ ಬಿಟ್ಟು
ಜ್ಞಾನರತ್ನವ ಸಂಗ್ರಹಿಸುತ ೨

ತೆಗೆಯದಾಭರಣಗಳನು
ಮಿಗೆ ಧರಿಸುತ ಮೋದದಿಂದ
ಭಗವದ್ಧ್ಯಾನ ಪದಕ ಹೊಳೆಯೆ
ಜಗದ ಜನಗಳಂತೆ ನಡೆಯದೆ ೩

ಯೋಗಿಗಳನು ನೋಡಿ ಹಿಗ್ಗಿ
ಭೋಗಿಗಳನು ನೋಡಿ ತಗ್ಗಿ
ತ್ಯಾಗ ಬುದ್ಧಿಯುಳ್ಳವರಾಗಿ
ಭಾಗವತರಾಚರಣ ಪಿಡಿದು ೪

ಪರರ ಸ್ವತ್ತಿಗಾಸೆಪಡದೆ
ಪರಗತಿ ಸಂಪಾದನೆಯಲಿ
ಗುರುರಾಮವಿಠಲನ ನಂಬಲು
ಎರೆಡು ಸುಖವು ಕರಗತವೈ ೫

೩೦೦

ಬಂಡಿ ಹೋಗುವುದೀಗ । ನಮ್ಮೂರಿಗೆ
ತಿಂಡಿಯಾಗಲಿ ಬೇಗ ಪ

ಪುಂಡರೀಕಾಕ್ಷನ ಭಜನೆಯ ಮಾಡುತ
ತೊಂಡರೊಡನೆ ಕೂಡಿ ತ್ವರಿತದಿ ಹೊರಡೋಣ ಅ.ಪ

ಅನ್ನಸಾರೆರಡೇ ಬೇಕು । ಮಿಕ್ಕಾದ್ದೆಲ್ಲಾ
ನಿನ್ನೆ ಉಂಡದ್ದೇಸಾಕು
ಹನ್ನೊಂದು ಗಂಟೆ ಹೊತ್ತಿನೊಳಗೆ ಅಡಿಗೆಯ
ಮಾಡಿ ಹರಿದಾಸರ ಕೂಡಿ ಆ ವೂರಿಗೆ ಹೋಗೋಣ ೧

ಚಿತ್ರಾನ್ನವ ಕಲಿಸಿ । ಬುತ್ತಿಯ
ಕಟ್ಟಿ ಪಾತ್ರೆಯೊಳಗಿರಿಸಿ
ರಾತ್ರೆಗೆ ಹಸಿವಾಗದಂತೆ ಭೋಜನ ಮಾಡಿ
ಜಾತ್ರೆ ನೋಡುವುದಕ್ಕೆ ಜನರು ಮಿತ್ರರು ಸಹ ೨

ತುಪ್ಪ ಹೆಚ್ಚಾಗಿರಲಿ ಬೇಕಾದರೆ
ಉಪ್ಪಿನಕಾಯಿ ತೆಗಿಯಲಿ
ಹಪ್ಪಳ ಸುಟ್ಟು ನಮ್ಮಪ್ಪ ಗುರುರಾಮ ವಿಠ–
ಲ್ಲಪನ ನೆನೆಯುತ ಚಪ್ಪಾಳೆ ತಟ್ಟುತ ೩

೩೦೧

ರಾಜರಯ್ಯ ನಾವು ನಮ್ಮ
ರಾಜೀವಾಕ್ಷನ ಕರುಣವ ಪಡೆದರೆ ಪ

ಊಂಭವೃತ್ತಿಯೇ ರಾಜ್ಯಕೋಶ । ನಿಷ್ಪ್ರ–
ಪಂಚ ನಡತೆಯೇ ನಮಗೆ ಕಛೇರಿ
ಪಂಚೇಂದ್ರಿಯ ಜಯಿಸುವುದು ಮ್ಯಾಜಿಸ್ಟ್ರೇಟ್
ಪಂಚವಿಷಯ ಹಂಚಿಕೆಯೇ ಸಿವಿಲ್‌ಬಾಬು ೧

ದೇವಾದಾಯದ ಧನವೇ ರೆವಿನ್ಯೂ
ಭಾವಶುದ್ಧಿಯೆ ಸಿಂಹಾಸನವು
ಕಾವನು ಕೊಲ್ವನು ಹರಿಯೆಂಬವುದು
ಪಾವನ ಜಡ್ಜ್‌ಮೆಂಟ್ ಕಾಪಿರಿಜಿಸ್ಟರು ೨

ಬ್ರಹ್ಮನೆ ವೈಸ್ರಾಯ್ ರುದ್ರನೆ ಗೌರ್ನರ್
ದೇವೇಂದ್ರಾದಿಗಳೇ ಕಲೆಕ್ಟರ್
ನಿರ್ಮಲ ಸುರರು ತಾಲ್ಲೂಕಾಫೀಸರು
ಧರ್ಮನಿಷ್ಠರೆಲ್ಲ ನೌಕರ ಜನಗಳು ೩

ದಾನಧರ್ಮವೇ ಡಬ್ಲಿಯು ಎಸ್ಸು
ಜ್ಞಾನ ಸಾಧನವೇ ವಸೂಲಿ ಲೆಖ್ಖ
ನಾನು ಕರ್ತನೆನದಿರುವುದೇ ಕಾನೂನು
ಮಾನವ ವೃತ್ತಿಗಳೆಲ್ಲ ರಿಕಾರ್ಡ್ ೪

ಸಪ್ತಾವರ್ಣವೇ ಸಪ್ತಾಂಗದ ಸಭೆ
ಆಪ್ತಮಂತ್ರಿಗಳೇ ಸುಗುಣಗಳು
ಸಪ್ತಧರ್ಮವೇ ಕಾರ್ಯಗೌರವವು
ಗುರೂಪದೇಶವೇ ಜ್ಞಾನಾರ್ಜನೆಯು ೫

ಅನುಸಂಧಾನವೆ ನಿತ್ಯಸಂಪಾದನೆ
ಘನನವವಿಧ ಭಕ್ತಿಯೆ ಭೋಗ
ವನಜನಯನ ಗುರುರಾಮವಿಠ್ಠಲನೆ
ಸೈನು ಮೊಹರು ಮಹಾ ಚಕ್ರವರ್ತಿಯು ೬

೩೦೨

ಲಗ್ನದರ್ಥ ತಿಳಿಯಿರಿ ಸುಜ್ಞಾನಿ ಜನರೆ
ಅಜ್ಞರಿಗೆಯಿದುನೋಡೆ ಹಾಸ್ಯವಾಗುವುದು ಪ

ಜೀವ ಪರಮಾತ್ಮನಂ ತಿಳಿವದಡಕೆಲೆ ಶಾಸ್ತ್ರ
ದೇವಧರ್ಮವು ಬರುವುದೇ ನಿಶ್ಚಿತಾರ್ಥ
ಪಾವನಾಚರಣೆಗಳು ಸಂಭಾರ ವಸ್ತುಗಳು
ನಾವೆಂಬುವುದು ಬಿಡುವುದೆ ಭಾಜಾಭಜಂತ್ರಿಗಳು ೧

ಗುರುಹಿರಿಯರಾಜ್ಞೆಯೆ ನಗನಾಣ್ಯಜವಳಿಗಳು
ಸರವರಿಗು ಮರಿಯಾದೆ ಸಭೆಯ ಪೂಜೆ
ಗರುವವನು ಬಿಡುವುದೆ ಘನ ಭಕ್ಷ್ಯಭೋಜ್ಯಗಳು
ದುರುಳನು ನಿಂದಿಪೋದು ಬೀಗತಿಯ ಹಾಡು ೨

ಆತ್ಮಧ್ಯಾನಾಮೃತವೆ ನಾಲ್ಕು ದಿನ ಭೋಜನವು
ಅಂತರ್ಮುಖತ್ವವೇ ಭೂಮದೂಟ
ತತ್ವಗಳ ಮರೆಯದಿರುವುದೆ ದಿವ್ಯತಾಂಬೂಲ
ಸತ್ವಗುಣ ವೃತ್ತಿಗಳೆ ನಿತ್ಯಸಂತೋಷ ೩

ಇಬ್ಬರೊಂದಾದಾಗ ಶೋಭನ ಪ್ರಸ್ತವದು
ಹಬ್ಬ ಸೌಖ್ಯವು ಮಹಾಲಾಭವದುವೆ
ಕೊಬ್ಬಿದವರಿದು ಬಿಟ್ಟು ಹಣಕಾಸು ಕಳಕೊಂಡು
ಕೋರಿಕೆಗಳಿಂದ ಸತಿಯೊಡನೆ ಕಾದುವರು ೪

ಪುರುಷನೇ ಪರಮಾತ್ಮ ಸತಿಯೇ ಜೀವವು
ಮಹಾಗುರುವೆ ಪರಮಾತ್ಮ ಶಿಷ್ಯರು ಜೀವರಾಶಿ
ಅರಿತವರಿಗಿದರರ್ಥ ಅಮೃತಪಾನಕೆ ಸಮವು
ಗುರುರಾಮ ವಿಠಲನು ಮನದಿ ಹೊಳೆಯುವನು ೫

೩೦೩

ವೇದಾಬಲು ಸ್ವಾದ ಪ

ಸಾದರದಲಿ ಬಿಡದೋದಿ ಪಠಿಸುವಗೆ ಅ.ಪ

ಆದಿಯನಾದಿಗಳ ಹಾದಿಯ ತೋರಿ ಸ–
ಮಾಧಿ ಗುಹ್ಯ ಪ್ರತಿತಾರ್ಥಗಳಿಹ ೧

ಅನುದಿನ ಶ್ರವಣ ಮನನ ನಿದಿಧ್ಯಾಸನ
ಘನಸಾಧನೆಗಳಿಗನುಕೂಲಿಸುವುದು ೨

ಸ್ವರಿತೋದಾತ್ತನುದಾತ್ತ ಪ್ರಚಯಗಳಿಂ
ಗುರುರಾಮವಿಠಲನ ಚರಣನೋಡುವದಕೆ ವೇದಾ ೩

೩೦೪

ಶಶಿಕಳೆಯ ದೆಸೆಯಿಂದ ಪಕ್ಷಗ
ಳೆಸಗುವುದು ಶಿತಿ ಕೃಷ್ಣವೆಂಬುವು
ಪೆಸರಿನಿಂ ಸಿತಪಕ್ಷಕೇ ಭಾಗಿಗಳು ಸುಮನಸರು

ಅಸುರರೆಲ್ಲರೂ ಬಹುಳ ಪಕ್ಷವ
ನುಸರಿಸುತ್ತಿಹರೆಲ್ಲ ಕಾಲದಿ
ಅಸುರರೇ ಷಟ್ ಷಷ್ಟಿ ಕೋಟಿಯು ಸುರರದರೊಳರ್ಧ ೧

ಉತ್ತರಾಯಣ ಶುಕ್ಲದಿವಿ ಶಿಖಿ
ರಾತ್ರಿಧೂಮವು ದಕ್ಷಿಣಾಯನೆ
ಮತ್ತೆ ಬರುವುದು ದಕ್ಷಿಣಾಯನ ಪಥದಿ ಪೋದವರು
ಹತ್ತುವರು ರಗಮಾರ್ಗದಲ್ಲಿಯೆ
ಮುಕ್ತರಾಗುವರೆಂದು ಕೃಷ್ಣನು
ಪಾರ್ಥಗರುಹನೆ ಗೀತೆಯಲಿ ವಿದ್ವಾಂಸರರಿಯುವುದು ೨

ಕೆಲರು ಮುಕ್ತರು ಸುಮನಸರು ಮಿಗೆ
ಹಲವು ಜನಗಳು ದೈತ್ಯರೆನಿಪರು
ಜಲಜಸಖ ಮುಕ್ತರಿಗಧಿಪ ಸಂಸಾರಿಗಳಿಗೊಡೆಯ
ಜಲಜರಿಪುವೆನಿಸುವನು ಈ ಪ್ರಭು
ಗಳಿಗಧೀನ ಸಮಸ್ತನಿದಿರೊಳು
ಕಲುಷ ಸುಕೃತಗಳಿನಿತು ಭಾಗವು ತಿಳಿವ ಬುಧಜನಕೆ ೩

ಪಾಪವಸುರರು ಪುಣ್ಯವಮರರು
ವ್ಯಾಪಿಸಿಹುದ್ಯರಡೇ ಪ್ರಪಂಚದಿ
ಕೋಪ ಮಾಡುವುದಲ್ಲ ಪುಣ್ಯವು ಸ್ವಲ್ಪವಘವಧಿಕ
ಈ ಪರಿ ವಿಭಾಗದಲಿ ಮನುಜರು
ಸಾಪರಾಧಿಗಳೆನಿಸುತಿಹರು ಮ
ಹಾಪ್ರಯತ್ನ ದುರಾಶೆಯಿರುವರೆಯಸುರರೆನಿಸುವರು ೪

ದುರಿತವೇ ಸಂಸಾರ ಚಿಂತಿಯು
ವರಸುಕೃತವೇ ಮುಕ್ತಿ ಯೋಚನೆ
ಯರಡರೊಳು ದುಃಖಿಧಿಕರೆ ಸಾಮಾನ್ಯ ಜನರೆಲ್ಲ
ಪರವ ಯೋಚಿಸುವವರೆ ಸುಖಿಗಳು
ಶರಣರು ಪರಬ್ರಹ್ಮವನು ತಿಳಿ
ವರು ಸದಾ ಗುರುರಾಮ ವಿಠಲನವರ ಕೈಬಿಡುನು ೫

೩೦೫

ಶಾಂತಿಯೇದಶರಥನೃಪನವನ
ಕಾಂತೆಯರುಮೂವರುಗುಣಂಗಳು
ಅಂತರಾತ್ಮನುರಾಮಸೇವಾಭಿದನು ಲಕ್ಷ್ಮಣನು
ಚಿಂತಿಸಲು ಕಾಲವೆಭರತ
ಶತ್ರಾಂತಕನು ಸುಜ್ಞಾನ ಭಕ್ತಿಯೇ
ಕಾಂತೆ ಜನಕಜೆಜೀವಹನುಮನು ಸುಪಥಸುಗ್ರೀವ ೧

ಸಾಧನಾತ್ಮಕಕೌಶಿಕನಮಖ
ಕಾದುಸಲಹಿದವಿಘ್ನವೇದು
ಮೇಧೆತಾಟಕಿದುಷ್ಟಸಂಗಸುಬಾಹುಮುಖಖಳರೂ
ಸಾಧರವೆವರಯಜ್ಞಗೌತಮ
ಭೂದಿವಿಜಸತಿಶಾಪಮೋಕ್ಷವೆ
ಶೋಧನಿಷ್ಕೃತಿತಾರ್ತಿಚಾಪವಧರ್ಮವೆನಿಸುವುದು ೨

ಪರುಶುರಾಮ ಸಮಾಗಮವುವಿ
ಸ್ತರಿಸಿನೋಡೆಸಮತ್ವವಿಪಿನಾಂ
ತರವೆಕರ್ಮಸುವೃತ್ತಿಮುನಿಗಳು ರಾವಣನತಂಗಿ
ಪರಿಕಿಸಲುದುರ್ವೃತ್ತಿಗಳುತತ್
ಪರಿಜನಖರಾದಿಗಳುಭ್ರಾಂತಿಯು
ನೆರೆಕನಕಮೃಗದಶವದನನಿಂದ್ರಿಯಗಳೆನಿಸುವನು ೩

ಅರುಣತನಯನುಧರ್ಮನೋಡೆ ಶ
ಬರಿಸುಯುಕ್ತಿಕಬಂಧವಕ್ರತೆ
ಸುರಪಸುತದುಷ್ಕರ್ಮಚಪಲವೆಕಪಿಸಮೂಹಗಳು
ಗುರುಪದೇಶವೆಮುದ್ರೆಯರುಣನ
ಹಿರಿಯಮಗನೆಸಹಾಯವಾಸೆಯೆ
ಶರಧಿಲಂಕೆಯೆದೇಹಲಂಕಿನಿಯೇದುರಭಿಮಾನ ೪

ಮಣಿಯೆಜ್ಞಾಪಕಸ್ವಸ್ಥಚಿತ್ತತೆ
ವನವಶೋಕವುತ್ರಿಜಟೆಕನಸೇ
ಘನವೆನಿಪಸಂಸ್ಕಾರದುಷ್ಕರ್ಮಾಖ್ಯವನಭಂಗಾ
ದನುಜಪತಿಸುತಮುಖರವಧೆಯೇ
ಮುನಿಮತವುದುರ್ವೃತ್ತಿಪರಿಹರ
ವನಜಸಂಭವನಸ್ತ್ರವೇಸನ್ಮಾರ್ಗವೆನಿಸುವುದು ೫

ಮಮತೆಲಂಕೆಯದಹಿಸಿಮತ್ತೆಹ
ನುಮನುಜ್ಞಾಪಕವಿತ್ತಪತಿಗನು
ಪಮಶರಧಿ ಬಂಧನವೆಯಾಸೆನಿರೋಧನಂತರವು
ಕ್ರಮದಿಧರ್ಮವಿಭೀಷಣನಸುರ
ದಮನವಿಂದ್ರಿಯಜಯವುಮಿಗೆ ಹೃ
ತ್ಕಮಲವೇಸಾಕೇತಪುರವು ಸಮಾಧಿಯಭಿಷೇಕಾ ೬

ಹೃದಯಕಮಲದಿಯಂತರಾತ್ಮನು
ಚದುರತನದಲಿರಾಜ್ಯವಾಳುತ
ವಧೆಯಗೈಸಿದಕಾಲಜ್ಞಾನದಿಲವಣ ಮುಖ್ಯರನು
ವಿಧವಿಧದಯಜ್ಞಗಳವಿರಚಿಸಿ
ಸದಮಲಾತ್ಮನುಸಕಲರಿಂದೈ
ದಿದಸಹಸ್ರಪಾದನು ಶ್ರೀಗುರುರಾಮವಿಠ್ಠಲನು ೭

೩೦೬

ಸಪ್ತಾನ್ನ ತಿಳಿವುದು ಸಾಧನವಯ್ಯ ಪ

ಆಪ್ತ ಹರಿಯು ಕೊಟ್ಟ ಬುದ್ಧಿಯಿಂದಲಿ ಜನರು ಅ.ಪ

ಮಕ್ಕಳು ಮೊದಲಾದವರ ಪೋಷಣೆ ಒಂದು
ಪಕ್ಕಿಗೆ ಮೇವನ್ನು ಕೊಡುವುದೊಂದು
ಅಕ್ಕರದಲಿ ಗೋಗೆ ತೃಣವ ನೀಡುವುದೊಂದು
ಲೆಕ್ಕವಿಲ್ಲದ ಫಲವು ಅತಿಥಿ ಪೂಜೆ ೧

ಮಾತಾಪಿತರ ಸೇವೆ ಐದನೇ ಅನ್ನವು
ತಾತ ಮೊದಲಾದ ಹಿರಿಯರಪೂಜೆ ಆರು
ತಾತಿಳಿದು ಉಂಬೋದು ಏಳನೆಯ ಅನ್ನವು
ಶ್ರೀತರುಣೀವರನ ಸೇವಕರೆ ಕೇಳಿ ೨

ಈ ಸಪ್ತಾನ್ನ ಬಗೆ ಲೇಸೆಂದು ತಿಳಿದರೆ
ಭೂಸುರ ಜನ್ಮವು ಸಾರ್ಥಕವು
ಶ್ರೀಸತಿಯರಸ ಶ್ರೀ ಗುರುರಾಮ ವಿಠಲ
ದಾಸತ್ವವಿತ್ತು ಎಂದೆಂದಿಗೂ ಪೊರೆವ ೩

೩೦೭

ಸಾರ್ಥಕಾಗುವುದು ರವಿಮಾರ್ಗ ಅ
ನರ್ಥ ಊಹಿಸುವುದು ಶಶಿಮಾರ್ಗ ಪ

ತೀರ್ಥಪಾದನಾಧೀನವಿದೆನ್ನದೆ
ಕರ್ತನಾವೆನುತ ಕೆಲರು ಕೆಡುತಿಹರು ಅ.ಪ

ದೇವರುಪೂಜೆಯ ಮಾಡುವರ ಸ–
ದ್ಭಾವ ಭಕುತಿಯಿಂದ ಪೂಜೆಪುದು
ನೋವಿದು ಪೂಜೆಗೆ ಕೂಲಿ ಎಂದು ದುರ್
ಭಾವದಿಂದ ದುಷ್ಟರು ತಾವ್ ಕೆಡುವರು ೧

ಕೂಲಿಯಪೇಕ್ಷಯು ದುರ್ಜನಕ್ಕೆ
ಮೇಲಾಸಕ್ತಿಯು ಸಜ್ಜನಕೆ ಶ್ರೀ–
ಲೋಲನುಭಯರೊಳಗೆ ನಿಂತು ತ–
ತ್ಕಾಲ ಪ್ರೇರಿಸಿ ಎರಡುಗತಿ ಕೊಡಿಸುವ ೨

ಬದಲಿಗೆ ಬದಲೇ ಶಶಿಮಾರ್ಗ ಸ-
ಮ್ಮುದ ನಿಷ್ಕಾಮವು ರವಿಮಾರ್ಗ
ಪದುಮೆಯರಸ ಗುರುರಾಮವಿಠಲ ದ್ವಿ
ವಿಧರಿಗೆ ಮುಕ್ತಿಯು ಸಂಸಾರ ಕೊಡುವ ೩

೩೦೮

ಸಾಹುಕಾರರು ನಾವು ಜಗದ ಹುಟ್ಟುಸಾವಿಗೆ ಭಯಪಡೆವು ಪ

ದೇಹಗಳ್ ವಸ್ತ್ರಗಳಂದದಿ ಬರುವುವು
ಸಾಹಸಿವಳಗಿರುವನೊಬ್ಬನವನಕಡೆಯ ಅ.ಪ

ಮೂಲಧನವು ಹರಿನಾಮ । ಅದಕೆ ಬೇಕಾದ
ಮೂಲ್ಯರತ್ನಗಳು ನೇಮ
ಕಾಲಕಾಲಕೆ ನಿತ್ಯಕರ್ಮಾಚರಣೆ ಬಂಡ-
ವಾಳವಾಗಲು ಸದ್ವ್ಯಾಪಾರ ಮಾಡುವಂಥ ೧

ಬಡ್ಡಿಯಧಿಕ ಬರುವುದು । ಇದಕೆ ದುರ್ಜನ
ರಡ್ಡಿಯು ಉಂಟಾಗದು
ಕಡ್ಡಿಯ ಕೊಟ್ಟು ಪೇಳುವೆವು ನಿಜದಲಿ
ಕೇಳಿ ಕಲುಷಾತ್ಮರಿಗೆ ಸಾಲಕೊಡುವುದಿಲ್ಲವು ೨

ದೊಡ್ಡಸಮಯಕೆ ಬೇಕಾದಷ್ಟು
ಬಡ್ಡಿಯು ಬರೆ ಸಮವಾಗಿಹುದಿದುವೆ ಗುಟ್ಟು
ಕಮಲಾವಲ್ಲಭ ಗುರುರಾಮವಿಠಲನಿಗೆ
ಕ್ರಮವಾಗಿ ಲೆಕ್ಕ ಒಪ್ಪಿಸಬೇಕು ವರುಷಕೊಮ್ಮೆ ೩

೩೦೯

ಸ್ಮಾರ್ತರ ನಿಂದನೆ ಮಾಡುವ ಕೆಟ್ಟ
ಧೂರ್ತನ ಬಾಯ ಮೇಲೆ ಹೊಡೀ ಹೊಡೀ ಪ

ಕರ್ತಾರ ಸ್ವರ ಸಮನೆನಿಸುವವರ ಪುರು–
ಷಾರ್ಥಯುತ ಶೃತಿ ಶಾಸ್ತ್ರ ಪ್ರವರ್ತರ ಅ.ಪ

ಅಹರಹ ಸಂಧ್ಯಾ ಮುಪಾಸೀತಾದಿ ಬಹು
ಪ್ರಮಾಣವನುಸರಿಸುವರ
ವಿಹಿತವಾಗಿ ತಮ್ಮಂತೆ ಸರ್ವರನು ವಿಶೇಷದಿಂದರ್ಚಿಸುವವರ
ಕುಹಕಿಗಳ ನಿರಾಕರಿಸಿ ಸದಾ ಬುಧ ಕೋಟಿಯಲಿ
ಪ್ರಕಾಶಿಸುವವರ
ಸಹಿಸಿ ಸಕಲವನು ಕರ್ಮ ಮಾರ್ಗದಲಿ
ಸಮ್ಯಜ್ಞಾನವಸಂಪಾದಿಸುವರ ೧

ವೇದಾಭ್ಯಾಸದಿ ಕಾಲವ ಕಳೆಯುತ ವಿಹಿತರಿವರೆನಿಸಿಕೊಳ್ಳುವರ
ಭೇದಾಭೇದಗಳರಿಯುತಲೀ ಬ್ರಹ್ಮವಾದದಲಿ ಸಂತೋಷಿಪರ
ಆದಿ ಪಿಡಿದು ಮಾರ್ಗವು ತಪ್ಪದೆ ಸರ್ವಾತ್ಮ
ಪ್ರೀತಿಯ ಮಾಡುವರ
ಪಾದ ಮೊದಲ ಶಿರಪರಿಯಂತವು ಲಕ್ಷ್ಮೀಧರನ
ಹೃದ್ಗುಹೆಯಲಿ ನೋಳ್ಪರ ೨

ಲೇಸಾಗಿ ನಿಗಮರಾಶಿಯನ್ನು ಬಲುಶ್ವಾಸವೆಂದು
ನಂಬಿರುವವರ
ಈಶವಿಷ್ಣು ವಿಧಿ ಮುಖ ನಾಮಗಳ
ಪರೇಶನಲ್ಲಿಸಮನ್ವಯಿಸುವರ
ದಾಸೋಹಂಯಂದಖಿಲಾಮರರಿಗೆ ತಗ್ಗಿ
ಭಕ್ತಿಯಲಿ ಪೂಜಿಪರಾ
ಭಾಸುರಾಂಗ ಗುರುರಾಮವಿಠಲನ ಕೃಪಾ
ಸಂಪಾದಿಸೆ ಪಾತ್ರರಾದವರ ೩

೩೧೦

ಹದಿನಾರು ಜಾತಿಯವರಣ್ಣಾ
ನಿಮಗೆ ಮದಮತ್ಸರಗಳೇಕೆ ಚೆಣ್ಣಾ ಪ

ಬುದ್ಧರು ಇದರರ್ಥವನು ತಿಳಿದು ನೋಡುವುದರೊಳಗೆ
ಬುದ್ಧಿಹೀನರ ವ್ಯಾಜ್ಯ ಮುಕ್ತಿ ಮಾರ್ಗಕೆ ಪೂಜ್ಯ ಅ.ಪ

ಆದರಿಸುವರೆ ತಾಯಿ ತಂದೆ । ನಾನು
ಮೋದವಡುವುದಕೆಲ್ಲಿ ಬಂದೆ
ಆದಿ ವಿಷ್ಣುವಿನ ಮಾಯಾದಿಗಳ ತಿಳಿಯದೆಲೆ
ಭೇದಗಳು ಮಾಡುವುದು ವಾದಗಳು ತರವಲ್ಲ ೧

ಜ್ಞಾನ ಕರ್ಮೇಂದ್ರಿಯಗಳು ಹತ್ತು । ಪಂಚ
ಪ್ರಾಣಗಳು ಸೇರಿಹುದು ಗೊತ್ತು
ಮಾನಸವು ಸೇರಿ ಹದಿನಾರಾಯ್ತು ಹದಿನೇಳು
ನಾನು ಹದಿನೆಂಟನೆಯ ನೀನು ಇದು ನಿಜವಾದ ಮಾತು ೨

ಶುದ್ಧಾನುಲೋಮ ಪ್ರತಿಲೋಮ ।ಯಂದು
ಬದ್ಧ ಜಾತಿಗಳಿಂಗೆ ನೇಮಾ
ಮಧ್ವವಲ್ಲಭನಾಜ್ಞೆ ಇದ್ದಂತೆ ಪೇಳಿದೆವು
ಪದ್ಮಾಕ್ಷ ಗುರುರಾಮ ವಿಠಲನಿದಕೆ ಸಾಕ್ಷಿ ೩

೩೧೧

ಹರಿಯು ಕರ್ತನೆಂದರಿತವನೇ ಮುಕ್ತ ಮಿಕ್ಕಮಾತೆಲ್ಲಾ ವ್ಯರ್ಥ ಪ

ಪರಿಪರಿ ವಿಧದಲಿ ಭಾವಿಸಿ ನೋಡಲು
ಸರಸಿಜಭವ ರುದ್ರಾದ್ಯರಿಗೆಲ್ಲ ಅ.ಪ

ಗುರುಪೂರ್ಣ ಪ್ರಜ್ಞಾಚಾರ್ಯರ ಉಕ್ತಿ । ಅನುಸರಿಸಿದವರಿಗೆ
ದೊರಕುವುದೆಂದಿಗೂ ಶಾಶ್ವತ ನಿಜಮುಕ್ತಿ
ಅರಿಯದ ವಾದಗಳೆಲ್ಲ ಕುಯುಕ್ತಿ
ಸರ್ವಜೀವರಲಿ ಹರಿಯೆ ವ್ಯಾಪ್ತಿ ೧

ತೇನವಿನಾ ತೃಣಮಪಿನಚಲತಿ ಎಂಬ ಶ್ರುತ್ಯರ್ಥವ ಗುರುಬೋ-
ಧಾನುಸಾರ ತಿಳಿಯಲು ತನ್ನಯ ಬಿಂಬಾ
ಮಾನಸ ಪೀಠದಿ ಹೊಳೆಯಲು ದರುಶನ-
ದಾನಂದ ಸುಖಾಮೃತ ತಾನುಂಬಾ ೨

ತ್ರಿವಿಧ ಚೇತನದಿ ಯೋಗ್ಯತೆ ಮೀರದಲಿ ।
ಗುಣಕರ್ಮಗಳನು ಒಂ-
ದೆವೆ ಮಾತ್ರವು ತಪ್ಪದೆ ನಡೆಸುತಲಿರುವ
ಪವನಾಂತರ್ಗತ ಗುರುರಾಮವಿಠಲ
ಜವನವರಿಗೆ ಒಪ್ಪಿಸನು ತನ್ನವರನು ೩

ಸಂಪ್ರದಾಯದ ಹಾಡುಗಳು

೩೧೨

ಅತ್ತಿಗೆ ಭೋಜನಮಾಡೆ ಸಾವಕಾಶದಿ ನೀನೂ
ಮತ್ತೆ ಮತ್ತೆ ಬೇಕಾದ್ದೆಲ್ಲ ತಂದು ಬಡಿಸುವೆನೂ ಪ

ನನ್ನಿಯಿಂದ ಈಗ ಕ್ಷೀರಾನ್ನ ದಧ್ಯೋದನ್ನ
ಇನ್ನು ಪರಮಾನ್ನಗಳು ಹೋಳಿಗೆ ಪಳಿದ್ಯ ಹುಳಿಕೂಟು
ಬಣ್ಣದ ಕಾಯಿಪಲ್ಯ ಕೊಸಂಬರಿ ಬಾಳಕ
ಉಪ್ಪಿನಕಾಯಿಗಳ ಪಚ್ಚಡಿ
ಚೆನ್ನಾಗಿ ಭೋಜನ ಮಾಡೆ ನಮ್ಮಣ್ಣನ ಸಹಿತದಿ ೧

ಲಾಡು ಚಿರೋಟಿ ಮಂಡಿಗೆಗಳು ಬೇಡವೆಂದು ಕಯ್ಯತೋರಿ
ಬೇಡಿ ಬೇಡಿ ಹಾಕಿಸಿಕೊಂಬಿ ಜೋಡು ಜೋಡಾಗಿ
ಗೂಡೆ ಗೂಡೆ ಹಪ್ಪಳ ಸಂಡಿಗೆ ಕೂಡೆ ಕೂಡೆ ಸುರಿಯುತ್ತಿದ್ದರೆ
ಹಾಡು ಹೇಳುವುದಕ್ಕೆ ಬಾಯಿ ಬಿಡುವುದಿಲ್ಲವೇನೇ? ೨

ಸೃಷ್ಟಿಯೊಳು ನಿನ್ನಂಥ ಹೆಣ್ಣು ಪುಟ್ಟಿಸಿದ ಬ್ರಹ್ಮದೇವ
ಪಟ್ಟದರಸಿ ನಮ್ಮಣ್ಣನ ಭಾಗ್ಯದೇವತೆಯೇ
ಸಿಟ್ಟುಮಾಡದೆ ಗುರುರಾಮವಿಠಲನ್ನಾ ಸ್ಮರಿಸಿಕೊಂಡು
ಹೊಟ್ಟೆ ತುಂಬಾ ಭರ್ತಿಹಾಕೆ ದಿಟ್ಟೆ ಬೇಗಿತ್ತಿ ೩

೩೧೩

ಅತ್ತಿಗೇ ನಿನ್ನ ಹಾಡಿಗೆ ನಾ ಪ್ರತ್ಯುತ್ತರ ಕೊಡುತಿಹೆನೆ ಪ

ಪಥ್ಯವಸ್ತುಗಳು ನಿಮಗೇತಕೆ ಉನ್ಮತ್ತಜನರು
ನೀವ್ ಕತ್ತೆ ಸಮಾನರು ಅ.ಪ

ಎಣ್ಣೆ ಸಾಸುವೆ ಅರದಿಟ್ಟಿಹ ಚಿತ್ರಾನ್ನದ ರಾಶಿಗಳು
ಹಣ್ಣಾಗದ ಕುಂಬಳಕಾಯ್ ಪಲ್ಯ ಹಲಸಿನ ಕಾಯ್ ಪಲ್ಯ
ಸಣ್ಣ ಗೆಣಸು ಗೆಡ್ಡೆಯ ಪಲ್ಯಗಳ ಸಾಸುವೆ ಹುಳಿ ಪಳಿದ್ಯಾ
ನುಣ್ಣಗಿರುವ ಎಮ್ಮೆಗಳಂದದಿ ನೀವೆ ತಿನ್ನಿ ನಾಳೆ
ಮಾಡಿಸಿ ಹಾಕುವೆನೂ ೧

ಸಾಮೆ ಅಕ್ಕಿಯಾ ಅನ್ನವು ಮುಸುಕಿನ
ಜೋಳದ ಆಂಬೊಡೆಯು
ಶಾಮೆದಂಟಿನಾ ಹುಳಿಸೊಪ್ಪೂ ನವಣಕ್ಕಿಯ ಪರಮಾನ್ನ
ನೇಮವಾದ ನೆಲಗಡಲೆ ಕಾಯೆಣ್ಣೆಯ ಕರಿಗಡುಬುಗಳೂ
ಕಾಮಿತವಿದ್ದರೆ ಅಜಕ್ಷೀರವು ಕುರೀ ಮೊಸರನು
ತರಿಸಿ ಹಾಕುವೆ ೨

ವೃಂತಾಕ ಫಲಾಂಡುಲು ಶತಮೂಲಿ ತುಂಬ
ಫಲವು ಮುಲ್ಲಂಗೀ
ಕಾಂತೆ ನಿನ್ನ ಭೋಜನಕೆಡೆ ಮಾಡಲು
ಕಡು ಹರುಷದಿ ಕೊಂಬೀ
ಇಂಥಾ ಶತವರಟಾದ ಬೀಗರ ನಾನೆಲ್ಲೂ ಕಾಣಲಿಲ್ಲಾ
ಸ್ವಾಂತದಲ್ಲಿ ಗುರುರಾಮವಿಠಲನ ಸ್ಮರಣೆ
ಮಾಡದವರಿಗೆ ಇವು ಬಲು ಪ್ರಿಯ್ಯಾ ೩

೩೧೪

ಆರತಿಯೆತ್ತುವೆ ಆತ್ಮೇಶ್ವರಗೆ ಪ

ಮಾರ ಕೋಟಿ ಲಾವಣ್ಯ ಮತ್ತಿಯ ಸ್ವಾಮಿಗೆ ಅ.ಪ

ಮನಕೊಡೆಯನೆನ್ನಿಸಿ ಮಮತೆಯ ವಿಸ್ತರಿಸಿ
ಅನುದಿನ ಬೇಡಿದಿಷ್ಟಾರ್ಥವನೀವಗೆ ೧

ಉಭಯ ಲೋಕದಲ್ಲಿಯು ಅಭಯವ ನೀಡುತ
ಶುಭದಾಯಕನಾಗಿ ಶೋಭಿಸುತಿರ್ಪಗೆ ೨

ಸ್ಮರನಾಟದಿ ಮನಕರಗಿಸುವವಗೆ
ಗುರುರಾಮವಿಠ್ಠಲ ಕರುಣಾನಿಧಿಗೇ ೩

೩೧೫

ಆರತಿಯನೆತ್ತುವೆ ಪ

ಸಾರಸನೇತ್ರಗೆ ಮುತ್ತಿನ ಅ.ಪ

ಬೇಡಿದಿಷ್ಟಾರ್ಥವನ್ನು
ನೀಡುತ್ತಯನ್ನನು
ಕೂಡಿ ಸುಖಪಡಿಸುವವಗೆ ೧

ಅನುದಿನದಲಿ ಎನ್ನ
ಮನ ಸಂತೋಷ ಪಡಿಸಿ
ಘನ ಬೋಧೆ ಪೇಳುವವಗೆ ೨

ಪಾಮರತ್ವವ ಬಿಡಿಸಿ
ಕ್ಷೇಮಾವಕೊಡುವ ಗುರು
ರಾಮ ವಿಠ್ಠಲನಿಗೆ ೩

೩೧೬

ಆರತಿಯೇತ್ತುವೆ ನಾಂ ಪ

ಸತತ ಮನ್ಮನೋರತದೊಡೆಯಗೆ ಅ.ಪ

ಯಾವಾಗಲು ನಾಮಾಡುತಿರುವ ಸಂ
ಸೇವೆಯಕೈಕೊಂಬ ಮಹಾತ್ಮಗೆ ೧

ಬೇಡಿದಭೀಷ್ಟವ ನೀಡುತ ಎನ್ನಯ
ಮೂಢತೆಯನು ಪರಿಹರಿಸುವವಗೆ
ಕ್ಷೇಮವೀವ ಗುರುರಾಮವಿಠ್ಠಲನ
ನಾಮವ ಜಪಿಸುತ ನಲಿಯುವ ಪತಿಗೆ ೨

೩೧೭

ಉಡಿಯ ತುಂಬಿದರು ಮೋದದಿ
ಮಡದಿಯರು ಜನಕನ ಸುಕುಮಾರಿಗೆ ಪ

ಸಡಗರದಲಿ ಹುರಿಗಡಲೆ ಕುಬುಸ ಕ-
ನ್ನಡಿ ಕದಳಿ ಖರ್ಜೂರ ದ್ರಾಕ್ಷಿಗಳನೂ-ಜನಕನ ಸುಕುಮಾರಿಗೆ ಅ.ಪ

ಸರಸಿಜಾಕ್ಷಿಯರು ಕೊಬ್ಬರಿ ಬಟ್ಟಲುಗಳು ಚಂದ-
ದರಸಿನ ಕುಂಕುಮ ಹಣಿಗೆಗಳನು-ಜನಕನ ಸುಕುಮಾರಿಗೆ ೧

ಮುತ್ತು ಮಾಣಿಕ ನವರತ್ನಗಳನು ಬಹು
ಕಿತ್ತಳೆ ದಾಡಿಮ ಮುಖ್ಯಫಲಗಳ-ಜನಕನ ಸುಕುಮಾರಿಗೆ ೨

ಪರಿಪರಿ ವಸ್ತುಗಳನು ಮಾನಿನಿಯರು
ಗುರುರಾಮವಿಠಲನರಿಸಿಯಾದ-ಜನಕನ ಸುಕುಮಾರಿಗೆ ೩

೩೧೮

ಉಪಾಯಗಾರತ್ತಿಗೆಯ ಮಹಾತ್ಮೆಯು
ಶಿಪಾಯಿಗಳೆಲ್ಲಾ ತಿಳಿದಿಹರು ಪ

ರುಪಾಯಿ ಬಂದರೆ ಸರಿ ಮುಂದಾಗುವ
ಅಪಾಯವು ಜನರೆ ಬಲ್ಲರು ಅ.ಪ

ಮನೆಗೊಬ್ಬರಿಗೂಟಕೆ ಹೇಳಿ । ಭೋ-
ಜನಕಾಲಕ್ಕೆ ಆಗದಂತೆ
ಜನ ಸಹಾಯ ನಮಗಿಲ್ಲವೆಂದು
ಉಪಚರಿಸುತ ಆಡುತಿಹಳು ಕಾಂತೆ ೧

ಎಚ್ಚರಿಸಿರುವಳು ಗಂಡಗೆ ಮೊದಲೆ
ಹೆಚ್ಚು ಖರ್ಚುಗಳು ನಮಗೇಕೆ
ನುಚ್ಚಕ್ಕಿ ಅನ್ನ ಗೊಡ್ಡುಸಾರೇಸಾಕು
ನೂರಾರು ಜನರು ಬರಲಿ ಜೋಕೆ ೨

ಅಳಿಯಗೆ ದೀಪಾವಳಿಗೆ ಕೊಡೋಣ
ಹಳೆಯ ಮಗುಟ ಪಾತ್ರೆಗಳಿಹುದು
ಕೆಲಸವಾದರೇಸಾಕು ಗುರುರಾಮ ವಿ
ಠಲನೆ ಬಲ್ಲ ಬಿಡಿ ಎಂತೆಂದು ೩

೩೧೯

ಉರುಟಾಣೆ ಮಾಡುವೆ ಅರಸ ನಿನಗೆ ನಾ ಪ

ಸ್ಮರಶತ ಸುಂದರ ಸರ್ವಲೋಕೇಶ್ವರ
ಚರಣಸೇವೆಕಳ ಕರುಣದಿ । ನೋಡು ದ–
ಶರಥಾತ್ಮಜ ಭಾಸುರ ಶುಭ ಚರಿತ ಅ.ಪ

ಶರಣರಿಗಭಯವ ನಿರತವು ಕೊಡುವ
ಕರಕಮಲವ ದಯಮಾಡು । ನಿನಗೆ ನಾ
ಅರಿಸಿನ ಪೂಸುವೆ ಸರಸಿಜನಯನ ೧

ಅಷ್ಟಮಿ ಚಂದ್ರಗೆ ಶ್ರೇಷ್ಠವ ಹೋಲುವ
ದಿಟ್ಟ ಲಲಾಟವ ಕೊಟ್ಟರೆ । ಕುಂಕುಮ
ವಿಟ್ಟು ತಿದ್ದುವೆನು ಸೃಷ್ಟಿಗೊಡೆಯನ ೨

ಪರಿಪರಿ ಪರಿಮಳದುರು ಚಂದನವನು
ಪರಮ ಪುರುಷ ನಿನ್ನ । ಶಿರಕೊರಳಿಗೆ ನಾ
ಧರಿಸಿ ಲೇಪಗೈಯ್ಯುವೆ ಪ್ರಾಣೇಶಾ ೩

ಮರುಗವು ಮಲ್ಲಿಗೆ ಸುರಗಿ ಸೇವಂತಿಗೆ
ಸರಗಳ ತವ ಶಿರಿ ಕಂಠಕೆ । ಹಾಕುವೆ
ಪರುಷೋತ್ತಮ ಭಾಸ್ಕರ ಕುಲತಿಲಕ ೪

ನಾ ಮಾಡಿದಪರಾಧವೆಲ್ಲವು ಕ್ಷಮಿಸುತ
ಹೇಮದ ತಟ್ಟೆಯ ತಾಂಬೂಲವ । ಗುರು–
ರಾಮವಿಠಲ ತವಕದಿ ಸ್ವೀಕರಿಸೈ ೫

೩೨೦

ಎಷ್ಟು ಹೊತ್ತು ಮಲಗಿರುವೆ ಏಳತ್ತಿಗೆ
ಅಸಿಸ್ಟೆಂಟ್ ಅಮಲ್ದಾರ್ರು ಹೇಳಿಕಳುಹಿಸಿದ್ದಾರೆ ಪ

ಬಿಸಿ ನೀರು ನಿನಗಾಗಿ ಹಸನಾದ ಪನ್ನೀರ–
ರಿಸಿನ ಕುಂಕುಮ ಕಳಶ ಕನ್ನಡಿಗಳಾ
ಶಶಿಮುಖಿಯರೆಲ್ಲರು ತಂದು ಕಾದಿಹೆವಿಲ್ಲಿ
ಕುಸುಮಾಸ್ತ್ರ ನಾಟದಲಿ ನಿಶಿ ನಿದ್ರೆ ಇಲ್ಲವೇನೋ ೧

ಒಬ್ಬ ಒಡವೆಗಳು ಮತ್ತೊಬ್ಬ ಸೀರೆಗಳು । ಇ
ನ್ನೊಬ್ಬ ಪರಿಮಳ ದ್ರವ್ಯ ತಂದು ಕೊಡುವಾ
ಹಬ್ಬ ಪ್ರತಿದಿನ ರಾತ್ರಿಯಾಗುತ್ತಲೆ ನಿನಗೆ ನಮ್ಮ
ಸುಬ್ಬ ಪೋಲೀಸನವರಿಂದ ಬಿಡಿಸಲಿಲ್ಲವೆ ೨

ನಿನ್ನ ಚರಿತೆಯ ಪೊಗಳೆ ಪನ್ನಗೇಶ್ವರಗಳವೆ
ಹೊನ್ನು ಹಣಗಳಿಗೇನು ಕಡಿಮೆಯಿಲ್ಲ
ಚನ್ನ ಕೇಶವರಂಗ ಗುರುರಾಮ ವಿಠಲನ
ಇನ್ನಾದರು ಸ್ಮರಿಸಿ ಕಣ್ದೆರೆದು ನೋಡೆ ೩

೩೨೧

ಏನೆಲೆ ಸಖಿ ವಾನರ ಮುಖಿ
ನೀನು ಒಳ ಒಳಗೆ ಮಾಡಿದ ಯೋಚನೆ ಪ

ಬಿಳಿಯ ಚಿನ್ನದೊಡವೆ
ಹಳೆಯ ಜೌಳಿಗಳು
ಘಳಿಲನೆ ತಂದಿಟ್ಟು ಘನವ ಪೇಳಿಕೊಂಬೆ ೧

ಭಕ್ಷ್ಯ ಭೋಜ್ಯ ನಿನ್ನ
ಕುಕ್ಷಿ ತುಂಬಿದಾರು
ಲಕ್ಷ್ಯವಿಲ್ಲದೆ ನಮ್ಮ-
ನಾಕ್ಷೇಪಿಸುತ್ತಿರುವೆ ೨

ಹಪ್ಪಳಾವು ಹತ್ತು
ಹೋಳಿಗೆ ಇಪ್ಪತ್ತು
ತಪ್ಲೇಲಿ ತಿಳಿ ತುಪ್ಪ
ತಪ್ಪದೆ ಮಾಯವಾಯ್ತು ೩

ಬಡವರಮ್ಮ ನಾವು
ಬಡಿವಾರವೆಮಗಿಲ್ಲ
ನಡುಬೀದಿಗೆ ಕಾಲ-
ಚಾಚದಿರತ್ತಿಗೆ ೪

ಜಲಜಾಕ್ಷ ಗುರುರಾಮ । ವಿ-
ಠಲನಾ ಸ್ಮರಿಸುತ್ತಾ
ಕಲಹಕಾರಿ ನೀನು
ಎಲೆಯ ನೋಡಿವುಣ್ಣೆ ೫

३.೨೨

ಚಂಡನಾಡಿದನು ಶ್ರೀರಘುವರ ಪ

ಚಂಡನಾಡಿದನು ಮಾರ್ತಾಂಡ ವಂಶೋದ್ಭವ
ಪುಂಡರೀಕಾಕ್ಷನು ಭೂಮಿ ಸುತೆಯ ಸಹಿತ ಅ.ಪ

ಸರಸಿಜ ದಳದಂತೆ ಮೆರೆಯುವ ಹಸ್ತದಿ
ಪರಿಪರಿ ಪುಷ್ಪಗಳ ಪಿಡಿದು ಸಂಭ್ರಮದಿಂದ ೧

ಸರಸದಿ ಸೀತೆಯ ಸಿರಿಮೊಗ ನೋಡುತ
ವರರತ್ನ ಮುಕ್ತ ಭಾಸುರ ಪುಷ್ಪಮಯವಾದ ೨

ಕಾಮ ಕೋಟಿ ಲಾವಣ್ಯ ಕಾಂತೆಯೊಡನೆ ಬಲು
ಪ್ರೇಮದಿಂದಲಿ ಗುರುರಾಮವಿಠಲ ತಾನು ೩

३.೨३

ಮಾಲೆ ಹಾಕುವೆ ಲೋಲ ಪುರುಷಗೆ ಪ

ಮಲ್ಲ ಮಲ್ಲಿಗೆ ಜಾಜಿ ಸಂಪಗೆಯ ಅ.ಪ

ವ್ಯಾಸಕೋಟ್ ಬನಿಯನ್ ಷರಟು ಜುಬ್ಬಾ
ವೇಷರಾಯಿ ಬೂಡ್ಸನು ಧರಿಸುವಗೆ ೧

ಇಂಗ್ಲೀಷು ಬುಕ್ಕನು ಕೈಲಿ ಹಿಡಿದು
ಬಂಗ್ಲೆಯಲಿ ಓದುತ ಕುಳಿತಿರುವಗೆ ೨

ಬೈಸ್ಕಲ್ ಮೇಲೆ ಸವಾರಿ ಮಾಡುತ್ತ
ಸೈ ಶಹಭಾಸೆನ್ನಿಸಿಕೊಳ್ಳುವವಗೆ ೩

ಸಂಧ್ಯಾವಂದನೆಗೆ ವಿರಾಮವಿಲ್ಲದೆ
ಮಂದಿಯೊಡನೆ ಮಾತಾಡುತ ನಗುವಗೆ ೪

ದ್ವಾಸೆ ಬ್ರೆಡ್ಡುಪ್ಪಿಟ್ಟನು ಭಕ್ಷಿಸಿ
ತಾಸುರ್‌ಸುರಯೆಂದು ಕಾಫಿಯಕುಡಿವಗೆ ೫

ದೊಡ್ಡ ದೊಡ್ಡ ಪ್ಯಾಸುಗಳನು ಮಾಡಿ
ಗುಡ್‌ಮ್ಯಾನ್ ದಿಸ್‌ಮ್ಯಾನ್‌ಯೆನ್ನಿಸಿಕೊಳ್ಳುವಗೆ ೬

ಗುರುರಾಮವಿಠಲನು ತೋರಿದನಿವರನು
ಹಿರಿಯರ ಪುಣ್ಯವು ಎಷ್ಟೆಂದು ಹೇಳಲಿ ೭

೩೨೪

ಲಾಲಿ ಗೌರೀಪ್ರಿಯನೆ ಲಾಲಿ ನಾಲ್ಮೊಗನೆ
ಲಾಲಿ ಲಕ್ಷ್ಮೀರಮಣ ಲಾಲಿ ಪರಿಪೂರ್ಣ ಪ

ತ್ರಿಪುರ ಸಂಹಾರ ದೀನ ಜನ ಮಂದಾರ
ಕಪಟದಾನವಶಿಕ್ಷ ಕರುಣಾ ಕಟಾಕ್ಷ
ತಪನಾಗ್ನಿ ಶಿಖಿನೇತ್ರ ಧನನಾಥ ಮಿತ್ರ
ಸುಪವಿತ್ರ ಚಾರಿತ್ರ ಸುಜನನುತಿ ಪಾತ್ರ ೧

ವನಜ ಸಂಭವ ಸೃಷ್ಟಿ ಕರ್ತವಾಣೀಶ
ಕನಕ ಗರ್ಭಾಪ್ರತಿಮ ಮಹಿಮ ಜೀವೇಶ
ಘನ ಮಹಾದ್ವಪು ಹಂಸ ಗಮನ ಸುವಿಲಾಸ
ಸನಕಾದಿ ಮುನಿವಿನುತ ಸರ್ವಲೋಕೇಶ ೨

ಪಕ್ಷಿವಾಹನ ಜಗದ್ರಕ್ಷ ಸಿರಿವರನೆ
ಅಕ್ಷಯ ಪ್ರದ ಸುಮೋಕ್ಷದಾಯಕನೆ
ಕುಕ್ಷಿಯೊಳಗನೇಕಜಾಂಡಗಳ ಧರಿಸಿದನೆ
ಸಾಕ್ಷಿಯಾಗಿಹ ಗುರುರಾಮ ವಿಠ್ಠಲನೆ ೩

೩೨೫

ಶರಣಾಗತರಾದವರನು
ಕರುಣಿಸಿಯಭಯವನು ಕೊಟ್ಟು ಕಾಯುವೆನಿರತಂ
ಕರಕಮಲವದಯಮಾಡ್ಯೆ
ಅರಿಸಿನ ಹಚ್ಚುವೆನು ಮುದದಿ ಅರಸ ನಿನಗೆ ನಾಂ ೧

ಪಂಕಜರಿಪು ನಿಭವಕ್ತ್ರನೆ
ಪಂಕಜಲೋಚನೆ ಭಕ್ತ ಪಂಕಜ ಸೂರ್ಯನೆ
ವೆಂಕಟರಮಣ ಪರಾತ್ಪರ
ಕುಂಕುಮ ಹಚ್ಚುವೆ ನಿನಗೆ ಕೊಡು ನಡು ಪಣೆಯಂ ೨

ಮಂದರಗಿರಿಧರಿಸಿದೆ ಸುರ
ಬೃಂದಕೆ ಸುಧೆಯೆರೆದೆ ಲೋಕಸುಂದರನೆ ಭವ
ತ್ಕಂಧರವ ನೀಡು ಪರಿಮಳ
ಗಂಧವ ಹಚ್ಚುವೆನು ನಾನು ಕಮಲದಳಾಕ್ಷ ೩

ನಿರತವು ಮನ್ಮಾನಸ ಪಂ
ಕರುಹದಿ ಸೇವಿಸುವೆ ನಿನ್ನ ಕರುಣಾನಿಧಿಯೆ
ಪರಿಪರಿದಿವ್ಯಸುಪುಷ್ಪದ
ಸರವನು ಕಂಧರದಿ ಧರಿಸುವೆ ಜಗನ್ನಾಥಾ ೪

ನಾಮಾಡಿದ ತಪ್ಪುಗಳಂ
ನೀ ಮನದಲಿ ತರದೆ ಕ್ಷಮಿಸುವದು ಪ್ರಾಣೇಶಾ
ಪ್ರೇಮದಿ ವೀಳ್ಯವ ಶ್ರೀಗುರು
ರಾಮವಿಠಲ ಕೊಡುವೆ ನಿನಗೆ ರಮ್ಯಚರಿತ್ರ ೫

೩೨೬

ಶೋಭಾನೆ ಶೋಭಾನೆ ಶೋಭಾನೆ ಪ

ಶ್ರೀಗಣಾಧಿಪತಿಯ ಸಂಸೇವಿಸಿ ಶಂಕರನ ಭಜಿಸಿ
ವಾಗಾಭಿಮಾನಿಯೆನಿಪ ಸರಸ್ವತಿ ದೇವಿಗೆ ವಂದಿಸಿ
ರಾಗರಹಿತವಾದ ಹನುಮಂತನ ಕೊಂಡಾಡಿ
ಕಮಲಜನ ಪ್ರಾರ್ಥಿಸುವೆ
ಸಾಗರಸುತೆಯರಮಣ ನಿಂತು ಪೇಳಿಸಿದ ಪರಿಯೊ
ಳೀಗ ಗಂಡುಮಕ್ಕಳಾಶೀರ್ವಾದ ಪದವ ಪೇಳ್ವೆ
ಯೋಗಿ ಜನರಿಗೆ ತಲೆಬಾಗಿ ನಮಿಸುವೆ
ಸುಜನರೆಲ್ಲಾಲಿಪುದು ಶೋಭಾನೆ ೧

ಬಾಲನಾಗಿ ಪ್ರಹ್ಲಾದನವೋಲ್ ಬಹುಕ್ರೀಡೆಗಳಾಡುತಲಿ
ಮೇಲೆ ಪಂಚಾಬ್ದದಿ ಸದ್ ವಿದ್ಯಾಭ್ಯಾಸಗಳನೆ ಮಾಡಿ
ಏಳುವರುಷಕ್ಕೆ ಉಪವೀತನಾಗಿ ವೇದ ಪುರಾಣ
ಶಾಸ್ತ್ರಾರ್ಥವೇತ್ತನಾಗುತಲಿ
ಶೀಲಾದಿ ಸದ್ಗುಣಗಳುಳ್ಳ ಬಾಲೆಯಳ ಮದುವೆಯಾಗಿ
ಕಾಲ ಕಾಲದಲ್ಲಿ ದೇವಋಷಿ ಪಿತೃಗಣಗಳ ಪೂಜೆ
ಆಲಸ್ಯವಿಲ್ಲದೆ ಮಾಡಿ ಶ್ರೀ ಲೋಲ ಭಕ್ತರೊಳು
ಅಗ್ಗಳ ನೀನಾಗು ೨

ಕೆರೆಗಳ ಕಟ್ಟಿಸು ಸರೋವರಗಳನ್ನ ಮಾಡಿಸು ನಿ-
ರ್ಜರರಿಗೆ ಸಂತೋಷವಾಗಿ ನಿಖಿಳ ಯಜ್ಞಗಳಾಚರಿಸು
ಧರಣಿ ಗೋ ಸ್ವರ್ಣ ಕನ್ಯಾದಿದಾನ
ಸತ್ಪಾತ್ರಕ್ಕೆಯಿತ್ತುದಾತನೆಂದೆನಿಸು
ನಿರತ ಬಂದವರಿಗನ್ನ ನೀಡುತ್ತ ಪ್ರಸನ್ನ ಮನದಿ
ಮರಗಳ ಹಾಕಿಸು ಸಪ್ತಸಂತಾನಗಳನ್ನೆಗಳಿಸು
ವರಮಾತಾಪಿತೃಗಳ ಪಾದಕೆ ವಂದಿಸುತ್ತಾ
ಮಾನ್ಯರೊಳು ವರ್ತಿಸಿಸುಖಿಸು ೩

ಧರ್ಮಯುಕ್ತನಾಗುತ್ತ ಅಧರ್ಮಗಳ ಬಿಡುತ ಸ–
ತ್ಕರ್ಮಗಳಾಚರಿಸು ಫಲವ ಕಂಜಾಕ್ಷಗರ್ಪಿತಮಾಡು
ನಿರ್ಮಲ ಸದ್ಭಕ್ತಿ ಜ್ಞಾನ ವೈರಾಗ್ಯ ಶಾಲಿ
ನೀನಾಗಿ ನಿತ್ಯ ಸಂತಸದಿ
ಮರ್ಮಜ್ಞರೆನಿಪ ಗುರುಹಿರಿಯರ ಸೇವಿಸುತ ಸ
ದ್ಧರ್ಮ ಪತ್ನಿಯಲಿ ನೀ ಸತ್ಪುತ್ರರ ಪಡೆದು ಭಗವ
ನ್ನಿರ್ಮಿತ ಸಮಸ್ತವೆಂದು ಸರ್ವ ಸಮರ್ಪಣೆ
ಮಾಡಿ ನಿತ್ಯಸುಖಿಯಾಗು ೪

ಧೀರ್ಘಾಯುವಾಗಿರು ಬಂಧು ವರ್ಗವ ಪರಿಪೋಷಿಸು
ಭರ್ಗಾದಿ ದೇವತೆಗಳ ಭಕ್ತಿಯಿಂದಾ ಪೂಜಿಸಿತ್ರಿ–
ವರ್ಗಸೌಖ್ಯಗಳ ಪಡೆದವರ್ಗಳ ಭುಜವಿಕ್ರಮದಿ
ಅರ್ಥಿಯ ಪೊಂದು
ಸ್ವರ್ಗಸ್ಥಿತಿ ಲಯಕರ್ತ ಗುರುರಾಮವಿಠಲ
ನರ್ಘ್ಯ ಸಂಪದಗಳಿತ್ತು ಆದರಿಸಿ ತನ್ನ ಭಕ್ತಾ
ವರ್ಗ ಸಂಗದೊಳು ನಿತ್ಯ ಶ್ರವಣ ಮನನಾದಿ
ಸತ್ಸಾಧನವ ಮಾಡಿಸುವಾ ಶೋಭಾನೆ ೫

೩೨೭

ಶ್ರೀ ಗಣಪತಿ ಗಿರಿಜೆ ಪುರಾಂತಕ
ವಾಗಭಿಮಾನಿ ಸರೋಜಜರಿಗೆ
ಬಾಗಿನಮಿಸುವೆ ಲಕ್ಷುಮಿಗೆ ನಾರಾಯಣಗನು–
ರಾಗದಲಿ ವಂದಿಸಿ ಪೇಳುವೆನು ೧

ನವರತ್ನಖಚಿತ ಮಂಟಪದಲಿ
ನವನವ ಚಿತ್ರಗಳನು ಬರೆಯಿಸಿ
ಭವನರಸಿ ಮುಖ್ಯಾ ಮುತ್ತೈದೆಯರು ಹರುಷದಿ ಲಕ್ಷ್ಮೀ
ಧವನಡಿಗಳ ಬೇಡಿ ಪ್ರಾರ್ಥಿಸುವರು ೨

ಮುತ್ತು ಮಾಣಿದ ಹಸೆಗಳ ಹಾಕಿಸಿ
ಪಚ್ಚೆಯ ಮಣಿಗಳ ತಂದಿರಿಸಿ
ಮಿತ್ರೇ ಮಹಲಕ್ಷ್ಮಿಯ ರಮಣಗೆ ಅಕ್ಷತೆಯನು ತಳಿದು
ವತ್ತೀದಾರೆಣ್ಣೆ ವಧೂವರರಿಗೆ ೩

ಕುಂಕುಮ ಕಸ್ತೂರಿ ತಿಲಕವ
ಅಂಕಿತವಾಗಳವಡಿಸಿ ಪಣೆಗೆ
ಪಂಕಜಾನನೆಯರು ವೀಳ್ಯವನು ಕರದಲಿಕೊಟ್ಟು
ವೆಂಕಟಾಗೆಣ್ಣೆ ವತ್ತೀದಾರು ೪

ಮಲ್ಲಿಗೆ ಸಂಪಿಗೆ ತೈಲವ
ನಲ್ಲೆಯರೊತ್ತಲು ನಸುನಗುತಲಿ
ಚಲ್ವಾಗುರುರಾಮವಿಠಲಗೆ ಹರಸಿದರು ಸುರ
ರೆಲ್ಲ ಪೂಮಳೆಯ ಕರೆದಾರು ೫

೩೨೮

ಹರಿಗೆ ಜಯಸಿರಿಗೆ ಕಮಲಜ ಪವನರಿಗೆ
ಸರಸ್ವತಿಗೆ ಭಾರತಿಗೆ ಮಂಗಳವು ಹರಿಗೆ ಪ

ಗರುಡ ಶೇಷರುದ್ರರಿಗೆ ಹರಿ ಮಡದಿಯರಿಗೆ
ವಾರುಣಿ ಸಾಪರಣಿ ಉಮೆಯರಿಗೆ ಅ.ಪ

ಸ್ಮರ ಪುರಾದ್ಯಮರ ಸಮೂಹಕೆ
ಸುರಋಷಿಚಿರಪಿತ ರಾಜರಿಗೆ ೧

ನೆರೆಕರ್ಮಜ ಗಂಧರ್ವ ಕ್ಷಿತಿಪರಿಗೆ
ನರಶ್ರೇಷ್ಠ ವಿಪ್ರಾದಿ ಸುಜನರಿಗೆ ೨

ಅಸ್ಮದ್ಗುರು ಮುಖ ಸಕಲರೊಳಗಿರುವ
ವಿಶ್ವವ್ಯಾಪಕ ಗುರುರಾಮವಿಠಲಗೆ ೩

೩೨೯

ಹಸೆಗೆ ಬಾರೊ ಹರುಷಬೀರೊ ಬಿಸಜನಾಭನೇ ಪ

ಶಶಿಯ ಸೋದರಿ ಸಹಿತವಾಗಿ ಶಾಮಲಾಂಗನೇ ಅ.ಪ

ರತ್ನಖಚಿತ ಪೀಠವಿರಿಸಿ ರಮಣಿ ಮಣಿಯರೂ
ಕುತ್ನಿ ಪಟ್ಟಾವಳಿಯ ಹಾಸಿ ಕೋರಿ ಪ್ರಾರ್ಥಿಪರೂ ೧

ಭೇರಿ ಮೃದಂಗ ನಾಗಸ್ವರ ನಗಾರಿ ಕಹಳೆಗಳ್
ಧಾರುಣಿ ಸುರವೇದ ಘೋಷ ವಿಸ್ತಾರವಾಗಿರಲ್ ೨

ಹಳದಿ ಕುಂಕುಮಾಕ್ಷತೆ ಗಂಧ ಕಳಶ ಕನ್ನಡಿ
ಹೊಳೆಯೆ ತಟ್ಟಿಯೋಳ್ ಸುತ್ತ ಜ್ಯೋತಿ ಬೆಳಗುವುದು ೩

ವಿಧಿ ಶಂಕರರ‍್ಕೊಡಲು ಕರವನೊದಗಿ ಪಾರ್ಶ್ವದಿ
ಮುದದಿ ನಸು ನಗುತ ಬಲದ ಪದವು ಮುಂದಾಗಿ ೪

ಶರಣ ಜನರಭೀಷ್ಟಗಳನು ಸಲಿಸುವಾತನೇ
ಗುರುರಾಮವಿಠಲ ಸರ್ವೇಶ ಪುರುಷೋತ್ತಮನೆ ೫

೩೩೦

ಹಸೆಗೇಳೈ ಶ್ರೀನಿವಾಸ ಮೂರ್ತಿ ನೀ
ಬಿಸಜಾಲಯೆ ಸಹಿತ ಪ

ಎಸೆವ ಪೀಠಕೆ ನಸುನಗುತೀಗಲು
ಕುಸುಮಾಸ್ತ್ರನ ತಾತ ಅ.ಪ

ಬ್ರಹಾದಿ ಸುರರ್ ಪ್ರಾರ್ಥನೆ ಗೈವರ್
ನಿಮ್ಮಡಿಗಳ ಬೇಡಿ

ಧರ್ಮಾನುಜ ಸಾರಥಿ ಮನವಲಿದು
ತ್ವರಿತದಿ ದಯಮಾಡಿ ೧

ಓಲೆ ಬರೆದು ತಾ ಒಲಿಸಿಕೊಂಡ
ಳಾಲೋಲ ನಯನೆ ನಿನ್ನಾ
ಫಾಲಾಕ್ಷನ ಸಖ ಪುರುಷೋತ್ತಮ ಜಗ
ತ್ಪಾಲನ ಸಂಪನ್ನ ೨

ಸಾಮಜ ರಾಜ ವರದ ಸುರ
ಪಾನುಜ ಸರ್ವಾಂತರ್ಯಾಮಿ
ರಮಣೀಯ ಮಹಿಮಾರ್ಣವ ಶ್ರೀಗುರು
ರಾಮವಿಠಲ ಸ್ವಾಮಿ ೩

೩೩೧

ಹೆಣ್ಣೆನವರ ಹೆಮ್ಮೆ ನೋಡಿರೀ ಜನರೆ ನೀವು ಪ

ಹೆಣ್ಣೆನವರ ನೋಡಿ ಇವರ ಬಣ್ಣ ಗೊತ್ತಾಯ್ತು ನಮಗೆ
ಕಣ್ಣು ಸನ್ನೆ ಮಾಡಿ ಮಾಡಿ ಕಾರ್ಯವನ್ನು ತೂಗಿಸುವರು ಅ.ಪ

ಪಾವು ಬೇಳೆ ಹಪ್ಪಳ ಅರ
ಪಾವು ರವೆಯು ಶಾವಿಗೆ ಮಾಡಿ
ಭಾವದಲ್ಲಿ ಹಿಗ್ಗಿಗ್ಗಿ
ತಾವು ಪ್ರಸ್ತಮಾಡುತಿಹರು ೧

ಭಕ್ಷ್ಯ ಭೋಜ್ಯವೆಂಬುದದು
ಲಕ್ಷ್ಯವಿಲ್ಲ ಮಾತಿನಲ್ಲಿ
ಕುಕ್ಷಿತುಂಬ ಭೋಜನವಿಲ್ಲ
ದಕ್ಷಿಣೆಯು ದ್ವಿಜರಿಗೆ ಕಾಣೆ ೨

ವರಗೆ ಕೊಟ್ಟ ವಸ್ತ್ರ ಪಾತ್ರೆ
ವರ್ಣಿಸಲೊಂದು ಬಾಯಿ ಸಾಲದು
ನೆರೆಹೊರೆಯವರೆಲ್ಲಾ ತಿಳಿಯೆ
ಗುರುರಾಮ ವಿಠಲನೆ ಬಲ್ಲ ೩

ವಿಶೇಷ ಸಂದರ್ಭಗಳ ಹಾಡುಗಳು

೩೩೨

ಆಡುವ ಬನ್ನಿರಿ ಬಾಲಕರೆ ಪ

ರೂಢಿಗಚ್ಚರಿಯಾಗಿ ಬಲುಲೀಲೆಗಳಿಂ ಅ.ಪ

ಜನನ ಮರಣವೆಂಬ ಚೆಂಡು ಬುಗುರಿಯಿಂ
ಮನದ ವೃತ್ತಿಗಳೆಂಬ ಗೋಲಿಗಜ್ಜುಗದಿಂ
ಜನಸಂಘವೆಂಬುವ ಚಿಳ್ಳೆಕೋಲುಗಳಿಂ
ಅನುದಿನ ಭ್ರಾಂತಿಯೆಂಬ ಕವಣೆ ಕಲ್ಲುಗಳಿಂ ೧

ಏಳುತಲೀ ಮುಖ ತೊಳೆದು ನೀವೆಲ್ಲ
ಮೇಲಿನ ಪೂರ್ವ ಕರ್ಮ ಭಕ್ಷಗಳೆಲ್ಲ
ಲೀಲೆಯಿಂ ಮೆಲ್ಲುತಲಿದರೊಳು ಬಲ್ಲ
ಶೀಲ ಸದ್ಗುಣವುಳ್ಳ ಬಾಲಕರೆಲ್ಲ ೨

ಶ್ರವಣ ಮನನವೆಂಬ ಸಾಧನೆಯಿಂದ
ನವವಿಧ ಭಕ್ತಿಯೆಂಬ ಶೃಂಗಾರದಿಂದ
ಸುವಿಮಲ ಮತಿಗಳಿಗೆಲ್ಲ ಆನಂದ
ಭವಹರ ಗುರುರಾಮ ವಿಠಲ ಮುಕುಂದ ೩

೩೩೩

ಒಬ್ಬನೆ ದಾಸ ಹುಟ್ಟಿದವನಿವ । ನೊಬ್ಬನೆದಾಸ ಪ

ಸುಬ್ರಹ್ಮಣ್ಯನರಸನೆಂಬಭಿದಾನವಿವನಿಗೆ
ಸೂರಿ ತಾಯಿತಂದೆಗಳಿಂದಾಯಿತು ಅ.ಪ

ನಾಲ್ಕು ವರ್ಷದವರೆವಿಗೂ ಮಾತಾಪಿತರು
ಪಾಲನೆಗೈದರು ಬಳಿಕ
ಕಾಲಾಧೀನವನ್ನೈದಿದರವರಾ
ಮೇಲೆ ನಡೆದ ಕಥೆಯನು ಬಿನ್ನೈಸುವೆ ೧

ದ್ವಾದಶ ವರುಷ ಪರಿಯಂತವು
ಮಾತುಳನ ಗೃಹದಿ ಬೆಳೆದು
ಪಾದವೂರದೆ ದೇಶವ ತಿರುಗುತ-
ಲಾದುದು ಇಪ್ಪತ್ತುನಾಲ್ಕು ವರುಷವು ೨

ಶ್ರೀರಮಣ ಗುರುದ್ವಾರದಲಿ ಇಪ್ಪತ್ತು
ಮೂರನೆಯ ವರುಷದಲಿ
ಸಾರವ ತಿಳುಹಿಸಿ ಅನುಗ್ರಹಿಸಿದನ-
ಪಾರ ಸುಗುಣನಿಧಿ ಕೈಪಿಡಿದೆನ್ನನು ೩

ಹರಿನಾಮಬಲದಿಂದಲಿಪ್ಪತ್ತೈದು
ವರುಷದ ಮೊದಲು ಸುಕೃತದಿಂ
ಹರಿಸೇವೆಗಳಿಂ ನೆರೆದ್ರವ್ಯಗಳಿಸಿ
ನಲವತ್ತು ವರುಷವಾಯಿತು ೪

ನಲವತ್ತೊಂದನೆ ವರ್ಷಮೊ-
ದಲು ಬಲು ಜನಗಳ ಬೇಡಿ

ಸಲಹುತುದರವನು ಅರಿತು ಅರಿಯದೆ
ಕಳೆದಿತು ಐವತ್ತಾರು ವರ್ಷಗಳು ೫

ಮಧ್ವರಾಯರೆ ನಮ್ಮ ತಂದೆಯು
ಮಧ್ವರಾಯರೆ ನಮಗೆ ಗುರು
ಮಧ್ವರಾಯರೆ ಉದ್ಧಾರಕರ್ತರು
ಪದ್ಮನಾಭಗತಿ ಪ್ರೀತ್ಯಾಸ್ಪದರು ೬

ಬೆಂಡಾಗಿರುವುದು ಶರೀರ-
ಧರ್ಮವು ಬೇರೊಬ್ಬರ ಕಾಣೆ
ಉಂಡುಟ್ಟು ತೆಗೆಯುವ ವಿಷಯದಿ
ಊರಿನವರ ದೂರುವುದಿನ್ಯಾಕೆ ೭

ಹರಿನಾಮದ ಬಲದಿಂದ ಗಳಿಸಿದುದು
ಹರಿಗೆ ಪ್ರೀತಿಯಾಯಿತು
ಪರರು ವ್ಯರ್ಥವಾಗಸೂಯೆ ಪಟ್ಟರೆ
ದುರಿತವ ಪ್ರಯೋಜನವು ಸತ್ಯವಿದು ೮

ಯಾತಕಿನ್ನು ಇಹಪರ ಚಿಂತನೆಗಳು
ಏನು ಕೋರುವುದು ಸಾಕು
ಸೀತಾಪತಿ ಗುರುರಾಮವಿಠ-
ಲನ ಸೀಮೆ ಈಗಲು ಮುಂದಕು ಇರಬೇಕು ೯

೩೩೪

ಪರಮಾನುಗ್ರಹ ಮಾಡು -ಈ
ತರಳನ ದಯದಿಂ ನೋಡು ಪ

ಜ್ವರದ ಪೀಡೆಯಿಂ ಮಂಕಾಗಿರುವನು
ನರಹರಿ ನೀನಲ್ಲವೆ ಕರುಣಾಳು ಅ.ಪ

ಅನ್ನ ಸೇರಲಿಲ್ಲವಂತೆ –ಮಲಗಿ
ನಿನ್ನಿಂದಲಿ ಹೀಗಿಹನಂತೆ
ಘನ್ನಮಹಿಮ ನಿನ್ನವರಿಗೆಲ್ಲ –ಈ
ಬನ್ನ ನ್ಯಾಯವೆ ಪ್ರಸನ್ನ ನೃಸಿಂಹ ೧

ತುಡುಗಾಟಗಳಾಡಿ ಬಳಲಿ –ಈ
ಹುಡುಗ ಮನೆ ಮನೆಯ ತೊಳಲಿ
ಕಡುಭೀತಿಯ ಹೊಂದಿರುವ ನಾವು ನಿ–
ನ್ನೊಡವೆಯಲ್ಲವೆ ಒಡೆಯ ನರಹರಿಯೆ ೨

ಔಷಧ ಪಥ್ಯಗಳೇಕೆ –ನಿ
ರ್ದೋಷ ನೀನೊಳಗಿರಲಿಕ್ಕೆ
ಶೇಷಶಯನ ಗುರುರಾಮವಿಠಲ
ಪೋಷಿಸುವನು ನೀನೆ ನೀನೆ ನಿಜ ೩

೩೩೫

ಬಂದರು ಹರಿದಾಸರು ಅಲ್ಲಿ ।
ಗೋವಿಂದನಾಮವ ನೆನೆಯುತಲಿ ಪ

ಬರುತಿಹರೂ ಹರುಷಿಪರೂ
ತಿರುಪತಿಯಾತ್ರೆಗೆ ಹೋಗುವರು ೧

ತಾಳದಲೀ ಮೇಳದಲೀ ಶ್ರೀ
ಲೋಲಾಯೆನ್ನುತ ಕುಣಿಯುತಲಿ ೨

ನೇಮದಲೀ ಪ್ರೇಮದಲೀ ಗುರು
ರಾಮವಿಠಲ ಸಲಹೆನ್ನುತಲಿ ೩

೩೩೬

ಲೇಸು ಮಾಡಿದೆ ಮಾತೆ ಪುಣ್ಯದ ರಾಶಿ ಎನಗೊದಗಿತು ಭಲ ಪ

ಆಶೆಯನು ಪೂರೈಪೆನಿಂದಿನ ಘಾಸಿಯಾಕೆ ದ್ವಿಜರಿಗಲಾ ಅ.ಪ

ಬಂಡಿಯನ್ನವು ಪಾಯಸವುಸುಖಿ
ಯುಂಡೆ ಕಾಯಿಪಲ್ಯಗಳನು
ಮಂಡಿಗಾಂಬೊಡೆ ಲಾಡು ಹೋಳಿಗೆ
ವುಂಡು ತೇಗುತ ಬರುವೆನು ೧

ಸಾರು ಹುಳಿ ಪಳಿದ್ಯಗಳು
ಕಿಚ್ಚಡಿ ಶಾನೆ ಕೋಸಂಭರಿಗಳು
ಖಾರದಪ್ಪಳ ಸಂಡಿಗೆಯು
ನೂರಾರು ಬೆಂಡು ಪುಟ್ಟಿಗೆಗಳು ೨

ದೋಸೆ ಕೋಡುಬಳೆಯಪ್ಪಗಳು । ಸೋ–
ಮಾಸಿ ಹೂರಗಿ ಮಾಡಿಸು
ಸೂಸಲುಪ್ಪಿನಕಾಯಿಗಳನ್ನು
ರಾಸಿ ರಾಸಿಯು ತುಂಬಿಸು ೩

ಎಲ್ಲವನು ಹೆಚ್ಚಾಗಿ ಮಾಡಿಸು
ನಿಲ್ಲದೀಗಲೆ ಪೋಗುತಾ
ಸೊಳ್ಳೆಯಂದದಿ ದೈತ್ಯನೆನಗೆ
ಸುಳ್ಳಿದಲ್ಲವು ತಿಳಿಯುತ ೪

ಗಡಿಗೆ ಪಾಲ್ಮೊಸರು ತುಪ್ಪ ಮಜ್ಜಿಗೆ
ಕುಡಿವೆ ಭುಜವಪ್ಪಳಿಸಿ ನಾಂ
ಒಡೆಯ ಶ್ರೀಗುರುರಾಮವಿಠಲನು
ಸಡಗರವೆನಗೆ ಗೈದ ತಾಂ ೫

೩೩೭

ಸೂರ್ಯ ಮಂಡಲ ಮಧ್ಯವರ್ತಿ । ಕಾರ್ಯ-
ಕಾರಣ ಪ್ರಕೃತಿಗಳಿಗೆ ಚಕ್ರವರ್ತಿ-ವಿಜ್ಞಾನ
ಸ್ಫೂರ್ತಿ-ವಿರಾಟಮೂರ್ತಿ ಪ

ಆರ್ಯಸೇವಿತ ಪಾದ ತುರ್ಯನಾಮಕ ಲೋಕ-
ಮರ್ಯಾದಾ ಸ್ಥಾಪಕ ಮಾದೇವಿರಮಣ-ಶತಕೋಟಿ
ಕಿರಣ-ತೋರೋ ತವ ಚರಣ ೧

ಅಕ್ಷರ ಅಮಿತ ನಿರಕ್ಷರ ಕುಕ್ಷಿಗಳ್
ಲಕ್ಷ್ಯವರಿಯದೆ ನಿತ್ಯ ಮಾಡುವ ತ-
ಪ್ಪಕ್ಷಮಿಸಬೇಕಪ್ಪ-ನಾವು ನಿನಗೆ ಕಪ್ಪ ೨

ಗಾಯಿತ್ರೀ ಪ್ರತಿಪಾದ್ಯ ಕಮಲ ಸಂಭವ ಹೃದ್ಯ
ನ್ಯಾಯಧರ್ಮಯುಕ್ತ ನಿಗಮಾಂತವೇದ್ಯ
ನಿತ್ಯ ನಿರವೇದ್ಯ-ನಿನಗುಂಟೆ ಚೋದ್ಯ ೩

ಹಾರ ಕಿರೀಟ ಕೇಯೂರ ಮಕರಕುಂಡಲ
ಧಾರಿ ಸ್ವರ್ಣಮಯಾಂಗ ಧೃತ ಶಂಖ
ಚಕ್ರ-ಶಿಕ್ಷಿತ ಶುಕ್ರ-ಪರಿಹರಿಸು ವಕ್ರ ೪

ವೃಷ್ಟಿಯ ಕೊಟ್ಟು ಸಂತುಷ್ಟಿ ಪೊಂದಿಸು ಜಗ
ಜಟ್ಟಿ ಶ್ರೀ ಗುರುರಾಮವಿಠ್ಠಲ ಸ್ವಾಮಿ
ಶಿಷ್ಟ ಜನಪ್ರೇಮಿ-ಸರ್ವಾಂತರ್ಯಾಮಿ ೫

ಕಥನಾತ್ಮಕ ಹಾಡುಗಳು

ಭಾಗವತ ದಶಮಸ್ಕಂದ ಕಥೆ

೩೩೮

ಜಯ ಜಯ ರಾಮಾನುಜ ಪಾಹಿ
ಜಯ ಜಯ ಶ್ರೀಕೃಷ್ಣಪಾಹಿ
ಜಯ ಪಾಂಡವ ಮಿತ್ರ ಪಾಹಿ
ಜಯ ಜಯ ಜಯತು ಪ

ಶ್ರೀ ನೃಸಿಂಹಗೆರಗಿರಾಜೀವ ಭವ ಪ್ರಮುಖ ಸುರರಿ–
ಗಾನಮಿಸುತ ದಶಮಸ್ಕಂದದ ಕಥೆಯ ಪೇಳುವೆ ೧

ಭೂಮಿದೇವಿ ದೈತ್ಯರಾಜರ ಭಾರವನು ತಾಳಲಾರದೆ
ತಾಮರಸಭವಂಗೆ ಪೋಗಿ ಮೊರೆಯನಿಟ್ಟಳು ೨

ಹರಮುಖ ಸುಮನಸರ ಕೂಡಿ ವಿಧಿಯು ಕ್ಷೀರ ಶರಧಿಯೈದಿ
ಪುರುಷಸೂಕ್ತದಿಂದ ಹರಿಯ ಸ್ತೋತ್ರ ಮಾಡಲು ೩

ಸುರರು ಯಾದವರಾಗಿ ನಾನು ಬರುವೆ ದೇವಕಿ ಪುತ್ರನೆನಿಸಿ
ತರಿವೆ ನೀಚರನೆಂದಾಕಾಶವಾಣಿಯಾಯಿತು ೪

ಅಣ್ಣನಾಗಿ ಶೇಷ ಪುಟ್ಟಲಿನ್ನು ಹರಿಯ ಸೇವಿಸೆ ದೇವ
ಕನ್ನಿಕೆಯರು ಭುವಿಯೊಳವತರಿಸುವದೆನ್ನುತ ೫

ನುಡಿಯ ಕೇಳಿ ಸರಸಿಜಭವ ಮೃಡ ಮುಖರಾನಂದದಿಂದ
ಸಡಗರದಲಿ ತಮ್ಮ ನಿಳಯಗಳನು ಸಾರ್ದರು ೬

ಶೂರಸೇನನೆಂಬ ರಾಜ ಪಾರಂಪರ್ಯದಿ ಮಧುರೆಯಲ್ಲಿ
ಧಾರುಣಿಯ ಪಾಲಿಸುತೆ ಧರ್ಮದಿಂದಲಿ ೭

ದೇವಕನು ದೇವಕಿಯ ವಸುದೇವಗಿತ್ತು ಉತ್ಸವ ಬರೆ
ಭಾವ ಮೈದ ಕಂಸ ರಥಕೆ ಸಾರಥಿಯಾದನು ೮

ಇವಳ ಎಂಟನೇ ಗರ್ಭವು ನಿನ್ನ ಕೊಲುವದೆಂದು
ನಭವುನುಡಿಯೆ
ಜವದಿ ತಂಗಿಯ ಮುಡಿಯ ಪಿಡಿಯೆ ಕಂಸ ಕೋಪದಿ ೯

ಪುಟ್ಟಿದ ಮಕ್ಕಳನೆಲ್ಲ ನಿನಗೆ ಕೊಟ್ಟುಬಿಡುವೆ ಕೊಲ್ಲದಿರವಳ
ಸಿಟ್ಟು ಸೈರಿಸೆನುತ ಪೇಳ್ದ ಶೌರಿಭಾವಗೆ ೧೦

ಮೊದಲ ಮಗನು ಕೀರ್ತಿವಂತನುದಿಸಲೊಯ್ದು
ಕೊಡಲು ಕಂಸ
ಹೃದಯದಲಿ ಸತ್ಯಕೆ ಮೆಚ್ಚಿ ಭಾವಗೆಂದನು ೧೧

ಇವನ ಭಯವು ಎನಗೆ ಇಲ್ಲ ಈವುಂದೆಂಟನೆ ಸುತನ ಮಾತ್ರ
ತವಕದಿಂದ ಮನೆಗೆ ಪೋಗು ಪುತ್ರ ಸಹಿತದಿ ೧೨

ಇನಿತು ಕಳುಹಿ ಬಳಿಕ ಯಾದವರನು ವಿಭಾಡಿಸಿ
ಸೆರೆಯೊಳಿಡಿಸಿ
ಘನವಿಭವದಿ ಭುವಿಯನಾಳುತಿರ್ದ ಕಂಸನು ೧೩

ಸುರರು ಯಾದವರಲ್ಲ ನೀನಸುರನೆಂದು ಭೋಜಪತಿಗೆ
ಸುರ ಋಷಿ ರಹಸ್ಯದಲಿ ಬಂದು ಪೇಳಿದ ೧೪

ಉರಿದ ಕಣ್ಣೊಳು ಕಿಡಿಗಳುದುರೆ ಶೌರಿಯ ಬಂಧನದೊಳಿಟ್ಟು
ತರಿದನಾರುಮಂದಿ ಸುತರ ತವಕದಲಿ ೧೫

ಏಳನೆಯ ಗರ್ಭ ಉದರವಿಳಿದೆಂದು ತಿಳಿಯೆ ಜನರು
ಶ್ರೀಲತಾಂಗಿಯರಸನಂಶ ಬಳಿಕ ಬೆಳೆದುದು ೧೬

ಅದನು ವಯ್ದು ದುರ್ಗಿ ರೋಹಿಣಿಯುದರದಲ್ಲಿ ಇಟ್ಟೆಶೋದೆ
ಯುದರದಲ್ಲಿ ತಾನು ಸೇರಿ ಬೆಳೆಯುತಿರ್ದಳು ೧೭

ಬಳಿಕಯಿಂದಿರೇಶ ತಾನು ಜಲಜಮುಖಿ ದೇವಕಿಯ ಗರ್ಭ
ದಲಿ ಪ್ರವಿಷ್ಟನಾಗಿರ್ದ ಮಹಿಮೆಯಿಂದಲಿ ೧೮

ಮುಖದಿ ಕಳೆಯೇರಿರಲ್ಕೆ ಖಳನಿದೇ ಇದೇ ಎನುತ್ತ
ಸಕಲ ಭಾಗದಿ ಕಾವಲಿಟ್ಟು ಸಮಯ ನೋಡುತ್ತಿರೆ ೧೯

ಸರಸಿಜಾಸನಾದಿ ಸಕಲ ಸುರರು ದೇವಕಿಯುದರದೊಳಿಹ
ಹರಿಯ ವೇದದಿಂದ ಸ್ತೋತ್ರಮಾಡಿ ಹೋದರು ೨೦

ನಂದನರಸಿಯಲ್ಲಿ ದುರ್ಗಿಯಂದುದಿಸಿರೆ ನಭೋ ಮಾಸದಿ
ಅಂದುರಾತ್ರಿಯ ಶಿತಪಕ್ಷಯಷ್ಟಮಿ ದಿನದಲಿ ೨೧

ಸುರರು ಪೂಮಳೆಯ ಕರೆಯೆ ಹರಿಯು ದೇವಕಿಗವತರಿಸಿದ
ಸರಸಿಜಾಪ್ತನುದಿಸಿದಂತೆ ಬೆಳಕು ತುಂಬಲು ೨೨

ದರ ಗದಾರಿ ಪದ್ಮ ಪೀತಾಂಬರ ಶ್ರೀವತ್ಸ ಕೌಸ್ತುಭಗಳ
ಧರಿಸಿದದ್ಭುತ ಬಾಲಕನಂ ಶೌರಿ ನೋಡಿದ ೨೩

ದಿವ್ಯರೂಪವ ಕಾಣುತ ವಸುದೇವ ಮನದಿ ಹಿಗ್ಗಿ ಮುದದಿ
ಗೋವುಗಳನು ಹತ್ತುಸಾವಿರ ಧಾರೆಯೆರೆದನು ೨೪

ತುತಿಸಲಂದು ಸತೀಪತಿಗಳು ಹಿತದಿ ತೇಜವ ಮಾಯಗೈದು
ಸುತನು ಮಗುವಿನಂತೆ ತೋರೆ ಸೊಬಗಿನಿಂದಲಿ ೨೫

ಕಾಲಲಿದ್ದ ಸಂಕೋಲೆಗಳು ಕಳಚಿ ಬಿದ್ದುದಾಗ ದೇವಕಿ
ಬಾಲನನ್ನು ನೋಡಿ ಮನದಿ ಭಯವ ಪಟ್ಟಳು ೨೬

ಬೀಗಮುದ್ರೆ ಸಹಿತ ಎಲ್ಲ ಬಾಗಿಲು ತನ್ನಿಂತಾನೆ ತೆಗಿಯೆ
ಕೂಗದಂತೆ ಮಗುವನೆತ್ತಿ ಶೌರಿ ನಡೆದನು ೨೭

ಯಮುನೆ ತಾನು ಪಥವ ಕೊಡಲು ನಿಮಿಷದಿ
ಗೋಕುಲವನ್ನೈದಿ
ಕಮಲನಾಭನಂ ಯಶೋದೆಯ ಬಳಿಯಲಿಟ್ಟನು ೨೮

ಆಕೆ ಪಡೆದ ಹೆಣ್ಣು ಶಿಶುವ ತಾ ಕೈಕೊಂಡು ಮನೆಗೆ ಬಂದು
ಜೋಕೆಯಿಂದ ಮೊದಲಿನಂತೆ ತೋರುತಿರ್ದನು ೨೯

ಅಳಲು ಶಿಶವು ಕೇಳಿಯೆಲ್ಲ ಖಳರು ಹೋಗಿ ಕಂಸಗುಸುರೆ
ಝಳಪಿಸುತ್ತ ಖಡ್ಗವನ್ನು ಜವದಿ ಬಂದನು ೩೦

ವಂದನಾದರೂ ಬಿಡಬಾರದೆ ಸುಂದರಿ ಇವಳಣ್ಣ ಎನಲು
ಮುಂದುಗಾಣದೆ ಯೋಚಿಸುತ್ತ ಮುಗುವನೆತ್ತಿದ ೩೧

ಹಾರಿಸಿ ಮಗುವ ಖಡ್ಗ ಪಿಡಿಯಲಾ ರಮಣಿಯು
ನಭದಿನಿಂತು
ಸಾರಿ ಛೀ ದುರಾತ್ಮ ಯಾರ ಕಡಿವೆ ಯೆಂದಳು? ೩೨

ಬೇರೆ ಬೆಳೆಯುತ್ತಿರುವ ನಿನ್ನ ವೈರಿ ಇವಳ ಮಕ್ಕಳನೇಕೆ
ಮೀರಿ ಕೊಂದು ಪಾಪಿಯಾದೆ ಛೀ! ಹೋಗೆಂದಳು ೩೩

ಮನದಿ ನೊಂದು ಕಂಸನು ತನ್ನನುಜೆಯನ್ನು ಭಾವನನ್ನು
ವಿನಯದಿಂದ ಬೇಡಿಕೊಂಡ ಕ್ಷಮಿಸಿರೆನ್ನುತಾ ೩೪

ನೆರಹಿ ತನ್ನ ಮಂದಿಯಾದ ದುರುಳರಿಗೀ ಸುದ್ದಿಪೇಳೆ
ಬರಲಿ ಹರಿಯು ಕೊಲುವೆವವನ ಭಯಬಿಡೆಂದರು ೩೫

ಧರೆಯೊಳು ಪುಟ್ಟಿದ ಶಿಶುಗಳನ್ನು ತರಿವುದೆಂದು
ಪೂತನೆಯೆಂಬ
ಮರುಳೆಯನ್ನು ಕಳುಹಿ ವಿಸ್ಮಯದಿಂದಲಿರ್ದನು ೩೬

ನಂದಗೋಕುಲದಲ್ಲಿ ಮಹಾನಂದವಾಗಿ ಜನರೆಶೋದೆಯ
ಕಂದನನ್ನು ನೋಡಿ ಹಿಗ್ಗಿಯುತ್ಸವಗೈದರು ೩೭

ಪ್ರೀತಿಯಿಂದ ನಂದಗೋಪ ಜಾತಕರ್ಮ ಮಾಡಿಸಲ್ಕೆ
ಶ್ರೀ ತರುಣಿಯ ಕಳೆ ದಿನದಿನದಿ ಪೆರ್ಚುತಿಹುದು ೩೮

ಶೌರಿಯ ಮಧುರೆಯಲಿ ನೋಡಿ ಆದರಿಸಿ ಎನ್ನ ಮಗನೆ
ಧೀರ ನಿನ್ನ ಮಗನೆನ್ನುತ ಗೋಪ ನುಡಿದನು ೩೯

ಏಳನೆಯ ದಿನದಿ ಪೂತನಿ ಬಾಲಕಂಗೆ ಮೊಲೆಯನೊಡೆ
ಹಾಲಾಹಲವನೀಂಟಯಸುವನೆಳದು ಕೊಂದನು ೪೦

ಬಿಡುಬಿಡೆನ್ನುತಾರ್ಭಟಿಸುತಲೊಡನೆ ಯೋಜನವಾಗಿ ದೇಹ
ಪೊಡವಿಗುರುಳೆ ನೋಡಿಗೋಪರು ಭೀತಿಗೊಂಡರು ೪೧

ಜನ್ಮತಾರೆಯುತ್ಸವದಲಿ ಶಕಟನು ಬಂಡಿಯೊಳು ಸೇರಿ ಇರಲು
ನನ್ನಿಯಿಂದಲೊದ್ದು ಕೆಡಹಿ ಕೊಂದಿತಾ ಶಿಶು ಪೋರ ೪೨

ಬಾರಿಬಾರಿಗೆ ರಕ್ಷೆಕಟ್ಟಿನಾರಾಯಣ ಕವಚವ ತೊಡಿಸಿ
ಪೋರಬಾಲನನ್ನು ಸಲಹೆನುತ ಹರಿಯ ಬೇಡಿದರು ೪೩

ಮೂರು ತಿಂಗಳಲ್ಲಿ ಶಿಶುವು ಗಾಳಿಯಾದ ತೃಣಾವರ್ತನ
ಸಾರಿ ನೆಲಕೆ ಕೆಡಹಿ ಮೇಲೆ ಆಡುತಿರ್ದನು ೪೪

ಶೌರಿ ನೇಮದಿಂದ ಗರ್ಗ ಸೇರಿ ಗೋಕುಲವನು ಸಂ
ಸ್ಕಾರ ಕ್ಷತ್ರದಿಂದ ಮಾಡಿದ ಶಿಶುಗಳೆರಡಕೆ ೪೫

ರಾಮಕೃಷ್ಣರೆಂದು ಪೆಸರ ಪ್ರೇಮದಿಂದಲಿಡಿಸಿ ನಂದನ
ನೇಮಕೊಂಡು ತಾ ತೆರಳಿದ ಗರ್ಗಾಚಾರ್ಯನು ೪೬

ಶುಕ್ಲಪಕ್ಷದ ಚಂದ್ರನಂತೆ ಶುಕ್ಲನಾಮಕ ಹರಿಯು ಜನದೊ
ಳಕ್ಕರಿಯಲ್ಲಿ ಬಾಲಲೀಲೆ ತೋರುತಿರ್ದನು ೪೭

ಅಂಬೆಗಾಲಿಡುತ್ತ ಕೃಷ್ಣ ಸಂಭ್ರಮದಲಿ ಮನೆಮನೆಗಳೊ
ಳಿಂಬಾಗಿ ಪಾಲು ಬೆಣ್ಣೆ ಕದ್ದು ತಿಂಬನು ೪೮

ಒಂದು ದಿನ ಯಶೋದೆ ತಾನು ಕಂದನ ಬಾಯೊಳಗಜಾಂಡ
ವಂದು ನೋಡಿ ಕಣ್ಣುಮುಚ್ಚಿ ವಿಸ್ಮಿತಳಾದಳು ೪೯

ಮನೆಮನೆಗಳ ಪೊಕ್ಕೆಶೋದೆತನಯ ಪಾಲುಬೆಣ್ಣೆಸವಿದು ವಿ
ನಯದಿಂದ ಅರಿಯದವನಂತಿರುವ ತಾಯಿಗೆ ೫೦

ದಧಿಯ ಭಾಂಡವಡಿಯೆ ಕೃಷ್ಣ ಒದಗಿ ಗೋಪಿ ಕೋಪದಿಂದ
ವಿಧ ವಿಧ ಗುಣದಿಂದಲೂಖಲಕ್ಕೆ ಕಟ್ಟಿದಳ್ ೫೧

ವರಳ ಸೆಳೆದುಕೊಂಡು ಮತ್ತಿಮರಗಳನ್ನು ಮುರಿಯೆ ಸಿದ್ಧ
ಪರುಷರೀರ್ವರಾಬಾಲಗೆ ನಮಿಸಿ ತುತಿಸಿ ಪೋದರು ೫೨

ದಿನದಿನದಲಿ ಬಂದ ಗೋಪವನಿತೆಯರು
ಯಶೋದೆ ಮುಂದೆ
ವನಜನಾಭ ಕೃಷ್ಣನನ್ನು ದೂರುತಿರುವರು ೫೩

ಏನು ಪೇಳ್ವೆವಮ್ಮ ನಿನ್ನ ಸೂನು ನಮ್ಮ ಮನೆಗೆ ಬಂದು
ಆನಂದದಿ ಯಾರು ಆಡದಾಟ ಆಡುವ ೫೪

ಮೊಸರು ತಾನು ತಿಂದು ಕೈಯ್ಯ ಸೊಸೆಯ
ಬಾಯಿಗೊರಸಲತ್ತೆ
ಸೊಸೆಯ ಹೊಡೆಯೆ ನಗುತ ಓಡಿ ಬಂದ ತವಸುತ ೫೫

ಲೀಲೆಯಿಂದಲಿವನು ನೆಲುವಿನ ಮೇಲಿಟ್ಟಿರುವ ಭಾಂಡವನ್ನು
ಕೋಲಿನಿಂದ ತಿವಿದು ವಡೆದು ಪಾಲ ಸವಿದನು ೫೬

ಎತ್ತಿಕೊಳ್ಳೆನುತ್ತ ಮೈಯ್ಯ ಹತ್ತಿ ನೆಲುವಿನ ಭಾಂಡವನ್ನು
ಮತ್ತೆ ನಿಲುಕಿಸಿಕೊಂಡು ಪಾಲಕೆನೆಯ ಮೆದ್ದನು ೫೭

ಸತಿಪತಿಗಳ್ ಮಲಗಿರೆ ಮಧ್ಯೆ ಸರ್ಪವನು ಹಾಕಿ ತಾನ-
ಗುತ್ತಲಿ ಜುಟ್ಟು ಜಡೆಗೆ ಗಂಟಿಕ್ಕಿ ಓಡಿದ ೫೮

ಅಳುತಲಿರುವ ಶಿಶುವಿನ ತಲೆಯ ಕೂದಲು ಕರುವಿನಬಾಲಕೆ
ಎಳೆದು ಗಂಟುಹಾಕಿ ಬೀದಿಯಲ್ಲಿ ನೂಕುವ ೫೯

ಬೆಣ್ಣೆಯನ್ನು ಮೆದ್ದು ಮಿಕ್ಕದನ್ನು ಕೋತಿಗಿತ್ತದು
ತಿನ್ನುತಿರಲು ನಗುತ ನಗುತ ತಿರುಗುತಿರುವನು ೬೦

ಇನಿತು ಎಲ್ಲ ಪೇಳೆ ಗೋಪವನಿತೆ ತಾನು ಮಗನ ಮುದ್ದಿಸಿ
ಘನ ಪ್ರಮೋದ ಚಿತ್ತಳಾಗಿ ಕಾಲಕಳೆವಳು ೬೧

ಸೇತುವನ್ನು ಕಟ್ಟುವ ರಘುರಾಮ ನಾನು ನೀವ್ ಕಪಿಗಳು
ಪ್ರೀತಿಯಿಂದ ಬನ್ನಿ ಎಂದು ಕರೆವ ಬಾಲರ ೬೨

ಮೂರು ವರ್ಷವಾಗೆ ಕೃಷ್ಣ ಮುದದಿ ಕರುಗಳ ಕಾಯುತ್ತ
ವಾರಿಗೆಯವರಿಂದ ಕೂಡಿ ಕುಣಿಯುತಿರುವನು ೬೩

ವತ್ಸ ಬಕರ ಮುರಿದು ಕೃಷ್ಣ ಸ್ವೇಚ್ಛೆಯಿಂದಲಣ್ಣನೊಡನೆ ನಿಶ್ಚಲ-
ಚಿತ್ತರುಲಿಯಲಾಡುತೆಸೆದ ಮೋದದಿ ೬೪

ವೃಂದಾವನಕೆ ಪೋಗಲಲ್ಲಿ ಇಂದಿರೇಶ ವಿಷದ ಮಡುವ
ನೊಂದು ದಿನದಿ ಧುಮುಕಿ ಜಲವ ನಿರ್ಮಲಗೈದನು ೬೫

ವನದೊಳಗ್ನಿಯನು ನುಂಗಿ ಜನರ ಸಲಹಿ ರಾತ್ರಿಯಲ್ಲಿ
ಮುನಿ ಜನೇಢ್ಯನಾಗಿ ಗೋಕುಲದೊಳೆಸೆದನು ೬೬

ಅಜಗರನಾಗಿದ್ದಸುರನ ನಿಜಶರೀರ ಬೆಳಸಿ ಕೊಂದು
ಸ್ವಜನರನ್ನು ಪಾಲಿಸಿದನು ವೃಜಿನದೂರನು ೬೭

ಅಣ್ಣನೊಡನೆ ವನದಿ ತಂಗಳನ್ನವನ್ನು ಭುಜಿಸಿ ಕರುಗ
ಳನ್ನು ಕಾಯ್ದ ಕೃಷ್ಣ ತಾನು ನನ್ನಿಯಿಂದಲಿ ೬೮

ಕರುಗಳನ್ನು ಹುಡುಗರನ್ನು ಸರಸಿಜಭವ ಬಚ್ಚಿಡಲ್ಕೆ
ಹರಿಯುತಾನು ತತ್ತದ್ರೂಪವಾಗಿ ಮೆರೆದನು ೬೯

ಧೇನುಕ ಪ್ರಲಂಬರೆಂಬ ದಾನವರನು ಮುರಿದು ವನದಿ
ನಾನಾಲಂಕಾರದಿ ಗೋವುಗಳ ಕಾಯ್ದನು ೭೦

ನಂದ ತನಯ ಪತಿಯು ತಮಗೆ ಎಂದು
ನಾರಿಯರು ವ್ರತವಗೈಯ
ಲಂದು ವಸ್ತ್ರಗಳಪಹರಿಸತಲವರಿಗಿತ್ತನು ೭೧

ಮುನಿಪತ್ನಿಯರಿಂದನ್ನತರಿಸಿ ಘನಕರುಣದಿ ನೋಡಿ ಇಂ-
ದ್ರನ ಕ್ರತುವನು ನಿಲಿಸಿ ಗಿರಿಯ ಮಖವಗೈಸಿದ ೭೨

ಏಳುದಿನದಿ ಮಳೆಯು ಸುರಿಯೆ ತಾಳಿ ಕಿರುಬೆರಳಲಿಯದ್ರಿ
ಪಾಲಿಸಿದನು ಗೋಪಾಲರನ್ನು ಕೃಷ್ಣನು ೭೩

ರಾಸಕ್ರೀಡೆಯಲ್ಲಿ ಕೃಷ್ಣ ಸ್ತ್ರೀ ಸಮೂಹದಿ ಕಣಿಯುತ
ಮಹಾಸುರನನು ತಲೆಯನೊಡೆದು ಮಣಿಯಕೊಂಡನು ೭೪

ವ್ಯೋಮಕೇಶ್ಯಾರಿಷ್ಟರೆಂಬ ತಾಮಸರನು ಸೀಳಿ ಗೋಪ
ಭಾಮೆಯರಿಗೆ ಹರುಷ ಕರೆದು ಬಹುಮಾನಿಸಿದ ೭೫

ದಾನಪತಿಯ ಕಳುಹೆ ಕಂಸನಾನಂದದಿ ಕೃಷ್ಣ ತಿಳಿದು
ತಾನು ರಾಮಸಹಿತ ಮಧುರೆಗೆ ಪಯಣಮಾಡಿದ ೭೬

ನದಿಯೊಳಕ್ರೂರಂಗೆ ತನ್ನ ಅದುಭುತ ರೂಪವನು ತೋರಿ
ಮುದದಿ ಭಕ್ತರ ಕಲ್ಪತರುವೆನಿಸಿ ಮೆರೆದನು ೭೭

ರಜಕನನ್ನು ನೆಲಕೆ ಕೆಡಹಿ ಭಜಕರಿಂಗೆ ವಸ್ತ್ರಗಳಿತ್ತು
ನಿಜಭಕ್ತ ಸುಧಾಮಗೆ ಸಾರೂಪ್ಯ ಮುಕ್ತಿಯಿತ್ತನು ೭೮

ಕುಬುಜೆಗಂಧಕೊಲಿಯುತವಳ ಕುರೂಪವನು ಬಿಡಿಸಿ ಕೃಷ್ಣ
ವಿಭವದಿಂದ ಧನುವ ಮುರಿದು ಚರರ ಮಡುಹಿದ ೭೯

ಕೇಳಿಯಿದನು ರಾತ್ರಿ ನಿದ್ರೆ ತಾಳದೆ ಕಂಸ ಯೋಚಿಸುತ್ತ
ಬೀಳು ಸ್ವಪ್ನಗಳನು ಕಂಡು ಭಯದಿ ಮುಳುಗಿದಾ ೮೦

ಗಜವ ಮುರಿದು ಮಲ್ಲರನ್ನು ಗತಿಗೆಡಿಸುತ ಭೋಜಪತಿಯ
ನಿಜಸಿಂಹಾಸನದಿಂದಲೆತ್ತಿ ನೆಲಕೆ ವಗೆದನು ೮೧

ತಾಯಿತಂದೆಯ ಸೆರೆಯ ಬಿಡಿಸಿ ರಾಯನನ್ನು ಮಾಡಿತಾತನಾ-
ಚಾರ್ಯನಲ್ಲಿ ಓದಿಯವಗೆ ಮಗನ ಕೊಟ್ಟನು ೮೨

ಪೃಥ್ವೀಶರ ಕ್ಷೇಮ ತಿಳಿದು ಪ್ರೀತಿಯಿಂದ ಕುಬ್ಜೆಯ ಕೂಡಿ
ಚೇತೋಮುದದಿ ಉದ್ಧವನನನು ಗೋಕುಲಕಟ್ಟಿದ ೮೩

ಅಸ್ತಿ ಪ್ರಾಸ್ತಿ ಎಂಬಿವರಸ್ವಸ್ತದಿಂದ ಜರೆಯಸುತಗೆ
ವಿಸ್ತರದಲಿ ತಮ್ಮ ದುಃಖ ಪೇಳಿಕೊಂಡರು ೮೪

ಸಪ್ತದಶಾವರ್ತಿ ಬಂದು ಸೈನ್ಯ ಕಳೆದುಕೊಂಡು ಮಗಧನಾ
ಪ್ತಪ್ರಧಾನಿಯನು ಕೃಷ್ಣನ ಬಳಿಗೆ ಕಳುಹಿದ ೮೫

ನಿದ್ರಿಪ ಮುಚುಕುಂದನಿಂದ ಕ್ಷುದ್ರ ಕಾಲಯವನ ಕೊಲಿಸಿ
ಭದ್ರವಿತ್ತು ಭಕ್ತಜನರ ಪಾಲಿಸಿದನು ೮೬

ಗೋಮಂತಗಿರಿಯ ನೇರೆ ರಾಮಕೃಷ್ಣರು ಜರಾಸಂಧ
ತಾ ಮುಟ್ಟಿಸುತಲಗ್ನಿಗಿರಿಗೆ ಹರುಷಗೊಂಡನು ೮೭

ಉರಿಯಬೆಟ್ಟ ಕಂಡೀರ್ವರು ತ್ವರಿತದಿ ಧುಮ್ಮಿಕ್ಕಿ ಸಾ
ಗರದಿ ದ್ವಾರಕೆಯನು ರಚಿಸಿ ಅಲ್ಲಿ ಸೇರಿದರು ೮೮

ದ್ವಿಜನ ಕೈಲಿ ಓಲೆ ಕಳುಹಿದ ನಿಜಸತಿಯನು ವಲಿಸಿಯವಳ
ಗ್ರಜನಿಗವಮತಿಯನು ಗೈದು ಕೃಷ್ಣಶೋಭಿಸಿದ ೮೯

ಮಣಿನಿಮಿತ್ತದಿಂದ ಸತ್ಯಭಾಮೆ ಜಾಂಬವತಿಯ ಕೃಷ್ಣ
ಪಾಣಿಗ್ರಹಿಸಿ ದ್ವಾರಕಿಯಲಿ ಸುಖವ ಸುರಿಸಿದಾ ೯೦

ಕಾಳಿಂದಿಯ ಮಿತ್ರದಿಂದೆ ನೀಲಭದ್ರೆ ಲಕ್ಷಣೆಯರ
ಲೀಲೆಯಿಂದ ಕರವ ಪಿಡಿದು ಸುಶೋಭಿಸಿದನು ೯೧

ಮುರ ನರಕರ ಸಂಹರಿಸುತ ಎರಡೆಂಟು ಸಾವಿರ ಕನ್ನೆ
ಯರ ಪುರಕೆ ಕಳುಹಿ ಯದಿತಿದೇವಿಗೆ ಕುಂಡಲವನಿತ್ತನು ೯೨

ತಾನೆ ವಾಸುದೇವನೆಂಬ ಹೀನ ಪೌಂಡ್ರಕನನು ಕೊಂದು
ಆನಂದದಿಂದಲಿ ಅವನ ಸಖನ ಹವನ ಸೇರಿಸಿದ ೯೩

ಕಾಶಿಪಟ್ಟಣ ಸುಡಲು ಚಕ್ರನಾ ಸುದಕ್ಷಿಣ ಕೃತ್ಯೆಕಳುಹ
ಲಾಸುದರ್ಶನ ಕಂಡು ಕೃತ್ತಿಯವನ ಮುರಿದುದು ೯೪

ಬಾಣನ ತೋಳುಗಳ ಕಡಿದು ತಾನು ನಗ್ನನ ಶಾಪ ಬಿಡಿಸಿ
ಶ್ರೀ ನಿತಂಬಿನಿಯರಸ ಬಹಳ ಮಕ್ಕಳ ಪಡೆದನು ೯೫

ಜರೆಯ ಮಗನ ಭೀಮನಿಂದ ಮುರಿಸಿ ರಾಜಸೂಯದಲ್ಲಿ
ಪರಮ ಪೂಜೆಗೊಂಡು ಶಿಶುಪಾಲನ ಕೊಂದನು ೯೬

ಸಾಲ್ವದಿಡೂರಥಾದಿಯಾದ ಸಜ್ಜನರಿಗೆ ತಮನಿತ್ತು
ಕುಚೇಲನವಲಿಗಿತ್ತನುಭಯಸುಖದ ಪದವಿಯ ೯೭

ಸೂರ್ಯಗ್ರಹಣ ಕಾಲದಲ್ಲಿ ಸೇರಿ ಸಕಲಬಂಧುಗಳಿಂದ
ವಾರಿಜಾಕ್ಷ ತನ್ನವರಿಗಾನಂದವಿತ್ತನು ೯೮

ನಾರದಗಚ್ಚರಿಯ ತೋರಿ ದ್ವಾರಕಿಯೊಳು ಮನೆಮನೆಯೊಳ-
ಸಾರಸುಖವ ಸುರಿದ ಪೂರ್ಣಬ್ರಹ್ಮ ಕೃಷ್ಣನು ೯೯

ಪಾಂಡುಪುತ್ರರಿಂದ ಭೂಮಿಭಾರವಿಳಿಸಿ ಭಕ್ತರ ಕಾಯ್ದ
ಪುಂಡರೀಕನೇತ್ರ ಕೋಟಿ ಬ್ರಹ್ಮಾಂಡನಾಯಕಾ ೧೦೦

ಮೊದಲು ಪೋದ ಮಕ್ಕಳನ್ನು ಮುದದಿ
ತಾಯಿಗೆ ತಂದುಕೊಟ್ಟು
ಸದಯ ಕೃಷ್ಣನರನ ಪ್ರತಿಜ್ಞೆಯನು ಸಲಹಿದಾ ೧೦೧

ಪ್ರೀತಿಯಿಂದ ಶುಕಮುನಿ ಶ್ರುತಿಗೀತೆಯನ್ನು ಪರೀಕ್ಷಿತಗೆ
ತಾ ತಿಳುಹಿಸಿ ಶ್ರುತದೇವನ ಕಥೆಯ ಪೇಳಿದ ೧೦೨

ಹರಿಯಸೇವೆ ಮಹಿಮೆಯನ್ನು ಒರೆದು ನೃಪಗೆ ತ್ರಿಮೂರ್ತಿಗಳ
ಪರೀಕ್ಷಿಸಿದ ಭೃಗು ಮುನಿಪನ ಚರಿತೆ ಪೇಳ್ದನು ೧೦೩

ಪತ್ತು ಪತ್ತು ಮಂದಿ ಕೃಷ್ಣನ ಪತ್ನಿಯರ್ಹದಿನಾರು ಸಾವಿರ
ಮತ್ತೆ ನೂರೆಂಟರಲ್ಲಿ ಪುತ್ರರುದಿಸಲು ೧೦೪

ಅವರ ಪಾರಂಪರ್ಯವನ್ನು ವಿವರಿಸುವುದು ಸಾಧ್ಯವೆಷ್ಟು
ದಿವಸವಾದರು ಶೇಷಗಳವೆ ಅಪರಿಮಿತಗಳು ೧೦೫

ರುಕ್ಮಿಣೀ ಕುಮಾರ ಕಾಮ ರೂಢಿಯಾಗವಗನಿರುದ್ಧ
ತಕ್ಕ ಮಟ್ಟಿಗೆ ತತ್ತನುಜ ವಜ್ರನೆಂಬುನು ೧೦೬

ಅವನ ಈಚೆಗೆ ಬಹಳ ಮಂದಿ ತವಕದಿ ಶಶಿಕುಲದೊಳುದಿಸೆ
ಭುವನಖ್ಯಾತರಾಗಿ ಹರಿಯ ಭಜಿಸಿ ಮೆರೆದರು ೧೦೭

ಸೂರ್ಯ ಚಂದ್ರವಂಶದ ರಾಯರಪಾರ
ಮಹಿಮೆಗಳನು ಪೊಗಳ್ವ
ಧೀರರಿಂಗೆ ಕಲಿಯ ಕಲ್ಮಶವು ನಾಶನಾ ೧೦೮

ಆಯುರಾರೋಗ್ಯಗಳನು ಅಧಿಕ ಸಂಪದಗಳನ್ನು
ಶ್ರೀಯು ಕಾಂತಿಗಳನು ಕೃಷ್ಣರಾಯ ಕೊಡುವನು ೧೦೯

ಇನಿತು ದಶಮಸ್ಕಂದ ಕಥೆಯನನುದಿನ ಪಠಿಸಿ ಕೇಳ್ವರಿಗೆ
ಘನಸುಖವನು ಶ್ರೀ ಗುರುರಾಮವಿಠಲ ಕೊಡುವನು ೧೧೦

ಪುರಂಜನೋಪಾಖ್ಯಾನ ಲಾವಣಿ

೩೩೯

ಗುರುಹಿರಿಯರ ಬಲಗೊಂಡು ವಿನಾಯಕ
ಗೆರಗಿ ಮಹೇಶ್ವರನಾ
ಶಾರದೆಯ ಸರಸಿಜಸಂಭವನಾ । ಇಂದಿರೆ
ಯರಸನಾರಾಯಣನ
ಪರಮಭಕ್ತಿಯಲಿ ಪ್ರಾರ್ಥಿಸಿ ಸತ್ಕವಿ
ವರರ ಬೇಡುವೆ ನಾನು । ಸನ್ಮತಿಗೆ
ಕರುಣಿಪುದು ಜ್ಞಾನ ।
ಚರಣಗಳಿಗೆ ಬಿನ್ನೈಸುವೆನಾ ೧

ಯತಿಗಣಪ್ರಾಸೊಂದಾದರು ತಿಳಿಯದು
ಮತಿಹೀನನು ನಾನು । ನಾನಾಚಮ-
ತ್ಕೃತಿಗಳರಿಯದವನು । ಆದರೀ
ಕೃತಿಯಲಿ ತಪ್ಪೇನು ।
ಮತಿಯಲಿ ಭಗವಂತನು ಪೇಳಿಸಿದ
ರೀತಿಯಲಿ ಪೇಳಿರುವೆನು । ಇರುತಿರುವ
ಗತಿಯ ವಿಸ್ತರವನು
ಮತಿವಂತರಾಲಿಸುವುದು ನೀವಿದನು ೨

ಒಂದರೊಳಗೆ ಎರಡಾಗಿ ಎರಡರೊಳು
ಹೊಂದಿ ಮೂರ್ನಾಲ್ಕೈದಾಗಿ
ಆರೇಳೆಂಟೊಂಬತ್ತುಗಳಾಗಿ । ಸಕಲದೊಳು
ಹೊಂದಿರುವುದುತಾಗಿ
ಕುಂದಿಲ್ಲದೆ ಇರುತಿರುವ ಮಹಾತ್ಮನ
ವಂದಿಸುವೆನು ಬಾಗಿ । ಜನರು ಇದ
ರಂದವ ಚನ್ನಾಗಿ । ತಿಳಿದು ಸುಖ
ತಂದವನೇಯೋಗಿ ೩

ಮೊದಲು ಮಹತ್ ಸೃಷ್ಟಿಯಲಿ ಎಲ್ಲತ-
ತ್ವದಲಿ ತೋರುತಿಹುದು
ಬೇರೆಬೇರಾಗಿ ಕಾಣಿಸುವುದು
ಒಂದೊಂದ್ದೊಂದಲೆ ಅನಾದಿಯಿದು
ಅದುಭುತವಾಗಿಹ ಅನಾದಿ ಕರ್ಮತ್ರಿ-
ವಿಧದಿ ಭಾದಿಸುವುದು । ಅದರೊಳು ಬಿ-
ಡದೆ ತಾ ಮುತ್ತುವುದು
ಎಂದಿಗು ನಿಜವತಿ ರಹಸ್ಯವಿದು ೪

ಮೊಟ್ಟೆವೊಂದು ದಶಸಾವಿರವರುಷಗ
ಳಿಟ್ಟು ಜಲದಿತಾನು । ಅದಕೆ ಕೈ-

ಗೊಟ್ಟು ಎಬ್ಬಿಸಿದನು । ನಾನಾ ವಿಧ
ಬಟ್ಟೆಗಳ್ಹರವಿದನು
ವೆಷ್ಟಿ ಸಮಷ್ಟಿಗಳೆರಡೆಂದದರೊಳು
ಗುಟ್ಟಂಗಡಿಸಿದನು । ಗುರಿಯಮಾ
ಡಿಟ್ಟು ಚೇತನಗಳನು । ಅನೇಕವು
ಪಟ್ಟಣ ರಚಿಸಿದನು ೫

ಈ ಪಟ್ಟಣಕಾರ್ ಮಂದಿ ಇರುವರತಿ
ಪಾಪಿಗಳಾಳುಗಳು । ಹೊರಗೊಳಗೆ
ವ್ಯಾಪಿಸಿ ಘಳಿಗೆಯೊಳು । ತಮದೆನುತ
ಕಾಪಾಡುವರದರೊಳು
ವ್ಯಾಪಾರಗಳನು । ಬಹುವಿಧಮಾಡುವ–
ರಾಪುರ ಜನರುಗಳು । ಇವರುನಡೆ
ದಾಪರಿ ತಾವುಗಳು । ಬಾರದಿರೆ
ಕೋಪಿಸೆ ಹಗಲಿರುಳು ೬

ಎರಡು ಮಾರ್ಗದೊಳಿರುತಿಹರೆಲ್ಲರು
ಹುರುಡಿಲ್ಲವುನೋಡೆ । ಗಜಿಬಿಜಿಯು
ತರತರದಲಿಮಾಡೆ । ನಮಗಿದೆ
ಸ್ಥಿರವೆನ್ನುತ ಕೂಡೆ ।
ಪರಿಪರಿ ಬಗೆಯಲಿ ಭೇದ ಪುಟ್ಟುವುದು
ಕರೆಕರೆಯಂದುಡೆ । ವಳಗೆಕೆಲ
ಬರುಹರುಷದಿ ನೋಡೆ । ಯುವಶ್ಶೃಂ–
ಗರುವು ಇದಕೆ ಈಡೆ ೭

ಇದೆತನ್ನದೆನುತೋರ್ವಳು ಮಾನಿನಿ
ಚದುರತನದಿ ಬಂದು । ಊರ
ಮುಂದಿರುವ ವನದಿ ನಿಂದು । ಅವಳಿಗಿರು
ವುದು ಜನ ಹನ್ನೊಂದು

ಚದುರೆಯ್ಯೆದುತಲೆ ಸರ್ಪವಾಡಿಸುತ
ಜಾಣೆಯಿರುವಳಂದು । ತಾನೊಬ್ಬನ
ಮದುವೆಯಾಗಿ ಇಂದು । ಸುಖದೊಳಾ-
ಳ್ವೇಕುರಾಜ್ಯವೆಂದು ೮

ಅರಸನೊಬ್ಬ ವಿಜ್ಞಾತನೆಂಬ ಭೂ-
ಸುರನಸಹಿತನಾನಾ । ದೇಶಗಳ
ತಿರುಗುತ ಉದ್ಯಾನ । ವನದಿಕಂ-
ಡನು ಆತರುಣಿಯನ
ಪರಮ ಮಿತ್ರನಹ ಬ್ರಾಹ್ಮಣನ ಮರೆತು
ಹರುಷದಿ ಪೊಕ್ಕುವನ । ಸ್ಮರಶರಕೆ
ತರಹರಿಸುತಲಿರೆ ಮನ । ಕೇಳಿದನು
ನಗುತಲಿ ನಾರಿಯನ ೯

ಯಾರೆ ಹುಡುಗಿ ನೀನ್ಯಾರೆ ನಿನ್ನ ಪೆಸ-
ರೇನು ಪೇಳೆ ಹೆಣ್ಣೆ । ಮಾತನಾ-
ಡೆಲೆ ತಾವರೆಗಣ್ಣೆ । ನಿನ್ನ ಮೈ-
ಸುಲಿದ ಬಾಳೆಯ ಹಣ್ಣೆ
ಯಾರದು ಈ ಜನ ಉರಗವೇನು ವನ-
ವಾರದು ಶಶಿವದನೆ । ಈ ಪುರವ-
ನಾಳುವನಾವವನೆ । ಒರ್ವಳಿ-
ಲ್ಲಿರುವುದಕೇನ್ಹದನೆ ೧೦

ಎನಲು ನಸುನಗುತವನಿತೆನುಡಿದಳೀ
ಜನಗಳು ನನ್ನವರು । ಇಲ್ಲಿಕಾ-
ಣುವ ಪುರ ನನ್ನೂರು । ಸರ್ಪನ-
ನ್ನದು ಇದಕಿನ್ನಾರು ।
ಅರಸರಿಲ್ಲ ನಾನೊಬ್ಬಳಿರುವೆನೀ
ವನದೊಳು ನೀನ್ಯಾರು । ನಿನ್ನಕಥೆ
ವಿವರಿಸೆನಗೆ ತೋರು । ಯನ್ನ ಬಳಿ-
ಗಿಷ್ಟವಿರಲುಸಾರು ೧೧

ಎಲ್ಲಿ ನೋಡೆ ಸ್ಥಳವಿಲ್ಲವೆನಗೆ ನಿ–
ನ್ನಲ್ಲೆ ಬಂದಿರುವೆನು । ಬಾಧಿಸುವ
ನೆನ್ನ ಪುಷ್ಪಶರನು । ನೀನುಪೇ–
ಳಿದ ಪರಿ ನಡೆಯುವೆನು
ವಲ್ಲಭನನು ಮಾಡಿಕೊ ಎನ್ನನು ಬಹು
ಬಲ್ಲಿಯಳೆ ನೀನು । ನಿನ್ನಸರಿ
ಚಲ್ವೆಯರಾರಿನ್ನು । ಇಬ್ಬ–
ರಾಳ್ವೆಯೀವೂರನ್ನು ೧೨

ಎನಲು ಹರುಷಗೊಂಡಾಕೆ ಸಮ್ಮತಿಸಿ
ಜನವೆರಗಿತಂದು । ನುಡಿದಳಾಮೊಗದ–
ಲಿನಗೆತಂದು । ನಿನ್ನಮೇಲ್
ಮನಸಾಯಿತುಯಿಂದು
ಮನುಮಥಕಲಹದಿ । ದಣಿಸುವೆ
ನಿನ್ನನು ಮಾನವೇತಕಿಂದು । ಆಳು
ಜನಸಹಿತ ಪುರವ ಮುಂದು ನೀನು
ನಾನಿರುವೆವಾಗಿವಂದು ೧೩

ಆದೊರೆ ಮರುಳಾಗುತಿಹನಿವಳ ಮಾತಿಗೆ
ಮೋದ ಹೊಂದಿ ಮನದಿ । ಇವಳ
ಸಹಪೊಕ್ಕನಾಪುರದಿ । ಜನಗಳನು
ಸರ್ವವನ್ನು ಭವದಿ
ಆದರಿಸುತತತ್ಪುರ ಮಧ್ಯ । ದೊ
ಳುಪ್ಪರಿಗೆಯೇರಿ ತ್ವರದಿ । ಸರ
ಸಗಳನಾಡಿ । ಬಹುತರದಿ
ಮುಳುಗಿ ಸಂಸಾರವೆಂಬಶರಧಿ ೧೪

ಅನ್ನಪಾನಾಭರಣ ಕುಸುಮ
ವಿನ್ನು ಗಂಧಧೂಪ । ತಾಂಬೂಲಗಳ

ಮನ್ನಣೆಯಲಿ ಭೂಪ । ಪೊಂದಿದ ಸುಖ
ವನು ನಾನಾರೂಪ । ನನ್ನದು
ನಾನೀ ಪಟ್ಟಣಕರಸನು
ಎನ್ನುತಲಿ ಪ್ರತಾಪ । ಶಾಲಿತಾ-
ನೆನ್ನುತಾ ಪೊಗಳಿದ
ರಾಜ್ಯವಾಳಿದನಾಗುತಭೂಪ ೧೫

ದ್ವಾರಗಳೊಂಭತ್ತಾಪುರಕಿರುವುದು
ಮೂರು ಪೂರ್ವದಲ್ಲಿ । ಮೇ-
ಲೆರಡು ಕಿಟಕಿಗಳಿಹವಲ್ಲಿ । ಬಿಗಿಸಿ
ಕಟ್ಟಿಹುದು ಕನ್ನಡಿಯಲಿ
ತೋರುವುದುತ್ತರದಕ್ಷಿಣದೊಳೆರಡು
ದ್ವಾರ ಪಶ್ಚಿಮದಲಿ
ಎರಡುಬಾಗಿಲುವೊಂದದರಲ್ಲಿ । ಸುಖಗಳಿಗೆ
ಕಾರಣವದರಲ್ಲಿ ೧೬

ಮತ್ತದರೊಳಗಾರ್ರುಸುತ್ತು ಕೋಟೆ ಒಂ-
ಬತ್ತು ಬಾಗಿಲ ಪುರದಿ । ಅನೇಕವು
ಚಿತ್ರವು ಬಹುತರದಿ । ಒಳಗಿರುವ
ಗೊತ್ತನಾವವಿಧವಿ ।
ಹತ್ತಿನೋಡುವರಸಾಧ್ಯ । ವುಜನರಿಗೆ
ಉತ್ತಮವಹಪುರದಿ । ಮುಖ್ಯವಾ-
ಗಿರುವದೆರಡು ಬೀದಿ । ದೊರೆಯಮನೆ-
ಯಿರುವುದು ವಿಸ್ತರದಿ ೧೭

ಇಂತರಮನೆಯಲಿ ದೊರೆ ಕಲಿಯಾಗುತ
ಕಾಂತೆಯೊಡನೆ ಸೇರಿ । ಸದಾಸು-
ಸ್ವಾಂತನಾಗಿಮೀರಿ । ಸೌಖ್ಯಹೊಂ-
ದುತಲಾವೈಯ್ಯಾರಿ

ನಿಂತರೆ ನಿಲುವನು ಕುಳಿತರೆ ಕೂಡುವ
ಮಲಗಿದರೆ ನಾರಿ । ತಾನು
ಮಲಗುವಯೇಕದಿ ಸೇರಿ । ಉಂಡ–
ರುಣ್ಣುವನು ಅವಳನುಸಾರಿ ೧೮

ಮಗುವಿನಕೈಯಲಿಸಿಕ್ಕಿದ ಶಲಭದ
ಬಗೆಯೊಳಿರುತಲವನು । ಒಂದು ದಿನ
ಮನದಿಯೋಚಿಸದನೂ । ಈಗಲೆ
ಮೃಗಯಾತ್ರೆಗೆತಾನೂ ।
ಸೊಗಸಿಂದ ಸೈನ್ಯವ ಕೂಡುತ ಪಂ–
ಚಪ್ರಸ್ಥವನವನು । ಪೊಕ್ಕು ಅ–
ಲ್ಲಿರುವಮೃಗಗಳನ್ನು । ಹೊಡೆದು ಸಂ–
ತೋಷದಿ ಸುಖಿಸುವೆನು ೧೯

ಮೂರೆರಡು ಕುದುರೆಯೈದು ಮೇಲ್
ಮೂರು ಪತಾಕಿಗಳು । ಅ–
ಚ್ಚೆರಡು ಎರಡು ಕೂಬರಗಳು । ಚಕ್ರ
ವೆರಡುವರೂಥಗಳೇಳು
ಆರಥಕೊಪ್ಪುವದೇ–
ಕರಶ್ಮಿನಾಲ್ಕೊಂದು ವಿಕ್ರಮಗಳು । ಒಬ್ಬ
ಸಾರಥಿ ಎರಡು ಗತಿಗಳು । ಬಿಗಿಸಿಹುದು
ಕನಕಭೂಷಣಗಳು ೨೦

ಇಂತಿಹರಥವೇರಿ ಪುರಂಜನ ಭೂ–
ಕಾಂತಕರದಿ ಧನುವ । ಪಿಡಿದುಸು–
ಸ್ವಾಮತದಿಂದಲನುವಾ । ಗಿಬಹ ಹನ್ನೊಂ–
ದು ತನ್ನ ಜನನ । ಸಂತಸದಲಿ ಕೂ–

ಡುತ ಹೊರಡುತ ತಾ ಪೊಕ್ಕನು
ಕಾನನವಾ । ಶರಗಳಿಂ-
ದ್ದೊಡದು ಮೃಗನಿವಹವಾ । ಮೇರೆಯಿಲ್ಲ-
ದೆ ತಟ್ಟುತ ಭುಜವಾ ೨೧

ಇನಿತು ಬೇಟೆಯಾಡುವ ಕಾಲದಿ ತನ್ನ
ಮನದಿ ನೆನೆದು ಸತಿಯಾ । ತಕ್ಷಣವೇ
ಬಂದು ಸೇರಿ ಮನೆಯ । ಕಾಣದೆ
ಹುಡುಕಿದನು ಯುವತಿಯ
ಜನಪತಿಕಕ್ಷಾಂತರದಲಿ ಕೇಳುತ
ಮಂಚದೊಳಿಹ ಸತಿಯ । ಕಂಡುಲಾ-
ಲಿಸುತ ಚಮತ್ಕೃತಿಯಾ । ನುಡಿಯಲುಪ-
ಚರಿಸಿದನಾಕಾಂತೆಯ ೨೨

ನೂರುವರುಷವೀರೀತಿಯವಳೊಡನೆ
ಸೇರಿನೃಪಾಲಕನು ।
ನೂರುಹನ್ನೊಂದು ಮಕ್ಕಳನ್ನು । ಪಡೆದು ಸಂ-
ಸಾರದಿ ಕಾಲವನು । ಯಾರೆ-
ದುರಿಲ್ಲದೆ ಕಳೆಯಲುಯೌವ್ವನ
ಮೀರಿ ಹೋದುದಿನ್ನು । ಮೊಮ್ಮಕ್ಕಳ
ಪಡೆದನನೇಕರನು
ದೇಶತುಂಬಿಸಿದ ತನ್ನ । ವರನು ೨೩

ಉತ್ತರ ದಕ್ಷಿಣ ಪಾಂಚಾಲಗಳಾ
ಳುತ್ತಲಿವನು ತನ್ನ । ಸುತರಬೆರೆ-
ಯುತ್ತಸದಾ ಚಿನ್ನ । ಬೆಳ್ಳಿ ನವ-
ರತ್ನರಾಶಿಗಳನಾ । ಮತ್ತೆ ಮತ್ತೆ ಕೂಡಿ-

ಸುತೈಶ್ವರ್ಯದಿ ಮತ್ತನಾ । ಗುತಲನ್ಯಾ
ಚಿಂತೆಯಿಲ್ಲದೆ ನಾ । ಬಲು
ಪುಣ್ಯವಂತನೆ ।
ನ್ಸುತ್ತತಿಳಿದಿರುವನಾ ೨೪

ಚಂಡವೇಗವೆಂಬುವರಾ ತಮ್ಮತಮ್ಮ
ಹೆಂಡಿರುಗಳು ತಾವು । ಸೇರಿಮು–
ನ್ನೂರರವತ್ತು ಜನವು । ಗಂಧರ್ವರು
ಬಂಡೆಬ್ಬಿಸಿ ಪುರವು । ದಂಡು
ಕೂಡಿಯುದ್ಧಮಾಡಲವ । ರ
ರೂಪುಸಿತಾಸಿತವು । ಬರಬರುತ
ಮುಂದಾಗೆ ರಿಪುಬಲವು । ಕ್ಷೀಣಗತಿ
ಹೊಂದುತಲಿರೆ ಪುರವು ೨೫

ಸ್ತ್ರೀಜಿತನಾಗಿಹಕಾರಣದಲಿಯಾ
ರಾಜಪುರಂಜನಗೆ । ಯತ್ನವಿ–
ಲ್ಲದೆ ತನ್ನಯಪುರಿಗೆ । ಕೇಡುಬಂ–
ದರು ತೋರದು ಕೊನೆಗೆ ।
ಸೋಜಿಗಪಡುತಲಿ ಜಯಿಸಲಾರದೆ
ಶೋಕದಿ ಮನದೊಳಗೆ । ಮಿ
ಡುಕುತಲಿರಲಾನೃಪತಿಮೇಗೆ । ಮತ್ತು
ಶತ್ರುಗಳುನೆರೆಯೆ ಹೀಗೆ ೨೬

ಯವನೇಶ್ವರನೊಬ್ಬನುಭಯಪ್ರಜ್ವಾ
ರಾದಿ ಸೈನಿಕರನು । ಕಾಲಕನ್ಯಾಖ್ಯ
ಯುವತಿಯನ್ನು । ಕರೆದುಕೊಂ–
ಡೀಪುರವ ಸೇರಿದನು ।
ಬವರದಿ ಗೆದ್ದನು ಭವಿಸಿದನಾ

ಕನ್ಯಾಮಣಿಪಟ್ಟವನು । ಭೋಗಿಸಿದ–
ಳಾಪ್ರಜ್ವಾರನನು । ಸುಡಲುಪುರಿ
ಕಂಡು ಪುರಂಜನನು ೨೭

ಕಾಲಕನ್ಯೆ ತಾ ಲೀಲೆಯಿಂದಲಿ ನೃ–
ಪಾಲನ ಹತ್ತಿಗೆಯಾ । ಪಿಡಿಯೆ ಹಾ–
ಹಾಯೆನಲಾರಾಯಾ । ಅಬಲತೋ–
ರದು ಮುಂದೆ ಉಪಾಯ ।
ಬಾಲಕರನು ಪತ್ನಿಯ । ನುಕೂಗಿಬಿಡು–
ತಿರ್ದನಾಗಬಾಯಾ । ಏನುಗತಿ
ಹ್ಯಾಗೆನುತಕಾಯ । ಜೀರ್ಣವಾ–
ಗಿರೆಬಂತು ಅಪಾಯ ೨೮

ನಾನು ಪೋದ ಮೇಲಿವರಿಗೇನುಗತಿ ಕಾ–
ಣೆ ಮುಂದೆಯಿವರೂ । ನಾನಾ ಬ–
ಟ್ಟೆಗಳ ಹೊಂದುತಿಹರೂ । ಪೋಗಲಾರೆ–
ನುಬಿಡರಿನ್ನವರು
ಪ್ರಾಣಸಖಿಯಬಿಡಲಾರೆನೆಂದು
ಮಿಡುಕುತಿರೆ । ಬಂದರು ಭಯರು
ಯವನರಾ । ಕ್ಷಣದಿಪಿಡಿದೆಳೆದರು
ಕಾಲಿಗೆರಗುವೆನೆಂದರು । ಬಿಡರು ೨೯

ಹೊಡೆದು ಬೈದು ನಡಿನಡಿ ಎನ್ನುತಬಲು
ಗಡಬಡಿಸುತಲಿವನಾ । ನೂಕೆತನ್ನ
ಮಡದಿಯಮೇಲೆ ಮನಾ । ವಿಡುತಪುರ
ಬಿಡಲು ಪುರಂಜನನ
ಹಿಡಿದೆಳೆದರು ಕತ್ತಲೆಯೊಳು ಕೂಪದಿ
ಕೆಡಹಿದರಾಯಿವನಾ । ಕುಠಾರದಿ
ಕಡಿಯುತಲಿತ್ತು ಜನಾ । ಮಿತ್ರ ವಿ–
ಜ್ಞಾತನಮರತವನಾ ೩೦

ಇವನಬಿಟ್ಟ ಮೇಲಾಪ್ರಜ್ವಾರನು
ಯವನಿಗೆಹಿತವಾಗಿ । ಪು–
ರವದಹಿಸಿದನು ಬೂದಿಯಾಗಿ । ಬೀಳಲಾ
ಪಂಚಾಸ್ಯದ ಭೋಗಿ । ಹವಣಿಲ್ಲದೆ
ಮಾಯವಾಯಿತಾಕ್ಷಣ
ಬಯಲೊಳು ಬಯಲಾಗಿ । ಏಕಾದಶ
ಜನವುಶೂನ್ಯವಾಗಿ । ಇತ್ತು ಇ–
ವನೊಳಗೆಲೀನವಾಗಿ ೩೧

ನಾರಿಯಾಸೆಯಿಂದಾ ಪುರಬಿಟ್ಟಾ
ಕಾರಣದಿಂದವಗೆ । ಸ್ತ್ರೀತ್ವಬಂ–
ದಿತು ಕೇಳ್ ಬಂದಬಗೆ । ವಿದರ್ಭಾ
ದೇಶವಾಳ್ವದೊರೆಗೆ ।
ಮಾರನಗಿಳಿವೋಲ್‌ಪುತ್ರಿಯಾಗಿ । ಜನಿಸಿ–
ದಳು ಪಾಂಡ್ಯಪತಿಗೆ । ಕೊಟ್ಟು
ಮದುವೆಯ ಮಾಡಿದ ಸುತೆಗೆ । ಮಕ್ಕಳೇ–
ಳ್ಮಂದಿಯಾದರವಗೆ ೩೨

ಒಬ್ಬೊಬ್ಬರಿಗರ್ಬುದಸಂಖ್ಯಾಕದಿ
ಹುಟ್ಟಲು ಬಹಳ ಜನಾ । ಪುತ್ರರಿಗೆ
ಭಾಗಿಸಿ ರಾಜ್ಯವನಾ । ತಪವನಾ–
ಚರಿಸಲು ಮಾಡಿದ ಮನಾ।
ಒಬ್ಬನೆತೆರಳದೆ ಮಲಯಧ್ವಜಸತಿ
ಸಹಿತಸೇರಿವಿಪಿನಾ । ತಾಂಬ್ರಪರ್ಣೀ
ನದಿತೀರಾವನಾ । ಶ್ರಯಿಸಿ
ನಿಶ್ಚಲದಿಗೈಯೆಧ್ಯಾನಾ ೩೩

ಛಳಿಮಳೆಗಾಳಿಬಿಸಿಲಿಗೆಭಯಪಡದೆ
ನಳಿನಾಕ್ಷನಪಾದ । ಶತವರುಷ ।
ಗಳುಭಜಿಸುತಮೋದ । ಹೊಂದಿಹಸುತೃಷಿ

ಗಳನುತ್ಯಜಿಸಿದ । ಫಲ
ಪರ್ಣಾಧಾರದಿ । ಪ್ರತಿದಿವಸವು
ಪಾಂಡ್ಯನು ಕೃಶನಾದ । ಸತಿಯುಸೇ–
ವಿಸುವಳು ಪತಿಪಾದ । ಲೇಶ
ಮಾತ್ರವುಯಿಲ್ಲದೆಭೇದ ೩೪

ಧ್ಯಾನಯೋಗಬಲದಿಂದಲವತಿರೋ
ಧಾನಸಮಾಧಿಯಲೀ । ಪರಮಪುರು
ಷನ ಮೂರ್ತಿ ಮನದಲೀ । ಕಂಡುಸು–
ಜ್ಞಾನದೀಪದಲ್ಲೀ ।
ಸ್ವಾನುಭವಾನಂದ್ಯೆಕರಸಾಯನ
ಪಾನಪರವಶದಲಿ । ದೇಹದಭಿ
ಮಾನವನು ಬಿಡುತಲಿ । ಜ–
ನನರಹಿತ ಪದವಿ ಸೇರುತಲಿ ೩೫

ಪರಲೋಕವಪೊಂದಲುಪಾಂಡ್ಯೇಶನು
ತರುಣಿಯು ಒಂದುದಿನಾ । ಪತಿಯ
ಕಂಡಳುಗತಚೇತನನ ।
ಏನಿದೇನೆನುತಳುಕುತಲಿ । ಮಹಾ
ಚರಣದಿಬಿದ್ದೊರಳಿ । ದಳತಿ ಶೋಕದಿ
ಜಲಜಮುಖಿಪರಿಯನಾ । ಹಂಬಲಿಸು
ತರರೆ ಬಯಲಾದನಾ । ಪತಿಯು
ಸೇರಿದ ಪರಲೋಕವನಾ ೩೬

ಇಂತಡವಿಯಾಳುತಾಸತಿ ತಾನತಿ
ಭ್ರಾಂತಿಪಡುತಪತಿಯ । ಸಹಗಮನ
ಕನುವಾಗುತ ಚಿತೆಯಾ । ನೇರ್ಪಡಿಸಿ
ಚಿಂತಿಸುವ ಯುವತಿಯಾ
ಸ್ವಾಂತನೋಡಿವಿಜ್ಞಾತ ಪೂರ್ವಸಖ

ಭೂಸುರನಾಸ್ಥಿತಿಯಾ । ಬಂದು ಕಂ-
ಡನು ಅಳುತಿಹ ಸತಿಯಾ । ಏನೆನುತ ಕೇ-
ಳ್ದನು ಸಂಗತಿಯಾ ೩೭

ಯಾರೆ ಹುಡುಗಿ ನಿನಗೇನುವೆಸರುಯಿವ
ನಾರುಯಾಕೆಅಳುತೀ ।
ಮರೆತೆಯಾ ಎನ್ನ ಮೊದಲು ಪ್ರೀತಿ ।
ನಾರಿ ನೀನಲ್ಲ ನಿನಗಿವಪತಿ
ಕಾರಣವೇಳುವೆ ನಾವಿಬ್ಬರುವೊಂದಾ-
ಗಿರಲಿಲ್ಲೆಜೊತಿ । ಮಾನಸ
ಸರೋವರದಲ್ಲಿಸ್ಥಿತಿ । ಎನ್ನ
ಬಿಟ್ಟುದಕೆ ಬಂತೀಗತಿ ೩೮

ಎನಗು ನಿನಗಿರುವ ಭೇದ ತಿಳಿಯೆಬುಧ
ಜನಕಾಗದು ಮರ್ಮ । ನೋಡಿಕೊ
ನಿನ್ನೊಳಿದರ ಧರ್ಮ । ಅಜ್ಞಾನದಿ
ನಿನಗೂದಗಿತು ಕರ್ಮ
ಘನವಿಷಯೇಚ್ಛಾನವದ್ವಾರ ಪುರಿಯ
ಸೇರಿಸಿತಾಕರ್ಮಾ ।
ಮಮತೆಯಿಂ ಬಂದಿತಲೆಅಧರ್ಮಾ । ಬಿಡುಯಿವ
ನನೋಡಿಕೊ ಸ್ವಧರ್ಮಾ ೩೯

ನಾವಿಬ್ಬರು ಹಂಸೆಗಳಲ್ಲವೆ ನೀ
ಜೀವಾತ್ಮನು ನಾನು । ನೋಡಿಕೋ
ನಿನ್ನಸ್ವರೂಪವನು । ಅಂದು
ಕೊಡಲುದಿವ್ಯದೃಷ್ಟಿಯನು
ಆವನಿತೆಯು ತಾ ಹಂಸೆಯಾಗಿ ಸಾ
ರ್ದಳು ಸ್ವಸ್ಥಾನವನು । ಬಿಟ್ಟುವಿಷ
ಯಸುಖದಭ್ರಮೆಗಳನು ।
ಭೂಸುರನದೃಶ್ಯವನೈದಿದನು ೪೦

ಇದರರ್ಥವ ಬಲ್ಲವರು ಪೇಳುವುದು
ಚದುರತನದಿನೀವು । ನಾರದರು
ಪೇಳ್ದಭಾಗವತವು ।
ವೇದಶಾಸ್ತ್ರಪುರಾಣದನೆಲವು ।
ಸದಮ ಜ್ಞಾನಿಗಳಿಗೆ ಕೋರುವು । ದ
ಲ್ಲದೆ ಕರುಣದಿ ಗುರುವು । ಬೋಧಿ–
ಸಿದ ವಿಧದಲಿ ಪೇಳಿದೆವು
ಇದೆಲ್ಲಾ ಹಿರಿಯರನುಗ್ರಹವು ೪೧

ಧರಣೀಸುರವರಷಾಷ್ಟಿಕ ಮನೆತನ
ದವವೈಷ್ಣವಜಲಧೀ । ಚಂದ್ರ–
ನಾರ್ಣಪ್ಪನು ಸುಗುಣನಿಧಿ । ಶ್ಯಾಂಡಿಲಸ
ಗೋತ್ರಿಯಜುರ್ವೇದಿ ।
ವರಸುಕುಮಾರನು ನರಸಪ್ಪನು ಸ
ಜ್ಜನಗಳಿಗತಿಮೋದಿ । ನೃಹರಿಭ–
ಕ್ತನು ಕರುಣಾಂಬೋಧಿ । ಆತನಾತ್ಮ–
ಜನುಮಧ್ವಾಖ್ಯಸುಧೀ ೪೨

ಧರೆಯೊಳಧಿಕವಹ ಭಾಗ್ಯವಲ್ಲಿಯೋ–
ಳಿರುವ ಮಧ್ವರಾಯ । ತದಾ–
ತ್ಮಜಸಜ್ಜನಕೆ ವಿಧೇಯ । ಸುಬ್ರಹ್ಮ–
ಣ್ಯಾಖ್ಯದಾಸವರ್ಯಾ । ಗು–
ರುರಾಮವಿಠಲಹೃದಯ । ದೊಳು
ನೆಲಸಿ ನುಡಿಸಿದ ನೀಪರಿಯಾ । ಲಾ
ವಣಿಯ ವಿಧದಿ ಪೇಳ್ದೆನಯ್ಯಾ । ತ
ಪ್ಪಿರಲು ತಿದ್ದಿಸಲಹಿರಯ್ಯಾ ೪೩

ಮನ್ಮಥ ಚರಿತ್ರೆ

೩೪೦

ವರಸಿದ್ಧಿ ಗಣೇಶನ ಬಲಗೊಂಡೀ–
ಶ್ವರನ ಪದಕೆ ನಮಿಸಿ । ಶಾರದೆಯ
ಹರುಷದಿ ಸಂಸ್ಮರಿಸಿ । ಚ
ತುರ್ಮುಖಗಳ ನೆರೆ ಭಜಿಸಿ
ಸಿರಿಪತಿಯನು ಕೊಂಡಾಡಿ । ಗುರುಹಿರಿಯರ
ಚರಣಸೇವೆಯ ಮಾಡಿ । ಕವಿಜನರ
ಹರುಷದಿ ನುತಿ ಮಾಡಿ । ಮಾಡಿ–
ದ ಕೃತಿಯ ಸುಜನರು ನೋಡಿ ೧

ಕಾಮಜನಕ ನಿಷ್ಕಾಮಜನಾಪ್ತ । ಸು–
ಧಾಮನ ಸಖ ಹರಿಯು ।
ಮೂರು ಲೋಕಗಳಿಗೆ ತಾ ದೊರೆಯು । ಎನ್ನಹೃ–
ತ್ಕಮಲದೊಳೀಪರಿಯು
ಪ್ರೇಮದಿಂದ ತಾ ನೆಲಸಿ ನುಡಿಸಿದನು
ಕಾಮನ ಸುಚರಿತೆಯು । ಸಜ್ಜನರು–
ಗಳಿಗಿದು ಸಮ್ಮತಿಯು । ಪೇಳ್ವರಿಗೆ
ಇಹಪರ ಸದ್ಗತಿಯು । ೨

ಪೃಥಿವಿಯೊಳಿಹ ಸುಜನರು ಕೇಳಿ । ಮ
ನ್ಮಥ ಚರಿತ್ರೆಯನು । ಸಹ–
ರ್ಷೋತ್ಕರದಿ ನೀವ್ಗಳಿದನು । ಭಜಿಸೆ ಸ–
ದ್ಗತಿಗಳನು ಕೊಡುವನು ।
ಶತಮುಖವಂದಿತ ಸಿರಿದೇವಿಯರಸ–
ನೊಲಿದು ಪಾಲಿಸುವನು । ಜನರ ಕೋ–
ರಿದ ಕೋರಿಕೆಗಳನು ।
ತಾ ಕೊಟ್ಟವರನು ಪಾಲಿಪ ತಾನು ೩

ತಾರಕಾಸುರನ ಭಯದಿಂದಲಿ ವೃಂ-
ದಾರಕರೆಲ್ಲ ಕೂಡಿ । ಮನದಿ
ಆಲೋಚನೆಗಳ ಮಾಡಿ । ವನಜ ಸಂ-
ಭವನಡಿಗಳ ಬೇಡಿ ।
ಯಾರು ನಮಗೆ ದಿಕ್ಕೆಂದು ಕಳವಳಿಸಿ
ಕ್ಷೀರಸಮುದ್ರದಲಿ । ಯಿರುವ
ನಾರಾಯಣನ ತ್ವರಿತದಲಿ । ಕಂಡು ವಂ-
ದಿಸಿದರು ತವಕದಲಿ । ೪

ವಾರಿಜಾಕ್ಷ ಪುರುಷೋತ್ತಮ ವಿಶ್ವಾ-
ಧಾರ ಪರಾತ್ಪರನೆ । ಅನಂತನವ-
ತಾರ ಕೃಪಾಕರನೆ । ನಾವೆಲ್ಲ
ಸೇರಿದೆವೈ ನಿನ್ನನೆ ।
ತಾರಕಾಸುರನ ಬಾಧೆ ಪರಿಹರಿಪ-
ರ್‍ಯಾರನು ನಾವ್ ಕಾಣೆವೈಯ್ಯ । ಉ--
ದ್ಧಾರ ಮಾಳ್ಪನು ನೀನೆ । ಭಕ್ತಜನ-
ವಾರಿಧಿ ಚಂದ್ರಮನೆ । ೫

ಎನಲು ಸುರರೊಡನೆ ನುಡಿದನಾಗಲಾ-
ವನಜನಾಭ ತಾನು । ಈ ಕಾರ್ಯ-
ಕೆನಾ ಮಾಡುವುದೇನು । ಭ-
ವಾನೀಧವನಾಗಿ ಶಿವನು ।
ಘನತಪವನಾಚರಿಸುತ್ತ ಮೇರುಗಿರಿ
ಗುಹೆಯೊಳು ಕುಳಿತಿಹನೊ । ಫಾಲದಲಿ
ಉರಿಗುಣ್ಣುಳ್ಳವನು । ಏನಾದರು
ಸರಿ ತಾ ಲೆಕ್ಕಿಸನು । ೬

ಕಾಮನಿಂದ ಶಂಕರನ ತಪಕಿಡಿಸಿ
ಕರುಣಿಸಬೇಕೆಂದು ಬೇಡಿ । ಕೊಂ-

ಡರವ ನಿಮ್ಮೊಳು ದಯಮಾಡಿ । ತ–
ಕ್ಕಯೋಚನೆಗೈಯ್ಯುವ ನೋಡೀ ।
ತಾಮಸನ ಮುರಿದು ನಿಮಗೆ ಸಂತತವ
ಕೊಡುವನು ಮುದಗೂಡಿ । ಎಂದು
ಪೇಳಿದ ಶ್ರೀಹರಿಯನುಡಿ । ಕೇಳಿ
ಇಂದ್ರನು ಗುರುವನು ನೋಡಿ ೭

ಕಂದರ್ಪನಿರುವ ಕುಸುಮಾವತಿಯನು
ಚಂದದಿಂದ ಸೇರಿ । ಸ್ಮರಗೆಯಿದ–
ರಂದವೆಲ್ಲವುಸುರಿ । ಅವನಮನ
ಹೊಂದುವಂತೆ ಶೌರಿ ।
ಕಂದನೆಯಂತಾದರು ತಂದರೆ ಸುಖ–
ವೆಂದನುಪಕಾರಿ । ಗುರು
ವಂದಿಸೆ ಸುರರ ದೊರಿ । ಬೀಳ್ಕೊಂಡು
ಬಂದನು ಕುಸುಮಪುರಿ ೮

ಕುಸುಮಾವತಿಯಲಿ ಮೀನಕೇತನನ
ಶಶಿನಿಭವದನೆಯರು । ಸೇ–
ವಿಸುತಿರೆ ಹಸನಾದ ಪನ್ನೀರು । ಪುನಗು
ಜವ್ವಾಜಿ ಗಂಧ ಅಗರು ।
ಕುಸುಮಶರನ ಉಪಚರಿಸುತ ಬಾಲೆಯ–
ರೆಸೆಯಲು ಮೋದದೊಳು । ರತಿ–
ಕ್ರೀಡೆಯಲಿ ಮನಕರಗಲು । ಬೃ
ಹಸ್ಪತಿಯನಿತರೊಳೈತರಲು ೯

ಊಳಿಗದವರಿಂದ್ಹೇಳಿ ಕಳುಹೆ ಗುರು
ಕೇಳಿ ಸುದ್ದಿ ಮಾರಾ । ತವಕ
ದಲಿ ಬಂದನಾಗ ಧೀರಾ । ಮಾಡಿದನು
ಪರಿಪರಿಯುಪಚಾರ ।

ಚಾರುಸ್ವರ್ಣಪೀಠದಿ ಕುಳ್ಳಿರಿಸಿದ
ಶ್ರೀಪತಿಯ ಕುಮಾರ । ಬಂದಹದ-
ನೇನೆನುತ ಪದಾರ । ವಿಂದ-
ಕೆರಗಿದನಾ ಕುಸುಮಶರ ೧೦

ಗುರುವುನುಡಿದ ಕೇಳಯ್ಯತಾರಕನ
ಭಯದೊಳಮರರೆಲ್ಲ ।
ಕ್ಷೀರಸಾಗರಕೆ ಪೋಗಿ ಎಲ್ಲ । ಬಿನ್ನೈ-
ಸಲು ಕೇಳಿ ಸಿರಿಯನಲ್ಲಾ ।
ಅರಘಳಿಗಾಲೋಚಿಸಿ ಎನ್ನೊಳುನುಡಿ-
ದನುಕೇಳಿಸಿರಿಯನಲ್ಲಾ । ಖಳಗೆಧರೆ-
ಯೊಳುಯಾರೆದುರಿಲ್ಲಾ । ಇದರ
ಪರಿ ಎಲ್ಲವನು ಬಲ್ಲ ೧೧

ಕಾಮನು ಪುಷ್ಪ ಶರಗಳಿಂದೆಸೆಯಲು ಗೌ-
ರಿಮನೋಹರನೂ । ಬ-
ಹಿರ್ಮುಖಿನಾಗುತ ಶಂಕರನೂ । ನಿ-
ಮ್ಮಮೊರೆಯೆಲ್ಲಾ ಕೇಳುವನು
ಆ ಮಹಾಸುರನ ವಧಿಸಿ ಎಲ್ಲರಿಗೆ
ಕ್ಷೇಮವ ಪಾಲಿಪನು । ರಜತಗಿ
ರಿವಾಸಿ ಮಹೇಶ್ವರನು । ಇದಕೆ
ಗುರಿಯಾದ ಎನ್ನ ಮಗನು ೧೨

ನಾವು ಪೇಳಿರುವೆವೆಂದು ನಮ್ಮ ಸು-
ಕುಮಾರ ಮನ್ಮಥನಿಗೆ । ಇದೆಲ್ಲಾ ಪೇ-
ಳಿವಿವರಮಾಗೆ । ಕರೆದುಕೊಂ-
ಡ್ಹೋಗಿ ಶಿವನ ಬಳಿಗೆ ।
ಪಾವಕಾಕ್ಷ ಬಲು ಕರುಣಾನಿಧಿಯಿ-
ನ್ನೇನು ಚಿಂತೆ ನಮಗೆ । ಬೇಗನಡೆ
ಯೆಂದ ಹರಿಯು ಎನಗೆ ।
ಸಕಲವೂ ತಿಳಿಸಿದೆ ನಾನಿನಗೆ । ೧೩

ಸುರರರಕ್ಷಿಸಿ ಅಸುರನ ಶಿಕ್ಷಿಸುವ
ಪರಿಯೋಚನೆ ಮಾಡು । ಸ-
ತ್ಕೀರ್ತಿಯ ಸಂಪಾದನೆ ಮಾಡು ।
ಭರದಿ ಹೂ ಶರಗಳ ನೀ ಹೂಡು ।
ಹರನ ತಪವ ಭಂಗಿಸಿ ನಮ್ಮೆಲ್ಲರ
ಕರುಣದಿ ಕಾಪಾಡು । ತಂದೆಯ-
ಪ್ಪಣೆಯ ಮನದಿ ನೋಡು । ಮೂಜಗದಿ
ಯಾರು ನಿನಗೆ ಜೋಡು । ೧೪

ಈ ಪರಿಪೇಳಿದ ಗುರುವಿನ ನುಡಿಯನು
ಶ್ರೀಪತಿಯ ಕುಮಾರ । ರತಿಯೊಡನೆ
ಯೋಚಿಸಿದನು ಮಾರ । ನುಡಿದಳಾ
ಶಿವನು ಮಹಾಕ್ರೂರ ।
ಆಪತ್ತೊದಗುವುದೀಗ ಬೇಡ ಎಂ-
ದಾಸತಿಯಳಮಾತು । ಕೇಳಿದ
ಕಂದರ್ಪಮನದಿ ಸೋತು । ಬೃಹಸ್ಪತಿ-
ಗೆಂದ ಕಾಮನಿನಿತು ೧೫

ನಿಮ್ಮ ಮಾತು ಮೀರುವ ನಾನಲ್ಲ
ಸಮ್ಮತಿಯಿದು ಕೇಳಿ । ಪೂಶರನ
ಬಿಡಲು ಚಂದ್ರಮೌಳಿ । ಕೋಪಿಸಲಾ
ಹಣೆಗಣ್ಣೆನಗಾಳೀ ।
ಬ್ರಹ್ಮಾಂಡಗಳಾದರು ದಹಿಸುವುದು
ಎನ್ನಳವೇ ಎಂದಾ । ಈ ಕಾರ್ಯಕೆ
ನಾನು ಬಾರೆನೆಂದ । ನುಡಿಗೆ ಸುರ-
ಗುರುಮತ್ತಿಂತೆಂದ । ೧೬

ಮರೆಹೊಕ್ಕಿರುವಮರರ ಪಾಲಿಸುನೀ
ಕರುಣದಿ ಕಂದರ್ಪ । ಜಗ–
ತ್ಕಾರಣನೈನಿಮ್ಮಪ್ಪ । ಪೇಳ್ದನುಡಿ
ನಡಿಸಲು ಬೇಕಪ್ಪಾ ।
ಪರಿಪರಿಯಲಿ ನೋಡಿದರು ಜಗದೊಳಗೆ ನಿನ್ನ
ಸರಿಯಾರಪ್ಪಾ । ನಮ್ಮ ನುಡಿ
ಮೀರಬಾರದಪ್ಪಾ । ಅಷ್ಟು ಪೇಳಿ–
ದರು ಕಾಮವೊಪ್ಪಾ । ೧೭

ಕಾಮನವೊಪ್ಪಿಸಿ ಕರದೊಯಿದಮರರು
ಕೈಲಾಸವ ಸೇರಿ । ಅರುಹಿದರು
ಗಿರಿರಾಜ ಕುಮಾರಿ ।
ಕೇಳಿನಡೆತಂದಳಾಗಗೌರಿ ।
ವ್ಯೋಮಕೇಶನಿಹ ಗವಿಯ ದ್ವಾರಕೇ
ಬರಲು ನೋಡಿ ನಂದಿ । ತಾಯಿನೀ–
ನಿಲ್ಲಿಗೇಕೆ ಬಂದಿ । ಏನು ಅ–
ಪ್ಪಣೆಯೆಂದನು ನಂದಿ ೧೮

ವಂದನೆ ಒಳಗೆ ಹೋಗುವನು ಇವನನೀ
ತಡೆಯಬೇಡವಯ್ಯ । ಎನ್ನ
ಕಂದನು ಇವ ಕೇಳಯ್ಯ । ಎಂದು ಪೇ–
ಳಿದ ಗೌರಿಯ ನುಡಿಯಾ ।
ಮುದದಿ ಶಿರದೊಳಾಂತನು ನಂದೀಶ್ವರ
ಮುಂದೆ ಕೇಳಿ ಕಥೆಯ । ಅನಿತರೊಳ್
ಬಂದ ಕಾಮರಾಯ । ಪೋಗ ಬಹು–
ದೆಂದ ಪ್ರಥಮಗೇಯ । ೧೯

ವಾಮದೇವ ಕುಳಿತಿಹ ಗುಹೆಯೊಳಗೆ
ಕಾಮಪೊಕ್ಕನಂದು । ಕರದಿ ಜ–

ಪಮಾಲೆ ಪಿಡಿದು ಮುಂದು । ಮ–
ಹಾಮಂತ್ರಗಳ ಜಪಿಸುತಂದು ।
ನೇಮದೊಳೇಕೋಭಾವದೊಳಿರುತಿಹ
ಸೋಮಧರನ ಕಂಡ । ಏ–
ನು ಮಾಡುವದೆಂದು ಪ್ರಚಂಡಾ । ಇಕ್ಷುಧ–
ನುಶರಗಳ ಕೈಕೊಂಡಾ । ೨೦

ವಿನಯದಿಂದ ಪ್ರಾರ್ಥಿಸಿ ಮಾತಾಡಿಸು–
ವೆನೆಂದು ಶಂಕರನ । ನುತಿಸಿ ಬೇಡಿ–
ದನು ಶೂಲಧರನಾ । ಎಷ್ಟಾದರು
ಕರಗಲಿಲ್ಲವನಮನಾ । ಪರಿಪರಿಯೋ–
ಚನೆ ಮಾಡಿ ಮನ್ಮಥನು ।
ಬೆರಗಾಗುತಾ ನಿಂತಾ
ಸಮಯನೋಡುತ–
ಲಿರತಿಯ ಕಾಂತಾ । ಮನ
ದಿ ಹೊಂದಿದನು ಮಹಾಚಿಂತಾ ೨೧

ಯಾವ ಬಗೆಯಲಿ ಶಿವನ ಭೇದಿಸುವೆ
ನೆಂದು ಯೋಚಿಸಿದನು । ಇ–
ಕ್ಷು ಧನುವನು ಜೇ ಹೊಡೆದಾನು । ಮಹೇ–
ಶನ ಮರ್ಮಸ್ಥಳಗಳನು ।
ಪುಷ್ಪ ಬಾಣಗಳೊಡೆಸೆಯೆ ಮ–
ಹಾದೇವನ ದರ್ಪಕನು । ಅನೇಕ
ಶರಗಳನು ಸುರಿದಾನು । ಜ–
ನರೆ ಕೇಳೀಯಾಶ್ಚರ್ಯವನು । ೨೨

ಆ ಮಹೇಶ್ವರನ ಮೂಲ ತಿಳಿಯಲಿಂ–
ದ್ರಾದಿಸುರರಿಗಳವೆ । ಕೇಳಿಯೀ
ಮಹಿಮೆಗಳನು ಪೊಗಳುವೆ । ಪಶುಪತಿಗೆ
ಕಾಮನೇನು ಲಕ್ಷ್ಯವೆ ।

ಕಾಮಿಯೆಂದು ಪೇಳುವರರಿಯದವರು
ಕರಿಚರ್ಮಾಂಬರನಾ । ಮೀನ ಕೇ–
ತನನ ಬಾಣಕೆ ಮನಾ । ಬಹಿರ್ಮು–
ಖನಾಗಿ ನೋಡಿ ಸ್ಮರನಾ । ೨೩

ಕಣ್ಣುತೆಗೆದು ಮುಕ್ಕಣ್ಣಯಲೋ ನಿನ–
ಗೆನ್ನೊಳೇಕೆ ಪಂಥಾ । ಛೀ
ಛೀನಡಿ ಹೋಗು ಹೋಗು ಭ್ರಾಂತ । ಎಂದು ತಾ–
ತನ್ನನಿಜಸ್ವಾಂತ–।
ವನ್ನು ಪೂರ್ವದಂದದಿ ತಪದಲ್ಲಿರಿಸಚ–
ಲನಾಗಿ ನಿಂತಾ । ಶಿಲೆಯ
ಪೋಲ್ವಂದದಲಾ ಶಾಂತಾ । ಶೂರ್ಪಕಾ–
ರಿಯು ಎದುರಲಿ ನಿಂತಾ । ೨೪

ನಾನು ಬಂದಾ ಕಾರ್ಯವ ಕೇಳದಲೆ ಇ–
ದೇನೀ ಪುರಹರನು । ಛೀಹೋಗೋ–
ಗೆಂದು ಗರ್ಜಿಸಿದನು । ಎನುತ ತೆ–
ಗೆದೆಚ್ಚ ಪೂಶರವನು ।
ನಾನಾವಿಧದಲಿ ತನ್ನ । ಚಮತ್ಕಾ–
ರಗಳ ತೋರಿಸಿದನು । ಮನದಿ
ಭಯಗೊಳುತ ಮನಸಿಜನು ।
ಮುಂದಾಗುವ ಕಥೆಯ ಕೇಳಿಯಿನ್ನು ೨೫

ಭರ್ಗಕಣ್ದೆರೆದು ನೋಡಲಾಕ್ಷಣದಿ
ಭರದಿಂ ಮನ್ಮಥನಾ । ಕೋಪಕಿಡಿ–
ಯಿಡುತ ಫಣೆಗಣ್ಣ । ತೆಗೆದು
ನೋಡಲು ತಕ್ಷಣ । ಚಿಣ್ಣಾ

ಭುಗ್ಗು ಭುಗ್ಗುಯೆಂದೇಳ್ವ ಉರಿಗಳಿಂ
ದಗ್ಧನಾದ ಮದನಾ । ಭಸ್ಮದಂ–
ತಿದ್ದು ಮರ್ಮಸದನಾ । ಅಗ್ನಿವ್ಯಾ
ಪಿಸೆ ಬ್ರಹ್ಮಾಂಡವನಾ ೨೬

ಸುರರು ಕಿನ್ನರರು ಗಡಗಡ ನಡುಗುತ
ಬೆರಗಾದರು ನೋಡಿ । ಅವರ–
ವರು ಗುಂಪುಗುಂಪು ಕೂಡಿ । ಹಾಹಾಯೆನುತ
ಶಿರವನಲ್ಲಾಡಿ ।
ಚರರು ಬಂದು ರತಿಗೀ ಸುದ್ದಿಯ ಪೇಳಿ–
ದರು ದುಃಖ ಮಾಡಿ । ಕೇಳಿ
ನಾರಿಯರು ಶೋಕವಮಾಡಿ । ರತಿಯು
ನೆಲದೋಳ್ ಬಿದ್ದೊರಳಾಡಿ । ೨೭

ಹಾಹಾರಮಣಾ ಹಾ ನಿಜೇಶ ಹಾ
ಪ್ರಾಣಕಾಂತಕಾಮಾ । ಎನ್ನ
ಹೃತ್ಸಾರಸಾಭಿರಾಮಾ । ಸಮರ
ಕರ್ಕಶನಿಸ್ಸೀಮ ।
ಸಾಹಸ ಮಾಡುವೆನೆಂದು ಪೋಗಿ ಶಂ–
ಕರನಿಂದಲಿ ಮಡಿದೆ । ಪೇಳಿದಮಾ–
ತ್ಕೇಳದೆ ನೀ ನಡೆದೇ । ಪೋಗಬೇ–
ಡೆಂದು ನಾನು ನುಡಿದೆ ೨೮

ಎನ್ನ ಮಾತು ಕೇಳಿದ್ದರೆ ನಿನಗೀ
ಪರಿಯಹದೇ ಜೀಯಾ । ಮೃತ್ಯುವಾ–
ದನು ಗುರು ಹಾ ಪ್ರಿಯಾ । ಬಂದು ಈ
ಬಗೆ ಮಡಿದನಯ್ಯಾ ।
ನನ್ನ ಹೀನ ಭಾಗ್ಯವು ಇಂತಾಯ್ತೆಂ–
ದಳಲಿದಳಾ ನಾರೀ । ಬಿದ್ದು ಹೊ–
ರಳುತ ಮೂರ್ಛೆಯ ಸಾರಿ । ಚೇತರಿಸಿ
ಬಳಲುತ ಬಾಯಾರಿ । ೨೯

ಇರಲಿತ್ತಲು ಶಂಕರನ ಮುಂದೆ ಮಡಿ–
ದಿರುವ ಪುಷ್ಪಶರನ । ನೋಡಿತಪ–
ಭಂಗವಾದ ಹದನಾ । ಕೋಪಕಿಡಿ–
ಯಿಡುತ ತ್ರಿಪುರ ಮಥನಾ ।
ಅರಘಳಿಗೆಯಲಿಯಜಾಂಡ ಸುಡುವವೋಲ್
ಹರನು ಘುಡು ಘುಡಿಸುತಾ । ತನ್ನ ಮುಂ–
ದಿರುವ ಸ್ಮರನ ಭಸಿತ । ಪೂಸಿ–
ಕೊಂಡನು ಮೈಯೊಳಗಾತಾ । ೩೦

ರುದ್ರ ಭಸ್ಮವನು ಪೂಸಿಕೊಂಡು ಕಾ–
ಮೋದ್ರೇಕದಿ ಗೌರಿ । ಯನ್ನುನೆ–
ನೆದನು ಮನದಿ ಪುರಾರಿ ।
ಬಂದಳಾಗಿರಿರಾಜ ಕುಮಾರಿ ।
ಪೊದ್ದಿ ಈರ್ವರು ಮಹಾಸುಖದಲಿ ಸಾ–
ವಿರ ವರುಷವು ಸೇರಿ । ಮಹಾ ಮೈ–
ಥುನದಿ ಮಿತಿಯ ಮೀರಿ । ಇರುತ–
ಲಿದ್ದನು ಅಂಧಕ ವೈರಿ ೩೧

ಭೂನಭೋಹಿತರಾಳವು ತುಂಬಿ ಪ್ರಕಾ–
ಶಿಸಿತು ಶಿವನ ತೇಜಾ । ನೋಡಿ ಭಯ–
ದಿಂದಲಮರ ರಾಜ । ಪ್ರಮುಖರೆಲ್ಲರು
ಕೂಡಿ ಸಮಾಜಾ ।
ಏನು ಮಾಡುವುದು ನಾವೀ ತೇಜವ
ಧರಿಸುವರಾರೆಂದು । ಈಗ ಎ–
ನ್ನುತ ಯೋಚಿಸಿ ಮುಂದು । ವಹ್ನಿಯನು
ಪ್ರಾರ್ಥಿಸಿದರು ಅಂದು ೩೨

ಅನಲ ಹರನ ತೇಜವನು ಧರಿಸಲಾ
ಇಳಿದುದು ಭೂಮಿಯಲಿ । ಶ್ವೇತನಗ
ವೆಂಬೋನಾಮದಲಿ । ಶರವಣ

ದೊಳುದಿಸೆ ಸ್ಕಂಧನಲ್ಲಿ ।
ವಿನಯದಿಷಟ್ಕೃತಿಗಳವಗೆ ಸ್ತನ್ಯ-
ಪಾನಕ ಮಾಡಿಸಲಲ್ಲಿ । ಪಾನಮಾಡಿ-
ದ ನಾರ್ರೊಗದಲ್ಲಿ । ಷಣ್ಮು-
ಖನೆಂದಾಯ್ತು ಪ್ರಸಿದ್ಧದಲಿ ೩೩

ಬಳಿಕ ಪ್ರಾರ್ಥಿಸಿದರಾಸುಮನಸ-
ರೆಲ್ಲರು ಗಂಗಾಧರನಾ । ಸೇನಾಧಿಪ
ನಾಗೀ ಷಣ್ಮುಖನಾ । ಕೊಡು ಎನುತ
ಕೇಳಲು ಶಂಕರನಾ ।
ದಳಪತಿತ್ವವನು ಕೊಟ್ಟು ನುಡಿದನಾ
ಶಿವನು ತನ್ನ ಮಗನಾ । ಕೇಳುತಾ-
ರಕನೆಂಬುವ ಖಳನಾ । ಮುರಿವನೇ-
ಮವ ಕೊಟ್ಟೆ ನಿನಗೆ ನಾ । ೩೪

ತಂದೆಯಪ್ಪಣೆಯ ತಲೆಯೊಳಾಂತನಾ
ಸ್ಕಂದ ಸುರರ ನೋಡಿ । ಸಕಲ ಚತು-
ರಂಗ ಬಲವ ಕೂಡಿ । ಕಾರ‍್ಯ ಪ್ರಾ-
ರಂಭವ ಮಿಗೆ ಮಾಡಿ ।
ಇಂದೆ ಸರ್ವರೂ ತೆರಳಿ ಖಳನ ಪುರ
ಭೇದವಸರಸದಲಿ । ಮುತ್ತಿಗೆಯ
ಬಡಿಸಿ ತವಕದಲ್ಲಿ । ದನುಜ ಕ್ರೋ-
ಧದಿ ಯುದ್ಧಕೆ ಬರಲಿ । ೩೫

ಪರಿವಾರ ಸಮೇತದಿ ರಿಪುವನು ಸಂ-
ಹರಿಸುವೆ ನಾನೆಂದಾ । ತಂದು ನಿಲಿಸಿ-
ದರು ಮಹಾಸ್ಯಂದ । ನವನು
ಏರಿದನಾಕ್ಷಣ ಸ್ಕಂಧ ।
ಮೊರೆವ ಮಹಾವಾದ್ಯಗಳಲಿ ಜಯ ಜಯ

ಎನಲು ತರುಣಿ ವೃಂದ ।
ಆರತಿಗಳೆತ್ತಿದರಾನಂದ । ಪಾಡಿಸು-
ಸ್ವರಗಾನಗಳಿಂದಾ । ೩೬

ಭೇರಿಗಿಡಿಬಿಡೀಢಕ್ಕಿ ಡಮರುಗವು
ಚೀರುವ ಕಹಳೆಗಳು । ಹೊಡೆದವನಿ-
ಸ್ಸಾಣಝಲ್ಲರೆಗಳು । ಅಷ್ಟದಿ-
ಗ್ಗಜವು ಕಿವುಡುಗೊಳಲು ।
ಧೀರ ಕುಮಾರಸ್ವಾಮಿ ಧನುಷ್ಟಂ-
ಕಾರನಿನಾದಗಳು । ಸುಮನಸರ
ಹರಿನಾದಧ್ವನಿಗಳು । ಅಜಾಂಡಕ-
ಟಾಹವ ಭೇದಿಸಲು । ೩೭

ಇನಿತು ಸಕಲ ಸನ್ನಾಹದಿಂದಖಿ-
ಳನಿರುವ ಪಟ್ಟಣವನು । ಸೇರಿಹಾ-
ಕಿದರು ಮುತ್ತಿಗೆಯನು । ದನುಜರೆ-
ಲ್ಲರು ನೋಡೀಹದನು ।
ಘನಗರ್ಜಿತದಿಂ ಬಂದು ತಮ್ಮ ದೊರೆ-
ಗರುಹಲು ಸುದ್ದಿಯನು । ಕೇಳಿ-
ತಾರಕನು ಕೋಪಿಸಿದನು । ತನ್ನ
ಮಂದಿಗಳನು ಕರಸಿದನು । ೩೮

ಏನಿದಾರ್ಭಟವು ಯಾರು ಬಂದರೈ
ಶೂರರು ನೀವಿರಲು । ನಮಗೆ ಭಯ-
ವೇನೆನಲಾ ಖಳರು । ತಂಡ ತಂ-
ಡದಿ ಯುದ್ಧಕೆ ಬರಲೂ ।
ನಾನಾವಿಧ ವಾದ್ಯಗಳ ರಭಸದಿಂ
ಸೇನೆಗಳು ಕಲಕಲು । ಬಾಣಗಳ
ಸೋನೆಮಳೆ ಸುರಿಯಲು । ಬಂದ
ದಾನವರು ಕೊಳಗುಳದೊಳು । ೩೯

ಶಕ್ತಿ ಪಟ್ಟಿಸಾ ಶೂಲ ಪರಶು ಮುದ್ಗರ
ಕತ್ತಿಕಠಾರೀ । ಸುರಿದವರಿವರು
ಮಿತಿಮೀರಿ । ಇರಲು ದಾನ-
ವ ಸೇನೆಯು ಚೆದರೀ ।
ರಕ್ತನದಿಯೊಳೀಸಾಡಿದರಾ ಪಾ-
ಯ್ದಳಗಳಾನೆ ಕುದುರೀ ।
ಗಳು ಮಡಿದು ಸೇರಿ । ದವೆಮನಗರೀಯಿದೆಲ್ಲಾ
ಕೇಳ್ದನು ದೈತ್ಯದೊರಿ । ೪೦

ಯಾರು ನಮಗೆ ಸರಿ ಮೂರು ಲೋಕದಲಿ
ವೀರರೆ ನೀವ್ ಕೇಳಿ । ಪಶುಪತಿ ಕು-
ಮಾರ ಮಾಳ್ಪಧಾಳೀ । ನುಡಿದು ಬಿ-
ದ್ದುದು ನಮ್ಮ ದನುಜಾಳೀ ।
ಶೂರರಾ ನೋಡುತ ಸುಮ್ಮನೆಯಿರುವುದು
ಕಾರಣವೇನೆಂದಾ । ನುಡಿಯ ಕೇಳುತ
ದಾನವ ಬೃಂದಾ । ವೆಲ್ಲ
ತಾರಕಗೆ ಪೇಳ್ದರೊಂದಾ ೪೧

ಎಮ್ಮ ಬೀಳ್ಕೊಡಿವನ್ನಮ್ಮು ಮುರಿ-
ವೆವಸುರಾಧಿಪ ಕೇಳಿನ್ನು । ಎನಲು ಕಳು-
ಹಿದನು ಸೈನ್ಯವನು । ಮಹಾರ್ಭಟ-
ದಿಂದ ಬರುವವರನು ।
ಹುಮ್ಮು ಹುಮ್ಮೆನುವ ರಕ್ಕಸ ಬಲಗಳ
ಷಣ್ಮುಖ ನೋಡಿದನು । ತನ್ನ
ಸೇನಾ ಸನ್ನಾಹವನು । ಕಳುಹ
ಮಾಡುತಲಿರೆ ಯುದ್ಧವನು ೪೨

ಕಾಲು ಕೈಯ್ಯಿಕಣ್ಕಿವಿ ಹೊಟ್ಟೆಯು ಮೊಳ-
ಕಾಲ್ಮೊಗ ತಲೆ ತೊಡೆಯು । ಒಡೆದು ಬಿ-
ದ್ದುದುದಾನವ ಪಡೆಯು । ಮೇಲೆ ಸುರಿ-

ಯುವ ಬಾಣದ ಮಳೆಯು ।
ಕಾಲಕಾಲವ ಕುಮಾರ ಧನುರ್ಜ್ಯಾ
ಘೋಷ ಮಾಡಿನಗುತಾ । ಸುಮನಸರಿ–
ಗೆಂದನಾಗ ಮಾತಾ । ಕುನ್ನಿಗಳ
ಬೇಗ ಕೊಲ್ವುದೆನುತಾ । ೪೩

ಎನಲು ಪ್ರಥಮಗಣಸಹಿತ ಹಸಾದ
ಮೆನುತ್ತ ಶತ್ರುಗಳನು । ಹೊಡೆಯುತಿ–
ದ್ದರು ತಲೆ ತಲೆಗಳನು । ಎಲ್ಲಾ ಕೇಳಿದ ನಾ–
ತಾರಕನು ।
ಕನಲಿ ಸೈನ್ಯಕ್ಷಯಕಾಗಿ ಮನದಿ ಬಲು
ಚಿಂತೆಯ ಮಾಡಿದನು । ಏನು ಯೀ–
ಪರಿಮಾಡಿದನಿವನು । ಈಗನಾ
ಯುದ್ಧಕೆ ಪೊರಮಡುವೆನು ೪೪

ಹಲ್ಲು ಕಡಿದು ಮೀಸೆ ಹುರಿಮಾಡುತ
ಬಲ್ಲಿದ ರಾಕ್ಷಸರಾ । ನೋಡಿ ತಾ
ರೆಂದನು ನಿಜತೇರಾ । ಏರಿತ–
ನ್ನಮಹಾಸೈನಿಕರಾ ।
ನಿಲ್ಲದೆ ನೂಕಿದರಾರ್ದುದಾ–
ನವರು ಮುಂದೆ ಕ್ಷೋಣಿ । ಪದಹತಿ
ಗಳಿಂದ ಕಂಪಿಸೆ ಧರಣಿ । ಮೋಹರಿಸಿ
ತಾಗ ಸುರಶ್ರೇಣಿ ೪೫

ಹೊಡಿಬಡಿತಿವಿಕೊಲ್ಲುದ್ದುದಬ್ಬುಕ–
ತ್ತರಿಸೊಯಿವರಕೊರಳಾ । ಹೊಟ್ಟೆಗಳ
ಬಗೆದು ತೆಗಿಯೊ ಕರುಳಾ । ಎಂದು ಕರ–
ದನು ತಾರಕ ಸರಳಾ ।
ಜಡಿಮಳೆವೋಲ್ಸುರಿವಸುರರ ಬಾಣಕೆ

ತರಹರಿಸದೆ ಸುರರು । ಮಹಾಭಯ-
ದಲಿ ಮನಬೆದರಿದರು । ಹರನಕುವ-
ರನಿಗರುಹಿದರು ೪೬

ಕೇಳಿಷಣ್ಮುಖನು ಕಿಡಿಕಿಡಿಯಾಗುತ
ತಾರಕಗಿದಿರಾದ । ನವನ ಮೇ-
ಲ್ಬಾಣ ಮಳೆಯ ಸುರಿದಾ । ಅಸುರ ತ-
ಕ್ಷಣದಿ ಕತ್ತರಿಸಿದಾ ।
ಆಳುತನವೆ ಎಮ್ಮಲ್ಲಿ ನಿನಗೆನುತ
ಎಚ್ಚನು ಕ್ರೂರ ಶರಾ । ಪುಡಿಪುಡಿಯ
ಮಾಡಿದನಾ ಧೀರಾ । ಷಣ್ಮುಖನ
ಪೊಗಳಲು ಸುರನಿಕರಾ । ೪೭

ಮತ್ತು ಎಚ್ಚು ಮಗುಳೆಚ್ಚು ಕೊಚ್ಚಿದನು
ದೈತ್ಯರ ತಲೆಗಳನು । ಮಹಾಹವಗೈ-
ಯ್ಯುತ ಷಣ್ಮುಖನು । ತಾರಕಗೆ
ಮಾಡಿದ ಗಾಯವನು ।
ತತ್ತರಿಸುತ ಮಾಯಾಯುದ್ಧವ ಮಾ-
ಡುತಿರ್ದನಾ ಖಳನು । ಅದನು ಲೆ-
ಕ್ಕಿಸದೆ ಶಿವನ ಮಗನು । ಬ್ರಹ್ಮಾಸ್ತ್ರದೊ-
ಳವನ ತಲೆ ಕಡಿದನು । ೪೮

ಗಿರಿಶೃಂಗದಂತುರುಳವನ ತಲೆ
ಬೆರಗಾಗಿ ದನುಜರು । ಮಹಾಶೋ-
ಕದಿ ಗೋಳಿಡುತವರು ।
ಶೂರ ಪದ್ಮಾಸುರನಿಗರುಹಿದರು
ಕರಗಿ ಚಿಂತಿಸುತ । ಶೂರಪದ್ಮ
ಹೊರಟನು ಸೇನಾ ಸಹಿತ ।
ಮುರಿವೆ ಈಗಲಿವನ ನೋಡೆನುತ ।
ತನ್ನಕೈ ಕತ್ತಿಯ ಝಳಪಿಸುತಾ । ೪೯

ಶೂರಪದ್ಮಯುದ್ಧಕೆ ಬಹ ರಭಸದಿ
ಸುಮಸನಸರೋಡಿದರು । ಪಲಾಯನ
ಕೊಳಗಾಗೆ ಪ್ರಮಥರು । ಮೀರಿ ಬರುತಿ–
ದ್ದರು ರಾಕ್ಷಸರು ।
ಕಾರುಗತ್ತಲೆ ಕವಿದಂತಾಗಲು ಖ–
ಳರು ಮಾಯದಿಂದ । ಪಿಡುಗು ಪೋ–
ಲ್ವಾಯುಧಗಳ ವೃಂದಾ ।
ಸುರಿದು ಬೊಬ್ಬೆಯಿಡುತಲಿರೆ ಸ್ಕಂಧ ೫೦

ನಾಸಿಕದೋಳ್ ಬೆರಳಿಟ್ಟು ನೋಡಿದ ಮ–
ಹಾಸುರ ಸನ್ನಾಹಾ । ಸಮಂತ್ರೋ–
ಕ್ತದಿ ಬಿಡೆಸಮ್ಮೋಹಾ ।
ನಾಸ್ತ್ರ ಬರುತಿರಲಹಿತರು ಮೋಹ–
ರಾಶಿಯಲಿ ಮುಳುಗಿ ಮುಂದರಿಯದೆ ತಾವ್
ತಮ್ಮೊಳು ಕಡಿದಾಡೀ । ತಲೆತಲೆಗ–
ಳನು ಪುಡಿಪುಡಿ ಮಾಡಿ । ಮಡಿ–
ದ ಸೈನ್ಯವನೆಲ್ಲವ ನೋಡಿ । ೫೧

ಶೂರಪದ್ಮ ಬಹು ಕ್ರೂರದಿಂದ ತನ
ತೇರಸ್ಕಂದನೆದುರಾ । ನೂಕಿ ಮಳೆ
ಗರೆದರುಬಹಳ ಶರಾ । ಲಕ್ಷ್ಯಮಾ–
ಡದೆ ಶಿವನಕುಮಾರ ।
ಮೂರು ಬಾಣದಿಂದಹಿತನ ನೋಯಿಸೆ
ಮುನಿದು ದನುಜ ಹೊಡದ । ಕ–
ತ್ತರಿಸಿ ಮತ್ತೆ ಅವನ ಕರೆದಾ ।
ಕಾರ್ಮುಖವ ಭೇದಿಸಿ ಬೊಬ್ಬಿರಿದಾ ೫೨

ಹೊಸಬಿಲ್ಲನು ಕೈಗೊಂಡು ಮೋದದಿಂ
ಅಸುರ ಶಿವನ ಮಗನಾ । ನೋಯಿಸಲು
ದೆಸೆದೆಸೆಯಲಿ ಸುಮನ । ಸರೋಡಲು

ಮಸಗಿದಾನವ ಗಣ ।
ಮಸೆಗಾಣಿಸಲಸುರರ ನೋಡುತ ಕೋ–
ಪಿಸುತಲಿ ಷಡ್ವದನಾ । ಸಾರಥಿಗೆ
ಬೆಸಸಿದ ಶತ್ರುವಿನಾ । ಮುಂದೆ ನಿ–
ಲ್ಲಿಸು ನಮ್ಮ ರಥವನಾ । ೫೩

ಸಾರಥಿ ಭರದಿಂ ತೇರನಡಿಸಲಾ
ಶೂರ ಪದ್ಮನೊಡನೆ । ಷಣ್ಮುಖನು
ಪೋರೆ ದನುಜನ ಸೇನೆ । ಬಳಲಿ ಬಾ–
ಯಾರಿ ಪಡುತ ಬ್ಯಾನೆ ।
ಚೀರುತ ದೆಸೆ ದೆಸೆಗೋಡಲ ಮರರೆ–
ಲ್ಲರು ಭುಜಗಳ ತಟ್ಟಿ । ಮಹಾಯುಧ–
ದಲಿ ತಲೆಗಳ ಕಟ್ಟಿ । ಕೊಂಡು ಕಳ–
ನೊಳಗೆ ಪೆಣಗಳೊಟ್ಟಿ ೫೪

ಸಿಹ್ಮನಾದ ಗೈಯ್ಯುತಲಾ ಅಮರರು
ಬ್ರಹ್ಮಾದಿಗಳೆಲ್ಲಾ । ನಭದಲೀ
ಭಲಾಯನುತ ನಿಲ್ಲ । ಲನಿತರೊಳು
ದುರ್ಮತಿಗಳಿಗೆಲ್ಲ ।
ಹಮ್ಮು ಮುರಿದು ಮುಖಬಾಡಿರೆ ಕಾಣುತ
ಷಣ್ಮುಖ ಬೊಬ್ಬಿರಿದಾ ।
ಅಹಿತರಲಿ ಶರದ ಮಳೆಯ ಕರೆದ ।
ನಿಮ್ಮದು ದುಷ್ಕರ್ಮ ಬಿಡದು ಎಂದ ೫೫

ಮೋದದೊಳಹಿತ ನುಡಿಸಿದ ಗುಹ ವಸು–
ರಾಧಮ ಕೇಳ್ಮನ್ನಾ । ನೀನು ಮಾ–
ಡಿದ ದುಷ್ಕೃತ್ಯವನಾ । ನಿನಗುಣಿ–
ಸದಲೆ ಬಿಡುವೆನೆನಿನ್ನಾ ।
ಸಾಧುಗಳನು ನೋಯಿಸಿದ ಪಾಪವನು

ಆದುದೀಗ ಮೃತ್ಯು । ನಿನಗೆ ನರ–
ಕದ ಬಲು ಸಂಪತ್ತು ।
ಎಂದು ಹೊಡೆದನು ಕಣೆಗಳ ಹತ್ತು ೫೬

ಮೂರು ಬಾಣದಲಿ ಧ್ವಜವ ಮುರಿದು ಹದಿ–
ಮೂರರಿಂದ ಕುದುರೆ । ಗಳ್ಹೊಡೆಯಲು ದನು–
ಜರೆಲ್ಲ ಬೆದರೆ । ಹೊಟ್ಟುಗಳು
ಧೀರಸ್ಕಂಧಗೆದುರೇ ।
ಸಾರಥಿಯನು ಕತ್ತರಿಸಿದನಹಿತನ
ತೇರನುಗ್ಗಡಿ ಮಾಡಿ । ಶೂರ ಪದ್ಮನ
ವಿರಥವ ನೋಡಿ ।
ಸುರರು ಷಣ್ಮುಖನ ಕೊಂಡಾಡೀ ೫೭

ಪ್ರಳಯ ಕಾಲಭೈರವನಂದದಸು–
ರೇಶ ಕರದಿ ಗದೆಯಾ । ಪಿಡಿದು ಸುಮ–
ನಸರೆಲ್ಲರಸದೆಯಾ । ಲೂಹಿಸುತ
ಬರೆನೂರ್ಝೂರ್ಗಣೆಯ ।
ಕಲಿಷಣ್ಮುಖ ಸುರಿಯುತಲಾಗದೆಯನು
ಮುರಿಯಲೆಚ್ಚನಾಗ ।
ನಿರಾಯುಧನಾಗಿ ದನುಜ ಬೇಗ ।
ಮುಷ್ಟಿಯುದ್ಧಕೆ ಬರುತಿರಲಾಗ ೫೮

ಹಿಡಿದು ಪಿಡಿದು ಹೊಡೆಯುವೆ ನೋಡೆನ್ನುತ
ಸಡಗರದಿಂದಿವನು । ಸುಬ್ರಹ್ಮ–
ಣ್ಯನ ಮೂದಲಿಸಿದನು । ಕೋಪಕಿಡಿ–
ಯಿಡುತ ಮಹಾಸುರನು ।
ಘುಡು ಘುಡಿಸುತ ಮೇಲ್ವಾಯ್ದು ಬರಲು ಕೈ
ಕಡಿದ ಶಿವನ ಮಗನು । ಕಾಲ್ಗಳಿಂ–
ದೊಡೆಯಲೂಹಿಸಿದನು । ಮಹಾಸ್ತ್ರದಿ
ಕಡಿಯೆ ಕಾಲ್ಗಳನ್ನು । ೫೯

ಬಾಯಿ ತೆರೆದು ನುಂಗುವೆನೆನ್ನುತ ಮೇಲ್
ವಾಯುತ ಬರುತಿರಲು । ಕಂಡ ಕಮ–
ಲಾಸನ ಸ್ಕಂದನೊಳು । ಸಮೆದಸ್ತ್ರವ
ಹೂಡೆಂದು ನುಡಿಯಲು ।
ದಾಯವರಿತು ಷಣ್ಮುಖ ಸಂತೋಷದಿ
ಧ್ಯಾನ ಮಾಡಿ ಧನುವಾ । ಜೇ ಹೊಡೆದು
ಕೂಡೆ ಬ್ರಹ್ಮ ಶರವಾ ।
ಸಮಂತ್ರದಿ ಹೊಡೆದನಸುರನುರವಾ ೬೦

ಹತ್ತು ನೂರು ಸಾವಿರ ಲಕ್ಷವು ಕೋಟಿ
ಹತ್ತು ಕೋಟಿಯಾಗಿ । ಭೂಮಿಯಾ–
ಕಾಶಕೆ ಒಂದಾಗಿ । ಉರಿಯು ಮಸ–
ಗುತ್ತದ್ಭುತವಾಗಿ ।
ಮತ್ತೆ ಶೂರ ಪದ್ಮನ ಹೃದಯದಲಿ ಹೋ–
ಗುತ್ತ ರಕ್ತ ಕುಡಿದು । ಶರೀರದ
ಸತ್ವವೆಲ್ಲ ಸೆಳೆದು । ಬಾಣತಲೆ
ಕತ್ತರಿಸಿತು ನಲಿದು । ೬೧

ಮೇರುಶಿಖರದಂದದಿ ಘೋರಾ–
ಕಾರದಿ ತಲೆ ಬೀಳ । ಲಾಕ್ಷಣದಿ ಹ–
ತ ಶೇಷರು ಗೋಳ । ಕಂಡು ಬೃಂ–
ದಾರಕರ್ನಿಸ್ಸಾಳ ।
ಭೋರೆನ್ನಲು ಮೌನಿಗಳೆಲ್ಲರು ಭೂ–
ಭಾರವಿಳಿದುದೆಂದೂ । ಪು–
ಷ್ಪರಾಶಿಗಳ ತಾವಂದು । ಷಣ್ಮುಖನ
ಪೂಜಿಸಿದರು ಬಂದು ೬೨

ಸುರರು ಪೂಮಳೆಯಗರೆದು ಕುಮಾರನ
ಪರಿಪರಿ ವಿಧದಿಂದ । ಪೊಗಳಿದರು
ಪರಮಯೋಗಿ ಬೃಂದ । ವೆಲ್ಲ ಹೊಂದಿ–

ದರು ಮಹಾನಂದ ।
ಕಿರುನಗೆಯಿಂದ ಷಡಾನನ ಇಂದ್ರನ
ಮೊಗನೋಡಿಂತೆಂದ । ಕೇಳ್ನಿಮ್ಮೆ-
ಲ್ಲರ ಸಹಾಯದಿಂದ । ಮಹಾಸು-
ರರನು ಜಯಿಸಿದೆವೆಂದ ೬೩

ಇಂದ್ರಮುಖಸುರರ ಮನ್ನಿಸಿದ ಕಲಿ
ಸ್ಕಂದನಾಗ ಬ್ರಹ್ಮ । ಹರಿಶಿವ ಸು-
ರೇಂದ್ರಾದ್ಯರು ತಮ್ಮ । ತಾವೆ ಮುದ
ಹೊಂದಿಮಹಾತ್ಕರ್ಮ-।
ವೆಂದು ದೇವ ಸೇನಾ ಪಟ್ಟವ ಕ-
ಟ್ಟಿದರಾ ಸುಬ್ರಹ್ಮ । ಣ್ಯನಿಗೆ ಮೌ-
ನೀಂದ್ರರು ನಿಜಧರ್ಮ । ದಿಂದ ಹರ-
ಸಿದರ್ಕೇಳೀ ಕರ್ಮಾ ೬೪

ಸ್ಮರನೇ ಕಾರಣದಿಂದ ತಾರಕಾ-
ದ್ಯರು ಮಡಿದರು ಅಂದು । ತ್ರಿಪುರ ಸಂ-
ಹರ ಕರುಣಾಸಿಂಧು । ಮಹಾಸಂ
ತಸ ಪೊಂದಿದನಂದು ।
ಇರಲಿತ್ತ ಮದನನರಸಿ ರತಿಯು ಶಂ-
ಕರನ ಮುಂದೆ ಬಂದು ।
ಬಿದ್ದು ಶೋಕದಿ ಹೊರಳಿದಳಂದು । ಪತಿಯ
ಸಹಗಮನ ಮಾಳ್ಪೆನೆಂದು ೬೫

ಪರಮ ಪತಿವ್ರತೆಯಾದ ರತಿಯ ಭ-
ಕ್ತಿಗೆ ಮೆಚ್ಚಿದ ಶಿವನು । ಮಾಡ-
ದಿರು ಪತಿಸಹಗಮನವನು । ಮುಂದೆ ಅವ-
ತರಿಸುವ ಮನ್ಮಥನು ।

ಇರು ನೀ ಶಂಬರನಲಿ ಮಾಯಾವತಿ
ಎನಿಸಿಕೊಂಡು ಸ್ಮರನು । ಕೃಷ್ಣಸು-
ತನಾಗಿ ಉದಿಸಿಬಹುನು । ಶಂಬ-
ರನ ತರಿದು ಬಿಸಾಡುವನು । ೬೬

ಹರನಾಜ್ಞೆಯ ಶಿರದಲಿವಹಿಸಿ ರತಿ
ಇರಲು ಶಂಬರನಲಿ । ರುಕ್ಮಿಣಿಗೆ
ಸ್ಮರನು ದ್ವಾರಕಿಯಲಿ । ತನಯನಾ-
ಗುದಿಸಲ ಸುರಕೇಳಿ ।
ಹರಿಯೊಳು ದ್ವೇಷದಿ ಬಿಸುಟನು ಶಿಶುವನು
ಶರಧಿಯಲಿ ಮೀನು ।
ನುಂಗಿತದ ಹಿಡಿದನೊಬ್ಬ ಸೂತನು ।
ಅವನು ಶಂಬರಗೆ ಕಾಣಿಕೆ ಕೊಟ್ಟನು ೬೭

ಮಾಯಾವತಿಯನು ಕರೆದು ಶಂಬರನು
ಮೀನ ಕೊಡಿಸಿ ಬೇಗ । ಪಕ್ವ ಮಾ-
ಡೆಂದು ಪೇಳಲಾಗ । ರಹಸ್ಯದಿ ನಾ-
ರದ ಬಂದಾಗ ।
ತೋಯಜಾಕ್ಷಿ ನಿನ್ನಯ ಪತಿಯಿದರೊಳ-
ಗಿರುವನು ಎನಲಾಗ । ಮತ್ಸ್ಯವನು
ಕೊಯಿದು ನೋಡಿ ರಾಗ । ದಿಂದ ಕಂ-
ಡಳು ಮದನನಬೇಗ ೬೮

ಸಿತಪಕ್ಷದ ಶಶಿಯಂತೆ ಬೆಳೆದನವ-
ನತಿ ರಹಸ್ಯದೊಳಗೆ । ದ್ವಾದಶಾ-
ಬ್ದಗಳಾಗಲು ಮೇಗೆ । ಮಾಯಾವತಿ
ಚಮೃತ್ಕೃತಿಗಳೊಳಗೆ ।

ಸತಿ ಭಾವದಿ ಮಾಯಾ ವಿದ್ಯೆಗಳ ಕ–
ಲಿಸೆ ಕೆಲದಿನದೊಳಗೆ ।
ಪ್ರಾಜ್ಞನಾಗುತ ಮದನನಹಿತಗೆ ।
ಎದುರು ಯುದ್ಧಕೆ ತಾನಗುವಾಗೆ ೬೯

ಶಂಬರಾಸುರ ವಿಜೃಂಭಿಸಲಾ ಬಲು
ಸಂಭ್ರಮದಲಿ ಕಾಮಾ । ಖಳನ ಹೊಂ–
ದಿಸಿದನು ನಿರ್‍ನಾಮಾ । ಮೇಲೆ ಕೊಂ–
ಡಾಡೆ ಸುರಸ್ತೋಮ ।
ಜಂಭವೈರಿ ಮೊದಲಾದಮರರುಸುರಿ–
ಯಲು ಪುಷ್ಪದ ಮಳೆಯ । ಸ್ಮರನುತ–
ಕ್ಕೈಸಿ ತನ್ನ ಸತಿಯಾ । ಭಲಾ ಎ–
ನ್ನುತ ಹೊಗಳಿ ರತಿಯಾ ೨೦

ಸನ್ನುತಿ ಸುತ ರತಿದೇವಿಗೆ ಪೇಳ್ದನು
ನಿನ್ನ ಚಮತ್ಕಾರ । ದಿಂದನಾ ಖಳ–
ನನು ಸಂಹಾರ । ಗೈದನೆಂ–
ದನು ನಗುತಲಿ ಮಾರ ।
ಪನ್ನಗವೇಣಿಪತಿಯ ನುಡಿಕೇಳು–
ತನುಡಿದಳು ವಯ್ಯಾರ । ದಿಂದ ನಾ–
ವಿನ್ನೀಗಲೆದ್ವಾರ । ವತಿಗೆ ಪೋಗ–
ಬೇಕು ಹರಿಕುಮಾರ ೨೧

ಅಂತರಿಕ್ಷಮಾರ್ಗದಲಿ ಬಂದನಾ–
ಕಂತು ರತಿಯ ಸಹಿತ । ಕುಶಸ್ಥಲಿ–
ಗೈದಿ ಜಗನ್ನಾಥ । ಕೃಷ್ಣನರ–
ಮನೆಯೊಳು ಬರಲಾತ ।
ಕಾಂತಾಮಣಿಗಳು ದಿಗ್ಗನೆದ್ದು ಹರಿ–

ಯಂತಿಹವಾರಿವನು । ಎ–
ನ್ನುತ ಪೊಗಲವರೊಳಸದನವನು ।
ರುಕ್ಮಿಣೀದೇವಿ ಕಂಡಳಿದನು ೭೨

ನಸುನಗೆಯಿಂದಿಹ ಸೊಸೆಯನು ಮಗನನು
ಶಶಿಮುಖಿ ತಾ ನೋಡಿ । ಭಲಾ ಇದು
ಹೊಸತೆನ್ನುತಲಾಡಿ । ಮೊದ–
ಲುಸುತನನು ಜ್ಞಾಪಕಮಾಡಿ ।
ಎಸೆದುದು ಪುತ್ರಸ್ನೇಹದಿಂದ ಪಾ–
ಲ್‌ಸ್ತನದಲಿ ಸಿರಿದೇವಿ । ತನ್ನ ಮಗ–
ನಿವನೆನುತಲಿ ಭಾವಿ । ಸಿದ–
ಳುಶರಣ ಜನರ ಸಂಜೀವಿ ೭೩

ರಾಮಕೃಷ್ಣರೈತಂದು ಎದುರೊಳಿಹ
ಕಾಮರತಿಗಳನ್ನು । ನೋಡಿ ಪೊಂ–
ದಿದರಾಶ್ಚರ್ಯವನು । ನಾರದನು
ಮೀಟುತ ವೀಣೆಯನು ।
ಪ್ರೇಮದಿಂದ ಬರಲಾಗ ಹರಿಯು ಮೊದಲಾ–
ದವರಾ ಮುನಿಗೆ । ವಂದಿಸಿ ಪೂ–
ಜಿಸಿದರು ಮುಗುಳುನಗೆ । ಯಿಂ–
ದಮುನಿ ನುಡಿದನು ರುಕ್ಮಿಣಿಗೆ ೭೪

ಪಡೆದ ಆರನೇ ದಿನದಿ ಖಳನಿವನ
ಕಡಲೊಳಗಾಕಿದನು ।
ಕಂಡು ತಕ್ಷಣ ನುಂಗಿತು ಮೀನು । ಬೆಸ್ತ
ಪಿಡಿದಿತ್ತು ಕಾಣಿಕೆಯನು ।
ಅಡಿಗೆಯವಳಿಗೊಪ್ಪಿಸಲಾಕಾಲದಿ
ಮಡಿದೆ ಪೋಗಿ ನಾನು । ಕೇಳಿಸಾ–
ಕಿದಳಿವಳ್ ಪತಿಯನ್ನು । ಶಂಬರನ
ಮುರಿದು ಬಂದನಿವನು । ೭೫

ನಾರದರಾಡಿದ ಮಾತು ಕೇಳಿ ಹದಿ
ನಾರೊರ್ಷದ ಮಗನಾ । ಸೊಸಿಯ
ಕಾಣುತ ಮೈಯುಬ್ಬಿಮನಾ । ಹರುಷದಿಂ-
ದಿರೆ ರುಕ್ಮಿಣಿಕೃಷ್ಣ ।
ತೋರುತ ನಟನೆಯ ನರನಂತೆ ನುಡಿದ ।
ವಾರಿಜಾಕ್ಷಮುನಿಯಾ । ನಿಮ್ಮ-
ನುಗ್ರಹದಿ ಬಂದೆನಯ್ಯಾ । ಎಂದು ಮಾ-
ಡಿದ ವಿವಿಧಾರ್ಚನೆಯ ೭೬

ಪ್ರದ್ಯುಮ್ನನು ಭಯ ಭಕ್ತಿಯಿಂದ ತಾ
ಪದ್ಮಾಕ್ಷನ ಪದಕೆ । ರುಕ್ಮಿಣಿ
ಮೊದಲಾದ ಜನನಿಯರಿಗೆ । ವಂದಿಸಲು
ಮುದ್ದಾಡುತಲಿಮಿಗೆ ।
ಹೊದ್ದುಕೊಂಡು ಹರಸಿದರೆಲ್ಲರು ಧೀ-
ರ್ಘಾಯುವೆಂದು ಸ್ಮರಗೆ । ರತಿಯು ನಮಿ-
ಸಿದಳು ಅತ್ತೆಯರಿಗೆ । ತಕ್ಕೈಸಿ
ಸಂಭ್ರಮಪಡಲು ಮಿಗೆ ೭೭

ಸುರರು ದುಂಧುಬಿ ಮೊಳಗಿಸಿದರು ಅ-
ಪ್ಸರನಿಕರವು ಕುಣಿಯೆ । ದಿವ್ಯ ಪು-
ಷ್ಪದ ಮಳೆಯು ಸುರಿಯೇ । ಬ್ರಹ್ಮಮು-
ಖರೆಲ್ಲರು ಮನವೊಲಿಯೆ ।
ಸ್ಮರನ ಕಥೆಯ ಪೇಳುವರಿಗೆಯಿಹ-
ಪರ ಸುಖಗಳಮರರು । ಮನದಭಿ
ಷ್ಟೆಗಳನೆ ಕೊಡುತಿಹರು ।
ಸ್ಮರಗೆ ಶುಭಮಂಗಳ ಪಾಡುವರು ೭೮

ಮಂಗಳ ಜಯ ಪುರಷಾಂಗನೆಯರ ಮ–
ರ್ಮಾಂಗ ನಿವಾಸನಿಗೆ । ಸಮಸ್ತ ಶು–
ಭಂಗಳಿಗೊಡೆಯನಿಗೆ । ಲೋಕದೊಳ–
ನಂಗನೆನಿದವಗೆ ।
ಹಿಂಗದೀರ್ವರನು ಒಂದು ಮಾಳ್ಪ ಬಲು ಶ–
ರಂಗಳ ಪಿಡಿದವಗೆ । ನೋಡೆಸ–
ರ್ವಾಂಗ ಸುಂದರನಿಗೆ । ಸದಾ ಬೆಳ–
ದಿಂಗಳ ಮಿತ್ರನಿಗೆ । ೭೯

ದೇಹವಿಲ್ಲ ತನಗಾದರು ಸರ್ವರ
ಮೋಹಪಡಿಸುವಗೆ । ಭಲರೆ ಭಲ್
ಸಾಹಸಿಯಾದವಗೆ । ಪರಸ್ಪರ
ದಾಹ ಪುಟ್ಟಿ ಸುವಗೆ ।
ಊಹೆಯಲಿ ದಶಾವಸ್ಥೆಗಳೀವುತ
ಓರ್ವರಿಗೊರ್ವರಿಗೆ । ಪೊಂದಿಸಿ
ಮಹಾಹರುಷಪಡುವಗೆ । ಹೃದಯದೋಳ್
ಸ್ನೇಹ ಪುಟ್ಟಿಸುವಗೆ ೮೦

ಈ ಮಹದಾದಿ ಸೃಷ್ಟಿಯಲಿ ಮೊದಲು
ನೇಮಕವಾದವಗೆ । ಸುರರ
ಸಾರ್ವಭೌಮನೆನಿಸಿದವಗೆ । ಮುಖ್ಯರ–
ಸಕಧಿಪತಿಯಾದವಗೆ ।
ಕಾಮಗೆ ಖಳ ನಿರ್ನಾಮಗೈ । ವ ಗುರು–
ರಾಮವಿಠಲಸುತಗೆ । ಮಹೋನ್ನತನಾಗಿ–
ಹಮನ್ಮಥಗೆ । ರತಿಯ ಹೃ–
ತ್ತಾಮರಸಾರ್ಕನಿಗೆ ೮೧

ವಿಷ್ಣುಶತಕ

೩೪೧

ಶಿರಿದೇವಿ ಹೃತ್ಕುಮುದ ಚಂದ್ರಮನೆ
ಕರುಣಾರ್ಣವಾಗಣಿತ ಸದ್ಗುಣನೇ
ಶರಣಾರ್ಥಿ ಭಂಜನ ಮುರಾಂತಕನೇ
ಪರಮಾತ್ಮ ಪಾಲಿಸು ಪರಾತ್ಪರನೇ ೧

ಕಮಲಾಸನಾದ್ರಿಜೆ ಮನೋಹರ ಮು
ಖ್ಯಮರಾಳಿಯಂ ಭಕುತಿಯಿಂ ಬಲಗೊಂಡು ಮ-
ಹಾತ್ಮರಾದ ಗುರುಪಾದಕೆ ನಾಂ
ನಮಿಸೀ ಪ್ರಬಂಧವನು ಹೇಳುತಿಹೇಂ ೨

ನೂರಾದ ಪದ್ಯಗಳೊಳಾಂ ಸಕಲಂ
ಧಾರಾಳವಾಗಿ ತವ ಸನ್ನಿದಿಯೋಳ್
ಸಾರಂಗಳಂ ಗ್ರಹಿಸಿ ಬಿನ್ನಯಿಪೇಂ
ಶ್ರಿರಾಮನೀಂ ದಯದಿ ಲಾಲಿಸಿ ಕೇಳ್ ೩

ತವ ಪಾದಸೇವಕರ ಸತ್ಕೃಪೆಯಿಂ
ಕವಿತಾ ಧುರೀಣತೆಯು ಬಂದುದು ನಿ_
ನ್ನವ ನಾನು ಜೀವನುಅಕರ್ತನು ಭೋ
ನವ ಯುಕ್ತಿ ಚತುರತೆಗಳೊಂದರಿಯೇಂ ೪

ಜೀವಕ್ಕೆ ನೀನು ಮಿಗೆ ಚಿತ್ತದಿ ಶ್ರೀ
ದೇವೀ ಮನೀಷದೊಳು ಬ್ರಹ್ಮನಿಹಂ
ಯಾ ವಿಶ್ವನಾಥ ಸಹ ರುದ್ರ ಮನೋ
ಭಾವಂಗಳಿಂಗೊಡೆಯನಾಗಿರುವಂ ೫

ಸಲೆ ಹಮ್ಮಿಗಾ ತ್ರಿಪುರ ಸಂಹರನೇ
ಉಳಿದಿಂದ್ರಿಯಗಳಿಗೆ ಜಿಷ್ಣುಮುಖರ್
ಒಳಗಿದ್ದು ಒಳ್ಳಿದನು ಕೆಟ್ಟುದನೂ
ಬಲವಿತ್ತು ಮಾಡಿಸುವರ್ಕೈ ಹರಿಯೆ ೬

ಕಲಿಮಾರ್ಗ ದೊಡ್ಡದು ಜಗತ್ತಿನೊಳು
ಸಲೆ ಮಧ್ಯದಾರಿಯು ಪುರಂ ಜನನ
ಜಲಜಾತ್ಮಜಾಭಿಮತ ಬಂಧು ಪಥಂ
ಗಳು ಮೂರು ಬಗೆಯು ನೋಡಿದರೆ ೭

ಮಿಗೆ ಕರ್ಮಕರ್ಮವು ವಿಕರ್ಮಗಳೂ
ಜಗದಲ್ಲಿ ಎಲ್ಲರಿಗು ಮೂಲವಿದೂ
ತ್ರಿಗುಣ ಪ್ರಬದ್ಧರಹ ಜೀವಗಣಾ
ಖಗರಾಜ ವಾಹನನೆ ಸಾಕ್ಷಿಯು ನೀಂ ೮

ಸದಸದ್ವಿವೇಕಾವನು ಕಾಣದೆ ಸ
ದ್ಬುಧರಾಡುವಂಥ ನುಡಿಯಂ ಜರಿದು
ಚಿದಚಿದ್ವಿಲಕ್ಷಣನು ನೀನೆನದೇ
ಮದಗರ್ವದಿಂದ ಮೆರೆದಾಂ ಕೆಡುವೇಂ ೯

ಬಹುಕಾಲದಿಂದ ಭವವಾರಿಧಿಯೋಳ್
ವಿಹಿತಾ ವಿಹಿತಂಗಳನು ಚಿಂತಿಸದೆ
ಕುಹುಕಾತ್ಮರಾದವರ ಸಂಗದಿ ಬಂ–
ದಿಹ ನೋವು ನಾನಕಟ ಬಣ್ಣಿಸೇಂ ೧೦

ಅಂತವರ್ಗವಾರ್ವರು ಶರೀರದೊಳಿ
ನ್ನರರೇ ಸದಾ ಸಕಲ ಭಾಗದೊಳು
ದುರ್ವೃತ್ತಿ ಪುಟ್ಟಿಸುತ ಕೊಲ್ಲುತಿಹರ್
ಪರಮಾತ್ಮ ನಿನ್ನವರ ಸೇರಿರುವೇಂ ೧೧

ಮಲಮೂತ್ರ ಕೂಪವಹ ದೇಹವಿದು
ಜಲಗುಳ್ಳೆ ಎಂದರಿತಡಂ ಬರಿದೇ
ಲಲನಾದಿ ಭೋಗಗಳಪೇಕ್ಷಿಸುತ
ಕಲುಷಾತ್ಮನಾದೆ ಕರಿರಾಜವರದಾ ೧೨

ಹಸನಾಗಿ ತೋರುತಿಹ ದುರ್ವಿಷಯಂ
ಬಿಸಿನೀರು ತುಂಬಿರುವ ಬಾವಿಯಿದುಂ
ಕುಸುಮಾಸ್ತ್ರನೆಂಬ ಕಡುಗಳ್ಳನು ತಾ
ನೆಸಗೀ ಪ್ರವಾಹದಲಿ ನೂಕುತಿಹಂ ೧೩

ತವೆ ಪಾದ ಪದ್ಮಂಗಳ ನಂಬಿದೆ ವೆಂ-
ಮ್ಮವಮಾನ ಮಾನಗಳು ನಿನ್ನದುದೆಂ-
ದೆವೆ ಕಾಲವುಂ ಬಿಡದೆ ಚಿಂತಿಪ ಸ
ದ್ವ್ಯವಸಾಯವಂತರೆ ಮಹಾತ್ಮಕರೂ ೧೪

ಜನುಮಗಳನೆತ್ತುತಲಿ ಜೀವರು ನಿಂ
ನನು ಕಾಂಬ ಯೋಚನೆ ತಿರಸ್ಕರಿಸೀ
ಘನ ಕಾಮಭೋಗಗಳಪೇಕ್ಷಿಸಿತಾಂ
ಧನಕಾಗಿ ದುರ್ಜನರ ಸೇವಿಸುವರು ೧೫

ಪಿತೃ ಮಾತೃ ದೈವ ಗುರು ಬಂಧುಗಳು
ಹಿತದಿಂದ ಎಲ್ಲರಿಗೆ ನೀನೆ ಇದಂ
ಮತಿಹೀನರಾದವರು ಬಾಹ್ಯರ ನಂ-
ಬುತ ದುಃಖದಿಂದಲವಿವೇಕರಹರ್ ೧೬

ಗುಣಶೂನ್ಯ ನೀನೆನುತ ಕೊಂಚ ಜನಂ
ಗಣಿಸಲ್ಕಸಾಧ್ಯವಹ ವಾದಗಳಿಂ
ಘನ ತರ್ಕದಿಂದ ಅನುವಾದಿಸಿ ದುರ್
ಜನ ಮುಖ್ಯರೆನಿಸುತಿಹರ್ ಭುವಿಯೊಳ್ ೧೭

ಅನುಮಾನವೇ ತಮಗೆ ಮುಖ್ಯವೆನು-
ತನುಸಾರಿ ರಾಜಸದಿ ತಾಂ ಮುಳುಗೀ
ಜನನಾದಿ ರೋಗಗಳ ಪೊಂದುತಲಿ
ವನಜಾಕ್ಷ ಕೋರಿಕೆಗಳಿಂ ಭಜಿಪರ್ ೧೮

ಉದರ ಪ್ರಯುಕ್ತ ಪರರಾಶ್ರಯಿಸಿ
ಪದ್ಯ ಪದ್ಯ ಪೇಳಿ ಬಹುನೀಚನು ನಾ-
ನುದಯಾಸಮುದ್ರರೆಲೆ ನೀವೆನುತೇ
ಸುದುರಾತ್ಮರಂ ಪೊಗಳಿ ಕೆಟ್ಟೆನು ೧೯

ಹಿತತತ್ವ ಭಾವದಲಿ ದುರ್ಜನರು
ಮತಿವಂತರಂತೆ ಬಹಿಯೋಳ್ ನಟಿಸಿ
ಸತಿ ಪುತ್ರ ವಿತ್ತಗಳ ಮೋಹದಲೀ
ವ್ಯಥೆಪಟ್ಟು ಬಾಯ್ಬಿಡುತ ನೋಯುತಿಹರ್ ೨೦

ವಿಧಿರುದ್ರ ಪಾಕರಿಪು ಮುಖ್ಯಸುರರ್
ಮೊದಲಾಗಿ ಎಲ್ಲರನು ಮಾಯದಿ ನಿ-
ನ್ನುದ ರಾಖ್ಯ ವಾರಿನಿಧಿಯಿಂದಲಿ ತಾವ್
ಉದಿಸಿರ್ಪರೆಂದುಸುರುಗುಂ ಶ್ರುತಿಗಳ್ ೨೧

ಅನುಮಾನವುಳ್ಳ ಜನಕೆಂದಿಗು ಪಾ-
ವನ ಮೂರ್ತಿ ನಿನ್ನ ಘನ ಜ್ಞಾನ ಸುಖಂ
ತೃಣ ಮಾತ್ರವೂ ಬರದು ಸ್ವಪ್ನದೊಳು
ಜನದಲ್ಲಿ ಕೀರ್ತಿ ಬಹಿಯೊಳ್ ಬರಿದೆ ೨೨

ಗುರುಸೇವೆಯಿಂದ ತನುದಂಡಿಸಿ ತಾ
ನಿರುತಂ ಸುಶಾಸ್ತ್ರಗಳ ನೋಡುತಲಿ
ಸ್ಥಿರ ಚಿತ್ತನಾಗಿ ಶ್ರವಣಾದಿಗಳಿಂ
ಹರಿಭಕ್ತರಿಂದ ಕಡೆಸೇರುತಿಹಂ ೨೩

ಕವಿಯಾದವರ್ ನಿರುತವುಂ ಮಿಗೆ ಭಾ-
ಗವತಾದಿ ಗ್ರಂಥಗಳ ಸಜ್ಜನರಿಂ
ಕಿವಿಯಿಂದ ಕೇಳುವುದಕಂ ಬಹು ಜ-
ನ್ಮವು ಪಕ್ವವಾಗಿ ಸಲೆ ಪ್ರಾಪ್ತಿಸುಗುಂ ೧೪

ಹರಿಕೃಷ್ಣ ಕೇಶವ ಮುಕುಂದ ನೃಕೇ-
ಸರಿ ವಿಷ್ಣುವಾಮನ ತ್ರಿವಿಕ್ರಮ ಶ್ರೀ
ಧರ ಪದ್ಮನಾಭ ಮಧುಸೂದನ ಹೇ
ಪುರಷೋತ್ತಮೌಚ್ಯುತ ಜನಾರ್ದನನೇ ೧೫

ವಸುದೇವ ನಂದನ ಮುರಾಂತಕನೇ
ಹೃಷಿಕೇಶ ನಾರೇಯಣ ಮಾಧವನೇ
ಅಸುರಾರಿ ಸಂಕರ್ಷಣ ಪರಿ ಪಾ-
ಲಿಸುಪೇಂದ್ರ ಭಕ್ತರ ಅಧೋಕ್ಷಜನೇ ೧೬

ಪರಮಾತ್ಮ ನೀನೆಮಗೆ ಎನ್ನುತನಂ-
ಬರು ನಿನ್ನ ತಾಮಸರು ಸತ್ಯವಿದು
ನೆರೆ ನೋವಿನಿಂಬಳಲಿ ತಾವ್ ಮಿಗೆ ಸಂ-
ಸರಣ ಪ್ರವಾಹದೊಳು ಬೀಳುತಿಹರ್ ೧೭

ಮನದಲ್ಲಿ ದುಷ್ಕೃತವ ಚಿಂತಿಸಿ ಸ
ದ್ಗುಣದಲ್ಲಿ ದುರ್ಗುಣಗಳೇ ಗಣಿಸಿ
ಘನ ಮೋಹ ದುಃಖದೊಳು ಸತತ ನಿ-
ನ್ನನು ಕಾಂಬ ಯೋಚನೆಯ ಬಿಟ್ಟಿರುವರ್ ೧೮

ಅನುಮಾನದಿಂದ ಮನುಜರ್ ಮಿಗೆ ನಿ
ನ್ನನು ನಂಬಿ [illegible] ತಾವ್ ನಿರತಂ-
ಘನ ಕಾಮ ಕ್ರೋಧ ಮದ ಮತ್ಸರದಿಂ
ಜನದಿಂದ ಯತ್ನವನು ಮಾಡುತಿಹರ್ ೧೯

ಗೋವಿಂದ ನಿನ್ನ ಗುಣರಾಶಿಗಳ
ದೇವಾದಿದೇವ ದಿವಿ ಭೂಮಿಗಳೋಳ್
ಭಾವ ಪ್ರಭೇದದಲಿ ಧ್ಯಾನಿಪರಿಂ-
ಗೀ ವೇಷ್ಟಸಿದ್ಧಿಗಳ ನೀನೆ ಸದಾ ೩೦

ಸನಕಾದಿ ಯೋಗಿ ಜನವಂದಿತ ಸ-
ಜ್ಜನಕಲ್ಪವೃಕ್ಷ ಜಗದೇಕ ವಿಭೋ
ವನಜಾಕ್ಷ ಇಂದಿರೆಯ ವಲ್ಲಭ ಬ್ರಾ-
ಹ್ಮಣ ಪ್ರೀಯ ಭಕ್ತಸುಖದಾಯಕನೇ ೩೧

ರವಿಕೋಟಿತೇಜ ರಮಣೀಯ ಕಥಾ-
ಭವವಾರಿಜಾಬ್ಧಿ ಬಡಬಾಘಹರಾ
ತವನಾಮ ಕೀರ್ತನೆಯ ಮಾಳ್ಪರ ಪಾ-
ಪವ ನೀನೆ ಓಡಿಸುವುದೇನರಿದೈ ೩೨

ವರ ಮೀನ ಕೂರುಮ ವರಾಹ ನೃಕೇ-
ಸರಿ ವಾಮನಾವನಿ ಸುರೋತ್ತಮ ಭಾ-
ಸ್ಕರ ವಂಶ ಚಂದ್ರವಸುದೇವಜ ಭಾ
ಸುರ ಬುದ್ಧ ಕಲ್ಕ ವಪುಷೇ ನಮಃ ೩೩

ಮುನಿಕರ್ದಮಂಗುದಿಸಿ ತಾಯಿಗೆ ಪಾ
ವನ ರಾಜಯೋಗವನು ಬೋಧಿಸಿದೈ
ಘನಯೋಗಿವರ್ಯ ಕಪಿಲಾಖ್ಯನೆನಿ-
ನ್ನನು ನಂಬಿ ಪ್ರಾರ್ಥಿಸುವೆನಾನನಿಶಂ ೩೪

ಅನುಸೂಯೆಯಾತ್ಮಜನುಮೆನ್ನಿಸಿಯ
ರ್ಜುನ ಕಾರ್ತವೀರ್ಯಗುಪದೇಶಿಸಿದೇ
ಘನಯೋಗ ಬೋಧೆಯನು ಹೈಹಯರ್ ತಾ
ವನುವಾದ ಶಿಷ್ಯರೆಲೆದತ್ತವಿಭೋ ೩೫

ಋಷಭಾಖ್ಯನಾಗಿ ಸುತರಿಂಗೆ ಮಹಾ
ಋಷಿಚರ್ಯ ಬೋಧಿಸಲವರ್ ತಿಳಿದು
ದಶಯೋಗಿವಂದದಿಕ ಎಂಬತ್ತು ಭೂ-
ಮಿಸುರಕ್ರಿವೃತ್ತಿಯಲಿ ಶೋಭಿಸಿದರ್ ೩೬

ಒಂಬತ್ತು ಮಂದಿ ಋಷಭಾತ್ಮರು
ಜಂಬ್ವಾಖ್ಯ ದ್ವೀಪದೊಳು ಖಂಡಗಳಿಂ
ಇಂಬಾಗಿ ಪಾಲಿಸಿದರ್ ಧರ್ಮದಲಿ
ಅಂಭೋಜನಾಭ ತವನೇಮದಲೀ ೩೭

ಧರೆಯಲಿ ಧರ್ಮಗಳು ತಗ್ಗಿದರೆ
ಹರಿ ನೀನೆ ಪುಟ್ಟಿಯದು ಸ್ಥಾಪಿಸಿ ದು
ರ್ನರರನ್ನು ಕೊಂದು ಶರಣಾಗತರಂ
ಪರಿಪಾಲಿಸುತ್ತಿರುವೆ ಸಂತತವುಂ ೩೮

ಕಲಿಕಾಲವೀಗ ಖಳರೆಲ್ಲರು ಸ-
ತ್ಕುಲದಲೆ ಪುಟ್ಟಿ ನೆರೆ ಸಾಧುಗಳಂ
ಬಲುಬಾಧಿಸುತ್ತ ದುರಿತಂ ಘಳಿಸೇ
ನರಕಂಗಳಲ್ಲಿ ನೆರೆಯಾಗುತಿಹರ್ ೩೯

ಹರಿ ನಿನ್ನ ಪೂಜಿಸಲು ಬೇಸರವು
ನೆರೆ ತನ್ನ ಕಾರ್ಯದಲಿ ಬಲ್ಬಲವು
ಪರಮಾತ್ಮ ತತ್ವದಲಿಯೇ ಮರವು
ದುರ್ವಿದ್ಯವಭ್ಯಸಿಪುದಕೆ ಮನವು ೪೦

ಪರರನ್ನು ನೋಡಿಯವರಂತೆ ತಾ
ವಿರಬೇಕೆನ್ನುತ್ತಲನಿಶಂ ಬಳಲೀ
ಗುರುಯತ್ನಮಾಡಿ ವಿಫಲಾಗಲು ಶ್ರೀ
ಹರಿ ನಿನ್ನದೂರುತಿರುವರ್ ದುರುಳರ್ ೪೧

ದುರುಯೋಧನಂ ಬದುಕಬೇಕೆನುತ
ದೊರೆಪಾಂಡು ಪುತ್ರರನ್ನು ನೋಯಿಸಲು
ಗುರುಭೀಷ್ಮ ಕರ್ಣ ಮುಖರಿಂದಲಿ ಸಂ
ಗರದಲ್ಲಿ ಕಾದಿ ಮಡಿದಂ ಬರಿದೇ ೪೨

ಜಮದಗ್ನಿ ಪುತ್ರನಿಗೆ ಶಿಷ್ಯನು ಭೀ
ಷ್ಮಮಹಾ ಪರಾಕ್ರಮಿಯು ದ್ರೋಣನುತಾಂ
ಕಮಲಾಪ್ತಪುತ್ರ ಕಲಿ ಶಲ್ಯ ಮುಖ್ಯರ್
ಭ್ರಮೆಯಿಂದಲನ್ನಕಸುಗಳ್ ತೊರೆದರ್ ೪೩

ಯಮಜಂ ವೃಕೋದರನು ಫಲ್ಗುಣನೂ
ಯಮಳರ್ ತವಾಂಘ್ರಿಸ್ಮೃತಿಯೇ ಬಲವಾ-
ಗಿ ಮಹಾಪದಂಗಳನು ದಾಂಟಿದರ್ಕೈ
ಸುಮಬಾಣನಯ್ಯನೆ ಮಹಾತ್ಮರವರ್ ೪೪

ಹರಿ ನಿನ್ನ ಡಿಂಗರಿಗರಿಗಾಶ್ರಯವೇ
ವರಭಾಗ್ಯ ನಿತ್ಯಸುಖವೆನ್ನುತಲೀ
ಅರಿದುತ್ತಮರ್ ಬಯಸರೆಂದಿಗು ಪಾ-
ಮರರಂತೆ ತುಚ್ಛಗಳ ಸ್ವಪ್ನದೊಳು ೪೫

ಸಲೆ ಚಿನ್ನ ಬೆಳ್ಳಿ ಬೆಲೆ ಹೆಚ್ಚು ಪಟ
ಗಳ ಗೃಹಕ್ಷೇತ್ರ ಸುತದಾರ ಧನ-
ಗಳ ನಿತ್ಯವೆಂದರಿದು ಲೆಕ್ಕಿಸದೇ
ಜಲಜಾಕ್ಷ ನಿನ್ನ ಭಜಿಪರ್ ಸುಜನರ್ ೪೬

ಸುಜನಾಬ್ಧಿ ಚಂದ್ರ ಸುಗುಣಾರ್ಣವ ನೀ
ರಜನಾಭ ನಿತ್ಯ ನಿರವದ್ಯ ಸ್ವಭಾ
ವಜ ಕರ್ಮದಿಂ ಸಕಲ ಪ್ರಾಣಿಗಳೂ
ನಿಜಯೋಗ್ಯತೆಯಂತೆ ವರ್ತಿಪುದು ೪೭

ಕರುಣಾನಿಧೇ ಕಮಲಲೋಚನನೆ ಸು–
ರರಾಜ ಸೋದರನೆ ಭಾವಜನ್ಮೈ
ಯರಮಾಧಿನಾಥ ಯದುವಂಶ ಭೂ
ಷ ರಥಾಂಗ ಪಾಣಿಯೆ ಜನಾರ್ದನನೇ ೪೮

ರಘುವಂಶಕೇತು ರವಿಮಂಡಲದೋಳ್
ಭಗವನ್ನಿರಂತರದಿ ನೀನಿರುತೆ
ಜಗಕೆಲ್ಲ ಕಾಲದನುಸಾರದಿ ನೀ
ಸಘನಾಳಿಯಿಂದ ಮಳೆಯಂ ಕೊಡುವೇ ೪೯

ವಿಬುದಾಗ್ರಗಣ್ಯರಹ ಜ್ಞಾನಿಗಳೂ
ಶುಭವನ್ನು ಲೋಕಕೆ ಸದಾಚರಿಸಿ
ನಭ ಭೂಮಿ ಮಧ್ಯದಲಿ ಕೀರ್ತಿ ಸೌ–
ರಭವಾಗಿ ಸ್ಥಾಪಿಸಿ ವಿಮುಕ್ತರಹರ್ ೫೦

ಭೋಗಗಳ ಬಯಸದಲೆ ಸಂತತವು
ಯೋಗ ಪ್ರವರ್ತನೆಯಲೇ ಸುಖಿಸಿ
ರೋಗಾದ್ಯುಪದ್ರಗಳು ಇಲ್ಲದಲೇ
ರಾಗಾದಿ ದೋಷಗಳ ಸುಟ್ಟಿರುವರ್ ೫೧

ಮನವಾಕ್ಕು ಕಾಯಗಳೊಳೊಂದೆ ವಿಧಂ
ಋಣಮುಖ್ಯ ಸೂತಕಗಳಿಲ್ಲದಲೇ
ಗುಣವಂತರೆನ್ನಿಸಿಯೇ ಶೋಭಿಸುತಾ
ಜನದಲ್ಲಿ ಮೌನದಲಿ ವರ್ತಿಸುವರ್ ೫೨

ನರರೊಳ್ ದಿವೌಕಸರು ಪುಟ್ಟುತಲೀ
ಹರಿಭಕ್ತಿಯುಕ್ತರೆನಿಸುತ್ತಲಿಸ–
ತ್ವರದಿಂದ ಸಾಧನವ ಮಾಡುತಲೀ
ಧರೆಯಲ್ಲಿ ಸತ್ಪಥವ ಸ್ಥಾಪಿಸುವರ್ ೫೩

ಕಲಿಕಾಲವೀಗಿದರೊಳೆಲ್ಲರು ಚಂ–
ಚಲ ಬುದ್ಧಿಯುಳ್ಳವರು ತಾಮಸದಿಂ
ದಲಿ ವ್ಯರ್ಥವಾಗಿ ಬಳಲುತ್ತೆ ಮಹಾ
ಫಲವಾಗದಂಥ ಪಥದೋಳ್ ನಡೆವರ್ ೫೪

ಅಸುರರ್ಧರಾತಳದಿ ಮಾನವರೊ
ಳೆಸೆಯುತ್ತ ಪುಟ್ಟಿದರು ಪಾಪಗಳ
ನೆಸೆಗುತ್ತ ದುಃಖಗಳ ಪೊಂದಿ ಸಮಂ–
ಜಸ ಬುದ್ಧಿಯಿಲ್ಲದೆಲೆ ಪೋಗುವರು ೫೫

ಕೃತತ್ರೇತ ದ್ವಾಪರದೊಳೀ ಕಲಿಯೊಳ್
ಹಿತನಾಲ್ಕು ಮೂರೆರಡುವಂದು ಪದಂ
ಸತತಂ ಸುಧರ್ಮತಪ ಶೌಚ ದಯಾ
ಯುತ ಸತ್ಯವಾಗಿ ನಡೆಯುತಿಹುದು ೫೬

ದನುಜರ್ಗೆ ಸಂಸರಣದೊಳ್ ಹಿತ ನಿ–
ನ್ನನುದ್ವೇಷ ಮಾಡಿದುರಹಂಕೃತಿಯಿಂ
ತನುದಾರ ಪುತ್ರರನು ಪೋಷಿಪನೇ
ಘನದೃಷ್ಟ ಶಾಲಿಯೆನುತೆ ಕೆಡುವರ್ ೫೭

ಕೃಪೆಯೆಂದಿಗಾಗುವುದು ಸ್ವಾಮಿಯೆನಲ್
ಚಪಲ ಸ್ವಭಾವದಲೆ ಜೀವವಿದು
ತಪಗೆಯ್ಯೆಮಾನಸವು ನಿಲ್ಲದು ತಾ–
ವಿಪರೀತ ಮಾರ್ಗದಲಿ ಯೋಜಿಪುದು ೫೮

ಹಿಂದಾದ ಕಷ್ಟಗಳದೇನೊರವೇಂ
ಇಂದೀಗ ದುಃಖಪಡಲಾರೆನಲಾ
ಮುಂದಾಗುವಂಥ ಬಗೆಯೇನೊ ಕೃಪಾ–
ಸಾಂದ್ರಪ್ರಣಾಮವನು ಮಾಡುವೆನಾ ೫೯

ತವದಾಸ ದಾಸ್ಯವನು ಪಾಲಿಸು ಮಾ–
ಧವ ನೀಚ ಸೌಖ್ಯಗಳ ಬೇಡಿಹರೇ
ಭವದಲ್ಲಿ ಬಾಯ್ಬಿಡುವೆ ಸಂತತ ನಿ–
ನ್ನವ ನಾನೆಂಬುದಿದು ಸತ್ಯನುಡಿ ೬೦

ಉದಯಾಸ್ತಮಾನದಲಿ ಕಾಲವುವ್ಯ–
ರ್ಥದಿ ಪೋಗುತಿರ್ಪುದೆಲೆ ಆಯುವು ದ್ವಂ–
ದ್ವದ ಸ್ತೋತ್ರ ಮಾಳ್ಪ ಕಥೆಗಳ್ ಪಠಿಸಿ
ಹೃದಯಾಬ್ಜದೊಳ್ ಮರೆದೆ ನಿನ್ನನು ೬೧

ಸಿರಿದೇವಿ ಮಾತೆ ಪಿತ ನೀನೆ ಕೃಪಾ–
ಕರ ನಿನ್ನ ಭಕ್ತರಲೆ ಬಂಧುಗಳು
ಧರೆ ಸ್ವರ್ಗದೋ ಭುವನ ಮಂ–
ದಿರ ಸುಸ್ಥಿರ ಚಿತ್ತರಿಂಗೆ ಶುಕರುಕ್ತಿ ಇದುಂ ೬೨

ಕಲುಷಾತ್ಮರಾದವರ ಸೇವಿಸಲಾ–
ರೆಲಘುತ್ವಪೊಂದಿ ಚರಿಸುತ್ತನಿಶಂ
ಸಲೆಪೊಟ್ಟೆಗಾಗಿ ನಿಜತತ್ವಗಳಂ
ಬೆಲೆ ಮಾಡಿ ಜೀವಿಸುವೆ ಪಾಪಿಯು ನಾಂ ೬೩

ಹರಿದಾಸ ನಾನೆನುತ ವೇಷವನು
ಧರಿಸುತ್ತೆ ಸಂಚರಿಸುತ್ತಿದ್ದರೆ ಪಾ–
ಮರರಾದ ದುರ್ನರರಿವಂಧನಿಕಂ
ದುರಿತಾತ್ಮನೆನ್ನುತಲಿ ದೂಷಿಸುವರ್ ೬೪

ವಿಷಯಾಸೆಯೆಂಬುವದು ತಾ ಬಿಡದು
ಕೃಷಿಯಿಂದ ಯತ್ನವನು ಮಾಡುತಲೀ
ಝಷಮಾಂಸಕೋಸುಗವೇ ತಾ ಬಲೆಯೊಳ್
ಯಸಗುತ್ತ ಬೀಳ್ವ ಪರಿಯಾಗಿಹುದೂ ೬೫

ಅಸದಿಂದ್ರಿಯಂಗಳು ನಿರಂತರ ದು–
ರ್ವಿಷಯಂಗಳಲ್ಲಿ ತಿರುಗುತ್ತಲಿ ದುಃ–
ಖಿಸುತಿರ್ದುದೆಷ್ಟು ಪರಿ ನಿನ್ನೊಳು ಬ–
ಣ್ಣಿಸಲ್ಕೆ ಸರೋಜದಳ ಲೋಚನನೇ ೬೬

ಏಕಾದಶೇಂದ್ರಿಯಗಳಲ್ಲಿ ಸದಾ
ಪಾಕಾರಿ ಮುಖ್ಯ ಸುರರಿಪ್ಪರುಯಂ–
ದೇಕ್ಲುಪ್ತವಾಗ್ಯುಸುರುಗುಂಶ್ರುತಿಗಳ್
ಶ್ರೀಕಾಂತ ನೀನವರಿಗೆಲ್ಲೊಡೆಯಂ ೬೭

ಬದಿಯಲಿ ನೀನಿರಲು ಜೀವರಿಗೇ–
ಕೆದರಿದ್ರ ದೋಷಸಿರಿ ಬ್ರಹ್ಮಪಿನಾ–
ಕಿದಿವಸ್ಪತಿ ಪ್ರಮುಖರೆಲ್ಲಮರರ್
ಮುದವಿತ್ತು ಪಾಲಿಪರು ನಿನ್ನವರು ೬೮

ಖಗರೂಪನೀಂ ಸಕಲಪ್ರಾಣಿಗಳೂ
ಖಗರೂಪರೆಂದೆ ಶ್ರುತಿ ಪೇಳುವುದು
ಜಗದಂತರಾತ್ಮ ಜಲಜೇಕ್ಷಣ ಪ–
ನ್ನಗಶಾಯಿ ಭಕ್ತಜನ ಕಲ್ಪತರು ೬೯

ಗುರು ನೀನೆ ಬ್ರಹ್ಮಮುಖನಿರ್ಜರರಿಂ–
ಗೆ ರಮಾಮನೋಹರ ರಘೋತ್ತಮನೆ
ಸುರಕಾರ್ಯಗೋಸುಗ ಧರಾತಳದೊಳ್
ನರನಾಗಿ ಪುಟ್ಟಸುರರಂತರಿದೆ ೭೦

ಇನಜಂಗೆ ರಾಜ್ಯವನು ಕೊಟ್ಟು ವಿಭೀ–
ಷಣಗಿತ್ತೆ ಶಾಶ್ವತ ಪದಂ ವನದೊಳ್
ಮುನಿಗಳ್ಗೆ ಸೌಖ್ಯವನು ಮಾಡಿದೆ ರಾ–
ಮನೆ ನಿನ್ನ ಪೋಲ್ವ ದೊರೆಯಾರಿಹರ್ರೈ ೭೧

ದಶಕಂಠನೊಳ್ ಸಖತನಂ ಬೆ-
ಳಸಿರ್ದಸುರೇಶ ಪುತ್ರ ಹತನಾದನು ನಿ
ನ್ನೆಸುಗೆ ತ್ರಿಲೋಕಕದು ಶಿಕ್ಷೆಯಲಾ
ವಸುಧೇಶ ರಾಘವನೆ ವಂದಿಸುವೆ ೭೨

ತವಪಾದ ಧ್ಯಾನವನು ಮಾಡುವ ಭಾ-
ಗ್ಯವ ಬಿಟ್ಟು ಸಂಸರಣದೊಳ್ ಮುಳುಗಿ
ಕವಿಗಳ್ ಪ್ರಶಂಸಿಸುವ ವರ್ಣನೆಗೆ
ಕಿವಿಗೊಟ್ಟು ನಾನಕಟ ಕೆಟ್ಟೆನು ೭೩

ನವದ್ವಾರ ಗೂಡಿನಲಿ ದುಷ್ಟಭಿಮಾ-
ನವು ಹೆಚ್ಚಿದೇ ಸ್ಥಿರವು ಎಂದರಿತೆ
ಯುವತೇರ ಭೋಗವೆ ಮಹಾಸುಖವೆಂ-
ದವಹೇಳನಕ್ಕೆ ಗುರಿಯಾದನಲ್ಲೈ ೭೪

ರುಕುಮಾಂಗದಂ ದೃಪದಾತ್ಮಜೆ ಶೌ
ನಕಜಾಮಿಳಂ ಧ್ರುವಗಜೇಂದ್ರರು ದೈ
ತ್ಯಕುಲಾಗ್ರಗಣ್ಯ ಬಲಿವ್ಯಾಸ ಸುತರ್
ಸುಖರೂಪ ನೀನೆನುತ ತಾವ್ತಿಳಿದರ್ ೭೫

ಯನಗೇನು ಮುಂದೆಗತಿ ತೋರದಲಾ
ಮನವಿಲ್ಲದೇ ಮಿಡುಕುತಿರ್ಪುದು ದು-
ರ್ಜನ ರೂಢಿಯಿಂ ಬಿಡಿಸು ನಾನಿದೆ ಪ್ರಾ
ರ್ಥನೆಗೈವೆ ನಿನ್ನಡಿಗೆ ಬಾಗುತಲಿ ೭೬

ನರಬೊಂಬೆಯಾಟಮಿದ ನೀಂ ಕುಣಿಸು-
ತ್ತಿರುವೈ ಜಗತ್ತಿನೊಳು ಯಲ್ಲರನುಂ
ಬರಿದೇ ದುರಾತ್ಮರತಿಯತ್ನಿಸೆ ಪಾ-
ಮರರಾಗಿ ನಿಷ್ಫಲವೆ ಪ್ರಾಪ್ತಿಸುಗುಂ ೭೭

ಸಕಲ ಪ್ರಪಂಚಕೆ ನಿಯಾಮಕ ಚಿ-
ತ್ಸುಖದಾತ ನೀನೆ ನಿಜಭಕ್ತರಿಗೆ
ಅಕಳಂಕ ಚಂದ್ರ ಅಧಿದೈವವು ತಾ-
ರಕನಾಗಿ ಕೈಪಿಡಿದು ರಕ್ಷಿಸುವೈ ೭೮

ಪದ ಪದ್ಯವಂ ಕಲಿವ ಪಾಮರರಂ
ಮುದ ಪೊಂದಿ ಸುತ್ತುವರು ಕೊಟ್ಟಧನಂ
ಉದರಕ್ಕೆ ಪೂರ್ತಿಯನು ಮಾಡುಳಿದ
ದ್ದುಧರ್ಮಾತ್ಮಜೇಶ ನಿನಗರ್ಪಿತವೈ ೭೯

ಅಣುಸೇವೆಯಿಂದ ಘನತೃಪ್ತರಹರ್
ಗುಣಿಗಳ್ ವಿಶೇಷ ಫಲವಾಹುದು ಚಂ-
ದನದಂತೆ ದೇಹವನು ತೇಯ್ದಿಡಲು
ಗುಣಹೀನರಂ ನೊಲಿಸಲಾಗದೆಲೆ ೮೦

ಉಪಚಾರ ಮಾಳ್ಪರಲಿ ದುರ್ಜನನು
ಅಪಚಾರವಾಚರಿಸಲೆತ್ನಿಸುತೆ
ವಿಪರೀತ ಬುದ್ಧಿಯಲಿ ಸಂಶಯದಿಂ-
ದಪರಾಧಿಗಳ್ ನಿನಗೆ ದೂರರಹರ್ ೮೧

ಸಿರಿಯಂ ಸುಯೋಧನನು ಪಾಂಡುಸುತ
ರ್ಗೆರವಾಗಿ ತೋರಿಸಲು ಬೇಕೆನೆಗಂ-
ಧರುವಾಧಿಪಂ ಖಳನ ಕಟ್ಟಲು ಪಾ
ರ್ಥರು ಬಂದು ತಾವ್ ಬಿಡಿಸಲಿಲ್ಲೆ ಮೊದಲ್ ೮೨

ಪಿತಮಕ್ಕಳಿಂಗೆ ಸತಿಯರ್ಗೆ ಪತಿ
ಹಿತಬಂಧು ಸ್ನೇಹಿತರವೋಲ್ ಜಗಕೇ
ಅತಿಮಿತ್ರನಾಗಿ ಪರಮೇಷ್ಟನುಯನ್-
ದುತವಾಂಘ್ರಿ ಸೇವಿಪರು ಸಾತ್ವಿಕರು ೮೩

ಧನದಾರ ಪುತ್ರರನು ನೀ ಕೊಡ ಬೇ-
ಕೆನುತೇಷ್ಟ ಸಿದ್ಧಿ ವಿಷಯಾಸೆಯಲಿ
ಘನ ಕಾಮ ಕ್ರೋಧ ಮದಲೋಭಯುತರ್
ವನಜಾಕ್ಷ ಪೂಜಿಪರು ರಾಜಸರು ೮೪

ಶಿವತಾನೆ ಸತ್ಯ ಜಗವೆಲ್ಲವು ಪುಸಿ
ವ್ಯವಹಾರದಲ್ಲೆರಡು ತೋರುವುದೂ
ದಿವಿ ರಾತ್ರಿ ಒಂದೆ ತವೆ ಕಾಣುವದೆ-
ಲ್ಲವು ಭ್ರಾಂತಿ ಎಂಬರು ತಾಮಸರೂ ೮೫

ಈ ಮೂರುಗುಣಗಳಭಿಮಾನಿಯು ತಾ
ನಾ ಮೂಲ ಪ್ರಕೃತಿಯಲ್ಲಿರ್ಪ ಜಗತ್-
ಸ್ವಾಮಿನ್ ತವಾಜ್ಞೆಯೊಳನಂತ ವಿಧಂ
ನೇಮ ಪ್ರಕಾರದಲಿ ವರ್ತಿಸುಗುಂ ೮೬

ತೃಣವಾದಿಯಾಗಿ ದೃಹಿಣಾಂತ ಜಗ
ಕ್ಕಣುಮಾತ್ರವಿಲ್ಲ ಸ್ವಾತಂತ್ರ್ಯ ಚಿಂ-
ತನೆ ಮಾಡಿ ನೋಡಿದರೆ ಎಲ್ಲವು ನೀ-
ನೆನ್ನೃಸಿಂಹ ಬಾಲಕನ ಕಾಯ್ದವನೇ ೮೭

ಹದಿನಾಲ್ಕು ಲೋಕಗಳು ನಿನ್ನ ಶರೀ-
ರದೊಳಿರ್ಪುದೆನ್ನುತಲಿ ಭಾಗವತದಿಂ-
ದುದಿತವಾಗಿಹ ಪುರಾಣಗಳೋಳ್
ವಿಧಿಸಿರ್ಪೆ ವ್ಯಾಸಮುಖರೂಪಗಳಿಂ ೮೮

ಭಗವಂತ ಬ್ರಹ್ಮ ಪರಮಾತ್ಮನೆ ಸ-
ರ್ವಗೆ ಸಾಕ್ಷಿ ದ್ವಾಸುಪರಣ ಸ್ಮೃತಿಪ್ರತಿಪಾ-
ದ್ಯಘನೇಭ ಕಾಯ ಕಮಲಾರಮಣಾ
ಖಗರಾಜವಾಹನಧರಣೀಧರ ೮೯

ಶೃತಿ ಶಾಸ್ತ್ರಗಳ್ ನಿಯತವಾದ ಪುರಾ–
ಣತತಿ ಪ್ರಕಲ್ಪಯುತ ಧರ್ಮಗಳು
ಕಥೆ ಪದ್ಯ ಕೀರ್ತನೆಯು ದಂಡಕಗಳ್
ಚತುರತ್ವವೆಲ್ಲ ತವ ಸದ್ಗುಣಗಳ್ ೯೦

ನಿನ್ನಿಂದ ಪುಟ್ಟಿದ ಜಗತ್ತಿನೊಳು
ನಿನ್ನಂಘ್ರಿಸೇವೆಯು ಪ್ರಯೋಜನವು
ನಿನ್ನವರು ಸ್ಥಾಪಿಸಿದುದೇ ಪಥವೂ
ನಿನ್ನಾಜ್ಞೆಯೇ ಸಕಲ ಧರ್ಮಗಳು ೯೧

ಸೃಷ್ಟ್ಯಾದಿಯಲ್ಲಿಯುಪದೇಶಿಸದೇ
ಸ್ರಷ್ಟಂಗೆ ತತ್ವಗಳ ಪ್ರೇಮದಲಿ
ಇಷ್ಟಾರ್ಥದಾಯಕನು ಯಲ್ಲಕು ನೀಂ
ದುಷ್ಟಾತ್ಮರೊಲ್ಲರೆಲೆ ನಿನ್ನ ಖಳರ್ ೯೨

ಖಳರನ್ನು ಸಂಸರಣದಲ್ಲಿಡುತೇ
ಬಲುಜನ್ಮ ಕರ್ಮಗಳ ಹೆಚ್ಚಿಸಿ ನೀಂ
ನೊಳಗಿರ್ದು ಕಾಣಿಸದೆ ಪಾಪಿಗಳಿ
ಗೆಲೆ ನಾವೆ ಶ್ರೇಷ್ಟರೆನಿಸುತ್ತಿರುವೈ ೯೩

ನಾ ಕರ್ತನೆಂಬುದಿದು ಸತ್ಯವು ನಾ
ಬೇಕಾದ ಕಾರ್ಯಗಳ ಮಾಡುವೆನು
ಏಕಾಧಿಪತ್ಯ ಜಗದಲ್ಲೆನಗೆಂ–
ದೇಕಷ್ಟಜೀವಿಗಳು ದುಃಖಿಸುವರ್ ೯೪

ಜಲಜಾಪ್ತಮಂಡಲ ವಿಕುಂಠಮಿಗೆ
ಬಿಳಿದ್ವೀಪವಿನ್ನನಂತಾಸನನಾ
ಲ್ಕಲೆ ಸ್ಥಾನಗಳ್ ನಿನಗೆ ನಾಲ್ಕುಪದಂ
ಎಂಬುದೇ ಪುರುಷಸೂಕ್ತವದು ೯೫

ಸುರ ಮೌನಿ ಪಿತೃಪ ನರರೆಂಬುವ ಮು-
ಕ್ತರಿಗಾಪ್ತ ಬಂಧುನಿಮಿತ್ತ ಸಖ
ಗುರುತಂದೆ ತಾಯಿ ಕುಲದೈವವು ನೀ-
ನೆ ರಮೇಶ ನಿನ್ನಡಿಗೆ ವಂದಿಸುವೆಂ ೯೬

ಅಂತರ್‌ಮುಖರ್ ಪರಮ ಸಾಧುಗಳು
ಶಾಂತರ್ ಸುಹೃತ್ತಮರು ದೀನ ದಯಾ-
ಸ್ವಾಂತರ್ ವಿಮನ್ಯು ಸುತಿತೀಕ್ಷೆಯುತರ್
ದಾಂತರ್ ಮಹಾತ್ಮರಲೆ ನಿನ್ನವರು ೯೭

ಹರಿದಾಸ ದಾಸರಡಿಸೇವೆಯನೆ
ನೆರೆ ಜನ್ಮಜನ್ಮದಲಿ ಕೋರುವ ಸ-
ದ್ಗುರು ಪಾದ ಭಕ್ತಿಯನು ಪಾಲಿಸು ಮ-
ತ್ಕರವನ್ನು ನೀ ಪಿಡಿದು ಕಾಯುವುದೈ ೯೮

ದ್ವಿಜ ಜನ್ಮ ಬಂದುದಕೆ ಸಾರ್ಥಕವೇ
ನು ಜನಾರ್ದನನೇಶ ರಾಮ ಹೃದಂ-
ಬುಜದಲ್ಲಿ ತತ್ವತವ ಕಾಣದೆ ಪಾ-
ಪಿಜಲೂಕ ಪಾಮರನು ದುಷ್ಟನರಂ ೯೯

ಹರಿ ನಿನ್ನ ಸ್ತೋತ್ರವನು ಮಾಡಲು ಸಾ-
ವಿರ ಜಿಹ್ವೆಯುಳ್ಳರಗ ವಲ್ಲಭನುಂ
ನೆರೆ ಸಾಧ್ಯವಲ್ಲಸದಳಂ ಗಣಿಸಲ್
ನರರಿಗೆನುತಲಿ ಪೇಳ್ವದಿನ್ನೇನು ೧೦೦

ಶತಪುಷ್ಪ ಮಾಲಿಕೆಯನೀಗ ಶ್ರೀಯಃ
ಪತಿ ನಿನ್ನ ಪಾದದಲಿ ಒಪ್ಪಿಸಿದೇಂ
ಹಿತದಿಂದಲಾರ್ಯರಿದು ತಪ್ಪಿರೆ ತಿ-
ದ್ದುತ ಕಾಯಬೇಕೆನುತ ಬಿನ್ನಯಿಪೇಂ ೧೦೧

ನುಡಿಗನ್ನಡಂ ಪರಿಮಳಲ್ಲಿದು ತಂ
ಗಡಿಪುಷ್ಪಮಾಲೆಯೆನದಲ್ಲ ಬುಧರ್
ದೃಢ ಭಕ್ತಿ ಭಾವವನು ಯೋಚಿಸಿಯಂ
ಗಡಿಯಲ್ಲ ಸಜ್ಜನಕೆ ವಂದನೆಯು ೧೦೨

ಸಿರಿಪಾದರಾಯರ ಪರಂಪರೆಯೊಳ್
ನೆರೆಪತ್ತವೊಂದನೆಯವಂ ಮನದೊಳ್
ಗುರುರಾಮವಿಠಲನು ಪೇಳಿಸಿದಂ–
ತರುಹಿರ್ಪ ವಿಷ್ಣುಶತಕಂ ತರಳಂ ೧೦೩

ಸಂಕ್ಷೇಪ ಭಾಗವತ

೩೪೨

ಆಗಮದಸಾರ ಶಾಸ್ತ್ರವಿಚಾರ ಪೌರಾಣ
ಯೋಗತತ್ವಗಳ ಶೃಂಗಾರವೆನಿಸುತಿಹ ಶ್ರೀ
ಭಾಗವತಮಂ ಪೇಳ್ವೆಸಂಕ್ಷೇಪದಿಂದ ಹನ್ನೆರಡು ಪದ್ಯಂಗಳಾಗಿ

ಗುರುಸುತನ ಬಾಣದುಪಹತಿಗೆ ಮೊರೆಯಿಡುವಲು
ತ್ತರೆಯ ಗರ್ಭವ ಶೌರಿರಕ್ಷಿಸಲ್ ಬಳಿಕಧರೆ
ಗರಸಾಗಿ ಕಲಿಯ ನಿಗ್ರಹಿಸಿ ಧರ್ಮದಿ
ರಾಜ್ಯವಾಳುತಿರೆವಿಷ್ಣುರಾತಂ
ವರಶಮೀಕಾತ್ಮಜನ ಶಾಪಬರೆತಾಕೇಳಿ
ಪರಮವೈರಾಗ್ಯದಿ ಕುಶಾಸ್ತರಣದೊಳಿರಲ್
ಕರುಣದಿಂ ಶುಕಮುನಿಪನೈತಂದನಿದುವೆ
ಪ್ರಥಮಸ್ಕಂಧದೊಳ್ ತಿಳಿವುದು ೧

ಸಾರವಾಗಿಹ ಭಕ್ತಿಯೋಗಮಂ ಪೂರ್ವದೊಳ್
ನಾರದಗೆ ವಿಧಿವೇಳ್ದ ಸೃಷ್ಟಿಯಕ್ರಮಂ ಪ್ರಳಯ

ವಾರಿಯಲಿ ಬ್ರಹ್ಮತಪಗೆಯ್ಯಲೊಲಿದಚ್ಯುತಂ
ತನ್ನಪುರಮಂ ತೋರಿಸಿ
ಚಾರುಭಾಗವತ ತತ್ತ್ವೋಪದೇಶದಿ ಸೃಷ್ಟಿ
ಗಾರಂಭ ಮಾಡಿಸಿದನೆಂದು ಶುಕಮುನಿವರಂ
ಧಾರುಣೀಪತಿ ಪರೀಕ್ಷಿತಗರುಹಿದಂ ದ್ವಿತೀಯಸ್ಕಂಧದೋಳ್
ತಿಳಿವುದು ೨

ವಿದುರ ಮೈತ್ರೇಯ ಸಂವಾದಮಂ ಸೃಷ್ಟಿಯ
ಭ್ಯುದಯವಂ ಸ್ವಾಯಂಭುವಿನಜ ನನವಹರೂ
ಪದ ಹರಿಯಚರಿತ ಸನಕಾದಿಗಳ್ ಜಯವಿಜಯರಿಗೆ
ಕೊಟ್ಟ ಶಾಪತೆರನು
ಉದಿಸಿದಂಹರಿಕರ್ದಮಂಗೆ ಕಪಿಲಾಖ್ಯದಿಂ
ವಿದಿತವಾಗಲ್ ತಾಯಿಗರುಹಿದಂಸಾಖ್ಯಯೋ
ಗದನೆಲೆಯ ರಾಜಂಗೆ ಮುನಿಯೊರೆದನಿದು
ತೃತೀಯಸ್ಕಂಧದೋಳ್ ತಿಳಿವದು ೩

ಶಿವನ ವೈರದಿನಕ್ಷಯಾಗವಂ ಮಾಳ್ಪುದಂ
ತವಕದಿಂ ಕೆಡಿಸಿ ಶಂಕರನು ಕರುಣಿಸುವದಂ
ಧೃವಚರಿತಮಂಗವೇನರಚರಿತ್ರೆಗಳ್ ಪೃಥುಚಕ್ರವರ್ತಿ ಜನನ
ಅವನಿಗೋರೂಪಿಯಾಗುತ ಸಕಲವಸ್ತುಸಾ
ರವಕೊಡುವದುಂ ಪ್ರಚೇತಸರುಪಾಖ್ಯಾನಮಂ
ತವೆಪುರಂಜನನುಪಾಖ್ಯಾನಮಂ ಯಿದುಚತುರ್ಥ
ಸ್ಕಂಧದೋಳ್ ತಿಳಿವದು ೪

ವರಪ್ರಿಯ ವ್ರತಚರಿತೆಯಾಗ್ನೀಧ್ರಚರಿತೆಯುಂ
ಹರಿಯ ಋಷಭಾವತಾರದ ಮಹಾಮಹಿಮೆಯಂ
ಭರತರಾಯನ ಮೂರುಜನ್ಮವೃತ್ತಾಂತಮಂ
ಭೂಗೋಳವಿಸ್ತಾರವು

ಎರಡನೆ ಖಗೋಳದೋಳ್ ವಾಯ್ವಾದಿಮಂಡಲವಿ
ವರಗಳುಂ ನರಕಾದಿ ವರ್ಣನೆಯ ಸಂಖ್ಯೆಯುಂ
ಪರಿಪರಿಯ ಪಾಪಪ್ರಭೇದಮುಂ
ಯಿದುಪಂಚಮಸ್ಕಂಧದೋಳ್ ತಿಳಿವದು ೫

ಅರುಹಿದನಜಾಮಿಳನ ಚರಿತೆಯಂದಕ್ಷುಸುತೆ
ಯರ ಜನನಮಂ ವಿಶ್ವರೂಪಾಖ್ಯಭೂಸುರಂ
ಹರಿಗೆ ನಾರಾಯಣಕವಚವ ಮಿಗೆ ಪೇಳ್ವುದುಂ
ವೃತ್ರಾಸುರನ ಕೊಲ್ವುದುಂ
ಭರದಿ ಬೆನ್ಹತ್ತಿಬಹ ಬ್ರಹ್ಮಹತ್ಯವ ಸುರಪ
ಧರಣಿಜಲ ವೃಕ್ಷಸ್ತ್ರೀಯರಿಗೆ ಭಾಗಿಸಿದುದಂ
ವರಚಿತ್ರಕೇತುವಿನುಪಾಖ್ಯಾನವಿದುವೆ ಷಷ್ಠಸ್ಕಂಧದೋಳ್
ತಿಳಿವದೂ ೬

ವಿಧಿಯವರದಿ ಹಿರಣ್ಯಕಶ್ಯಪನು ಗರ್ವದಿವಿ
ಬುಧರಂ ಜಯಿಸುವದುಂ ತರಳ ಪ್ರಹ್ಲಾದನ
ಭ್ಯುದಯಮುಂ ಹರಿಯವೈರದೊಳಸುರಭಾಧಿಸಲ್
ನರಸಿಂಹನಾಗಿ ಹರಿಯು
ಮದಮುಖನ ಸೀಳ್ವುದಂಪ್ರಹ್ಲಾದನೃಪನಜಗ
ರದಮುಖದಿ ವರ್ಣಾಶ್ರಮದ ಧರ್ಮಕೇಳ್ವುದಂ
ವಿಧುಧರಂತ್ರಿಪುರವಂವಧಿಸಿದಕಥೆಯಸಪ್ತಮಸ್ಕಂಧದೋಳ್
ತಿಳಿವದು ೭

ಮನುಗಳ ಚರಿತ್ರೆಗಳ್ ಗಜರಾಜ ಮೋಕ್ಷವಂ
ದನುಜ ದಿವಿಜರು ಶರಧಿಯಂಮಥಿಸೆವಿಷವರು
ದ್ರನು ಭಕ್ಷಿಸುವದುಮಮೃತವ ಮೋಹಿನೀ ರೂಪದಿಂದ
ಹರಿಸುರರಿಗೀಯ್ಯೆ
ಅನಿಮಿಷರ ಗೆದ್ದು ಬಲಿ ಶತಕ್ರತುವಮಾಳ್ಪುದಂ

ವನಜಾಕ್ಷ ವಟುವೇಷದಿಂ ದವಗೆಲ್ವುದಂ
ಘನವಾದ ಮೀನಾವತಾರ ದಚರಿತೆಯುಮಷ್ಟಮಸ್ಕಂಧದೋಳ್
ತಿಳಿವದು ೮

ಇನವಂಶ ರಾಜರಚರಿತ್ರೆಯೋಳಂಬರೀ
ಷನ ಮಹಿಮೆ ಯಿಕ್ಷ್ವಾಕುರಾಜನಚರಿತ್ರ ರಾ
ಮನಚರಿತೆಯಂ ಭವಿಷ್ಯದ್ರಾಜರಿತಿಹಾಸ
ಚಂದ್ರವಂಶಾನುಚರಿತಂ
ವನಿತೆಯುಂ ಪುರುಷನಾಗಿದ್ದಿಳನ ಚರಿತಶು
ಕ್ರನ ಮಗಳ ಶರ್ಮಿಷ್ಠೆಯರಚರಿತೆಯದುವೂರು
ಜನಪಾಲ ವಂಶಪಾರಂಪರ್ಯವಿದುವೆ
ನವಮಸ್ಕಂಧದೋಳ್ ತಿಳಿವದು ೯

ಹರಿ ದೇವಕೀ ಪುತ್ರನಾಗಿ ಗೋಕುಲದಿ ಪರಿ
ಪರಿಲೀಲೆಗಳತೋರಿ ದುಷ್ಟರಂಸದೆದುತಾಂ
ತೆರಳಿ ಮಧುರೆಯೊಳುಕಂಸಾದಿಗಳವಧಿಸಿ
ಪಿತೃಮಾತೃಗಳಸೆರೆಯಬಿಡಿಸಿ
ವರವುಗ್ರಸೇನಂಗೆ ಪಟ್ಟಮಂಗಟ್ಟಿಸಾ
ಗರದಿ ಪುರವಂರಚಿಸಿ ಬಲುತರುಣಿಯರ ಕೂಡಿ
ಧರೆಯಭಾರವನಿಳುಹಿದಂ ಕೃಷ್ಣನಿದುವೆದಶಮಸ್ಕಂಧದೋಳ್
ತಿಳಿವದು ೧೦

ವಸುದೇವ ನಾರದನ ಬೋಧೆಯಿಂದಲೆ ಮಖವ
ನೆಸಗಿದಂ ಯದುಕುಲಕೆ ಹರಿಯಸಂಕಲ್ಪದಿಂ
ಋಷಿಶಾಪಬರುವದಂ ವುದ್ಧವಗೆ
ಪರಮಾತ್ಮತತ್ವಬೋಧೆಯನರುಪಿದಂ
ಮುಸಲದಿಂ ಯಾದವರಕ್ಷಯವ್ವೈದಲನ್ನೆಗಂ
ಬಿಸಜನಾಭಂ ರಾಮನೊಡನೆ ತಾತೆರಳಿದಂ
ಶಶಿಮುಖಿಯರುಳಿದವರನರ್ಜುನಂ
ಕರೆದೊಯಿದನೇಕಾದಶಸ್ಕಂಧದೊಳ್ ೧೧

ಏಳುದಿನದೊಳ್ ಪರೀಕ್ಷಿತ ಮಹಿಪಾಲತಾಂ
ಕೇಳಿದಂ ಶುಕನಿಂದಸಕಲಮುಂ ಕಲಿಕಾಲ
ದೇಳಿಗೆಯನು ಪ್ರಳಯವೃತ್ತಾಂತಮಂ
ಸೂತಶೌನಕಾದಿಗಳಿಗಿದನು
ಪೇಳಿದಂ ಬಾದರಾಯಣನ ಕೃಪೆಯಿಂದಲಿದ್ವಿ
ಜಾಳಿ ಹರುಷದ ಕಡಲೊಳೀಜಾಡಿದುದುರಮಾ
ಲೋಲನ ಮಹಾಲೀಲೆಯವತಾರಮದ್ಭುತಂ-
-ದ್ವಾದಶಸ್ಕಂಧವಿದುವೆ ೧೨

ಇಂತೀ ಪರಿಭಾಗವತ ಶಾಸ್ತ್ರಮಂ
ಸಂತರಡಿಗಳಿಗೆರಗಿ ಪೇಳ್ದೆ ಸಂಕ್ಷೇಪದಿಂ
ಕಂತುಪಿತಗುರುರಾಮವಿಠಲತಾಂಹೃದಯದೊಳ್-
-ನಿಂತುನುಡಿಸಿದತರದೊಳು
ಸ್ವಾಂತನಿರ್ಮಲರಾಗಿ ಪಠಿಸುವರಿಗನುದಿನಂ
ಚಿಂತಿತಾರ್ಥಂಗಳಿಹಪರಸೌಖ್ಯವಿತ್ತುಶ್ರೀ
ಕಾಂತ ಗುರುರಾಮವಿಠಲ ಪೊರೆವಜಯ-
-ಜಯಮನಂತಮಹಿಮಂಗೆನಿರತಂ ೧೩

ಸಂಕ್ಷೇಪ ರಾಮಾಯಣ

೩೪೩

ಶ್ರೀಜಾನಕೀಮನೋಹರ ಚರಿತೆಯನು ಮುನಿ
ರಾಜವಾಲ್ಮೀಕರಿಗೆ ನಾರದಂಪೇಳ್ದನದು
ರಾಜೀವನೇತ್ರ ಪೇಳಿಸಿದಂತೆ ಸಂಕ್ಷೇಪದಿಂ ಪೇಳ್ವೆನಾಲಿಸುವುದು
ಸುರರಮೊರೆಕೇಳಿ ಹರಿಯುದಿಸಿದಂ ದಶರಥಗೆ
ವರಮುನಿಯಯಾಗಮಂ ಕಾಯ್ದುತಾಟಕಿಯಸಂ
ಹರಿಸಿ ಗೌತಮಸತಿಯಶಾಪಮಂಬಿಡಿಸಿ ಮಿಥಿಲಾಪುರದಿ
ಶೈವಧನುವ

ಮುರಿದು ಭೂಸುತೆಯ ಕರಪಿಡಿದಯೋಧ್ಯಾಪುರಿಗೆ
ಬರುತ ಭಾರ್ಗವನ ಗರ್ವವಸೆಳೆದು ತಂದೆಯಂ
ಹರುಷಪೊಂದಿಸಿದಂರಘುದ್ವಹಂ ರಾಮಚಂದ್ರನು
ಬಾಲಕಾಂಡದಲಿ ೧

ಮಾತೆಯನುಡಿಗೆ ಪಿತನಭಾಷೆಯಂ ಸಲಿಸಲ್ಕೆ
ತಾತಮ್ಮಲಕ್ಷ್ಮಣ ಧರಾತ್ಮಜೆಯರ್ಸಹಿತ ಪ್ರ
ಖ್ಯಾತವನವಂ ಪೊಕ್ಕು ಮೋದದಿಂ ಚಿತ್ರಕೂಟದೊಳಿರಲು
ಭರತಬಂದು
ಪ್ರೀತಿಯಿಂದಲಿ ರಾಜ್ಯವಪ್ಪಿಸಲ್ ರಾಮನನು
ಜಾತಂಗೆ ಪಾದುಕವನಿತ್ತು ಮನ್ನಿಸಿಮುನಿ
ವ್ರಾತಂ ಸತ್ಕರಿಸಿಯತ್ರಿಯಂಕಂಡ
ರಘುವರನಯೋಧ್ಯಾಕಾಂಡದಿ ೨

ದಂಡಕಾರಣ್ಯದಿ ವಿರಾಧನಂ ಸಂಹರಿಸಿ
ಚಂಡಿ ಶೂರ್ಪಣಖಿ ಕಿವಿಮೂಗನಂ ಕೊಯಿಸಿಯು
ದಂಡಖರದೂಷಣಾದ್ಯರ ಮಡುಹೆ
ಮಾಯಾಮೃಗದವ್ಯಾಜದಿಂ ರಾವಣಂ
ಕೊಂಡೊಯ್ಯೆಸೀತೆಯಂಅರುಣಸುತನಿಂದಕೋ
ದಂಡ ದೀಕ್ಷಾಚಾರ್ಯ ಕೇಳ್ದಸತಿವಾರ್ತೆಯಂ
ಕಂಡು ಶಬರಿಯನು ಪಂಪಾತಟಕೆಬಂದ
ನಾರಣ್ಯಕಾಂಡದೊಳ್ರಾಮನು ೩

ಮರುತಾತ್ಮಜನಕಂಡು ಸುಗ್ರೀವಸಖ್ಯವಾ
ಚರಿಸಿ ವಾಲಿಯ ಮುರಿದು ಕಪಿರಾಜ್ಯದೋಳ್ ದಿವಾ
ಕರಸುತನ ನಿಲಿಸಿ ಕಪಿಸೈನ್ಯವಂಕರಸಿ
ಸೀತೆಯಕುಶಳವಂತಹುದೆನೆ
ತೆರಳಲು ಚತುರ್ದಿಕ್ಕಿಗಾಗವಾನರರುಮೂ

ವರುಬಂದುಪೇಳ್ದರೆಲ್ಲಿಯು ಕಾಣೆವೆಂದು ವನ
ಚರರು ಹನುಮಂತ ಮುಖ್ಯರು ಕಡಲಸಾರಿದರು
ಕಿಷ್ಕಿಂಧಕಾಂಡದಲಿ ೪

ಶರಧಿಯದಾಟಿ ಲಂಕೆಯ ಪೊಕ್ಕುಲಂಕಿನಿಯ
ಮುರಿದು ಪುರವೆಲ್ಲಮುಂ ತಿರುಗಿವನದೊಳಗೆರಘು
ವರಸರಸಿಗುಂಗುರವನಿತ್ತು ಮಣಿಯನುಕೊಂಡು
ವನಭಂಗಮಂಗೈಯ್ಯುತ
ಪರಮ ಸಂಭ್ರಮದೊಳಕ್ಷಾದ್ಯರಂಕೊಂದುವಿಧಿ
ಶರಕೆ ಮೈಗೊಟ್ಟುಲಮಂಕಾಪುರವಸುಟ್ಟುಬಂ
ದೆರಗಿ ಸೀತೆಯಕ್ಷೇಮವನರುಹಿದನು
ಪತಿಗೆಸುಂದರಕಾಂಡದಲ್ಲಿ ಹನುಮಾ ೫

ವನಧಿಯೊಳ್ಸೇತುವೆಯಗಟ್ಟಿ ಧುರದೊಳಗೆರಾ
ವಣ ಕುಂಭಕರ್ಣಾದ್ಯರೆಲ್ಲರಂ ಸದೆದುತ
ಕ್ಷಣವಿಭೀಷಣಗೆ ಸ್ಥಿರಪಟ್ಟವಂಗಟ್ಟಿ ಬ್ರಹ್ಮಾದಿ ದಿವಿಜರು
ಪೊಗಳಲು
ಜನಕನಂದನೆಯ ಪಾವಕನಿಂ ಪರಿಗ್ರಹಿಸಿ
ಘನಪುಷ್ಪಕವನೇರಿಬರುತ ವಹಿಲದಲಿ ಭರ
ತನಿಗೆ ಸುದ್ದಿಯಕಳುಹಿ ರಾಘವಂ ಧರೆಯನಾಳ್ದನು
ಯುದ್ಧಕಾಂಡದಲಿ ೬

ಪರಮಧರ್ಮದಲಿ ರಾಜ್ಯವಾಳುತಲಿ ಕಲಿರಾಮಭೂ
ವರನು ಹನ್ನೊಂದುಸಾವಿರಲವಣನಂ
ಮುರಿದು ಹರಮೇಧಾದಿ ಯಾಗಂಗಳಂ ಮಾಡಿ
ಪುತ್ರರಿಗೆ ರಾಜ್ಯವಿತ್ತು
ಪುರಜನವ ಪಶುಪಕ್ಷಿ ಕೀಟವ್ರಜ ಸಹಿತ
ತೆರಳಿದಂದಿವಿಗೆದೇವರ್ಕಳರಳಿನಮಳೆಯ
ಸುರಿದು ಜಯಜಯವೆಂದು ಪೊಗಳಿದರುಹರಿ
ಯನುತ್ತರಕಾಂಡದಲಿ ತಿಳಿವದು ೭

ಇಪ್ಪತ್ತುನಾಲ್ಕುಸಾವಿರ ಶ್ಲೋಕ ಕಾಂಡಗ
ಳೊಪ್ಪುವುದು ಸಪ್ತವೈನೂರುಸರ್ಗಗಳೆಂದು
ಕ್ಲಪ್ತವಾಗಿಹ ಮಹಾರಾಮಾಯಣವನು
ವಾಲ್ಮೀಕಿ ಮುನಿವಿರಚಿಸಿದನು
ತಪ್ಪದೇ ಪಠಿಸುವಗಮುದಿನಂ ಗಾಯತ್ರಿ
ಇಪ್ಪತ್ತು ನಾಲ್ಕುಲಕ್ಷದ ಜಪದಫಲಬಹುದು
ಸರ್ಪಶಯನನ ಮಾನುಷವತಾರದ
ಚರಿತಸಜ್ಜನ ಕಲ್ಪವೃಕ್ಷವಿದುವೆ ೮

ಇಂತಪ್ಪ ಮಹಿಮೆಯುಳ್ಳೀಕಥೆಯ ಸಂಕ್ಷೇಪ
ದಿಂ ತರಳನಾಂ ಪೇಳ್ದೆತಪ್ಪಿದ್ದಡೆಯು ತಿದ್ದಿ
ಸ್ವಾಂತ ನಿರ್ಮಲರು ಪರಿಪಾಲಿಪುದು ನಿಮ್ಮಡಿಯ
ಸೇವಕಂಸೇವ್ಯನವನು
ಎಂತಾದಡೆಯು ಹರಿಯನಾಮಾಮೃತದರುಚಿಮ
ಹಾಂತರರಿವರು ದುರ್ಜನರು ನಿಂದಿಸಿದಡೇನು
ಕಂತುಪಿತ ಗುರುರಾಮವಿಠ್ಠಲಗಂಕಿತವಿದುವೆ
ಸಂಕ್ಷೇಪರಾಮಾಯಣಂ ೯

ಸಂಕ್ಷೇಪ ಭಾರತ

೩೪೪

ಶ್ರೀರುಕ್ಮಿಣೀರಮಣ ತಾನುಡಿಸಿದಂತೆ ನಾಂ
ಧಾರುಣಿಪ ಜನಮೇಜಯಂಗೆ ಮುನಿ ಪೇಳಿಸಿದ
ಭಾರತವನೊರೆಪ ಸಂಕ್ಷೇಪದಿಂ
ಹದಿನೆಂಟುಪದ್ಯಗಳೊಳಾಲಿಸುವುದು
ದನುಜದಿವಿಜರೀ ಭುವಿಯೊಳವತಿರಿಸಿದರುಸುಯೋ
ಧನಪಾಂಡುತನಯರಂ ಸೈರಿಸದೆಭೇದಮಂ

ನೆನೆಯುತ ವಿಷವವಿಡಿಸಿಸರ್ವದಿಂ
ಕಟ್ಟಿಸಿಯರಗಿನಮನೆಯೊಳವರನಿಡಲು ।
ವನಜಲೋಚನನ ಕೃಪೆಯಿಮದದಂದಾಟಿಕಾ
ನನದಲಿ ಹಿಡಿಂಬಬಕರಂ ಮುರಿದುದೃಪದರಾ
ಜನಮಗಳನೈವರುಂ ಮದಿವ್ಯಾಗಿ
ಪುತ್ರರಪಡೆದರಾದಿಪರ್ವದಲ್ಲಿ ೧

ರಾಜಸೂಯಾಭಿಧಾನದ ಯಾಗಕಾರಣದೊ
ಳಾಜರಾಸಂಧಾದಿಗಳ ಕೊಲಿಸಿನೃಪಧರ್ಮ
ರಾಜಮಾಡಲುಮುಖವದು ನೋಡಿಸಹಿಸದೆ
ಸುಯೋಧನಂಮತ್ಸರದೊಳು
ಜೂಜಿನಲಿಸೋಲಿಸಲು ಪಂಚಪಾಂಡವರಂ ಸ
ರೋಜಾಕ್ಷಿ ದ್ರೌಪದಿಯ ಭಂಗಪಡಿಸಲ್ಕೆಪಂ–
ಕೇಜ ಪತ್ರೇಕ್ಷಣಂ ಕಾಯ್ದುಕೊಂಡನುತನ್ನವರ
ಸಭಾಪರ್ವದಲಿ ೨

ಅಡವಿಯೊಳು ವಾಸವಾಗಿರಲು ಪಾಂಡುಸುತರ್ಗೆ
ಪೊಡವಿ ಸುರರರುಹಿಸಲ್ ಸತ್ಕಥೆಗಳಾಲಿಸುತ
ಮೃಡನಮಚ್ಚಿಸಿನರಂ ಪಾಶುಪಥವಂಪಡೆಯೆ
ಘೋಷಯೊಳಹಿತನ
ಬಿಡಿಸಿದಂ ಗಂಧರ್ವಪತಿಯಿಂದ ಪಾರ್ಥನೀ
ರಡಿಸಿ ನಾಲ್ವರುಮೂರ್ಛೆಪೊಂದಲ್ಕೆಯಕ್ಷಂಗೆ
ಕೊಡಲುತ್ತರಂ ಯುಧಿಷ್ಠಿರಗೆ ಜವಮೆಚ್ಚಿದಂ
ಅರಣ್ಯಪರ್ವದೊಳಗೆ ೩

ಬಂದುಮಾತ್ಸ್ಯಾಲಯದಲಜ್ಞಾತವಾಸದೊಳ
ಗಂದುಪಾಂಡವರಿರಲ್ ಕೀಚಕಾಧಮನು ಸೈ–
ರಂಧ್ರಿಗಳುಪಿದಕಾರಣದಿ ರಾತ್ರಿಯೊಳ್
ಭೀಮಗಂಧರ್ವ ವ್ಯಾಜದಿಂದ

ಕೊಂದವಾರ್ತೆಯ ಕುರುಪಕೇಳಿ ಸೇನೆಸಹಿತ
ಬಂದುಗೋವ್ಗಳ ಪಿಡಿಯೆ ದಕ್ಷಿಣೋತ್ತರದಿನರ
ನಂದು ತುರುಗಳಬಿಡಿಸೆ ಮದುವೆಯಾಯಿತು
ಪಾರ್ಥಗೆ ವಿರಾಟಪರ್ವದಲ್ಲಿ ೪

ದೇವಕೃಷ್ಣಸಂಧಿಗೆ ತರಲ್ ಕುರುಪದು
ರ್ಭಾವದೊಳಗಿರಲದಂ ತಿಳಿದುವಿದುರನ ಮನೆಯೊ
ಳಾ ವನಜಲೋಚನಂ ಭುಂಜಿಸಿಸಮಯವರಿತು
ಕೌರವಸಭೆಗೆಪೋಗಿ
ಈವುದೈದೂರುಗಳ ಪಾಂಡವರಿಗೆನೆ ಭೇದ
ಭಾವದಿ ಸುಯೋಧನಂಸೂಜ್ಯಾಗ್ರಭೂಮಿಯಂ ತಾ
ನೀವುದಿಲ್ಲವೆನೆ ಯುದ್ಧನಿಶ್ಚಯಗೈದನುದ್ಯೋಗಪರ್ವದಲಿ ೫

ಕುರುಪತಿಯು ಗಂಗಾಸುತಗೆ ಪಟ್ಟಗಟ್ಟಿದಂ
ಎರೆಡುಬಲಮಂ ಸೇರಿಯಿರಲರ್ಜುನಂ ತನ್ನ
ವರಕೊಲ್ವದೆಂತೆನಲ್ ಹರಿವಿಶ್ವರೂಪಮಂ ತೋರಿತತ್ವವತಿಳಿಸಲು
ತರುವಾಯ ಹತ್ತುದಿನಕಾದುತಿರಲಾಗಭೀ
ಷ್ಮರಿಗೆಷಂಡನನೆವದಿ ಶಸ್ತ್ರಸಂನ್ಯಾಸ ವಾ
ಯ್ತುರು ಪರಾಕ್ರಮಿ ಸರಳಮಂಚದಲಿ ಮಲಗಿದಂ
ಭೀಷ್ಮಪರ್ವದಿಕಥೆಯಿದು ೬

ಗುರುಗಳಿಗೆ ಪಟ್ಟಾಭಿಷೇಕವಾಯಿತುದ್ರೋಣ
ದೊರೆಯಹಿಡಿತಹೆನೆಂದು ತಪ್ಪೆಸಂಶಪ್ತಕರ
ನರನೊಡನೆ ಕಾದಿದರು ಪಾರ್ಥಸುತಪೊಕ್ಕುಪದ್ಮವ್ಯೂಹ-
-ದೊಳುಮಡಿಯಲು
ನರಪ್ರತಿಜ್ಞೆಯಗೈದು ಸೈಂಧವನ ವಧಿಸಿದನ
ಸುರ ಘಟೋತ್ಕಚ ರಾತ್ರಿಯುದ್ಧದೋಳ್ ಸಂದನಾ
ವರಸುತನ ನೆವದಿಂದಗುರು ಮಡಿದನೈದು
ದಿನದಲಿದ್ರೋಣಪರ್ವದೊಳಗೆ ೭

ಕುರುಸೈನ್ಯಬತ್ತಿರುವ ಶರಧಿಯೋಲಾಯ್ತು ದಿನ
ಕರಸುತಗೆ ಪಟ್ಟವಂಗಟ್ಟಿ ದುರ್‍ಯೋಧನಂ
ಹರನುತ್ರಿಪುರವ ಗೆದ್ದಕಥೆಯವಿಸ್ತರಿಸಿ ಸಾರಥಿಯ
ಮಾಡಲು ಶಲ್ಯನ
ನರನವಿಕ್ರಮಪೊಗಳಿ ಕರ್ಣನಬಲವನುಧಿ
ಕ್ಕರಿಸೆಮಾದ್ರೇಶ್ವರಂ ಕರ್ಣನತಿ ಖಾತಿಯಿಂ
ದೆರಡುದಿನ ಕಾದಿಯರ್ಜುನನಿಂದ ಮಡಿದ ಸೂತಜ
ಕರ್ಣಪರ್ವದಲಿ ೮

ಸೂತಜನಮರಣದಲಿ ಶಲ್ಯಗಾಯಿತು ಪಟ್ಟ
ವಾತಧರ್ಮಜನಿಂದಲರ್ಧದಿನದೊಳು ಮಡಿದ
ಸೋತುದರಿಸೇನೆ ನಿರ್ಜನವಾಯ್ತು
ಶಕುನಿಯಂಸಹದೇವಸಂಹರಿಸಲು
ಪಾತಕಿ ಸುಯೋದನಂ ಕೊಳನಪೊಕ್ಕಿರಲು ಯಮ
ಜಾತಾದಿಗಳು ಪೋಗಿ ನುಡಿಸಲ್ಕೆಜಲ ಪೊರಟು
ವಾತಜನ ಗದೆಯಿಂದ ತೊಡೆಯೊಡೆದುಬಿದ್ದ
ಕುರುಪನು ಶಲ್ಯಪರ್ವದೊಳಗೆ ೯

ಗುರುಜಂಗೆ ಬೆಸಸಿದಂ ಕುರುರಾಯ ಪಾಂಡವರ
ಶಿರವತಹುದೆನುತಲಶ್ವತ್ಥಾಮಪಾಳಯದಿ
ತರಳರಂ ವಧಿಸಿತಲೆಗಳತರಲು ದುಃಖದಿಸುಯೋಧನಂ
ಜೀವಬಿಡಲು
ನರಭೀಮಸೇನರಾವಾರ್ತೆಯಂ ಕೇಳುತಲೆ
ತರುಬಿ ಹಿಡಿದೆಳೆ ತಂದು ದ್ರೌಣಿಯಂ ಶಿಕ್ಷಿಸಲ್
ತರುಣಿ ದ್ರೌಪದಿ ನಿವಾರಿಸಲು ಮಾಣಿಕನಕೊಂಡರು
ಸುಪ್ತಪರ್ವದಲಿ ೧೦

ರಣದಿ ಮಡಿದಿರುವ ನೃಪರರಸಿಯರ್ ಅಂಧಭೂ
ಪನು ಸತಿಯುಸಹಿತಲೈತರುತಿರಲ್ ಕಳನೊಳಗೆ

ಹೆಣೆದಬೈತಲೆ ಕೆದರಿದುಗುಡದಲಿ ನಾರಿಯರು
ತಮ್ಮಪತಿಗಳನಪ್ಪಲು
ಪೆಣಗಳೊಟ್ಟೈಸಿ ಸಂಸ್ಕಾರಕ್ರಿಯೆಗಳವಿದು
ರನುಗೈದನನ್ನೆಗಂ ಧೃತರಾಷ್ಟನರಸಿ ಕೃ
ಷ್ಣನಿಗೆ ಶಾಪವಕೊಡಲು ಯಾದವರುಕ್ಷಯವೈದಲೆಂದು
ಸ್ತ್ರೀಪರ್ವದಲಿ ೧೧

ತನಗೆ ಕರ್ಣಸಹೋದರನೆಂಬ ವಾರ್ತೆಯಮ
ಜನು ಕೇಳಿ ಶೋಕದಿವಿರಕ್ತಿಯಿಂದಿರೆ ಸಕಲ
ಮುನಿಗಳುಂ ಕೃಷ್ಣರುಂ ತಿಳುಹಲ್ಕೆ ಬಂದುಗಜಪುರದಿ
ಪಟ್ಟವಧರಿಸಿದ
ಘನಬಂಧುವಧೆ ಮಹಾದೋಷವೆಂತೆಂದು ಭೀ
ಷ್ಮನ ಕೇಳಲರುಹಿದಂ ರಾಜನೀತಿಯ ಧರ್ಮ
ವನು ಕಷ್ಟಕಾಳಧರ್ಮವ ಮೋಕ್ಷಧರ್ಮವೆಂಬಿದು
ಶಾಂತಿಪರ್ವದಲಿ ೧೨

ಅತಿಶಯ ದಾನಧರ್ಮದ ಲಕ್ಷಣಗಳಂ ನಿ
ಯತಮಾದ ವರ್ಣಾಶ್ರಮಾಚಾರಕ್ರಮದಸಂ
ತತಿಗಳಂ ಶಿವವಿಷ್ಣುಗಳಮಹಿಮೆ ಬ್ರಹ್ಮಸಾಕ್ಷಾತ್ಕಾರಸದ್ಬೋಧೆಯ
ಕಥೆಗಳರುಹಿಸಿ ನದೀಸುತಧರ್ಮಜನ ಮನೋ
ವ್ಯಥೆಯ ಬಿಡಿಸಿದನುತ್ತರಾಯಣೆಯು ಬರಲುಶ್ರೀ
ಪತಿ ಕೃಷ್ಣನಂ ಧ್ಯಾನಿಸುತ ಮುಕ್ತನಾದನಿದು–
–ಮಾನುಶಾಸನ ಪರ್ವದಿ ೧೩

ಗುರುಸುತನ ಬ್ರಹ್ಮಾಸ್ತ್ರಮಂಚಕ್ರದಿಂದಸಂ
ಹರಿಸಿ ಕೃಷ್ಣಂಕಾಯ್ದನುತ್ತರೆಯಗರ್ಭಮಂ
ಧರೆಯಧರ್ಮದಿ ಯುಧಿಷ್ಠಿರನಾಳುತಿರೆ ಬಾದರಾಯಣ
ನೇಮದಿಂದ
ಪರಿಪರಿಸುವಸ್ತುಗಳನೆಲ್ಲ ತಂದುಯ್ಯೆ

ವರು ಮಹಾಸಂತಸದಿಹರಿ ಸಹಾಯದಿ ಮಾಡಿ
ದರು ಯಜ್ಞಮಂ ದ್ವಿಜೋತ್ತಮರ
ಸಂಪೂಜಿಸಿದರಶ್ವಮೇಧಕಪರ್ವದಿ ೧೪

ಅಂಧಭೂಪತಿ ಕೌರವಸ್ತ್ರೀಯರುಂ ಕುಂತಿ
ಗಾಂಧಾರಿ ಸಹಿತಬರೆ ತೆರಳಿದಂತಪಗ್ಯೆಯ್ಯೆ
ಸಂದು ಹೋದರುಸ್ತ್ರೀಯರೆಲ್ಲರುಂ ಗಂಗೆಯೊಳ್
ಮುವ್ವರುಪವಾಸದೊಳಿರೆ
ಬಂದುದಾಕಾಳ್ಗಿಚ್ಚಿನೋಲ್ ಮಹಾಜ್ವಾಲೆಯೋಳ್
ಪೊಂದಿದರ್ ವಿದುರಧರಾತ್ಮಜನಕೂಡಿದಂ
ಬಂದುಯಮಜನುಪುರದಿ ಶ್ರಾದ್ಧಗಳಮಾಡ್ದನಾಶ್ರಮ-
-ವಾಸಪರ್ವದೊಳಗೆ ೧೫

ವರುಷಗಳು ಷಟತ್ರೀಂತಿಯು ರಾಜ್ಯವಾಳುತಿರೆ
ಬರುಬರುತಲುತ್ಪಾತಗಳುಪುಟ್ಟಿದವು ಯಾದ
ವರುಮುಸಲದಿಂದಲನ್ಯೋನ್ಯ ಕಲಹದಿ
ಮಡಿದರೆಂಬವಾರ್ತೆಯನು ಕೇಳಿ
ನರನು ನಡೆತಂದು ಶೋಕದೊಳುಳಿದವರನುತಾ
ಕರದೊಯಿದು ವಜ್ರಾಖ್ಯನಂ ಯಿಂದ್ರಪ್ರಸ್ಥದೋಳ್
ಧರೆಗೆಪಟ್ಟವನಿಲಿಸಿದರ್ ಪಾಂಡವರ್
ಮುಸಲಪರ್ವದಕಥೆಯಿದು ೧೬

ನರನಮೊಮ್ಮಗೆ ಪಟ್ಟವಂಗಟ್ಟಿಯೈವರುಂ
ತೆರಳಿದರ್ಪಾಂಡವರ್ ಸತಿಸಹಿತಬರುತ ಹಿಮ
ಗಿರಿಯತಪ್ಪಲೊಳು ದ್ರೌಪದಿಯುಸಹದೇವನುಂ
ನಕುಲನುಂ ಸುರಪಸುತನು
ವರಭೀಮಸೇನನುಂ ಬಿದ್ದರಾನೃಪತಿಯೋ

ರ್ವರನುಕಾಣದೆಯೊಬ್ಬನೇಪೋಗುತಿರೆ ಕಷ್ಟ
ತರಮಾರ್ಗದೋಳೊಂದು ಶ್ವಾನಮುಂದೈದಿತಾ
ಪ್ರಸ್ಥಾನಪರ್ವದೊಳಗೆ ೧೭

ಇಂದ್ರಸುತನುಬರಲುಕಂಡುಧರ್ಮಜನು ತ
ಮ್ಮಂದಿರೆಲ್ಲೆನಲವಂ ಸುರನದಿಯತೋರಲ್ಕೆ
ಮಿಂದು ಶುಚಿಯಾಗಿ ದಿವ್ಯವಿಮಾನವೇರಿ
ತನ್ನವರೆಲ್ಲರ ನೋಡುತ
ಪೊಂದಿದಂ ಯಮನೊಡನೆ ಪವನನೋಳ್ ಭೀಮನರ
ನಿಂದನಂ ಯಮಳರಶ್ವಿನಿಯರೊಳ್ಕಲಿಮುಖ್ಯ
ಸಂದೋಹದೋಳ್ ಸುಯೋಧನ ಪ್ರಮುಖರೊಂದಿದರ್
ಸ್ವರ್ಗಾರೋಹಣಪರ್ವದಿ ೧೮

ಈಮಹಭಾರತ ಶತಸಹಸ್ರಗ್ರಂಥವನು
ಹಾ ಮುನಿ ಪರಾಶರಾತ್ಮಜಪೇಳ್ದನದುವೆ ಗುರು
ರಾಮವಿಠಲಂ ಹೃದಯದಲಿ ನಿಂತುನುಡಿಸಿದಂ
ಸಂಕ್ಷೇಪಭಾರತವನು
ಪ್ರೇಮದಿಂದಾಲಿಸುವ ಸಜ್ಜನರಿಗನುದಿನಂ
ಕಾಮಿತಾರ್ಥವನಿಹಪರಂಗಳೊಳ್ಸುಖವಗುರು
ರಾಮವಿಠ್ಠಲಕೊಡುವಭಾಗ್ಯವಲ್ಲೀನಗರ–
–ನಿಲಯನರಹರಿಕರುಣದಿ ೧೯

ಅನುಬಂಧಗಳು

ಅನುಬಂಧ-೧

ಕಠಿಣಶಬ್ದಗಳ ಅರ್ಥ

ಅಂಘ್ರಿ = ಪಾದ
ಅಂಚಿತ = ಪ್ರಸಿದ್ಧ
ಅಂಡಜ = ಗರುಡ
ಅಂತರ್ಯಾಮಿ = ಪರಮಾತ್ಮ
ಅಂಬಕ = ಕಣ್ಣು
ಅಂಬರ = ಆಕಾಶ, ವಸ್ತ್ರ
ಅಂಬರ ರಾಜ = ಆಕಾಶರಾಯ
ಅಂಬುರುಹ = ಕಮಲ
ಅಕುಟಿಲ = ವಕ್ರತೆಯಿಲ್ಲದವನು
ಅಖು = ಇಲಿ
ಅಖುವೈರಿ = ಸರ್ಪ
ಅಗ್ಗಳ = ಶ್ರೇಷ್ಠ
ಅಘ = ಪಾಪ
ಅಘವಿದೂರ = ಪಾಪ ವಿದೂರ
ಅಜ = ಮೇಕೆ, ಬ್ರಹ್ಮ
ಅಜಕ್ಷೀರ = ಮೇಕೆ ಹಾಲು
ಅಜಗರ = ಸರ್ಪ
ಅಜಾಂಡ = ಬ್ರಹ್ಮಾಂಡ
ಅಟ್ಟಮದ = ಅಷ್ಟಮದ
ಅಟ್ಟುಂಬೋದು = ಅಡಿಗೆ ಮಾಡಿ ಉಣ್ಣುವುದು
ಅಣಿಮಾ = ಸೂಕ್ಷ್ಮರೂಪವನ್ನು ಧರಿಸುವ ಶಕ್ತಿ, ಅಷ್ಟ ಸಿದ್ಧಿಗಳಲ್ಲಿ ಒಂದು
ಅಣುಗ = ಮಗ
ಅಣುಪ್ರಸ್ಥಪುರಿ = ಚಿಕ್ಕಬಳ್ಳಾಪುರ
ಅರ್ಥಕಾರಿಣಿ = ಸಂಪತ್ತನ್ನು ನೀಡುವವಳು, ಲಕ್ಷ್ಮೀ
ಅದ್ವೈತ ತ್ರಯ = ಎರಡಲ್ಲದ ಮೂರು ತತ್ವಗಳು - ಜ್ಞಾನ, ಭಕ್ತಿ, ವೈರಾಗ್ಯಗಳು
ಅರ್ಧಮಾನ = ಅರ್ಧಸೇರು
ಅನಂಗ = ಮನ್ಮಥ
ಅನಗ್ನಿಕ = ಬೆಂಕಿಯಿಂದ ಬೇಯಿಸದ
ಅನಾದಿಕರ್ಮ = ಪ್ರಾಚೀನ ಕರ್ಮ
ಅನ್ಯಾರ್ಜನೆ = ಅನ್ಯಾಯವಾಗಿ ಸಂಪಾದಿಸಿದ್ದು
ಅನಿಮಿಷ = ದೇವತೆ
ಅನಿಲಸುತ = ವಾಯುಪುತ್ರ

ಅನುದಾತ್ತ = ಸ್ವರಗಳನ್ನು ತಗ್ಗಿದ ದನಿಯಲ್ಲಿ ಉಚ್ಚರಿಸುವುದು
ಅನುಲೋಮ = ಮೇಲ್ಜಾತಿಯಲ್ಲ ಗಂಡು ಕೆಳಜಾತಿಯ ಕನ್ಯೆಯೊಂದಿಗೆ ವಿವಾಹವಾಗುವುದು
ಅನುವರ = ಯುದ್ಧ
ಅಪವರ್ಗ = ಮೋಕ್ಷ
ಅಪವರ್ಗಪ್ರದ = ಮೋಕ್ಷಪ್ರದ
ಅಪ್ರಮೇಯ = ಅಳತೆಗೆ ಸಿಗದವನು
ಅಪ್ರಾಕೃತ = ಅಸಾಧಾರಣವಾದ
ಅಬದ್ದ = ಸುಳ್ಳು
ಅಬ್ಜಮಿತ್ರ = ಸೂರ್ಯ
ಅಭಾಗ್ಯಲಕ್ಷ್ಮಿ = ದೌರ್ಭಾಗ್ಯದ ದೇವತೆ
ಅಭಿಕಾರ = ತುಪ್ಪ
ಅಭಿಷೇಣ = ಅಭಿಷೇಕ
ಅಭೀಷ್ಟ = ಕೋರಿಕೆ
ಅಬ್ಜ = ತಾವರೆ
ಅಮಾತ್ಯ = ಮಂತ್ರಿ
ಅಮೃತ = ಸಾವಿಲ್ಲದ
ಅಮಿತ = ಮಿತಿಯಿಲ್ಲದವನು
ಅರಳಿನ ಮಳೆ = ಹೂಮಳೆ
ಅರಿ = ಶತ್ರು
ಅರುಣ = ಪಾರ್ಥಸಾರಥಿ
ಅರುಣಾತ್ಮಜ = ಜಟಾಯು
ಅರುಣಿ = ಸಾಲಮಾಡದವನು
ಅವನಿ ಪಾಲ = ರಾಜ
ಅವಮತಿ = ಅವಮಾನ
ಅವಿದ್ಯಾ = ಅಜ್ಞಾನ
ಅಶ್ವಮುಖ = ಹಯವದನ
ಅಸು = ಪ್ರಾಣ
ಅಹಂಮಮ = ನಾನು ನನ್ನದೆಂಬ ಸ್ವಾಹಂಕಾರ
ಅಹರ್ನಿಶಿ = ಹಗಲಿರುಳು
ಅಹಿವೇಣಿ = ನಾಗವೇಣಿ
ಅಹಿತ = ಶತ್ರು
ಅಳುಪು = ಬಯಸು
ಅಕ್ಷರ = ನಾಶವಿಲ್ಲದವನು
ಆಗಾಮಿ ಕರ್ಮ = ಈ ಜನ್ಮದಲ್ಲಿ ಸಂಪಾದಿಸಿದ ಕರ್ಮ
ಆತ್ಮೇಶ್ವರ = ಪತಿ, ದೇವರು
ಆರ್ತಿ = ಧನುಸ್ಸಿನ ತುದಿ
ಆಪನ್ನ = ಆಪತ್ತಿಗೆ ಗುರಿಯಾದವನು
ಆಮ್ರ = ಮಾವು
ಆಮ್ನಾಯ = ವೇದ
ಆಯುತ = ವಿಸ್ತಾರ
ಆಯುಷ್ಕರ ಮಾಡು = ಆಯುಸ್ಸನ್ನು ಹೆಚ್ಚಿಸು
ಆರಳಿದು = ಅರಿಷಡ್ವರ್ಗಗಳನ್ನು ಗೆದ್ದು
ಆರೋರು = ಬ್ರಾಹ್ಮಣರು
ಆರ್ಮೊಗ = ಷಣ್ಮುಖ
ಆಲವಾಲ = ಗಿಡಕ್ಕೆ ನೀರು ನಿಲ್ಲಲು

ಮಾಡುವ ಪಾತಿ

ಆವಿರ್ಭೂತ = ಸೃಷ್ಟಿ

ಆಸ್ = ಏಸ್, ಇಸ್ಪೀಟಾದದ ಒಂದು ಎಲೆ

ಇಂದು = ಚಂದ್ರ

ಇಂದುವದನೆ = ಚಂದ್ರಮುಖಿ

ಇಂದೀವರ = ತಾವರೆ

ಇಂದ್ರನಂದನ = ಜಯಂತ, ಅರ್ಜುನ

ಇಂದ್ರನನುಜ = ವಾಮನ, ಉಪೇಂದ್ರ

ಇಂದ್ರಿಯದಹಿಲ = ದಶೇಂದ್ರಿಯಗಳು

ಇನಕುಲ = ಸೂರ್ಯವಂಶ

ಇನಜ = ಸುಗ್ರೀವ, ಕರ್ಣ

ಇಭ = ಆನೆ

ಇಕ್ಷು = ಕಬ್ಬು

ಈಡು = ಸಮ

ಈರೊಂದು ತಾಪ = ತಾಪತ್ರಯ

ಈಷಣ = ಆಸೆ

ಈಷಣತ್ರಯ = ಹೆಂಡತಿ ಮಕ್ಕಳು ಮತ್ತು ಧನದ ಆಸೆ

ಈಷಿತ್ವ = ಪ್ರಭಾವ ಬೀರುವುದು

ಉಂಛ ವೃತ್ತಿ = ಊಂಛವೃತ್ತಿ, ಹರಿದಾಸರು ಬೇಡುವ ಬಿಕ್ಷೆ

ಉಡತೆ = ಅಳಿಲು

ಉಡುರಾಯ = ಚಂದ್ರ

ಉದರಂಭರಣ = ಹೊಟ್ಟೆಪಾಡು

ಉದಾತ್ತ = ಸ್ವರಗಳನ್ನು ಎತ್ತರದ ಸ್ವರದಲ್ಲಿ ಉಚ್ಚರಿಸುವುದು

ಉಪರತಿ = ಬುದ್ಧಿ

ಉಪಸ್ಥ = ಜನನೇಂದ್ರಿಯ

ಉಪಹಾಸ = ವ್ಯಂಗ್ಯದ ನಗೆ

ಉಭಯ ಸುಖ = ಇಹಪರ ಸುಖ

ಉಭಯಾಂಧ = ಎರಡೂ ಕಣ್ಣಿಲ್ಲದವನು

ಉರ = ಎದೆ

ಉರಗ ಮಾರ್ಗ = ಮುಕ್ತಜೀವರು ಅನುಸರಿಸುವ ಶೇಷ ಮಾರ್ಗ

ಉರ್ವಿ = ಭೂಮಿ

ಊರ್ಧ್ವ ಪುಂಡ್ರ = ಮೇಲು ಮುಖವಾಗಿ ಧರಿಸುವ ನಾಮ

ಎಂಟು ಆನೆಗಳು = ಅಷ್ಟಮದಗಳು

ಎಂಟಚ್ಚಮ್ಮ = ಕಲಿಯ ಪತ್ನಿಯಾದ ಜ್ಯೇಷ್ಠಾದೇವಿ, ಅಲಕ್ಷ್ಮಿ

ಎರಡು ಮಾರ್ಗ = ದ್ವೈತ ಮಾರ್ಗ

ಎಸು = ಬಾಣ ಪ್ರಯೋಗಮಾಡು

ಎಳಗಂದಿ = ಎಳೆಕರು

ಏಣ = ಜಿಂಕೆ

ಏಣಾಂಕ = ಚಂದ್ರ
ಏಣಾಂಕಧರ = ಶಿವ
ಏಳ್‍ವ್ಯಸನ = ಸಪ್ತವ್ಯಸನ
ಓಲಗ = ಸೇವೆ
ಕಂಚುಕ = ಕುಪ್ಪಸ
ಕಂಜ = ತಾವರೆ
ಕಂದರ = ಕಂದಳ, ಕಂಠ
ಕಂಬು = ಆನೆ
ಕಂಬು ಕಂಠ = ಗಣೇಶ
ಕಟಾಹ = ಕಟಹ, ಕೋಟೆಯ ಗೋಡೆ
ಕಟ್ಲೆ = ಕಟ್ಟಲೆ, ನಿಯಮ
ಕಠಕ = ವಶಿಷ್ಠರಿಗೆ ಸಹಾಯಕನಾಗಿದ್ದ ಒಬ್ಬ ಋಷಿ
ಕಡೆಹಾಯಿಸು = ದಾಟಿಸು, ರಕ್ಷಿಸು
ಕಡ್ಡಿ = ಕಡ್ಡಿಪುಸ್ತಕ, ಶಾಸ್ತ್ರದ ಪುಸ್ತಕ
ಕಡ್ಡಿಕೊಟ್ಟು ಪೇಳುವುದು = ಕಡ್ಡಿಶಾಸ್ತ್ರ ಹೇಳುವುದು
ಕನಕ ಕಶಿಪು = ಹಿರಣ್ಯ ಕಶಿಪು
ಕನಕ ಗರ್ಭ = ಬ್ರಹ್ಮ
ಕನಕಾಕ್ಷ = ಹಿರಣ್ಯಾಕ್ಷ
ಕಮಂಗ = ಕಮಂಗಿ, ಬುದ್ಧಿಗೇಡಿ
ಕಮಠ = ಆಮೆ
ಕರ = ಹೆಚ್ಚಿಸು, ತೆರಿಗೆ, ಹಸ್ತ
ಕರತಲ = ಅಂಗೈ
ಕರತಲಾಮಲಕ = ಅಂಗೈಯಲ್ಲಿನ ನೆಲ್ಲಿಕಾಯಿ, ಹಸ್ತಗತವಾದ
ಕರುಣಾಲ = ಕರುಣೆ
ಕರುಣಾಲವಾಲ = ದಯಾಮಯ ರಕ್ಷಕನಾದ
ಕರೆಕರೆ = ಹಿಂಸೆ, ಚಿಂತೆ
ಕರ್ಣ = ಹಡಗಿನ ಚುಕ್ಕಾಣಿ
ಕರ್ಣಧಾರ = ಚುಕ್ಕಾಣಿ ಹಿಡಿದವನು, ನಾವಿಕ
ಕರ್ತ = ಸೃಷ್ಟಿಕರ್ತ
ಕರ್ತಾರಸ್ವರ = ವೇದಗಳು
ಕರ್ಮಜ ದೇವತೆಗಳು = ಭಕ್ತಿ ಕರ್ಮದಿಂದ ದೈವತ್ವ ಹೊಂದಿದ ಋಷಿಗಳು, ಮನುಗಳು, ರಾಜರು
ಕರ್ಮಮಾರ್ಗ = ಕರ್ತವ್ಯ ನಿರತನಾಗಿದ್ದೇ ಮೋಕ್ಷ ಪಡೆವ ಮಾರ್ಗ
ಕಲುಷ = ಪಾಪ
ಕಲುಷಾತ್ಮರು = ಪಾಪಿಗಳು
ಕವಳ = ಅನ್ನ
ಕಳತ್ರ = ಹೆಂಡತಿ
ಕಕ್ಷಾಂತರ = ರಾಣೀವಾಸ
ಕಾಮಾದಿಗಳು = ಅರಿಷಡ್ವರ್ಗಗಳು
ಕಾಮ್ಯಕರ್ಮ = ವಿಷಯಾಭಿಲಾಷೆಯಿಂದ ಮಾಡುವ ಕೆಲಸಗಳು

ಕಾಮಿತ = ಅಪೇಕ್ಷಿಸಿದ
ಕಾರ್ಮುಕ = ಬಿಲ್ಲು
ಕಾಲ = ಯಮ, ವಿಷ್ಣು
ಕಾಲಾರ್ಚಿತ = ಕಾಲನಾಮಕ ಬ್ರಹ್ಮವಾಯು ರುದ್ರಾದಿಗಳಿಂದ ಸೇವಿತನಾದ ಶ್ರೀಹರಿ
ಕಾವ = ಕಾಪಾಡುವ, ರಕ್ಷಕ
ಕಿಟಿ = ವರಾಹ, ಹಂದಿ
ಕುಂಡಲಿ = ಸರ್ಪ
ಕುಂಡಲಿ ಶಯನ = ವಿಷ್ಣು
ಕುಂದಣ = ಬಂಗಾರ
ಕುಂಭಿನಿ = ಭೂಮಿ
ಕುಂಭಿನಿಜಾ = ಸೀತೆ
ಕುಂಭಿನಿಜಾ ರಮಣ = ರಾಮ
ಕುಟಿಲಾರಿ = ಅಪ್ರಾಮಾಣಿಕರ ಶತ್ರು
ಕುತ್ನಿ = ಕುತನಿ, ಹತ್ತಿ ಮತ್ತು ರೇಷ್ಮೆ ಮಿಶ್ರಿತ ಬಟ್ಟೆ
ಕುಪಥ = ದುರ್ಮಾರ್ಗ
ಕುಮುದ = ಕನ್ನೈದಿಲೆ
ಕುಲಿಶ = ವಜ್ರಾಯುಧ
ಕುಶಾಸ್ತರಣ = ದರ್ಭೆಯ ಹಾಸಿಗೆ
ಕುಶಿಕ ಪುತ್ರ = ಕುಶಿತ ರಾಜನ ವಂಶದಲ್ಲಿ ಜನಿಸಿದ ಕೌಶಿಕ–ವಿಶ್ವಾಮಿತ್ರ
ಕುಸುಮಾಸ್ತ್ರ = ಮನ್ಮಥ
ಕುಳಿಂದ = ಚಂದ್ರಹಾಸನ ಸಾಕು ತಂದೆ
ಕುಕ್ಷಿಂಬರ ವಿದ್ಯೆ = ಹೊಟ್ಟೆ ತುಂಬಿಸುವ ವಿದ್ಯೆ
ಕೂಪ = ಗುಂಡಿ, ಬಾವಿ
ಕೂಬರ = ನೊಗ
ಕೃತಿ = ಸೃಷ್ಟಿಕರ್ತ ಪ್ರದ್ಯುಮ್ನ ರೂಪಿ ಶ್ರೀ ಹರಿಯ ಪತ್ನಿ
ಕೃತ್ತಿ = ಚರ್ಮ
ಕೃತ್ತಿದಾಸ = ಶಿವ
ಕೆಡದ ಸುಖ = ಮೋಕ್ಷ
ಕೇರಳ ಭೂವರ = ಚಂದ್ರಹಾಸನ ತಂದೆ ಸುಧಾರ್ಮಿಕ
ಕೈರಾತ = ಶಬರ
ಕೊಳಗ = ಒಂದು ಅಳತೆ–ಹದಿನಾರು ಸೇರು
ಕೊಳುಗುಳ = ಯುದ್ಧಭೂಮಿ
ಕೋದಂಡ ದೀಕ್ಷಾಚಾರ್ಯ = ಶ್ರೀರಾಮ
ಕೋಲಾಹಲ ನಗರ = ಕೋಲಾರ
ಕ್ರತು = ಯಾಗ
ಕ್ರೋಡ = ಹಂದಿ, ವರಾಹ
ಕ್ಷೀರಾನ್ನ = ಹಾಲು–ಅನ್ನ
ಖಂಡ ಪರಶು = ಶಿವ
ಖಗ = ಪಕ್ಷಿ
ಖಗರಾಜ = ಗರುಡ
ಖಗವಾಹ = ವಿಷ್ಣು
ಖಲ = ನೀಚ, ಖಳ, ಒರಳು

ಗಂಗಾಸುತ = ಭೀಷ್ಮ
ಗಂಡ = ಪತಿ, ವೀರ, ವಿಪತ್ತು
ಗಜಪುರ = ಹಸ್ತಿನಾಪುರ
ಗತಿ = ದಿಕ್ಕು, ಮೋಕ್ಷ
ಗತಿದಾಯಕ = ಮೋಕ್ಷದಾಯಕ
ಗತಿವಿದೂರ = ದಿಕ್ಕುತಪ್ಪಿದವನು
ಗರಳಪುರ = ನಂಜನಗೂಡು
ಗರುವ = ಶ್ರೇಷ್ಠ, ಗರ್ವ
ಗರಿಮಾ = ಭಾರವಾಗುವಿಕೆ, ಅಷ್ಟಸಿದ್ಧಿಗಳಲ್ಲಿ ಒಂದು
ಗರ್ಗಾಚಾರ್ಯ = ಬಲರಾಮಕೃಷ್ಣರಿಗೆ ನಾಮಕರಣ ಮಾಡಿದ ಪುರೋಹಿತ
ಗಾತುರ ಸುಖ = ದೇಹಸುಖ
ಗಾದಿತನಯ = ವಿಶ್ವಾಮಿತ್ರ
ಗಾರು = ಹಿಂಸೆ, ಕಷ್ಟ
ಗಿಲೀಟು = ಲೋಹಕ್ಕೆ ಬಳಿಯುವ ಚಿನ್ನದ ಅಥವ ಬೆಳ್ಳಿಯ ಮುಲಾಮು
ಗೀರ್ವಾಣ = ದೇವತೆ
ಗುಟ್ಟು = ರಹಸ್ಯ, ಗುಂಪು
ಗುಟ್ಟಂಗುಡಿಸು = ಗುಂಪು ಕೂಡಿಸು
ಗುಪಿತ = ಗುಪ್ತ
ಗುರುಜ = ದ್ರೋಣನ ಮಗ– ಅಶ್ವತ್ಥಾಮ
ಗುಹ್ಯ = ಗುಟ್ಟಾದ

ಗೊರವ = ಗುರು, ಬಿಕ್ಷುಕ
ಗೋತ್ರ = ವಂಶ, ನೆಲೆ, ಭೂಮಿ
ಗೋಪತಿ = ಗೋಮ
ಗೌತಮ ಸತಿ = ಅಹಲ್ಯೆ
ಗ್ರಾಮ ಸುಖ = ಲೌಕಿಕ ಸುಖ
ಗ್ರೀವ = ಕಂಠ
ಘಟ ಸಂಭವ = ವಶಿಷ್ಠ
ಘನ = ಮೋಡ
ಘನೇಭ ಕಾಯ= ಮೋಘವರ್ಣದ ಶರೀರವುಳ್ಳವನು
ಘಾಸಿ = ತೊಂದರೆ
ಘೃತವರ್ತಿ = ತುಪ್ಪದ ಬತ್ತಿ
ಚಂದ್ರ
ಮುರುವು = ನಾಸಿಕ ಆಭರಣ
ಚಂದ್ರ
ಸಹೋದರಿ = ಲಕ್ಷ್ಮೀ
ಚತುರಶೀತಿಲಕ್ಷ = ಎಂಭತ್ತನಾಲ್ಕು ಲಕ್ಷ
ಚಾಟು ಮಾತು = ಬಣ್ಣದ ಮಾತು
ಚಿತ್ ಸ್ವಭಾವ = ಮನಸ್ಸಿಗೆ ಸ್ಮರಣ ಶಕ್ತಿ ನೀಡುವವನು, ಜ್ಞಾನಿ
ಚಿತ್ತಾಭಿಮಾನಿ = ಮನಸ್ಸಿಗೆ ಅಭಿಮಾನಿಯಾದ ಲಕ್ಷ್ಮೀ
ಚೇತ = ಮನಸ್ಸು
ಚೇತೋದ್ಭವ
ಜನನಿ = ಲಕ್ಷ್ಮೀ

ಚೊಚ್ಚನುಡಿ = ವಕ್ರವಾತುಗಳು, ಚೊಂಚನುಡಿ
ಜಂಬುಫಲ = ನೇರಿಲೆ ಹಣ್ಣು
ಜಂಭ = ತಾರಕನ ಪ್ರಧಾನಿ
ಜಂಭಾರಿ = ಇಂದ್ರ
ಜಡಪ್ರಕೃತಿ = ಕ್ರಿಯಾಶೂನ್ಯತೆ
ಜನಯಿತ್ರಿ = ಜನ್ಮಕ್ಕೆ ಕಾರಣಳಾದವಳು
ಜಯಾ = ಲಯಕರ್ತ ಸಂಕರ್ಷಣರೂಪಿ ಶ್ರೀ ಹರಿಯ ಪತ್ನಿ
ಜರೆ = ಮುಪ್ಪು
ಜಲಜರಿಪು = ಚಂದ್ರ
ಜಲಜಸಖ = ಸೂರ್ಯ
ಜಲಜಾತ = ಕಮಲ
ಜಲಜಾತ ನಾಭ = ವಿಷ್ಣು
ಜಲಜಾಪ್ತ ಮಂಡಲಿ = ಸೂರ್ಯ ಮಂಡಲ
ಜಲೂಕ = ಜಿಗಣಿ
ಜವ = ವೇಗ, ಯಮ
ಜವನಾಳ್ಗಳು = ಯಮಧೂತರು
ಜಾಗು = ಎಚ್ಚರ
ಜಾತಕ = ಜತ್ತುಕ, ಮೋಸಗಾರ
ಜಾಮಾತ = ಅಳಿಯ
ಜಾನು = ಮಂಡಿ
ಜಾಹ್ನವಿ = ಗಂಗೆ
ಜಿಣುಗು = ಜಿನುಗು, ತೊಂದರೆ ಕೊಡು

ಜಿನಜಾತ = ಬುದ್ಧ
ಜಿಹ್ವೋಪಸ್ಥ ಪರಾಯಣರು = ಜಿಹ್ವೆ ಮತ್ತು ಉಪಸ್ಥಗಳ ಚಪಲ ತೀರಿಸಿಕೊಳ್ಳುವುದರಲ್ಲಿ ಆಸಕ್ತರು
ಜೀಮೂತ = ಮೋಡ
ಜೀಮೂತ ನಿಭಶ್ಯಾಮ = ಮೇಘಶ್ಯಾಮ
ಜೇಷ್ಠದೇವಿ = ಕಲಿಯ ಪತ್ನಿಯಾದ ಅಲಕ್ಷ್ಮಿ
ಝಿಲ್ಲಿಕ = ಜೀರುಂಡೆ
ಝಷ = ಮೀನು
ತಕ್ರ = ಮಜ್ಜಿಗೆ
ತತ್ವಮತ = ವೈಷ್ಣವ ಮತ
ತತ್ವಾರ್ಥಿ = ತತ್ವವನ್ನು ಅಪೇಕ್ಷಿಸುವವನು
ತತ್ವಾಭಿಮಾನಿಗಳು = ಸೃಷ್ಟಿಯ ಚೇತನ ಅಚೇತನ ವಸ್ತುಗಳ ಮತ್ತು ದೇಹಗತ ಇಂದ್ರಿಯಗಳ ಅಭಿಮಾನಿ ದೇವತೆಗಳು
ತರಣಿ = ಸೂರ್ಯ
ತರಣಿಜ = ಸುಗ್ರೀವ, ಕರ್ಣ
ತಲ್ಪ = ಹಾಸಿಗೆ
ತವಕ = ಆತುರ
ತಸ್ಕರ = ಕಳ್ಳ, ಕಳ್ಳತನ
ತಸ್ವೀರ್ = ಪ್ರತಿಬಿಂಬ

ತಾಮರಸ = ಕಮಲ
ತಾಮರಸಭವ = ಬ್ರಹ್ಮ
ತಿತೀಕ್ಷೆ = ಸಹನೆ
ತೀರ್ = ನಾಶ, ಸಾವು
ತಿರೋದಾನ = ಅದೃಶ್ಯವಾಗುವ ತಪೋಶಕ್ತಿ
ತುಡುಗಾಟ = ತುಂಟತನ
ತುತಿ = ಸ್ತುತಿ
ತುಂಬು ಫಲ = ಕುಂಬಳ ಕಾಯಿ
ತುರಂಗ = ಕುದುರೆ
ತುರು = ಹಸು
ತುರು ಕರು = ಹಸು ಮತ್ತು ಕರು
ತುರುಪು = ಇಸ್ಪೀಟ್ ಆಟದಲ್ಲಿ ಗೆಲುವು ತರುವ ಎಲೆ
ತೃಣಾವರ್ತ = ಕಂಸನ ಕಡೆಯ ಒಬ್ಬ ರಾಕ್ಷಸ
ತೃಷೆ = ಬಾಯಾರಿಕೆ
ತೈಜಸ = ಸ್ವಪ್ರಕಾಶ
ತ್ರಾತ = ರಕ್ಷಕ
ತ್ರಾಣ = ಶಕ್ತಿ
ತ್ವಕ್ಕು = ಚರ್ಮ
ತ್ರಿಮತ = ಮೂರು ಮತಗಳು
ತ್ರಿವರ್ಗ ಸುಖ = ಧರ್ಮ ಅರ್ಥ ಕಾಮ ಸುಖಗಳು
ತ್ರುಟಿ = ಕ್ಷಣಕಾಲ
ದಡಿಗ = ಬಲಶಾಲಿ
ದಧಿಬಾಂಡ = ಮೊಸರುಗಡಿಗೆ
ದಮ = ಮನೋನಿಗ್ರಹ
ದಮನ = ನಾಶ
ದನುಜ = ರಾಕ್ಷಸ
ದಕ್ಷಿಣ ಮಾರ್ಗ = ಪಿತೃಗಳು ಹೋಗುವ ದಾರಿ
ದಸ್ರರು = ಅಶ್ವಿನಿದೇವತೆಗಳು
ದಾತ = ದಾನಿ, ಯಜಮಾನ, ಒಡೆಯ
ದಾಯಭಾಗ = ಆಸ್ತಿಯ ಪಾಲು
ದಾರಕ = ಕತ್ತರಿಸುವವ
ದಾರು = ಮರ
ದಾವ = ಕಿಚ್ಚು, ಬೆಂಕಿ
ದಾಸ್ತಾನು = ಸಂಗ್ರಹ
ದಿಂಡೆ = ಅಹಂಕಾರಿ
ದಿಟ್ಟೆ = ಧೈರ್ಯವಂತೆ
ದಿತಿಸುತ = ಹಿರಣ್ಯ ಕಶಿಪು
ದಿನಕರಸುತ = ಸುಗ್ರೀವ, ಕರ್ಣ
ದರ್ಪಕ = ಮನ್ಮಥ
ದುಪ್ಪ = ಗಂಡು ಜಿಂಕೆ
ದುರ್ನಯ = ಅಧರ್ಮ
ದುರ್ಮೇಧ = ಯಾಗ ಧ್ವಂಸ
ದುರ್ವಾದಿ = ಕೆಟ್ಟವಾದ ಮಾಡುವವನು
ದುರ್ವಿನೀತ =ವಿನಯವಿಲ್ಲದವನು
ದೃಹಿಣ = ಬ್ರಹ್ಮ
ದೇವಗುರು = ಬೃಹಸ್ಪತಿ
ದೇಹಾಯ್ಸ = ದೇಹಾಯಾಸ
ದ್ರೌಣಿ = ಅಶ್ವತ್ಥಾಮ

ದ್ವಿತ್ವ = ಎರಡು
ದ್ವಿತ್ವವಿಲ್ಲದ ಸುಖ = ಹುಟ್ಟು ಸಾವಿಲ್ಲದ ಸುಖ–ಮೋಕ್ಷ
ಧಗಡಿ = ಬೈರಿಗೆ, ರಂಧ್ರ ಕೊರೆವ ಸಾಧನ
ಧರೆ = ಭೂಮಿ
ಧರಣಿಜಾ = ಸೀತೆ
ಧರ್ಮಾನುಜ = ಅರ್ಜುನ
ಧರ್ಮಾನುಜ ಸಾರಥಿ = ಶ್ರೀಕೃಷ್ಣ
ಧಾಮ = ವಾಸಸ್ಥಾನ
ಧಾರುಣ = ಮನೋನಿಗ್ರಹ
ಧಾರ್ತರಾಷ್ಟ್ರ ವೈರಿ = ಭೀಮ
ಧಾವತಿ = ಆಯಾಸ
ಧುರ = ಯುದ್ಧ
ಧೂರ್ತ = ದುರಾಚಾರಿ
ಧೃತ = ಧರಿಸಿದ
ಧ್ವಾನ = ಧ್ವನಿ
ಧ್ಯೇಯನ್ = ಧ್ಯಾನಕ್ಕೆ ಅರ್ಹನಾದವನು
ನಗ = ಪರ್ವತ, ಒಡವೆ
ನತ = ನಮಸ್ಕರಿಸಿದ
ನನ್ನಿ = ಸತ್ಯ
ನಭ = ಆಕಾಶ
ನಭೋಮಾಸ = ಶ್ರಾವಣಮಾಸ
ನರನ ಮೊಮ್ಮ = ಪರೀಕ್ಷಿತ ರಾಜ
ನಹಿಲ ದ್ವಾರ = ನವದ್ವಾರ
ನಾಕೇಶ = ಇಂದ್ರ
ನಾರಂಗ = ಕಿತ್ತಲೆ
ನಾರುವಸ್ತ್ರಾಜಿನ = ನಾರುಮಡಿ, ನಾರುಬಟ್ಟೆ
ನ್ಯಾಯಾರ್ಜಿತ = ನ್ಯಾಯವಾಗಿ ಸಂಪಾದಿಸಿದ
ನಿಂದ್ಯ ಸಪ್ತಜ್ಞಾನ = ಸಪ್ತವ್ಯಸನಗಳು
ನಿಕರ = ಸಮೂಹ
ನಿಗಮ = ವೇದ
ನಿಟಿಲಾಕ್ಷ = ಶಿವ
ನಿತ್ಯ = ಶಾಶ್ವತವಾದ
ನಿರಂಜನ = ಪರಿಶುದ್ಧನಾದವನು, ಪರಮಾತ್ಮ
ನಿರಕ್ಷರ ಕುಕ್ಷಿ = ಅಜ್ಞಾನಿ
ನಿರ್ಜರ = ದೇವತೆ
ನಿರ್ಭರ = ರಭಸ
ನಿವೃತ್ತಿ ಪಥ = ಮೋಕ್ಷದ ದಾರಿ
ನಿಷ್ಕೃತಿ = ಪಾಪರಹಿತ
ನೀಲಘನ ನಾಭ = ನಾಭಿಯಿಂದ ಅಂತರಿಕ್ಷವನ್ನು ಸೃಷ್ಟಿಸಿದವನು
ನೂತನಾವರಣ = ಹೊಸಕೋಟೆ
ನೂರುತಡ = ನೂರುಬಾರಿ
ನೆಲವು = ಪಾತ್ರೆಗಳನ್ನು ಇಡಲು ಇಳಿಬಿಡುವ ಹಗ್ಗದ ಜಾಳಿಗೆ

ಪಂಚಾಘ = ಪಂಚ ಪಾಪಗಳು
ಪಂಚಾಬ್ಧ = ಐದು ವರುಷ
ಪಂಚಾಸ್ಯ
ಭೋಗಿ = ಐದು ಹೆಡೆಯ ಸರ್ಪ
ಪಟ್ಟಾವಳಿ = ಶುದ್ಧ ರೇಷ್ಮೆವಸ್ತ್ರ
ಪನಸು = ಹಲಸು
ಪನ್ನಗ = ಸರ್ಪ
ಪನ್ನಗರಾಜ = ಆದಿಶೇಷ
ಪರ = ಪರಮ ಜಗತ್ತಿನಿಂದ ಭಿನ್ನವಾದವನು, ಶ್ರೇಷ್ಠ
ಪರಮ ಪದ = ಮೋಕ್ಷ, ವೈಕುಂಠ
ಪರಮ ಪುರಷ = ಪೂರ್ಣನೂ ಜ್ಞಾನ ಸ್ವರೂಪನೂ ಆದವನು
ಪರಮೇಷ್ಠಿ = ಬ್ರಹ್ಮ
ಪರಾತ್ಪರ = ಅತ್ಯಂತ ಶ್ರೇಷ್ಠ
ಪರಾಶರಾತ್ಮಜ = ವ್ಯಾಸಮುನಿ
ಪರ್ಯಂಕ = ಹಾಸಿಗೆ
ಪಲಾಂಡು = ಈರುಳ್ಳಿ
ಪವಿ = ವಜ್ರ
ಪವಿನಿಭ ಶರೀರ = ವಜ್ರ ಶರೀರಿ
ಪಶುಪತಿ = ಶಿವ
ಪಾಕವೈರಿ = ಇಂದ್ರ
ಪಾದ್ಯ = ಕಾಲು ತೊಳೆಯುವ ನೀರು
ಪಾಯ್ದಳ = ಪದಾತಿ ಸೈನ್ಯ

ಪಾರ್ಥ ಸುತ = ಅಭಿಮನ್ಯು
ಪಾವಕ = ಅಗ್ನಿ
ಪಾವನಿ = ಪವನನ ಮಗ–ಭೀಮ
ಪಿತೃಯಾನ = ಪಿತೃಗಳ ಪ್ರಯಾಣ
ಪಿನಾಕ = ತ್ರಿಶೂಲ
ಪಿಶುನತೆ = ಲೋಭಿತನ, ಜಿಪುಣತನ
ಪುಂಚ ಪ್ರಸ್ಥ = ಹುತ್ತಗಳಿಂದ ಕೂಡಿರುವ ವನಪ್ರದೇಶ
ಪುರಂಜನ = ಜನ್ಮಕ್ಕೆ ಕಾರಣನಾದವನು–ಕಾಮ
ಪುರಂದರ = ಇಂದ್ರ
ಪುರಂದರಾನುಜ = ವಾಮನ, ಉಪೇಂದ್ರ
ಪುರಹರ = ಶಿವ
ಪುಷ್ಕಳ = ತೃಪ್ತಿ
ಪೂಗ = ಅಡಿಕೆ
ಪೈಣ = ಪ್ರಯಾಣ
ಪೊಂಬಕ್ಕಿ = ಗರುಡ
ಪೊಂಬಕ್ಕಿ ತೇರ = ವಿಷ್ಣು
ಪ್ರಚಯ = ಗುಂಪು
ಪ್ರಣವ = ಓಂಕಾರ ಮಂತ್ರ
ಪ್ರಜ್ಜಾರ = ಪ್ರಸಿದ್ಧಜಾರ, ವ್ಯಭಿಚಾರಿ
ಪ್ರತಿತಾರ್ಥ = ಪ್ರಸಿದ್ಧವಾದ ಅರ್ಥ

ಪ್ರತಿಲೋಮ = ಕೆಳಜಾತಿಯ ಗಂಡು ಮೇಲ್ಜಾತಿಯ ಕನ್ಯೆಯನ್ನು ವಿವಾಹವಾಗುವುದು
ಪ್ರತ್ಯಾಹಾರ = ಸಾಮೀಪ್ಯ
ಪ್ರಥಮ ಗೇಯ = ಗಣೇಶ
ಪ್ರದೋಷ = ರಾತ್ರಿಯ ಮೊದಲ ಭಾಗ, ಮುಸ್ಸಂಜೆ
ಪ್ರಭಂಜನ = ವಾಯು
ಪ್ರವರ್ತ = ಪ್ರವರ್ತಕ, ಪ್ರವೃತ್ತಿಗೊಳಿಸುವವನು
ಪ್ರವಿಲಾತ್ಮ = ಶುದ್ಧರಾದವರ ಹೃದಯವಾಸಿ
ಪ್ರವಿಷ್ಠ = ಪ್ರವೇಶ
ಪ್ರವೃತ್ತಿ ಮಾರ್ಗ = ವ್ಯಾವಹಾರಿಕ ಮಾರ್ಗ, ಕಾಮ್ಯಮಾರ್ಗ
ಪ್ರಾಜ್ಞ = ಎಲ್ಲವನ್ನು ಬಲ್ಲವನು
ಪ್ರಾಣಗಂಡ = ಪ್ರಾಣಕ್ಕೆ ಆಪತ್ತು ತರುವ, ವಿಪತ್ತು
ಪ್ರಾಣಪ್ರತಿಷ್ಠೆ = ವಿಗ್ರಹಗಳಲ್ಲಿ ದೇವತಾಶಕ್ತಿಯನ್ನು ನೆಲೆಗೊಳಿಸುವುದು
ಫಾಲ = ಹಣೆ
ಫಾಲಲೋಚನ = ಶಿವ
ಬಂಗಿ = ಅಮಲು ಬರಿಸುವ ಸೊಪ್ಪು, ಭಂಗೀ ಸೊಪ್ಪು
ಬದ್ಧಜಾತಿಗಳು = ನಿಬಂಧನೆಗೆ ಒಳಪಟ್ಟ ಜಾತಿಗಳು
ಬನ್ನ = ಕಷ್ಟ
ಬಟ್ಟೆ = ದಾರಿ
ಬಡಿವಾರ = ಬಡಾಯಿ
ಬಣಗು = ಅಲ್ಪವಾದ
ಬಯಲಿನ ಡಂಬ = ಒಣ ಹೆಮ್ಮೆ
ಬವನಾಶಿ = ದಾಸರು ಬಳಸುವ ಬಿಕ್ಷಾಪಾತ್ರೆ
ಬವರ = ಯುದ್ಧ
ಬಹ್ವಾಶನ = ಹೊಟ್ಟೆಬಾಕ
ಬಾಜಾಭಜಂತ್ರಿ = ಓಲಗ ಮತ್ತಿತರ ಮಂಗಳ ವಾದ್ಯಗಳು
ಬುದ್ಧ = ವಿದ್ವಾಂಸ, ಜ್ಞಾನಿ
ಬೃಹತಿ = ಸದಾ ವರ್ಧಿಸುತ್ತಿರುವವ; ಶ್ರೀ ಹರಿ
ಬೇಳಾಡು = ಬೇಳಿಡು, ಗೋಳಾಡು
ಬೊಬ್ಬೆರೋಗ = ಪ್ಲೇಗು ಮಾರಿ ರೋಗ
ಬೋಧ = ಜ್ಞಾನ
ಬ್ರಹ್ಮಜ್ಞಾನ = ದೈವಜ್ಞಾನ
ಬ್ರಹ್ಮಪ್ರಳಯ = ಪ್ರಪಂಚ ನಾಶ
ಬ್ರಹ್ಮವಾದ = ಪರತತ್ವವಾದ
ಭಂಗ = ಅವಮಾನ
ಭಂಟ = ಸೇವಕ

ಭರ್ಗ = ಶಿವ
ಭವ = ಸಂಸಾರ, ಶಿವ
ಭವಾರ್ಣವ = ಸಂಸಾರ ಸಾಗರ
ಭಾಗ್ಯವಲ್ಲಿ = ಬಾಗೇಪಲ್ಲಿ
ಭಾರ್ಗವಿ = ಲಕ್ಷ್ಮೀ
ಭಾರಕರ್ತ = ಹೊಣೆಗಾರಿಕೆ ಉಳ್ಳವನು
ಭಾರವಾಹತ್ವ = ಭಾರ ಹೊರುವುದು
ಭಾವಜ = ಮನ್ಮಥ
ಭಾವಜ ಪಿತ = ವಿಷ್ಣು
ಭಾವಜಾರಿ = ಶಿವ
ಭಾವಜ್ಞ = ಜ್ಞಾನಿ
ಭಾವಿಬ್ರಹ್ಮ = ಮಧ್ವಾಚಾರ್ಯರು
ಭಾವ್ಯ = ಹಿತ ಚಿಂತಕ, ಭಾವಿಸಬಹುದಾದ್ದು
ಭಾಷಾಪತಿ = ಬ್ರಹ್ಮ
ಭಾಸ್ಕರವಂಶ = ಸೂರ್ಯವಂಶ
ಭ್ರಾಮ್ಯಜನಗಳು = ಭ್ರಮೆಯಲ್ಲಿ ಬದುಕುವ ಜನಗಳು
ಭಿನ್ನಜೀವರು = ಬೇರೆಬೇರೆ ಜೀವಿಗಳು
ಭೀಷ್ಮಕ ನೃಪಜಾತೆ = ರುಕ್ಮಿಣಿ
ಭುಂಜಿಸು = ಊಟಮಾಡು
ಭುಕ್ತಿ = ಊಟ, ಸುಖ
ಭುಜಗ = ಸರ್ಪ
ಭೂಮೆಮ್ಮ = ಭೂತಾಯಿ
ಭೂಷಿಸು = ಅಲಂಕರಿಸು, ಗೌರವಿಸು
ಭೃತ್ಯ = ಸೇವಕ
ಭೃಂಗ = ದುಂಬಿ
ಭೇರುಂಡ = ಶಿವನ ಶರಭಾವತಾರವನ್ನು ನಿಗ್ರಹಿಸಲು ವಿಷ್ಣು ಧರಿಸಿದ ರೂಪ
ಭೋಕ್ತ = ಸುಖವನ್ನು ಅನುಭವಿಸುವವನು
ಮಂಕು ಮನುಜ= ಅಜ್ಞಾನಿ
ಮಖ = ಯಜ್ಞ
ಮಗುಟ = ರೇಷ್ಮೆಪಂಚೆ
ಮದ್ಯಮರು = ತಾಮಸ ಜೀವಿಗಳು
ಮದ್ದುಮಾಡು = ಔಷಧಿ ಮಾಡು
ಮರವೆ = ಅಜ್ಞಾನ
ಮರುಳಾಟ = ಹುಚ್ಚಾಟ
ಮರ್ಮಜ್ಞರು = ಜ್ಞಾನಿಗಳು
ಮಲಯರಾಜ = ಪರ್ವತ ರಾಜ
ಮಹಾಂತ = ಶ್ರೇಷ್ಠ
ಮಹಾಮಾಯೆ = ಮಹಾಲಕ್ಷ್ಮಿ
ಮಹಾವಟು = ವಾಮನ
ಮಹೋಪ್ರದ = ಮಹಾಕಷ್ಟಕಾಲ

ಮಾತುಳ = ಸೋದರ ಮಾವ
ಮಾನ = ಅಳತೆ, ಸೇರು
ಮಾಯಾ = ಜ್ಞಾನ, ಪ್ರಕೃತಿ, ಲಕ್ಷ್ಮಿ
ಮಾರ = ಮನ್ಮಥ
ಮಾರಜನಕ = ವಿಷ್ಣು
ಮಿತ್ರ = ಸೂರ್ಯ
ಮಿಹಿರ = ಸೂರ್ಯ
ಮಿಹಿರಜ = ಸುಗ್ರೀವ
ಮಿಹಿರಜಾಮಾತ್ಯ = ಹನುಮಂತ
ಮೀಸಲು ಮನ = ಹರಿಧ್ಯಾನಕ್ಕೆ ಮೀಸಲಾದ ಮನಸ್ಸು
ಮುಖ್ಯಪ್ರಾಣ = ಜೀವ ವಾಯು
ಮುದ ತೀರ್ಥ = ಆನಂದ ತೀರ್ಥ
ಮುಪ್ಪುರ ಹರ = ತ್ರಿಪುರ ಸಂಹಾರಿ
ಮುಮುಕ್ಷು = ಮೋಕ್ಷದ ಅಪೇಕ್ಷ ಉಳ್ಳವನು
ಮೂಗಳ = ಮೂರು ಕೊಳಗ
ಮೂಡಲಗಿರಿ = ತಿರುಪತಿ
ಮೂಲ ಪ್ರಕೃತಿ = ಲಕ್ಷ್ಮೀ
ಪತಿ = ವಿಷ್ಣು
ಮೃಕಂಡು ಸುತ = ಮಾರ್ಕಾಂಡೇಯ
ಮೃಗ ತೃಷ್ಣೆ = ಬಿಸಿಲ್ಗುದುರೆ
ಮೇಟಿ = ಮುಖ್ಯಾಧಿಕಾರಿ
ಮೇಧ = ಯಾಗ

ಮೋದ = ಸಂತೋಷ
ರಕ್ತಿ = ಅಪೇಕ್ಷೆ
ರಚ್ಚೆ = ರಂಪ, ಮನಸ್ಸಿಗೆ ಬಂದ ಹರಟೆ
ರಚ್ಚೆ ಕಟ್ಟೆ = ಹರಟೆ ಕಟ್ಟೆ
ರಜ್ಜು = ಹಗ್ಗ
ರತ್ನಾಕರ = ಸಮುದ್ರ
ರಥಾಂಗ = ಚಕ್ರ
ರಥಾಂಗಪಾಣಿ = ವಿಷ್ಣು
ರವಿಜಾತ = ಸುಗ್ರೀವ
ರಾಗರಹಿತ = ಲೌಕಿಕ ಪ್ರೀತಿ ಆಸಕ್ತಿಗಳಿಂದ ದೂರವಾದವನು
ರಾತಿರಿ = ರಾತ್ರಿ
ರಾದ್ಧಾಂತ = ರಂಪ, ಗಲಾಟೆ, ಸಿದ್ಧಾಂತ
ರಾವಣಿ = ಇಂದ್ರಜಿತ್
ರಿಪುಕಾಲ = ಶತ್ರುಗಳಿಗೆ ಯಮನಂತಿರುವ
ರುಚಿ = ಕಾಂತಿ
ರೂಢಿ = ಪ್ರಪಂಚ
ರೇಣು = ಪರಾಗ, ಧೂಳು
ರೋಕು = ಬಿಟ್ಟಿ ದುಡಿತ
ಲಘುತ್ವ = ಸಣ್ಣತನ
ಲಾಜ = ಭತ್ತದ ಅರಳು
ಲಿಬ್ಬಿ = ಕೂಡಿಟ್ಟ ಹಣ, ಗುಪ್ತಧನ

ವಕ್ತ್ರ = ಮುಖ
ವಜ್ರ = ಕೃಷ್ಣನ ಮೊಮ್ಮಗ, ಅನಿರುದ್ಧನ ಮಗ
ವದರು = ತನಗೆ ತಾನೇ ಮಾತನಾಡಿಕೊಳ್ಳುವುದು
ವದ್ಧವಿಪ್ರ = ಶ್ರೀಹರಿಯನ್ನು ಒದ್ದ ಭೃಗುಮಹರ್ಷಿ
ವನಜಜ = ಬ್ರಹ್ಮ
ವನಜಜಾಸ್ತ್ರ = ಬ್ರಹ್ಮಾಸ್ತ್ರ
ವನಜ ಸಂಭವ ಪಟ್ಟ=ಬ್ರಹ್ಮ ಪದವಿ
ವರದ = ವರವನ್ನು ಕೊಡುವ
ವರೇಣ್ಯ = ಶ್ರೇಷ್ಠ
ವಲ್ಮೀಕ = ಹುತ್ತ
ವಶಿತ್ವ = ಇಂದ್ರಿಯ ನಿಗ್ರಹ
ವಹ್ನಿ = ಬೆಂಕಿ
ವಾಕು = ಮಾತು
ವಾಗಾಭಿಮಾನಿ = ಸರಸ್ವತಿ
ವಾಡಿ = ಗೋಡೆ
ವಾಡಿಸು = ಗೋಡೆ ಕಟ್ಟಿಸು
ವಾತಜ = ಭೀಮ
ವಾರಿಧಿ = ಸಮುದ್ರ
ವಾರುಣಿ = ಆದಿಶೇಷನ ಪತ್ನಿ
ವಾಲೆ = ಓಲೆ, ಕಿವಿಯ ಆಭರಣ
ವಾಸವ = ಇಂದ್ರ
ವಿಕಲ = ಚಂಚಲ
ವಿಕಲರು = ಚಂಚಲ ಮತಿಗಳು, ಅರೆಬರೆ ಜ್ಞಾನದವರು
ವಿಕ್ರಮ ಧಾಮ = ಪರಾಕ್ರಮಕ್ಕೆ ಆಶ್ರಯನಾದ
ವಿಕುಂಠ = ವೈಕುಂಠ
ವಿಜ್ಞಾನ = ವಿಷ್ಣು ತತ್ವಜ್ಞಾನ
ವಿಟಪ = ರೆಂಬೆ
ವಿಧಿ = ಬ್ರಹ್ಮ
ವಿಧಿಪಿತ = ವಿಷ್ಣು
ವಿಧಿ ಸೃಷ್ಟಿಯೊಳಿಲ್ಲದ ರೂಪ = ನಾರಸಿಂಹ
ವಿಧಿಧ್ಯಾಸನ = ಗುರುಮುಖದಿಂದ ಕೇಳುವುದು
ವಿದೇಹ = ದೇಹಾಭಿಮಾನ ವಿಲ್ಲದವನು, ಶ್ರೀಹರಿ
ವಿನುತ = ಹೊಗಳಲ್ಪಟ್ಟ
ವಿಪರೀತ ಮತಿ = ಅಜ್ಞಾನ
ವಿಪಿನ = ಕಾಡು
ವಿಭಾಡಿಸು = ನಾಶಮಾಡು, ಸೋಲಿಸು
ವಿಭಾವರಿ = ರಾತ್ರಿ
ವಿಭಾವರೀಶ = ಚಂದ್ರ
ವಿಭೂತಿ = ಮಹಿಮೆ, ಮಹಾತ್ಮೆ
ವಿಭೇದ = ವ್ಯತ್ಯಾಸ
ವಿಮನ್ಯು = ಶೋಕದಿಂದ ದೂರಾದವನು
ವಿರತಿ = ವಿಶೇಷವಾದ ಸಂತೋಷ

ವಿಶ್ವ = ಜಗತ್ ವ್ಯಾಪಕನಾದ ವಿಷ್ಣು
ವಿಶ್ವಂಭರ = ಜಗತ್ತನ್ನು ಕಾಪಾಡುವವನು
ವಿಶ್ವಮೋಹನ್ನ = ಜಗತ್ತನ್ನೇ ಬೆರಗುಗೊಳಿಸ ಬಲ್ಲವನು
ವಿಷಯೆ = ದುಷ್ಟಬುದ್ಧಿಯ ಮಗಳು
ವೀಕ್ಷೆ = ನೋಡುವುದು
ವೀತ ಮೋಹರಾಗ = ಅಪೇಕ್ಷೆಗಳನ್ನು ಬಿಡುವುದು
ವೃಂತಾಕ = ಬದನೆಕಾಯಿ
ವೃಂದಾರಕ = ದೇವತೆ
ವೃಂದಾರಕೇಂದ್ರ = ದೇವೇಂದ್ರ
ವೃಜಿನ = ದುಃಖ, ತಾಪ
ವೇತಂಡ = ಆನೆ
ವೇದವ್ಯಾಸ ಶಿಷ್ಯ = ಮಧ್ವಾಚಾರ್ಯರು
ವೇಧೆ = ಕಷ್ಟ
ವೈರಾಜ್ಯ = ಬ್ರಹ್ಮಾಂಡ
ವೈಶ್ವಾನರ = ಅಗ್ನಿ
ವ್ರಜ = ಸಮೂಹ
ವ್ರಾತ = ಸಮೂಹ
ವ್ಯಕ್ತಾವ್ಯಕ್ತ = ಕಂಡೂ ಕಾಣದ
ವ್ಯಾಜ = ನೆಪ
ವ್ಯಷ್ಟಿ = ಬೇರೆ ಬೇರೆಯಾಗುವುದು
ವ್ಯೋಮ ಕೇಶ = ಶಿವ
ಶಂಭರಹರ = ಪ್ರದ್ಯುಮ್ನ
ಶಂಭರಹರ ಪಿತ = ಶ್ರೀಕೃಷ್ಣ
ಶಕ್ರ = ಇಂದ್ರ
ಶತಮುಖ = ಇಂದ್ರ
ಶತಮೂಲಿ = ಶತಾವರೀ ಗಡ್ಡೆ
ಶತಾನಂದ = ಜನಕರಾಜನ ಪುರೋಹಿತ, ಆದಿಶೇಷ
ಶಮ = ಇಂದ್ರಿಯ ನಿಗ್ರಹ
ಶರವಣ = ಶ್ರಾವಣ
ಶರಭ = ನರಸಿಂಹನನ್ನು ಶಾಂತಗೊಳಿಸಲು ಶಿವನು ಧರಿಸಿದ ರೂಪ
ಶಲಭ = ಮಿಡತೆ, ದೀಪದ ಹುಳು
ಶಾಂತಿ = ಸೃಷ್ಟಿಕರ್ತ, ಅನಿರುದ್ಧರೂಪಿ, ಹರಿಯ ಪತ್ನಿ
ಶಾತ್ರವ = ಶತ್ರುವಿನ ಸಮೂಹ
ಶಾನೆ = ತುಂಬಾ, ಅತಿ
ಶಾಮೇದಂಟು = ಕೆಸವಿನ ದಂಟು
ಶಿತಪಕ್ಷ = ಕೃಷ್ಣಪಕ್ಷ
ಶುಕ್ರ ಶಿಷ್ಯ = ಬಲಿಚಕ್ರವರ್ತಿ
ಶುಕ್ಲಾಂಬರ = ಬಿಳಿಯ ವಸ್ತ್ರ
ಶೂರ್ಪಕಾರಿ = ಮನ್ಮಥ

ಶೇಷಾಭರಣ = ಸರ್ಪವನ್ನು ಆಭರಣವಾಗಿ ಉಳ್ಳವನು-ಶಿವ
ಶೋಭನಗಾತ್ರಿ = ಮಂಗಳಕರವಾದ ಶರೀರವುಳ್ಳವಳು
ಶೌರಿ = ಯದುವಂಶದ ಶೂರ ರಾಜನ ಮಗನಾದ ವಸುದೇವ
ಶ್ರಾವಣ = ಕೇಳುವುದು
ಶ್ರುತದೇವ = ವೇದಗಳಿಂದ ಪ್ರತಿಪಾದ್ಯನಾದ ಶ್ರೀಹರಿ
ಶ್ರುತಿ = ವೇದ
ಶ್ರುತಿಗೀತೆ = ಭಾಗವತ
ಶ್ವೇತನಗ = ರಜತಾದ್ರಿ
ಶ್ರೀಕಳತ್ರ = ಲಕ್ಷ್ಮಿಯನ್ನು ಸತಿಯಾಗಿ ಉಳ್ಳ ಶ್ರೀಹರಿ
ಷಟ್‌ಷಷ್ಠಿಕೋಟಿ = ಅರವತ್ತಾರು ಕೋಟಿ
ಷಾಷ್ಟಿಕ ಮನೆತನ = ಅರವತ್ತೊಕ್ಕಲು
ಸಂಕುಚಿತ ಕರ್ಮ = ಜನ್ಮಾಂತರಗಳಿಂದ ಕೂಡಿಟ್ಟ ಕರ್ಮ
ಸಂಜೀವ = ಪ್ರಾಣದಾತ
ಸಂದಣಿ = ಗುಂಪು, ಸಮೂಹ, ಸಂದೋಹ
ಸಂಧ್ಯೋಪಾಸ್ತಿ = ಸಂಜೆಯ ಪೂಜೆ
ಸಂಯಮ = ಹಿಡಿತ, ಇಂದ್ರಿಯ ನಿಗ್ರಹ
ಸಜ = ಶಿಕ್ಷೆ
ಸತ್ಪಾತ್ರ = ದಾನ ಸ್ವೀಕಾರಕ್ಕೆ ಯೋಗ್ಯನಾದವನು
ಸದ್ಮ = ಸದನ, ಮನೆ
ಸದ್ವಿಹಾರ = ಆನಂದಜ್ಞಾನ ಮೊದಲಾದವುಗಳಲ್ಲಿ ವಿಹರಿಸುವವನು
ಸಪ್ತೋಗರ ಭಿಕ್ಷೆ = ಏಳುಮನೆ ಬಿಕ್ಷಾನ್ನ
ಸಮಷ್ಟಿ =ಸಂಪೂರ್ಣವಾದದ್ದು
ಸಮಾಧಿ = ತನ್ಮಯತೆ, ಕಾವ್ಯಗುಣ
ಸಮಾಧಿಕ ಶೂನ್ಯ = ತನಗೆ ಸಮಾನರೂ ಅಧಿಕರೂ ಇಲ್ಲದವನು ಶ್ರೀಹರಿ
ಸಮೀರಜ = ಹನುಮಂತ
ಸಮೆದ ಅಸ್ತ್ರ = ದಿವ್ಯಾಸ್ತ್ರ
ಸಮ್ಯಕ್ ಜ್ಞಾನ = ತತ್ವಜ್ಞಾನ
ಸರಸಿಜ = ತಾವರೆ
ಸರಸಿಜಗಾಪ್ತ = ಸೂರ್ಯ
ಸರಸಿಜಗಾಪ್ತಜ = ಸುಗ್ರೀವ

ಸರಸಿಜಭವಪಿತ = ವಿಷ್ಣು
ಸರಳ ಮಂಚ = ಶರಶಯ್ಯೆ
ಸರೋಜಾಂಬಕ = ತಾವರೆಯಂಥ ಕಣ್ಣುಳ್ಳವನು
ಸರಿಸೃಪಾಧಿಪ = ಆದಿಶೇಷ
ಸವಿತೃ = ಸೂರ್ಯ
ಸಾಗರ ಸುತೆ = ಲಕ್ಷ್ಮೀ
ಸಾಮಜ = ಆನೆ
ಸಾಮಜರಿಪು = ಸಿಂಹ
ಸಾಯಕ = ಬಾಣ
ಸೌಪರ್ಣಿ = ಗರುಡನ ಪತ್ನಿ
ಸಾರಸ = ಕಮಲ
ಸಾರಸ ವೈರಿ = ಚಂದ್ರ
ಸಾರಸವೈರಿ
ಸಹೋದರಿ = ಲಕ್ಷ್ಮೀ
ಸಿತಪಕ್ಷ = ಕೃಷ್ಣಪಕ್ಷ
ಸಿದ್ದಾಯ = ಕಂದಾಯ
ಸಿರಿನಲ್ಲ = ವಿಷ್ಣು
ಸುನಾಮ = ಇಂದ್ರ
ಸುನಾಮ = ಪ್ರಸಿದ್ಧನಾದವನು
ಸುಮನಸ = ದೇವತೆ
ಸುರಋಷಿ = ನಾರದ
ಸುರಪನ ದಿಸೆ = ಇಂದ್ರದಿಸೆ, ಪೂರ್ವದಿಕ್ಕು

ಸುರಪಾಜನಕ = ಗಂಗಾಜನಕ, ತ್ರಿವಿಕ್ರಮ
ಸುರಾಳಿ = ದೇವಗತೆಗಳ ಸಮೂಹ
ಸುಸ್ವಾಂತ = ಶುದ್ಧಮನಸ್ಸು
ಸೂಕರ = ಹಂದಿ, ವರಾಹ
ಸೂಚ್ಯಾಗ್ರ = ಸೂಜಿಯ ಕೊನೆ
ಸೂರಿ = ವಿದ್ವಾಂಸ
ಸೂರಿಜನ = ಪಂಡಿತರು
ಸೋಮಕುಲ = ಚಂದ್ರವಂಶ
ಸೋಮ
ಸೂರ್ಯನಯನ =ಚಂದ್ರ ಸೂರ್ಯರನ್ನೇ ಕಣ್ಣಾಗಿ ಉಳ್ಳವನು
ಸ್ತಂಬ = ಹುಲ್ಲು, ಗರಿಕೆ, ತೃಣ
ಸ್ಮರ = ಮನ್ಮಥ
ಸ್ಮರನಾಟ = ಕಾಮ ಕೇಳಿ
ಸ್ಪೃಹ = ಆಸೆ, ಸ್ವಾರ್ಥ
ಸ್ವಪ್ರಕಾಶ = ಪರಾವಲಂಬಿ ಯಲ್ಲದ ತನ್ನದೇ ಆದ ಜ್ಞಾನವುಳ್ಳವನು
ಸ್ವರಮಣ = ತನಗೆ ತಾನೇ ಒಡೆಯನಾದವನು
ಸ್ವಸ್ತಿ = ಕ್ಷೇಮ, ಶುಭ

ಸ್ಮಾರ್ತಕರ್ಮ	= ಸ್ಮೃತಿಯಲ್ಲಿ ಹೇಳಿದ ವಿಧಿಗಳು
ಸ್ವಾಂತ	= ಮನಸ್ಸು
ಸ್ವಾತುಮ	= ಸ್ವಾತ್ಮ
ಸ್ವಾದೋದಕ	= ರುಚಿಕರವಾದ ನೀರು, ಸಿಹಿನೀರು
ಸೇವ್ಯ	= ಸೇವೆಯನ್ನು ಸ್ವೀಕರಿಸುವವನು
ಸ್ಯಂದ	= ರಥ
ಹನನ	= ನಾಶ
ಹಯಮೇಧ	= ಅಶ್ವಮೇಧ
ಹಸ್ತಿ	= ಆನೆ
ಹಾಟಕ	= ಚಿನ್ನ
ಹಾಟಕ ಗರ್ಭ	= ಬ್ರಹ್ಮ
ಹಾಟಕ ಗರ್ಭತಾತ	= ವಿಷ್ಣು
ಹಿರಣ್ಯಗರ್ಭ	= ಬ್ರಹ್ಮ
ಹೃತ್ತಾಪ	= ಹೃದಯದ ಸಂಕಟ

ಅನುಬಂಧ–೨

ಟಿಪ್ಪಣಿಗಳು

ಕೀರ್ತನೆ–೨

(ನುಡಿ–೨) ಮೂಲಾಧರ ನಿಲಯ : ಗಣೇಶ ಮೂಲಾಧಾರ ಚಕ್ರದ ಅಭಿಮಾನಿ ದೇವತೆ, ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ ಮತ್ತು ಆಜ್ಞಾ ಇವು ದೇಹಗತವಾದ ಷಟ್ ಚಕ್ರಗಳೆಂದು ಯೋಗಶಾಸ್ತ್ರದಲ್ಲಿ ನಿರೂಪಿತವಾಗಿದೆ. ಇವುಗಳಲ್ಲಿ ಕ್ರಮವಾಗಿ ಗಣೇಶ, ಬ್ರಹ್ಮ, ವಿಷ್ಣು, ಶಿವ, ಜೀವ, ಮತ್ತು ಗುರು ಇವರುಗಳು ಅಭಿಮಾನಿ ದೇವತೆಗಳಾಗಿ ನೆಲೆಸಿರುತ್ತಾರೆ.

ಕೀರ್ತನೆ–೧೧

(ನುಡಿ–೨) ಅರುಣಾತ್ಮಜ ಮುಕ್ತಿಪ್ರದ : ಸೂರ್ಯನ ಸಾರಥಿಯಾದ ಅರುಣನ ಮಗ. ಜಟಾಯು ಒಬ್ಬ ಪಕ್ಷಿರಾಜ. ಸೀತಾಪಹರಣದ ಸಂದರ್ಭದಲ್ಲಿ ರಾವಣನೊಂದಿಗೆ ಹೋರಾಡಿ ತನ್ನ ರೆಕ್ಕೆಗಳನ್ನು ಕಳೆದುಕೊಂಡ. ನಡೆದ ವೃತ್ತಾಂತವನ್ನು ತಿಳಿದ ಶ್ರೀರಾಮ ಜಟಾಯುವನ್ನು ಉಪಚರಿಸಿದ. ಅನಂತರ ಜಟಾಯು ಪ್ರಾಣತ್ಯಾಗ ಮಾಡಿದ . ಜಟಾಯುವಿನ ಅಂತ್ಯಸಂಸ್ಕಾರವನ್ನು ಶ್ರೀರಾಮನೇ ನೆರವೇರಿಸಿ ಅವನಿಗೆ ಸದ್ಗತಿ ದೊರೆಯುವಂತೆ ಮಾಡಿದ.

(ನುಡಿ–೩) ಘಟಸಂಭವ ಮಖ ಸಂಯಮಿ : ಕುಂಭೋದ್ಭವನಾದ ವಸಿಷ್ಠ ಋಷಿಯ ಯಾಗವನ್ನು ಶತ್ರುಗಳ ಕಾಟದಿಂದ ನಿಯಂತ್ರಿಸಿದ ಶ್ರೀರಾಮ.

ಕೀರ್ತನೆ–೧೩

ಇದೊಂದು ದಶಾವತಾರ ಸ್ತುತಿ

ವೇದರಾಶಿ ಅಜಗೆ ಇತ್ತವನು	=	ಮತ್ಸ್ಯ
ಬೆನ್ನೊಳು ಭಾರ ಪೊತ್ತವನು	=	ಕೂರ್ಮ
ಧರಣಿ ಎತ್ತಿದವನು	=	ವರಾಹ
ತರಳಗೊಲಿದವನು	=	ನಾರಸಿಂಹ
ಬಲಿಯ ದಾನವ ಬೇಡಿದವನು	=	ವಾಮನ
ಕರದಿ ಕೊಡಲಿ ಪಿಡಿದವನು	=	ಪರಶುರಾಮ
ಅಡವಿ ಚರಿಸಿದಾತ	=	ಶ್ರೀರಾಮ
ಬೆಣ್ಣೆ ತಿಂದವನು	=	ಶ್ರೀಕೃಷ್ಣ
ತ್ರಿಪುರ ಸತಿಯರ ಬೆರಗು ಮಾಡಿದವ	=	ಬುದ್ಧ
ಪುಣ್ಯಮೂರ್ತಿ	=	ಕಲ್ಕಿ

ಕೀರ್ತನೆ–೧೬

(ನುಡಿ–೧) ವನಿತೆಯನಪಹರಿಸಿದವನ ತಮ್ಮ : ವಿಭೀಷಣ

(ನುಡಿ–೨) ಹಿಡಿಯವಲಕ್ಕಿಯ ಬಡಬ್ರಾಹ್ಮಣ : ಕುಚೇಲ

ಕೀರ್ತನೆ–೩೯

(ನುಡಿ–೧) ವಿಧಿ ಸೃಷ್ಟಿಯೊಳಿಲ್ಲದ ರೂಪ : ಬ್ರಹ್ಮ ಸೃಷ್ಟಿಯಲ್ಲಿ ನೋಡಲು ಸಿಗದ ನಾರಸಿಂಹ ರೂಪ

(ನುಡಿ–೨) ಶರಭಾಕೃತಿ : ನರಸಿಂಹನ ಉಗ್ರತೆಯನ್ನು ಶಾಂತಗೊಳಿಸಲು ಹರನು ಧರಿಸಿದ ರೂಪ.

(ನುಡಿ–೩) ಅಷ್ಟಮುಖ ಭೇರುಂಡ : ಶಿವನ ಶರಭಾವತಾರವನ್ನು ನಿಗ್ರಹಿಸಲು ವಿಷ್ಣು ಧರಿಸಿದ ರೂಪ.

ಕೀರ್ತನೆ–೬೫

(ನುಡಿ–೧) ಜಂಭಾರಿವಿನುತ : ಜಂಭ ತಾರಕನ ಪ್ರಧಾನಿಗಳಲ್ಲಿ ಒಬ್ಬ. ಇವನ ಮಗಳು ಕಯಾಧು ಹಿರಣ್ಯ ಕಶಿಪುವಿನ ಹೆಂಡತಿ. ಜಂಭ ಇಂದ್ರನ ಶತ್ರು ತಾರಕಾಸುರನೊಂದಿಗೆ ಕಲಹವಾದ ಸಂದರ್ಭದಲ್ಲಿ ಜಂಭನು ವಿಷ್ಣುವಿನಿಂದ ಹತನಾದ. ಜಂಭಾರಿಯಾದ ಇಂದ್ರ ವಿಷ್ಣುವನ್ನು ಹೊಗಳಿದ.

ಶಂಬರ ಹರಪಿತ : ಶಂಬರ ದಕ್ಷ ಮತ್ತು ದನುವಿನ ಪುತ್ರರಲ್ಲಿ ಒಬ್ಬ. ಪಾತಾಳವಾಸಿಯಾದ ಇವನು ಮಹಾ ಮಾಯಾವಿ. ಶ್ರೀ ಕೃಷ್ಣನ ಮಗನಾದ ಪ್ರದ್ಯುಮ್ನನನ್ನು ಕೊಲ್ಲಲು ಪ್ರಯತ್ನಿಸಿ ತಾನೇ ಹತನಾದ. ಪ್ರದ್ಯುಮ್ನನಿಗೆ ಶಂಬಹರನೆಂಬ ಹೆಸರು ಬಂದಿತು. ಈ ಶಂಬರಹರನ ಪಿತನೆ ಕೃಷ್ಣ.

ಕೀರ್ತನೆ–೬೯

(ನುಡಿ–೩) ವಿರಾಧಾಂತಕ : ವಿರಾಧ ಒಬ್ಬ ಗಂಧರ್ವ. ರಂಭೆಯಿಂದ ಶಾಪ ಪಡೆದು ರಾಕ್ಷಸನಾಗಿ ದಂಡಕಾರಣ್ಯದಲ್ಲಿ ಸಂಚರಿಸುತ್ತಿದ್ದನು. ಸೀತಾರಾಮಲಕ್ಷ್ಮಣರು ದಂಡಕಾರಣ್ಯವನ್ನು ಪ್ರವೇಶಿಸಿದಾಗ ಸೀತೆಯನ್ನು ಅಪಹರಿಸಲು ಪ್ರಯತ್ನಿಸಿ ತನ್ನ ತೋಳುಗಳನ್ನು ಕಳೆದುಕೊಂಡ. ಶಾಪ ವಿಮೋಚನೆಯಾಗಿ ಮೊದಲಿನಂತೆ ಗಂಧರ್ವನಾದ. ವಿರಾಧನ ರಾಕ್ಷಸ ಜನ್ಮವನ್ನು ಅಂತ್ಯ ಗೊಳಿಸಿದವನು ಶ್ರೀರಾಮ.

ಕೀರ್ತನೆ–೯೧

(ನುಡಿ–೧) ಗೋಳಕತ್ರಯ ಚಿಂತನೆ : ಸೂರ್ಯಮಂಡಲ, ಚಂದ್ರಮಂಡಲ. ಅಗ್ನಿಮಂಡಲ ಇವು ಗೋಲಕತ್ರಯಗಳು. ಅಗ್ನಿಮಂಡಲ ಪೂಜಾಪ್ರತಿಮೆಗಳಲ್ಲಿ ದೇವರನ್ನು ಆವಾಹನೆ ಮಾಡುವ ಮುನ್ನ ದೇವರು ಈ ಗೋಲಕತ್ರಯಗಳಲ್ಲಿ ವಾಸಿಸುತ್ತಾನೆಂದು ಪರಿಭಾವಿಸಿ ಆವಾಹನೆ ಮಾಡಬೇಕು. 'ಸೂರ್ಯಾಂತರ್ಗತ ನಾರಾಯಣಂ ಅಸ್ಯ ಪ್ರತಿಮಾಯಂ ಆವಾಹಯಾಮಿ ' ಎಂದು ಹಗಲಲ್ಲೂ 'ಚಂದ್ರಾಂತರ್ಗತ ನಾರಾಯಣಂ ' ಎಂದು ಶುಕ್ಲ ಪಕ್ಷದ ರಾತ್ರಿಯಲ್ಲೂ

' ಅಗ್ನ್ಯಂತರ್ಗತ ನಾರಾಯಣಂ ' ಎಂದು ಕೃಷ್ಣಪಕ್ಷದ ರಾತ್ರಿಯಲ್ಲೂ ನಾರಾಯಣನ ಸಾನ್ನಿಧ್ಯವನ್ನು ಚಿಂತಿಸಿ ಆವಾಹನೆ ಮಾಡಬೇಕು.

(ನುಡಿ–೧) ಬೃಹತಿನಾಮ : ಬೃಹ ಎಂದರೆ ವೃದ್ಧಿ ಎಂದು ಅರ್ಥ. ಅಂತ್ಯವೇ ಇಲ್ಲದೆ ಸದಾಸುತ್ತಿರುವವನು ಬೃಹತಿ ಅಥವಾ ಮಹದ್ಬಹ್ಮನಾದ ಶ್ರೀಹರಿ. ಗುಣಪೂರ್ಣ, ಸರ್ವೋತ್ತಮ ಮತ್ತು ನಿತ್ಯವೃದ್ಧನಾದ ಹರಿಯನ್ನು ಬೃಹತಿ ಎನ್ನುತ್ತಾರೆ (ಬೃಹತೇ ವಾಸುದೇವಾಯ)

(ನುಡಿ–೩) ಆದಿತ್ಯ ಮಂಡಲ ಮಧ್ಯಗ : ಶ್ವೇತದ್ವೀಪ, ಅನಂತಾಸನ, ವೈಕುಂಠ ಇವು ಶ್ರೀಹರಿಯ ತ್ರಿಧಾಮಗಳು. ಹೀಗೆಯೇ ಅವನು ಸೂರ್ಯಮಂಡಲ ಮಧ್ಯದಲ್ಲಿಯೂ ಸಾಲಂಕೃತನಾಗಿ ವಿರಾಜಿಸುತ್ತಾನೆ. ಶ್ರೀ ಹರಿಯನ್ನು ' ಸವಿತೃ ಮಂಡಲ ಮಧ್ಯವರ್ತಿ ನಾರಾಯಣ ' ಎಂದು ' ಸೂರ್ಯಸ್ಥಿತ ಶ್ರೀ ಪುರುಷೋತ್ತಮ' ಎಂದು ಪರಿಭಾವಿಸಿ ಪ್ರತಿಮೆಗಳಲ್ಲಿ ಆವಾಹನೆ ಮಾಡುತ್ತಾರೆ.

ಕೀರ್ತನೆ–೯೩

(ನುಡಿ–೧) ಪದದಿ ಚಲುವ ಗಂಗೆಯ ಪಡೆದವನು : ವಾಮನಾವತಾರದ ವಿಷ್ಣು ಬಲಿಯಿಂದ ದಾನವನ್ನು ಬೇಡಿ ತ್ರಿವಿಕ್ರಮನಾಗಿ ಬೆಳೆದು ಭೂಮಿ ಆಕಾಶಗಳನ್ನು ತನ್ನ ಪಾದದಿಂದ ಅಳೆದ. ಸ್ವರ್ಗದ ದೇವತೆಗಳು ಅವನ ಪಾದಕ್ಕೆ ದೇವಜಲದಿಂದ ಅಭಿಷೇಕ ಮಾಡಿದರು. ಆಪಾದ ಜಲವೇ ಗಂಗೆಯಾಯಿತು ಗಂಗೆ 'ವಿಷ್ಣುಪಾದೋದ್ಭವೆ' ಎನಿಸಿ ಕೊಂಡಳು.

(ನುಡಿ–೨) ಅನೇಕ ಪಾದಗಳೆಂದು– – – –ಶ್ರುತಿತತಿಗಳು : ವಿರಾಟ್ ಪುರುಷನಾದ ಶ್ರೀಹರಿಯನ್ನು

'ಸಹಸ್ರಪಾತ್' ಎಂದು ಪುರುಷಸೂಕ್ತದಲ್ಲಿ ವರ್ಣಿಸಲಾಗಿದೆ. ಈ ವಿರಾಟ್ ಪುರಷ ಜೀವಿಗಳಂತೆ ದ್ವಿಪಾದಿ, ಚತುಷ್ಪಾದಿಯಲ್ಲ. ಅವನು 'ಅನಂತಪಾದ ' ಎನಿಸಿಕೊಂಡವನು. 'ಸಹಸ್ರಪಾದಾಕ್ಷಿ ಶಿರೋರುಬಾಹುವೆ ' ಎಂಬುದು ಇವನ ವಿರಾಟ್ ಸ್ವರೂಪ.

(ನುಡಿ–೩) ಮುನಿಸತಿಯಳ ಶಾಪ ಬಿಡಿಸಿದ ಪಾದ : ಅಹಲ್ಯಾ ಶಾಪ ವಿಮೋಚನೆಯ ಸಂದರ್ಭ.

ಕೀರ್ತನೆ–೯೪

(ನುಡಿ–೧) ಅರುಣಜನ ನೇವರಿಸಿದ ಹಸ್ತ : ನೋಡಿ ಕೀ ೧೧ರ ಟಿಪ್ಪಣಿ

ಕೀರ್ತನೆ-೯೭

ನೀಲಘನ ನಾಥ :- ತನ್ನ ನಾಭಿಯಿಂದ ನೀಲಿಯ ಆಕಾಶವನ್ನು ಸೃಷ್ಟಿಸಿದವನು. "ನಾಭ್ಯಾಃ ಆಸೀತ್ ಅಂತರಿಕ್ಷಂ" ಎಂಬ ಪುರುಷ ಸೂಕ್ತದ ಉಲ್ಲೇಖದಂತೆ ಭಗವಂತನ ನಾಭಿಯಿಂದ ಅಂತರಿಕ್ಷವು ಹುಟ್ಟಿತು.

ಕೀರ್ತನೆ-೧೧೦

(ನುಡಿ-೧) ವೇದಘೋಷದಿಂದ ಉದಿಸಿ- - - -ರಾವಣನಿಗೆ ಶಾಪವಿತ್ತ : ಕುಶಧ್ವಜನ ರಾಜನ ಮಗಳು ವೇದವತಿ. ರಾಜನು ಪಾರಾಯಣ ಮಾಡುತ್ತಿದ್ದ ವೇದ ವಾಕ್ಯಗಳೇ ಸ್ತ್ರೀರೂಪ ತಳೆದು ವೇದವತಿ ಜನಿಸಿದಳು. ನಾರಾಯಣನನ್ನು ಮದುವೆಯಾಗಲು ಆಕೆ ತಪಸ್ಸು ಮಾಡುತ್ತಿದ್ದಾಗ ರಾವಣ ತನ್ನನ್ನು ವರಿಸುವಂತೆ ಆಕೆಯನ್ನು ಬಲಾತ್ಕರಿಸಿದ. ರಾವಣನಿಗೆ ಶಾಪವನ್ನು ಕೊಟ್ಟು ಅಗ್ನಿಪ್ರವೇಶ ಮಾಡಿದ ವೇದವತಿ ಸೀತೆಯಾಗಿ ಜನಿಸಿ ರಾವಣನ ಸಂಹಾರಕ್ಕೆ ಕಾರಣಳಾದಳು. ಮುಂದಿನ ಅವತಾರಗಳಲ್ಲಿ ರುಕ್ಮಿಣಿಯಾಗಿ, ಆಕಾಶರಾಜನ ಮಗಳು ಪದ್ಮಾವತಿಯಾಗಿ, ಶ್ರೀನಿವಾಸನನ್ನು ಮದುವೆಯಾಗಿ ಪದ್ಮ ಸರೋವರದಲ್ಲಿ ನೆಲೆಸಿದಳು.

ಕೀರ್ತನೆ-೧೨೮

(ನುಡಿ-೧) ತಾಮರಸ ಬಾಂಧವ ಕಬಳೀಕೃತ : ತಾಮರಸ ಬಾಂಧವ ಎಂದರೆ ಕಮಲ ಸಖನಾದ ಸೂರ್ಯ, ವಾಯುಪುತ್ರನಾದ ಆಂಜನೇಯ ಬಾಲಕನಾಗಿದ್ದಾಗ ಸೂರ್ಯಬಿಂಬವನ್ನು ಹಣ್ಣೆಂದು ಬಗೆದು ಅದನ್ನು ನುಂಗಲು ಹಾರಿದ. ಶ್ರೀ ಪಾದರಾಜರು ಹೇಳುವಂತೆ ಇದು ಕೇವಲ ಹುಡುಗಾಟ. ' ಪೋತಭಾವದಿ ತರಣಿ ಬಿಂಬಕೆ ಲಂಘಿಸಿದ ' ಇದನ್ನು ಕಂಡು ಇಂದ್ರ ತನ್ನ ವಜ್ರಾಯುಧದಿಂದ ಹೊಡೆದ. ಆಂಜನೇಯನ ' ಹನು ' ಎಂದರೆ ದವಡೆಯ ಮುಂಭಾಗ. ವಿಚಿತ್ರ ಆಕೃತಿಯನ್ನು ತಳೆಯಿತು. ಅವನು 'ಹನುಮಂತ'ನಾದ

ಕೀರ್ತನೆ-೧೩೦

(ನುಡಿ-೩) ಇಪ್ಪತ್ತೊಂದು ವಿಧದ ತಪ್ಪುಗಳ ತಿದ್ದಿದೆ : ಮಧ್ವಾಚಾರ್ಯರಿಗಿಂತ ಹಿಂದೆ ಇಪ್ಪತ್ತೊಂದು ಜನ ವೇದೋಪನಿಷತ್ತುಗಳಿಗೆ ಭಾಷ್ಯಗಳನ್ನು ರಚಿಸಿದ್ದರು. ಅವುಗಳನ್ನು

ಅಧ್ಯಯನ ಮಾಡಿ ದೋಷಗಳನ್ನು ಸರಿಪಡಿಸಿ ನೂತನ ಭಾಷ್ಯಗಳನ್ನು ಮಧ್ವಾಚಾರ್ಯರು ಬರೆದರು. ಅವರಿಗಿಂತ ಹಿಂದೆ ಇದ್ದ ೨೧ ಮಂದಿ ಭಾಷ್ಯಕಾರರು (ನೋಡಿ ಸಂಖ್ಯಾರ್ಥ ಪದ ಕೋಶದಲ್ಲಿ ಏಕವಿಂಶತಿ ಭಾಷ್ಯ)

(ನುಡಿ-೬) ಏಳಾರೊಳಗೆ ಹದಿನೇಳನೆಯವರನು ಪಾಲಿಸಿದ ದೊರೆ : ಏಳು ಆರುಎಂದರೆ ೪೨. ಇದನ್ನು ವಾಮಗತಿಯಿಂದ ಓದಿದರೆ ೨೪ ಆಗುತ್ತದೆ. ೨೪ ಎಂದರೆ ಚತುರ್ವಿಂಶತಿ ತತ್ವಗಳು. ೫ ಜ್ಞಾನೇಂದ್ರಿಯಗಳು, ೫ ಕರ್ಮೇಂದ್ರಿಯಗಳು, ೫ ಪಂಚಪ್ರಾಣಗಳು ಮತ್ತು ಮನಸ್ಸು. ಇವು ಷೋಡಷ ತತ್ವ. ೧೭ನೆಯದು ಆತ್ಮತತ್ವ ಈ ಜೀವಾತ್ಮನನ್ನು ರಕ್ಷಿಸುವ ದೊರೆ ಪ್ರಾಣದೇವರು.

ಕೀರ್ತನೆ-೧೩೨

ಪಂಚಮುಖಿ ಆಂಜನೇಯ : ' ವಾನರ ನಾರಸಿಂಹಖಗರಾಟ್ ಕ್ರೋಡಾಶ್ವ ವಕ್ತ್ರಾನ್ವಿತಂ' ಎಂಬಂತೆ ಐದು ಮುಖ, ಹತ್ತು ತೋಳು, ಹದಿನೈದು ಕಣ್ಣುಗಳು ಇದು ಪಂಚಮುಖಿ ಆಂಜನೇಯನ ಸ್ವರೂಪ. ಈ ಆಂಜನೇಯನ ಮುಖ, ದಿಕ್ಕು ಹಾಗೂ ಆಯುಧ ವಿಶೇಷಗಳು ಹೀಗಿವೆ :

ದಿಕ್ಕು	ಮುಖ	ಆಯುಧ
ಪೂರ್ವ	ಕಪಿ	ಶೈಲ, ವೃಕ್ಷ
ಪಶ್ಚಿಮ	ಗರುಡ	ಪಾಶ, ಅಂಕುಶ
ಉತ್ತರ	ಆದಿವರಾಹ	ಖಟ್ವಾಂಗ, ಭಿಂಡಿ
ದಕ್ಷಿಣ	ನೃಸಿಂಹ	ಖಡ್ಗ, ತ್ರಿಶೂಲ
ಊರ್ಧ್ವ	ಅಶ್ವ	ಕೌಮೋದಕಿ, ಮುಷ್ಠಿ

ಕೀರ್ತನೆ-೧೩೬

(ನುಡಿ-೩) ರೋಮ ರೋಮಕೆ ಕೋಟಿಲಿಂಗ ಉದುರಿಸಿದ : ರಾಜಸೂಯ ಯಾಗದ ಕಾಲದಲ್ಲಿ ಸ್ಥಳ ಶುದ್ಧಿಗಾಗಿ ಪುರುಷಾಮೃಗವನ್ನು ತರಲು ಭೀಮ ಹೊರಟ. ಪುರುಷಾಮೃಗದ ಶಿವಭಕ್ತಿಯನ್ನು ವಿವರಿಸಿ ಹನುಮಂತ ತನ್ನ ರೋಮಗಳನ್ನು ಭೀಮನಿಗೆ ನೀಡಿದ.

ಪುರುಷಾಮೃಗವನ್ನು ಕಂಡಕೂಡಲೆ ಭೀಮ ಒಂದು ರೋಮವನ್ನು ನೆಲಕ್ಕೆ ಹಾಕಿದ. ಕೋಟಿ ಲಿಂಗಗಳು ಉದ್ಭವಿಸಿದವು. ಹೀಗೆ ರೋಮಗಳನ್ನು ಉದುರಿಸುತ್ತ ಹಸ್ತಿನಾವತಿಯವರೆಗೂ ಬಂದ. ಒಂದೊಂದು ರೋಮ ಉದುರಿದ ಕಡೆ ಉದ್ಭವಿಸಿದ ಲಿಂಗಗಳಿಗೆ ಪೂಜೆಮಾಡುತ್ತ ಪುರುಷಾಮೃಗವು ಯಾಗಸ್ಥಳವನ್ನು ತಲುಪಿತು.

ಕೀರ್ತನೆ–೧೪೭

(ನುಡಿ–೧) ಬ್ರಹ್ಮನ ಶಿರವಿಡಿದು ತಿರಿದುಂಬ ಗೊರವ : ತ್ರಿಮೂರ್ತಿಗಳಲ್ಲಿ ತಾನೇ ಶ್ರೇಷ್ಠನೆಂದು ಭಾವಿಸಿ ಬ್ರಹ್ಮ ವೇದಗಳನ್ನು ನಿಂದಿಸಿದ. ಶಿವ ಭೈರವ ರೂಪ ಧರಿಸಿ ಬ್ರಹ್ಮನ ಐದನೆಯ ತಲೆಯನು ಕತ್ತರಿಸಿದ. ಬ್ರಹ್ಮಹತ್ಯೆ ಕಾರಣವಾಗಿ ಬ್ರಹ್ಮಕಪಾಲ ಭೈರವನ ಕೈಗೆ ಅಂಟಿಕೊಂಡಿತು. ಭೈರವ ಕಾಪಾಲಿಕನಾಗಿ ಊರೂರು ಅಲೆದ ಕಾಶಿಕ್ಷೇತ್ರದಲ್ಲಿ ಸ್ನಾನ ಮಾಡಿದ ಮೇಲೆ ಬ್ರಹ್ಮಹತ್ಯಾದೋಷ ದೂರವಾಗಿ ಕೈಗೆ ಅಂಟಿದ್ದ ಕಪಾಲ ಕಳಚಿ ಬಿತ್ತು.

ಕೀರ್ತನೆ–೧೫೯

(ನುಡಿ–೩) ದುಷ್ಟ ವೃಶ್ಚಿಕ ಸರ್ಪದ ಬಾಧೆಯ ಬಿಡಿಸಿ : ಕೋಲಾರದ ಕೋಲಾರಮ್ಮನ ದೇವಾಲಯದ ವಿಗ್ರಹದ ಅಡಿಯಲ್ಲಿ ಒಂದು ರಂಧ್ರವಿದೆಯಂತೆ ವರ್ಷಕ್ಕೊಂದು ದಿನ (ಸಂಕ್ರಾತಿಯ ನಂತರದ ಶುಕ್ಲ ಪಂಚಮಿ) ಈ ರಂಧ್ರದಿಂದ ವೃಶ್ಚಿಕಗಳು ಹೊರ ಬರುತ್ತವೆ. ಎಂದು ಪ್ರತೀತಿ. ಈ ಸುತ್ತಲ ಪ್ರದೇಶದವರು ಹಾವು ಚೇಳುಗಳ ಕಡಿತಕ್ಕೆ ಒಳಗಾದರೆ ಕೂಡಲೆ ಕೋಲಾರಮ್ಮನಿಗೆ ಹರಕೆ ಹೊರುತ್ತಾರೆ. ವಿಷಬಾಧೆ ಪರಿಹಾರವಾದರೆ ಬೆಳ್ಳಿಯ ಚೇಳುಗಳನ್ನು ಮಾಡಿಸಿ ದೇವಿಗೆ ಕಾಣಿಕೆ ನೀಡುವ ಸಂಪ್ರದಾಯವಿದೆ. ಈ ನಂಬಿಕೆಯನ್ನು ದಾಸರು ಇಲ್ಲಿ ದಾಖಲಿಸಿದ್ದಾರೆ.

ಕೀರ್ತನೆ–೧೬೭

ಇದು ಗುರುರಾಮವಿಠಲರಿಗೆ ಅಂಕಿತ ನೀಡಿದ ಗುರುಗಳಾದ ವಿಜಯ ರಾಮದಾಸರ ಸ್ತುತಿ. ವಿಜಯ ರಾಮದಾಸರು ಭಾಗ್ಯನಿಧಿ ದಾಸರ ಶಿಷ್ಯರು. ಇವರು ಚಿತ್ರದುರ್ಗದವರು. ಬೆಂಗಳೂರಿನಲ್ಲಿ ಕೆಲವು ಕಾಲ ವಾಸವಾಗಿದ್ದು ಶಾಸ್ತ್ರಪಾಠ ಮತ್ತು ಪುರಾಣ ಪ್ರವಚನ ಮಾಡುತ್ತಿದ್ದರು. ಇವರ ಅಂಕಿತ ಶ್ರೀರಾಮವಿಠಲ. ಸುಬ್ರಹ್ಮಣ್ಯದಾಸರಿಗೆ ಗುರುರಾಮವಿಠಲ ಎಂಬ ಅಂಕಿತ ನೀಡಿದರು.

ಕೀರ್ತನೆ-೧೬೮

(ನುಡಿ-೨) ಆರು ಮಂದಿಯ ಹುಡುಗಾಟ : ಅರಿಷಡ್ವರ್ಗಗಳ ತೊಂದರೆ

ಆರು ಮಂದಿಯ ಸ್ನೇಹ ಬೆಳೆಯಲಿ : ಷಟ್ಕರ್ಮಗಳಲ್ಲಿ ಆಸಕ್ತಿ ಉಂಟಾಗಲಿ.

ಕೀರ್ತನೆ-೧೬೯

(ನುಡಿ-೧) ಉತ್ಕೃಷ್ಟ ಹರಿಯೆನುತ ಶಿಷ್ಟರಿಗರುಹಿದ : ತುಂಗಾತೀರದಲ್ಲಿ ಯಾಗ ಮಾಡುತ್ತಿದ್ದ ಮುನಿಗಳನ್ನು ಕುರಿತು ಹರಿಹರ ಬ್ರಹ್ಮರಲ್ಲಿ ಯಾರು ದೊಡ್ಡವರು ಎಂದು ನಾರದ ಪ್ರಶ್ನಿಸಿದ. ಮೂವರನ್ನೂ ಪರೀಕ್ಷೆ ಮಾಡಿ ನಿರ್ಧರಿಸಬೇಕೆಂದು ಭೃಗುಮುನಿ ಹೊರಟ. ಬ್ರಹ್ಮಲೋಕಕ್ಕೆ ಬಂದಾಗ ಬ್ರಹ್ಮ ಅವನನ್ನು ಸ್ವಾಗತಿಸಲಿಲ್ಲ. ಬದಲಿಗೆ ತನಗೆ ನಮಸ್ಕರಿಸಲಿಲ್ಲವೆಂದು ಬ್ರಹ್ಮನೇ ಕೋಪಗೊಂಡ. ಬ್ರಹ್ಮನನ್ನು ನಿರಾಕರಿಸಿದ ಭೃಗು ಶಿವನಲ್ಲಿಗೆ ಬಂದ. ಶಿವ ಭೃಗುವನ್ನು ತಮ್ಮನೆಂದು ಪ್ರೀತಿಯಿಂದ ತಬ್ಬಿಕೊಳ್ಳಲು ಬಂದ. ಲಕ್ಷ್ಮಿಯ ತೊಡೆಯ ಮೇಲೆ ತಲೆಯಿಟ್ಟು ಮಲಗಿದ್ದ ವಿಷ್ಣು ಭೃಗುಮುನಿಯನ್ನು ಕಣ್ಣೆತ್ತಿಯೂ ನೋಡಲಿಲ್ಲ. ಕೋಪಗೊಂಡ ಭೃಗುಮುನಿ ವಿಷ್ಣುವನ್ನು ಕಾಲಿನಿಂದ ಒದ್ದ. ಸ್ವಲ್ಪವೂ ಕೋಪಿಸಿಕೊಳ್ಳದೇ, ಅಸಹನೆ ತೋರದೆ, ಕೃತಾರ್ಥ ಭಾವವನ್ನು ವ್ಯಕ್ತಪಡಿಸಿದ. ವಿಷ್ಣುವಿನ ಕ್ಷಮಾಗುಣ ಮತ್ತು ಸಹನೆಯನ್ನು ಕಂಡು ಭೃಗುವಿಗೆ ಆಶ್ಚರ್ಯವಾಯಿತು. ತ್ರಿಮೂರ್ತಿಗಳಲ್ಲಿ ವಿಷ್ಣುವೇ ಸರ್ವೋತ್ತಮ ಎಂದು ಸಾರಿದ ಈ ಭೃಗುಮುನಿಯ ಅವತಾರವೇ ವಿಜಯದಾಸರು ಎಂಬುದು ಪಾರಂಪರಿಕೆ ನಂಬಿಕೆ.

ಕೀರ್ತನೆ-೧೭೫

(ನುಡಿ-೩) ದ್ವಾಸುಪರ್ಣ ಶ್ರುತಿಯಾ ಪ್ರಮಾಣದಿ ದಾಸನು ನಾನಯ್ಯಾ : ಜೀವ ಈಶ್ವರ ಬೇಧವನ್ನು ಸಮರ್ಥಿಸಲು ಈ ಶ್ರುತಿ ವಾಕ್ಯವನ್ನು ದಾಸರು ಮತ್ತೆ ಮತ್ತೆ ಬಳಸುತ್ತಾರೆ.

'ದ್ವಾಸುಪರ್ಣವೆಂಬ ವೇದ ಭೇದವನ್ನೆ ಪೇಳಲು ಸರ್ವೇಶ ನಾನೆಂಬ ಮತದಾಸೆ ಸಲ್ಲ ' ಎಂದು ವಾದಿರಾಜರು ವೈಕುಂಠ ವರ್ಣನೆಯಲ್ಲಿ ತಿಳಿಸಿದ್ದಾರೆ. ಜೀವ ಈಶ್ವರ ಎಂಬುವರು ಸದಾ ಜೊತೆಯಲ್ಲೇ ಇರುವ ಪರಸ್ಪರ ಸಖರಾದ ಎರೆಡು ಪಕ್ಷಿಗಳಂತೆ ಆಶ್ರಯಿಸಿವೆ. ಜೀವನು ದೇಹದ ಕರ್ಮಫಲವನ್ನು ಅನುಭವಿಸುತ್ತಾನೆ. ಈಶನು ಕರ್ಮಫಲವನ್ನು ಸ್ಪರ್ಶಿಸದೆ ವಿರಾಜಮಾನನಾಗಿರುತ್ತಾನೆ. ಜೀವನಿಗೆ ಈಶತ್ವ ಇಲ್ಲ. ಅದನ್ನು ಚಿಂತಿಸುವುದೂ ಸಹಾ ಸರಿಯಲ್ಲ ಜೀವಿಯು ಯಾವಾಗಲೂ ದಾಸನೇ. ದೇವರದು ಈಶತ್ವ. ಭಕ್ತನದು ದಾಸತ್ವ. ದೇವರು ಭಕ್ತರ ಸಂಬಂಧ ಸೇವ್ಯಸೇವಕ ಸಂಬಂಧ.

ಕೀರ್ತನೆ-೧೭೮

(ನುಡಿ-೮) ಆರು ಜನರ ಸೇವೆ ಕೊಡಿಸೊ : ಷಟ್ ಸಾಧನಗಳ ದಾಸತ್ವವನ್ನು ಕೊಡಿಸು

ಆರು ಜನರ ಸಂಗವ ಪರಿಹರಿಸೊ : ಅರಿಷಡ್ವರ್ಗಳೆಂಬ ಆಂತರಿಕ ಶತ್ರುಗಳ ಸಹವಾಸದಿಂದ ದೂರಮಾಡು

ಮೂರು ಜನರ ಕೂಟ ಬಿಡಿಸೊ : ಕರ್ಮತ್ರಯಗಳ ಸಂಬಂಧದಿಂದ ಬಿಡುಗಡೆ ಮಾಡು.

ಕೀರ್ತನೆ-೧೯೫

(ನುಡಿ-೧) ಹದಿನೆಂಟನೆಯ ತತ್ವ ತಿಳೀಬೇಕು : ಇಪ್ಪತ್ನಾಲ್ಕು ತತ್ವಗಳಲ್ಲಿ (ಚತುರ್ವಿಂಶತಿ ತತ್ವ) ಹದಿನೆಂಟನೆಯದು ತೇಜೋತತ್ವ, ಪಂಚಜ್ಞಾನೇಂದ್ರಿಯಗಳು ಪಂಚ ಕರ್ಮೇಂದ್ರಿಯಗಳು, ಪಂಚ ವಿಷಯಗಳು, ಪಂಚ ಭೂತಗಳು, ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ. ಈ ಕ್ರಮದಲ್ಲಿ ಹದಿನೆಂಟನೆಯದು ತೇಜೋತತ್ವ. ಈ ತೇಜೋತತ್ವವನ್ನು ಅರಿತವನೇ ತೇಜಸ. ತೇಜಸ ಎಂದರೆ ಪರಬ್ರಹ್ಮ ಸ್ವರೂಪವನ್ನು ಅರಿತವನು.

ಮೂರೆಂಟು ಜಯಿಸಿ : ಅವಸ್ಥಾತ್ರಯಗಳು ಮತ್ತು ಅಷ್ಟಮದಗಳನ್ನು ಗೆದ್ದವನು ಅನಿಮಿತ್ತ ಬಂಧುವಾದ ಹರಿಯನ್ನು ಕಾಣಬಹುದು.

(ನುಡಿ-೨) ಮಿತ್ರಾರ್ಥರೊಳು ನಿಲ್ಲಬೇಕು : ಭಕ್ತಿ ಸಾಧನೆಯಿಂದ ಹರಿಗೆ ಪ್ರೀತಿಪಾತ್ರರಾದ ಬಲಿ, ವಿಭೀಷಣ, ಪ್ರಹ್ಲಾದ, ನಾರದ, ಧ್ರುವ, ಈ ಷಡ್ವೈಷ್ಣವರೇ ಹರಿದಾಸರಿಗೆ ನಿಜವಾದ ಮಿತ್ರರು. ಇವರು ತೋರಿಸಿದ ಭಕ್ತಿಮಾರ್ಗದಲ್ಲಿ ಮನಸ್ಸನ್ನು ನೆಲೆಗೊಳಿಸಬೇಕೆಂದು ದಾಸರ ಅಪೇಕ್ಷೆ.

ಕೀರ್ತನೆ-೧೯೯

ನವವಿಧ ಭಕ್ತಿಗಳ ಆಚರಣೆಯ ಮೂಲಕ ಸಾಧನೆಯಿಂದ ದೇವರನ್ನು ಅರಿಯುವುದೇ ಭಕ್ತಿ

ಕೇಳುವುದು	–	ಶ್ರವಣ
ಪೇಳುವುದು	–	ಕೀರ್ತನ
ಮನದಿ ತಾಳುವುದು	–	ಸ್ಮರಣೆ
ಸೇವಿಸುವುದು	–	ಪಾದಸೇವನೆ
ಪೂಜಿಸುವುದು	–	ಅರ್ಚನೆ

ಇವುಗಳ ಜೊತೆಗೆ ವಂದನೆ, ದಾಸ್ಯ, ಸಖ್ಯ, ಅತ್ಮನಿವೇದನೆ ಇವುಗಳಲ್ಲಿ ಆಲಸ್ಯವಿಲ್ಲದೆ ಮನಸ್ಸನ್ನು ತೊಡಗಿಸಬೇಕು.

ಕೀರ್ತನೆ–೨೧೪

(ನುಡಿ–೨೨–೨೬) ದೇಹ ವೃಕ್ಷವೆಂಬ ರೂಪಕದ ಯೋಗಿಕ ವಿವರಣೆ ಹೀಗಿದೆ. ಈ ದೇಹ ವೃಕ್ಷಕ್ಕೆ

ಒಂದು ಆಧಾರ	–	ಭೂಮಿ
ಎರಡು ಫಲ	–	ಜ್ಞಾನ, ಕರ್ಮ
ಮೂರು ಬೇರು	–	ತ್ರಿಕರಣ
ನಾಲ್ಕು ತೊಗಟೆ	–	ಚತುರಾವಸ್ಥೆ
ಐದು ತುದಿ	–	ಪಂಚೇಂದ್ರಿಯಗಳು
ಆರು ಸ್ವಭಾವ	–	ಷಟ್ ಚಕ್ರ
ಏಳು ಹಂಚಿಕೆ	–	ಸಪ್ತಧಾತುಗಳು
ಎಂಟು ರೆಂಬೆ	–	ಅಷ್ಟಭೋಗಗಳು
ಒಂಭತ್ತು ರಂಧ್ರ	–	ನವದ್ವಾರಗಳು
ಹತ್ತು ಎಲೆ	–	ದಶಭಾವಗಳು

(ನುಡಿ–೨೭–೨೯) **ಪಕ್ಷಿಗಳೆರಡೀ ಮರದಲ್ಲಿ– – –ದಾಸನಾಗದಿರುವನು ವ್ಯರ್ಥ** : (ನೋಡಿ ಕೀ.೧೭೫ರ ಟಿಪ್ಪಣಿ)

ಕೀರ್ತನೆ-೨೨೪

(ನುಡಿ-೪) ತತ್ವಾಭಿಮಾನಿಸುರರು ಒಳಗೆ ತಾವು ಪ್ರೇರಿಸದಿದ್ದರೆ : ಮನೋವೃತ್ತಿಗಳನ್ನು ಪ್ರೇರಿಸುವವರು, ಜೀವನನ್ನು ಉದ್ಧಾರಮಾಡಿ ಜ್ಞಾನಮಾರ್ಗದಲ್ಲಿ ನಡೆಯುವಂತೆ ಮಾಡುವವರೇ ತತ್ವಾಭಿಮಾನಿ ದೇವತೆಗಳು. ಅನಿರುದ್ಧ, ಪ್ರದ್ಯುಮ್ನ, ವಾಸುದೇವ ಮತ್ತು ಸಂಕರ್ಷಣ ಇವರು ಕ್ರಮವಾಗಿ ಅಹಂಕಾರ, ಬುದ್ಧಿ, ಚಿತ್ತ, ಮತ್ತು ಮನಸ್ಸುಗಳಲ್ಲಿ ನೆಲಸಿ ಜೀವಿಗಳಿಗೆ ಸತ್ಕಾರ್ಯಗಳನ್ನು ಮಾಡಲು ಪ್ರೇರಣೆ ನೀಡುತ್ತಾರೆ.

ವಿದ್ಯೆ ಮತ್ತು ವೃತ್ತಿಯಲ್ಲಿ ಅಹಂ ಮುಂತಾದಿಗಳನ್ನು ದೂರ ಮಾಡಿ ಸದ್ವಿದ್ಯಾ ಪ್ರೇರಕನಾದವನು ಅನಿರುದ್ಧ.

ಮುಕ್ತಿಯೋಗ್ಯರ ಬುದ್ಧಿಯಲ್ಲಿ ನೆಲೆಸಿದ್ದು ಜ್ಞಾನ ವಿಷಯಗಳಲ್ಲಿ ನಿಶ್ಚಯವಾದ ಬುದ್ಧಿಯನ್ನು ಪ್ರೇರಿಸುವವನು ಪ್ರದ್ಯುಮ್ನ.

ನಿಶ್ಚಯ ಜ್ಞಾನ ವಿಕಲ್ಪವಾಗದಂತೆ ಸಿದ್ಧಿಯನ್ನು ಕರುಣಿಸುವವನು ಸಂಕರ್ಷಣ ಧ್ಯಾನ ಉಪಾಸನಾದಿಗಳನ್ನು ಮನಸ್ಸಿನ ಮೂಲಕ ನಡೆಸುವವನು ವಾಸುದೇವ.

ಕೀರ್ತನೆ-೨೨೫

(ನುಡಿ-೧) ವಿಶ್ವತೈಜ ಪ್ರಾಜ್ಞ- - - -: ಜಾಗೃತ್, ಸ್ವಪ್ನ, ಸುಷುಪ್ತಿ ಈ ಮೂರು ಅವಸ್ಥೆಗಳಲ್ಲಿ ವಿಶ್ವ ತೈಜಸ ಪ್ರಾಜ್ಞ ನಾಮಕ ಪರಮಾತ್ಮ ಶರೀರದಲ್ಲಿ ನೆಲೆಸಿದ್ದು ಚೈತನ್ಯವನ್ನು ಪ್ರೇರಿಸುತ್ತಾನೆ. ವಿಶ್ವನಾಮಕ ಪರಮಾತ್ಮ ಕಣ್ಣಿನಲ್ಲಿ ಸ್ಥಿತಿನಾಗಿ ಜಾಗ್ರದಾವಸ್ಥೆಗೆ ಪ್ರೇರಕನಾಗಿರುತ್ತಾನೆ. ಜಾಗೃತಾವಸ್ಥೆಯ ಅನುಭವವನ್ನೂ ಪಡೆಯುತ್ತಾನೆ. ಪ್ರಾಜ್ಞನಾಮಕ ಪರಮಾತ್ಮ ಹೃದಯದಲ್ಲಿದ್ದು ನಿದ್ರೆಗೆ ಪ್ರೇರಿಸುತ್ತಾನೆ. ಸ್ವಪ್ನಗಳಿಲ್ಲದ ಅತ್ಯಂತ ಗಹನವಾದ ನಿದ್ರಾವಸ್ಥೆಯ ಪ್ರಜ್ಞಾವಸ್ಥೆ. ತೈಜಸನಾಮಕ ಪರಮಾತ್ಮ ಕಂಠದಲ್ಲಿದ್ದು ಎಚ್ಚರವೂ ಇಲ್ಲದ ನಿದ್ರೆಯೂ ಅಲ್ಲದ ಸ್ವಪ್ನಾವಸ್ಥೆಗೆ ಪ್ರೇರಕನಾಗಿರುತ್ತಾನೆ.

ಕೀರ್ತನೆ-೨೩೯

(ನುಡಿ-೫) ಮಿತಿಯ ಬರಹ ತಪ್ಪುವುದಿಲ್ಲ ಎಂದು : ಬರಹ ಎಂದರೆ ಹಣೆಬರಹ. ಇದು ವಿಧಿಲಿಖಿತ. ಈ ವಿಧಿ ಹಲವರ ವಿಷಯದಲ್ಲಿ ತುಂಬ ಉದಾರಿ. ಹಲವಾರು ಸುಖ ಸೌಖ್ಯಗಳನ್ನು ಅನುಭವಿಸುವಂತೆ ವಿಧಿಲಿಖಿತ ಇರುತ್ತದೆ. ಕೆಲವರ ವಿಷಯದಲ್ಲಿ ಈ ವಿಧಿ

ತುಂಬ ಕೃಪಣ. ನಮ್ಮ ಹಣೆಯ ಬರಹವೇ ಹಲವಾರು ಮಿತಿಗಳಿಗೆ ಒಳಪಟ್ಟಿದ್ದರೆ ಏನು ಮಾಡಲು ಸಾಧ್ಯ ಎಂಬ ಭಾವನೆ ದಾಸರದು.

ಕೀರ್ತನೆ–೨೪೯

(ನುಡಿ–೧) ಈಶನಾನೆಂಬುವುದು : ಆತ್ಮ ಪರಮಾತ್ಮರಿಬ್ಬರಲ್ಲೂ ಭೇದವಿಲ್ಲ. ಇಬ್ಬರೂ ಒಂದೇ ಚೈತನ್ಯ ಎಂದು ಹೇಳುವ ಅದ್ವೈತ ತತ್ವ.

ಸರ್ವೇಶ ಹರಿಯೆಂಬುದು : ಜೀವ ಬ್ರಹ್ಮ ಎರಡೂ ಒಂದೇ ಅಲ್ಲ ಬೇರೆ ಬೇರೆ ಎಂದು ಹೇಳುವ ತತ್ವ.

ಹೆಚ್ಚು ಕಡಿಮೆಗಳ ತಿಳಿವುದು : ಜಡ ಚೇತನ ಬ್ರಹ್ಮ ಬೇರೆ ಬೇರೆಯಾಗಿ ಗೋಚರಿಸಿದರೂ ಒಂದೇ ಆಗಿದೆಯೆಂಬ ವಿಶಿಷ್ಟಾದ್ವೈತ ತತ್ವ (ನೋಡಿ ಕೀ.೨೮೬ ರ ಟಿಪ್ಪಣಿ)

ಕೀರ್ತನೆ–೨೬೧

ಬ್ರಾಹ್ಮಣರ ಹೊಲಗಳನ್ನು ಗೇಣಿ ಮಾಡುತ್ತಿದ್ದ ರೈತರು ಗೇಣಿ ಹಕ್ಕುದಾರಿಯನ್ನು ಸ್ಥಾಪಿಸಲು ಪ್ರಯತ್ನಿಸುವ ಸಂದರ್ಭಗಳ ನಿರೂಪಣೆ ಇಲ್ಲಿದೆ.

(ನುಡಿ–೩) ಎದ್ದುಕು ರೂಪಾಯುಲು– – – –: ಬ್ರಾಹ್ಮಣರ ಹೊಲಗಳಲ್ಲಿ ಗೇಣಿದಾರರಾಗಿದ್ದ ರೈತರಲ್ಲಿ ಅನೇಕರು ತೆಲುಗರು. ಈ ಗೇಣಿಯ ಬಗ್ಗೆ ತಾತ್ಸಾರದಿಂದ ತೆಲುಗಿನಲ್ಲಿ ಆಡಿಕೊಳ್ಳುತ್ತಿದ್ದ ಮಾತುಗಳನ್ನು ದಾಸರು ತೆಲುಗಿನಲ್ಲೇ ನಿರೂಪಿಸಿದ್ದಾರೆ.

'ಬ್ರಾಹ್ಮಣರ ಹೊಲ ಉಳುವುದಕ್ಕೆ ಎತ್ತುಗಳನ್ನು ಎಲ್ಲಿಂದ ತರೋಣ. ಎತ್ತುಗಳನ್ನು ಕೊಳ್ಳಲು ರೂಪಾಯಿಗಳು ಬೇಕು. ಗೊಬ್ಬರವನ್ನು ಕೊಡಿಸಿದರೆ ವ್ಯವಸಾಯ ಮಾಡುತ್ತೇವೆ. ಬೇಡವೆಂದರೆ ಅವನೇ ಹಾಳಾಗಲಿ ಯಾವೋನಿಗೆ ಬೇಕು ಬ್ರಾಹ್ಮಣರ ಹೊಲ'. ಇದು ಈ ಸಾಲುಗಳ ಅರ್ಥ

ಕೀರ್ತನೆ–೨೬೨

ಕಲಿಪುರಷ : ಇವನು ಕಲಿಯುಗದ ಅಭಿಮಾನಿಯಾದ ಒಬ್ಬ ರಾಕ್ಷಸ. ಹಿಂಸೆ ಇವನ ಜನನಿ. ಕ್ರೋಧ ಇವನ ತಂದೆ. ಇವರಿಬ್ಬರೂ ಅಣ್ಣತಂಗಿಯರು. ಇಂಥ ದಂಪತಿಗಳಿಗೆ ಮಗನಾಗಿದ್ದರಿಂದಲೇ ಅಕಾರ್ಯಗಳನ್ನು ನಡೆಸುವುದರಲ್ಲಿ ನಿಸ್ಸೀಮ. ದೇವತೆಗಳು ಪುರಾಣ

ಪುರುಷರು ಮಾನವರು ಹೀಗೆ ಯಾರನ್ನೂ ಬಿಡದೆ ಕಲಿ ಸಮಯ ನೋಡಿ ಪತ್ನೀ ಸಮೇತನಾಗಿ ಅವರ ಬದುಕಿನಲ್ಲಿ ಪ್ರವೇಶಿಸುತ್ತಾನೆ. ಇವನ ಹೆಂಡತಿಗೆ ಅಲಕ್ಷ್ಮಿ, ಅಭಾಗ್ಯಲಕ್ಷ್ಮಿ, ಎಂಟಬ್ಬಮ್ಮ ದೊಡ್ಡಮ್ಮ ಎಂದು ಹಲವು ಹೆಸರುಗಳು. ರಾಮಾಯಣದ ಇಂದ್ರಜಿತ್ ಮಹಾಭಾರತದ ದುರ್ಯೋಧನ ಇವರು ಕಲಿಯ ಆವೇಶವನ್ನು, ಕಲಿಯ ಅಂಶವನ್ನು ಹೊಂದಿದ್ದವರು.

ಕೀರ್ತನೆ-೨೬೪

ಅವಲಕ್ಷಣ ಪತಿಯೊಬ್ಬನ ಸ್ವಭಾವಗಳ ಚಿತ್ರಣ ಇದು. ತಾಳ ತಪ್ಪಿದ ಸಂಸಾರದಲ್ಲಿ ಗಂಡು ಹೆಣ್ಣನ್ನು ಹೇಗೆ ಶೋಷಿಸುತ್ತಾನೆ ಎಂಬ ಚಿತ್ರಣ ಇಲ್ಲಿದೆ. ಪುರಂದರದಾಸರ 'ಹೆಂಡತಿ ಪ್ರಾಣ ಹಿಂಡುತಿ ' ಎಂಬ ಕೀರ್ತನೆಗೆ ಪ್ರತಿಕ್ರಿಯೆಯ ರೂಪದ ಕೃತಿಯಿದು. ಗಂಡ ಎಲ್ಲ ರೀತಿಯಲ್ಲೂ ಸರಿಯಾಗಿದ್ದರೆ ಮಾತ್ರ ಅವನು ಗಂಡ. ಇಲ್ಲದಿದ್ದರೆ ಪ್ರಾಣಗಂಡ ಎನ್ನುತ್ತಾರೆ ದಾಸರು.

ಕೀರ್ತನೆ-೨೭೬

ಅಭಾಗ್ಯದಾ ಲಕ್ಷ್ಮಿ ಹೋಗಮ್ಮಾ : ಅಭಾಗ್ಯಲಕ್ಷ್ಮಿ ಕಲಿಪುರಷನ ಪತ್ನಿ. ಜ್ಯೇಷ್ಠಾದೇವಿ, ಅಲಕ್ಷ್ಮಿ, ದೊಡ್ಡಮ್ಮ, ಎಂಟಬ್ಬಮ್ಮ ಎಂಬ ಹೆಸರುಗಳು ಈಕೆಗಿವೆ. ಪುರಂದರದಾಸರು ಭಾಗ್ಯದ ಲಕ್ಷ್ಮಿಯನ್ನು ಬಾರಮ್ಮ ಎಂದು ಕರೆದರೆ, ಈ ಅಲಕ್ಷ್ಮಿಯನ್ನು ಹೋಗಮ್ಮಾ ಎಂದು ಹೊರದೂಡಬೇಕು. ಈಕೆ ದೌರ್ಭಾಗ್ಯದ ಅಧಿದೇವತೆ ಮತ್ತು ದರಿದ್ರಲಕ್ಷ್ಮಿಯಾದ್ದರಿಂದ ಸಾತ್ವಿಕರು ಅವಳ ದೃಷ್ಟಿಗೆ ಬೀಳದಂತೆ ಬದುಕುಬೇಕು. ಈ ಅಲಕ್ಷ್ಮಿಯ ನೆಲೆಗಳು ಯಾವುದೆಂಬುದನ್ನು ದಾಸರು ಸ್ಪಷ್ಟವಾಗಿ ವಿವರಿಸಿದ್ದಾರೆ.

ಕೀರ್ತನೆ-೨೭೭

ಅವರೆಕಾಯಿ ಬೇಕು : ಕೊಲಾರ ಜಿಲ್ಲೆಯಲ್ಲಿ ಜನಪ್ರಿಯವಾದ ಅವರೆಕಾಯಿಯನ್ನು ದ್ವಂದ್ವಾರ್ಥದಲ್ಲಿ ಬಳಸಲಾಗಿದೆ. ಅವರೆ ಕಾಯ್‌ಬೇಕು ಎಂದರೆ ಅವರೇ ಕಾಪಾಡಬೇಕು ಇವರಲ್ಲ ಎಂದರ್ಥ. ಅವರು ಎಂದರೆ ಜಗದ್ರಕ್ಷಕರಾದ ಲಕ್ಷ್ಮೀನಾರಾಯಣರು. ಇವರು ಎಂದರೆ ನಮ್ಮ ಸುತ್ತಲಿನ ಜನ. ಸೌಂದರ್ಯ, ಐಶ್ವರ್ಯ ಮತ್ತು ಮೋಕ್ಷಪ್ರದರಾದವರು 'ಅವರೆ' ಹೊರತು ಇವರಲ್ಲ.

ಕೀರ್ತನೆ-೨೭೮

ದೊಡ್ಡಮ್ಮನಾದ 'ಅಲಕ್ಷ್ಮಿ'ಗೂ ಚಿಕ್ಕಮ್ಮನಾದ 'ಲಕ್ಷ್ಮಿ'ಗೂ ಇರುವ ವ್ಯತ್ಯಾಸಗಳನ್ನು ಇಲ್ಲಿ ನಿರೂಪಿಸಿದ್ದಾರೆ. ಮನುಷ್ಯನ ಕಾರ್ಯ, ಸ್ವಭಾವ, ಪ್ರೇರಣೆ ಮತ್ತು ನಡವಳಿಕೆಗಳಲ್ಲಿ ಈ ಇಬ್ಬರು ಲಕ್ಷ್ಮಿಯರು ಹೇಗೆ ಅಂತರ್ಗತರಾಗಿದ್ದಾರೆ ಎಂಬ ವಿವರಣೆ ಇಲ್ಲಿದೆ. (ನೋಡಿ ಕೀ.೨೬೨), ೨೭೬ ರ ಟಿಪ್ಪಣಿ)

ಕೀರ್ತನೆ-೨೮೧

ಇಸ್ಪೀಟ್ ಆಟದ ವಿವರಣೆಯಲ್ಲಿ ದೇವತಾ ತಾರತಮ್ಯವನ್ನೂ, ಜೀವನವೇ ಒಂದು ಇಸ್ಪೀಟ್ ಆಟದಂತೆ ಎಂಬ ವಿವರಣೆಯನ್ನು ನೀಡಿದ್ದಾರೆ, ಜೀವನಕ್ಕೆ ನಾವು ನಿಸ್ಪೃಹರಾಗಿರಬೇಕು ದಶೇಂದ್ರಿಯಗಳು, ನವದ್ವಾರಗಳು, ಅಷ್ಟಮದಗಳು, ಸಪ್ತವ್ಯಸನಗಳು ಅರಿಷಡ್ವರ್ಗಗಳು, ಮೂರು ಕಾಲಗಳು, ಎರಡು ತತ್ವಗಳು, ಇವುಗಳ ಜೊತೆ ದಿನನಿತ್ಯ ಆಡುವ ಆಟಗಳು ಇಸ್ಪೀಟ್ ಆಟದಂತೆಯೆ. ಆಡಲು ಗೊತ್ತಿರುವವನು ಹತ್ತರಾಟದಿಂದ ಎರಡರಾಟದವರಗೆ ಯಾವ ಆಟವನ್ನಾದರೂ ಆಡಬಲ್ಲ. ಆಸ್, ರಾಜ, ರಾಣಿ, ಗುಲಾಮ, ಕಳಾವರ, ಇಸ್ಪೀಟ್, ಆಟೀನ್, ಡೈಮಂಡ್ ಇವು ಇಸ್ಪೀಟ್ ಆಟದ ಪರಿಕರಗಳು.

ಕೀರ್ತನೆ-೨೮೬

ದ್ವೈತ, ಅದ್ವೈತ, ವಿಶಿಷ್ಟಾದ್ವೈತ ತತ್ವಗಳಲ್ಲಿ ವ್ಯತ್ಯಾಸವಿದೆ. ಆದರೆ ವ್ಯತ್ಯಾಸ ವಿರೋಧವಾಗಬೇಕಿಲ್ಲ, ಎಂಬ ಸಮನ್ವಯ ಧೋರಣೆ ದಾಸರದು, ಅವರವರ ತತ್ವಗಳು ಅವರವರ ದೃಷ್ಟಿಯಲ್ಲಿ ಸತ್ಯ. ತ್ರಿವಿಧ ಜೀವರು, ತ್ರಿಕರ್ಮಗಳು, ತ್ರಿಗುಣಗಳು, ತ್ರಿಮೂರ್ತಿಗಳು, ತ್ರಿಕಾಲಗಳು ಇರುವಂತೆ ತ್ರಿಮತಗಳು ಇವೆ. (ನೋಡಿ ಕೀ. ೨೪೯ ರ ಟಿಪ್ಪಣಿ)

ಕೀರ್ತನೆ-೨೮೯

ಪರಮ ವೈಷ್ಣವರು : ಇಂದ್ರದ್ಯುಮ್ನ (ಕರಿರಾಜ) ಪ್ರಹ್ಲಾದ (ಕನಕಕಶಿಪು ಸುತ), ಅಜಾಮಿಳ, ರುಕ್ಮಾಂಗದ, ದ್ರೌಪದಿ, ವಿಭೀಷಣ, ಅಂಬರೀಶ (ಮನುಪೌತ್ರ), ವಸಿಷ್ಠ, ಹನುಮಂತ, ರುದ್ರ, ನಾರದ, ನರ(ಧರ್ಮ ಮುನಿಯ ಪುತ್ರ), ನಾಭಾಗ (ಮನುವಿನ ಮಗ) ದಾಲ್ಭ್ಯ(ಬಕದಾಲ್ಭ್ಯ), ಭೀಷ್ಮ (ಸುರನದೀಸುತ), ಶುಕ, ಶೌನಕ, ಬಲಿ, ಅರ್ಜುನ.

ಕೀರ್ತನೆ-೨೯೫

ದುರ್ಯೋಧನ ವ್ಯಕ್ತಿತ್ವ ನಿರೂಪಣೆಯಲ್ಲಿ ಕಲಿಪುರುಷನ ಸ್ವಭಾವದ ಚಿತ್ರಣ ಇಲ್ಲಿದೆ. ಇಲ್ಲಿ ಸ್ತುತಿಗಿಂತ ನಿಂದೆಗೆ ಪ್ರಾಶಸ್ತ್ಯ.

ಕೀರ್ತನೆ-೩೦೦

ಬಂಡಿ ಹೋಗುವುದೀಗ : ಮೇಲ್ನೋಟಕ್ಕೆ ಇದು ಬಂಡಿಯ ಪ್ರಯಾಣಕ್ಕೆ ಹೊರಟವರು ಮಾಡಿಕೊಂಡ ಸಿದ್ಧತೆಗಳ ವಿವರಣೆ ಎನಿಸುತ್ತೆ. ಆದರೆ ಇದು ಸಾಮಾನ್ಯ ಪ್ರಯಾಣವಲ್ಲ ಜೀವ ಶರೀರವನ್ನು ಬಿಟ್ಟು ತನ್ನ ಮೂಲ ಸ್ಥಾನಕ್ಕೆ ಪ್ರಯಾಣ ಬೆಳೆಸುವ ಸಂದರ್ಭದ ಚಿತ್ರಣ ಇದು.

(ನುಡಿ-೧) ಅನ್ನಸಾರೆರಡೇ ಬೇಕು : ಜೀವ ಈಶ ಈ ಎರೆಡರ ಚಿಂತನೆಯಷ್ಟೇ ಸಾಕು

ನೆನ್ನೆ ಉಂಡದ್ದೇ ಸಾಕು : ಭೂತ ಕಾಲದ ಅನುಭವಗಳನ್ನು ಹೊತ್ತುಕೊಂಡು ಹೋಗುವುದು ಬೇಡ

ಹನ್ನೊಂದು ಗಂಟೆ ಒಳಗೆ : ಏಕದಶೇಂದ್ರಿಯಗಳು (ಐದು ಕರ್ಮೇಂದ್ರಿಯ, ಐದು ಜ್ಞಾನೇಂದ್ರಿಯ ಮತ್ತು ಮನಸ್ಸು) ಕ್ರಿಯಾತ್ಮಕವಾಗಿರುವಾಗಲೇ ಪ್ರಯಾಣ ಪಾಕ ಸಿದ್ಧವಾಗಬೇಕು.

ಚಿತ್ರಾನ್ನ, ತುಪ್ಪ, ಉಪ್ಪಿನಕಾಯಿ : ಲೌಕಿಕ ಜೀವನದ ರುಚಿಗಳು ಮತ್ತು ಆಸಕ್ತಿಗಳು.

ಹಪ್ಪಳ ಸುಟ್ಟು : ಕಾಮನೆಗಳನ್ನು ಸುಟ್ಟು.

ಕೀರ್ತನೆ-೩೦೧

(ನುಡಿ-೧) ಉಂಛವೃತ್ತಿಯೇ ರಾಜ್ಯಕೋಶ : ಉಂಛವೃತ್ತಿ ಎಂದರೆ ಹರಿದಾಸರು ಧಾರ್ಮಿಕ ಶ್ರದ್ಧೆಯಿಂದ ಆಚರಿಸುವ ಸಾಂಪ್ರದಾಯಿಕ ಭಿಕ್ಷಾಟನೆ. ಇದನ್ನು ಯಾಯೀವಾರ ಎಂತಲೂ ಕರೆಯುತ್ತಾರೆ. ಕ್ಲುಪ್ತವಾದ ದಿನ ಮತ್ತು ಕಾಲದಲ್ಲಿ ಒಂದೊಂದು ಊರು ಅಥವಾ ಕೇರಿಗೆ ಕಾಲ್ನಡಿಗೆಯಲ್ಲಿ ಹೋಗಿ ಹರಿನಾಮ ಸಂಕೀರ್ತನೆ ಮಾಡುತ್ತ ತಾಳ ತಂಬೂರಿ ಮತ್ತು ಭವನಾಸಿಗಳನ್ನು ಹಿಡಿದು ಹರಿಭಕ್ತರ ಮನೆಗಳಲ್ಲಿ ದವಸಧಾನ್ಯಗಳನ್ನು ಭಿಕ್ಷೆ ಬೇಡುವ ವೃತ್ತಿಯೆ ಉಂಛವೃತ್ತಿ. ಉಂಛವೃತ್ತಿಯ ರಾಜ್ಯದಲ್ಲಿ ಹರಿದಾಸರೇ ರಾಜರು. ರಾಜ್ಯಾಡಳಿತದ ಎಲ್ಲ ಲೌಕಿಕ ವ್ಯವಹಾರ, ಮತ್ತು ಕರ್ತವ್ಯಗಳನ್ನು ದಾಸ ತತ್ವಕ್ಕೆ ಹೊಂದುವಂತೆ ಅನ್ವಯಿಸಿಕೊಂಡು ಭೌತಿಕ ಅಧಿಕಾರಗಳಿಗೆ ಅಧ್ಯಾತ್ಮಿಕ ಅರ್ಥಗಳನ್ನು ಇಲ್ಲಿ ನೀಡಲಾಗಿದೆ.

ಕೀರ್ತನೆ-೩೦೫

ರಾಮಾಯಣ ಎಂದೋ ಎಲ್ಲೋ ನಡೆದ ಕಥೆಯಲ್ಲ. ನಮ್ಮ ಜೀವನದಲ್ಲಿ, ದೇಹಗತ ಇಂದ್ರಿಯಗಳಲ್ಲಿ ರಾಮಾಯಣದ ಪ್ರಸಂಗಗಳನ್ನು ಹೋಲುವ ಕ್ರಿಯೆಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ಈ ಹಿನ್ನೆಲೆಯಲ್ಲಿ ರಾಮಾಯಣದ ಪಾತ್ರಗಳ ಮತ್ತು ಘಟನೆಗಳ ಸಾಂಕೇತಿಕ ಅರ್ಥವನ್ನು ಆಧ್ಯಾತ್ಮಿಕ ದೃಷ್ಟಿಯಿಂದ ನೋಡುವ ಕೃತಿ ಇದು.

(ನುಡಿ-೫) ತ್ರಿಜಟೆ ಕನಸೆ ಘನವೆನಿಪ ಸಂಸ್ಕಾರ : ಅಶೋಕ ವನದಲ್ಲಿ ಸೀತೆಗೆ ಕಾವಲಿದ್ದ ರಕ್ಕಸಿಯರ ಪಡೆಯ ಮೇಲ್ವಿಚಾರಕಿ ತ್ರಿಜಟೆ. ಈಕೆಗೆ ರಾಮರಾವಣರ ಯುದ್ಧ ನಡೆದಂತೆಯೂ, ರಾಮ ಜಯಶಾಲಿಯಾದಂತೆಯೂ ಕನಸು ಬಿತ್ತು. ತನ್ನ ಕನಸನ್ನು ಈಕೆ ಸೀತೆಗೂ ತನ್ನ ಗೆಳತಿಯರಿಗೂ ತಿಳಿಸಿ ಸೀತೆಯನ್ನು ಗೌರವದಿಂದ ನೋಡಿಕೊಳ್ಳುವಂತೆ ಸೇವಕಿಯರಿಗೆ ಹೇಳಿದಳು. ಆಕೆ ತನ್ನ ಕನಸನ್ನು ದಿಟವೆಂದೇ ನಂಬಿದ್ದಳು ಅದು ಅವಳು ಗಳಿಸಿದ ಸಂಸ್ಕಾರ.

ಕೀರ್ತನೆ-೩೦೬

ರವಿಮಾರ್ಗ, ಶಶಿಮಾರ್ಗ : ಸಾತ್ವಿಕ ರಾಜಸ ಜೀವಿಗಳ ಪ್ರವೃತ್ತಿ ಮಾರ್ಗಗಳು ಇವು ರವಿಮಾರ್ಗ ಮೋಕ್ಷ ಸಾಧನೆಯ ಮಾರ್ಗ ಜಗತ್ತು ಹರಿಯ ಅಧೀನವೆಂದೂ, ಪೂಜೆಯನ್ನು ನಿಷ್ಕಾಮ ಕರ್ಮವೆಂದೂ, ಭಾವಿಸುವ ಸದ್ಭಕ್ತರು ರವಿಮಾರ್ಗದವರು. ಇವರು ತೇಜಸ್ವಿಗಳೂ ಕಳಂಕ-ರಹಿತರೂ ಆಗಿ ಮುಕ್ತಿಗೆ ಅರ್ಹರಾಗುತ್ತಾರೆ.

ದೇವರು ಧರ್ಮ ನಂಬಿಕೆಗಳ ಬಗ್ಗೆ ವಿಪರೀತಾರ್ಥವನ್ನು ಕಲ್ಪಿಸಿಕೊಂಡು ಸ್ವಾಹಂಕಾರವನ್ನು ಬಿಡದೆ ಪ್ರತಿಫಲಾಪೇಕ್ಷೆಯಿಂದ ದೇವರ ಸೇವೆ ಮಾಡುವವರು ಶಶಿಮಾರ್ಗದವರು. ರವಿಮಾರ್ಗದವರು ಮೋಕ್ಷ ಸುಖಕ್ಕೂ, ಶಶಿಮಾರ್ಗದವರು ಸಂಸಾರ ಸುಖಕ್ಕೂ ಅರ್ಹರಾಗುತ್ತಾರೆ.

ಕೀರ್ತನೆ-೩೧೦

ಹದಿನಾರು ಜಾತಿಯವರಣ್ಣ : ಹದಿನಾರು ಜಾತಿ ಹದಿನೆಂಟು ಜಾತಿ ಇವು ಕೆಲವು ಜಾತಿಗಳಲ್ಲಿರುವ ಒಳ ಪಂಗಡಗಳು. ನಮ್ಮ ಶರೀರದೊಳಗೂ ಹದಿನಾರು ಜಾತಿಗಳಿವೆ. ಐದು ಜ್ಞಾನೇಂದ್ರಿಯ, ಐದು ಕರ್ಮೇಂದ್ರಿಯ, ಪಂಚಪ್ರಾಣ ಮತ್ತು ಮನಸ್ಸು. ಒಟ್ಟು ಹದಿನಾರು ತತ್ವಗಳಿಂದ ಕೂಡಿರುವುದು ಈ ಶರೀರ. ಹದಿನೇಳನೆಯದು ಆತ್ಮತತ್ವ.

ಹದಿನೆಂಟನೆಯದು ಪರಮಾತ್ಮತತ್ವ ನಮ್ಮ ದೇಹದ ಒಳಗೇ ಹದಿನಾರು ಜಾತಿಗಳೊಂದಿಗೆ ಜಗಳವೇಕೆ ಎಂಬುದು ದಾಸರ ಪ್ರಶ್ನೆ. ಭೇದಗಳು ವಾದಗಳು ವಾಸ್ತವಕ್ಕೆ ಹೊಂದುವುದಿಲ್ಲ ಎಂಬ ಅಭಿಪ್ರಾಯ ದಾಸರದು.

(ನುಡಿ–೩) ಶುದ್ಧಾನುಲೋಮ– – –ನೇಮ : ವಿವಾಹದಲ್ಲಿ ಮೂರು ಬಗೆ ಸಜಾತಿಯ ವಿವಾಹ ಶುದ್ಧವೆಂದೂ, ಮೇಲ್ಜಾತಿಯ ಗಂಡು ಕೆಳಜಾತಿಯ ಕನ್ಯೆಯನ್ನು ಮದುವೆಯಾದರೆ ಅನುಲೋಮವೆಂದೂ, ಕೆಳಜಾತಿಯ ಗಂಡು ಮೇಲ್ಜಾತಿಯ ಹೆಣ್ಣನ್ನು ಮದುವೆಯಾದರೆ ಪ್ರತಿಲೋಮವೆಂದೂ ಕರೆಯುತ್ತಾರೆ. ಈ ಜಾತಿ, ಅನುಲೋಮ, ಪ್ರತಿಲೋಮ ಸಂಬಂಧಗಳು ಮನುಷ್ಯ ನಿರ್ಮಿತ ಜಾತಿಗಳಿಗೆ ಸೀಮಿತವಾಗಿದೆಯೇ ಹೊರತು ಜೀವ ಈಶ್ವರರಿಬ್ಬರಿಗೂ ಜಾತಿಯ ಬದ್ಧತೆಗಳಿಲ್ಲ.

ಕೀರ್ತನೆ–೩೨೮

ಹರಿಮಡದಿಯರು : ಹರಿಯ ಅಷ್ಟಮಹಿಷಿಯರು

ಸ್ಮರ ಪುರಾದ್ಯಮರರು : ವಿಶ್ವೇದೇವತೆಗಳೆಂದು ಪ್ರಸಿದ್ಧರಾದ ದಶದೇವತೆಗಳು

ಸುರ ಋಷಿಗಳು : ಸಪ್ತ ಋಷಿಗಳು (ನೋಡಿ: ಸಂಖ್ಯಾರ್ಥ ಪದಕೋಶ)

ಕರ್ಮಜ ದೇವತೆಗಳು : ತಮ್ಮ ಕರ್ಮದಿಂದ ದೇವತ್ವವನ್ನು ಹೊಂದಿನ ಋಷಿಗಳು ಏಕಾದಶ ಮನುಗಳು ರಾಜರು ಇತ್ಯಾದಿ.

ಕೀರ್ತನೆ–೩೩೨

ಪ್ರಹ್ಲಾದ ಚರಿತೆ ಹರಿಕಥೆಗಾಗಿ ಬರೆದ ಹಾಡು. ಬಾಲಕನಾದ ಪ್ರಹ್ಲಾದ ತನ್ನ ಜತೆಯವರೊಡನೆ ಆಡುತ್ತಿದ್ದ ಲೌಕಿಕ ಆಟಗಳನ್ನು ಆಧ್ಯಾತ್ಮಿಕತೆಗೆ ಅನ್ವಯಿಸಿದ್ದಾರೆ.

ಕೀರ್ತನೆ–೩೩೩

ಗುರುರಾಮ ವಿಠಲರ ವೈಯಕ್ತಿಕ ಜೀವನದ ಕೆಲವು ವಿವರಗಳು ಇಲ್ಲಿವೆ. ದೈಹಿಕ ಸಾಮರ್ಥ್ಯ ಕಡಿಮೆಯಾಗಿ ವೈರಾಗ್ಯ ಭಾವ ಮೂಡಿದ ಸಂದರ್ಭದಲ್ಲಿ ಬಹುಶಃ ತಮ್ಮ ಜೀವನದ ಕೊನೆಯ ಘಟ್ಟದಲ್ಲಿ ಬರೆದಿರಬಹುದಾದ ಕೀರ್ತನೆ.

ಕೀರ್ತನೆ-೩೩೪

ಜ್ವರ ಪೀಡಿತನಾದ ಬಾಲಕನೊಬ್ಬನಿಗೆ ಆರೋಗ್ಯ ನೀಡುವಂತೆ ಭಯ ನಿವಾರಣ ನಾರಸಿಂಹನಿಗೆ ಸಲ್ಲಿಸಿದ ಪ್ರಾರ್ಥನೆ.

ಕೀರ್ತನೆ-೩೩೫

ತಿರುಪತಿ ಯಾತ್ರೆಗೆ ಭಕ್ತರ ಆಗಮನ

ಕೀರ್ತನೆ-೩೩೬

ಬಕಾಸುರವಧೆ ನಾಟಕದ ಭೀಮನ ಪಾತ್ರಧಾರಿಗೆ ಬರೆದುಕೊಟ್ಟ ಹಾಡು.

ಕೀರ್ತನೆ-೩೩೭

ಮಳೆಯಿಲ್ಲದೆ ಪರಿತಪಿಸಿದ ಜನ ಮಳೆ ತರಿಸುವಂತೆ ದಾಸರನ್ನು ಬೇಡಿದಾಗ ಸೂರ್ಯಮಂಡಲ ಮಧ್ಯವರ್ತಿಯಾದ ಪರ್ಜನ್ಯನಾಮಕ ಶ್ರೀ ಹರಿಯನ್ನು ಕುರಿತು ಮಾಡಿದ ಸ್ತೋತ್ರ.

ಕೀರ್ತನೆ-೩೩೮

(ನುಡಿ-೮೩) ಉದ್ಧವ : ವಸುದೇವನ ತಮ್ಮನಾದ ದೇವಭಾಗನ ಮಗ. ಇವನು ಕೃಷ್ಣನ ಮಂತ್ರಿ. ಕೃಷ್ಣ ಕಂಸನನ್ನು ಕೊಂದನೆಂಬ ಸುದ್ದಿಯನ್ನು ಗೋಕುಲಕ್ಕೆ ತಂದವನು ಈತ

(ನುಡಿ-೮೪) ಅಸ್ತಿ ಪಾಸ್ತಿ : ಇವರು ಜರಾಸಂಧನ ಮಕ್ಕಳು ಕಂಸನ ರಾಣಿಯರು.

(ನುಡಿ-೮೬) ಕ್ಷುದ್ರ ಕಾಲಯವನ ಕೊಲಿಸಿ : ಕಾಲಯವನ ಗರ್ಗ ಮಹರ್ಷಿಯ ಮಗ. ಯಾದವರ ದ್ವೇಷಿ. ಕೃಷ್ಣನಿಗೂ ಇವನನ್ನು ನಿಯಂತ್ರಿಸಲಾಗಲಿಲ್ಲ. ಮುಚುಕುಂದನ ದೃಷ್ಟಿ ಪಾತದಿಂದ ಕಾಲಯವನ ಸಾಯುವಂತೆ ಕೃಷ್ಣ ಹೂಡಿದ ತಂತ್ರದ ಪ್ರಸಂಗವಿದು.

(ನುಡಿ-೮೯) ದ್ವಿಜನ ಕೈಲಿ ಓಲೆ ಕಳುಹಿಸಿದ ನಿಜಸತಿ: ಕೃಷ್ಣನಿಗೆ ರುಕ್ಮಿಣಿ ಪತ್ರವನ್ನು ಬರೆದು ಅದನ್ನು ಬ್ರಾಹ್ಮಣನೊಬ್ಬನ ಕೈಯಲ್ಲಿ ಕೊಟ್ಟು ಕಳುಹಿಸಿ ಕೃಷ್ಣನನ್ನು ಕರೆಸಿಕೊಂಡ ಪ್ರಸಂಗ (ನೋಡಿ ಕೀ.೩೨೯)

(ನುಡಿ–೯೩) ತಾನೆ ವಾಸುದೇವನೆಂಬ ಹೀನ ಪೌಂಡ್ರಕ : ಪುಂಡ್ರ ವಂಶದ ವಸುದೇವನೆಂಬ ರಾಜನ ಮಗ ಇವನು. ಕೃಷ್ಣನಂತೆಯೇ ತಾನೂ ಪ್ರಸಿದ್ಧನಾಗಬೇಕೆಂದು ಶಂಖು ಚಕ್ರಗಳನ್ನು ಧರಿಸುತ್ತಿದ್ದ. ಕೃಷ್ಣನ ಮೇಲೆ ಹಲವಾರು ಸಲ ಯುದ್ಧ ಮಾಡಿ ಸೋತ. ಕೊನೆಗೆ ಕಾಶಿರಾಜನ ಜೊತೆಗೂಡಿ ಯುದ್ಧಕ್ಕೆ ಬಂದ ಕೃಷ್ಣನಿಂದ ಇಬ್ಬರೂ ಹತರಾದರು.

(ನುಡಿ–೯೪) ಕೃತ್ಯೆ : ಪುಂಡ್ರಕ ದೇಶದ ಅರಸನಾದ ವಾಸುದೇವ ಕೃಷ್ಣನನ್ನು ಹತ್ಯೆಮಾಡಲು ಕಳುಹಿಸಿದ ಒಂದು ಕ್ಷುದ್ರ ದೇವತೆ.

(ನುಡಿ–೯೫) ನಗ್ನ : ಇವನು ಕೋಸಲ ದೇಶದ ರಾಜ. ನೀಲಾ ಇವನ ಮಗಳು. ತನ್ನಲ್ಲಿದ್ದ ಸೊಕ್ಕಿನ ಗೂಳಿಗಳನ್ನು ನಿಯಂತ್ರಿಸಿದವನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡವುದಾಗಿ ಪ್ರತಿಜ್ಞೆ ಮಾಡಿದ್ದ. ಕೃಷ್ಣ ಈ ಗೂಳಿಗಳ ಸೊಕ್ಕನ್ನು ಮುರಿದು ನೀಲೆಯನ್ನು ಮದುವೆಯಾದ.

ಕೀರ್ತನೆ–೩೩೯

(ನುಡಿ–೩) ಒಂದರೊಳಗೆ ಎರಡಾಗಿ– – –ಹೊಂದಿರುವುದು ತಾಗಿ : ಸೃಷ್ಟಿಗೆ ಪೂರ್ವದಲ್ಲಿ ಭಗವಂತ ಒಬ್ಬನೇ ಇದ್ದ ಅವನೇ ಜಗತ್ತನ್ನು ಸೃಷ್ಟಿಸಿದ. ಭಗವಂತ, ಸೃಷ್ಟಿ ಹೀಗೆ ಒಂದು ಎರಡಾಯಿತು. ಅನಂತರ ಜೀವ, ಜಡ, ಪಂಚಭೂತಗಳು, ಸಾತ್ವಿಕ, ರಾಜಸ, ತಾಮಸ ಜೀವರು, ಜೀವ ಕೋಟಿಗಳು, ಉದ್ಭವವಾದವು. ಸೃಷ್ಟಿಯಲ್ಲಿ ವೈವಿಧ್ಯತೆ ವಿರೋಧಗಳಿದ್ದರೂ ಹೊಂದಿಕೊಂಡು ಬದುಕುವುದೇ ಸೃಷ್ಟಿ ರಹಸ್ಯ.

ಕೀರ್ತನೆ–೩೪೦

(ನುಡಿ–೩೩) ಷಟ್ಕೃತಿಗಳು : ಈ ಆರು ಮಂದಿ ದಕ್ಷನ ಹೆಣ್ಣು ಮಕ್ಕಳು ಕೃತ್ತಿಕಾ ನಕ್ಷತ್ರ ಅಭಿಮಾನಿ ದೇವತೆಗಳು. ತಾರಕನ ವಧೆಗಾಗಿ ಅವತರಿಸಿದ ಪಾರ್ವತಿ ಪುತ್ರನಾದ ಕುಮಾರ ಸ್ವಾಮಿಗೆ ಸ್ತನ್ಯಪಾನ ಮಾಡಿಸಿದವರು. ಈ ಷಟ್ಕೃತಿಗಳ ಪ್ರೀತಿಯ ಮಗನೇ ಷಣ್ಮುಖ ಅಥವಾ ಆರ್ಮೊಗ.

ಕೀರ್ತನೆ–೩೪೧

(ನುಡಿ–೭) ಪಥಂಗಳು ಮೂರು ಬಗೆಯು : ಮನುಷ್ಯರು ತಮ್ಮ ಸಂಸ್ಕಾರಕ್ಕೆ ಅನುಗುಣವಾಗಿ ಅನುಸರಿಸುವ ಮೂರು ಮಾರ್ಗಗಳು ಇವು.

೧) **ಕಲಿಮಾರ್ಗ** – ನರಕ ಪ್ರಾಪ್ತಿಯ ಮಾರ್ಗ

೨) **ಪುರಂಜನ ಮಾರ್ಗ** – ಇಷ್ಟ ಅನಿಷ್ಟಗಳನ್ನು ಅನುಭವಿಸುವ ಮಾನವ ದೇಹ ಪ್ರಾಪ್ತಿ–ಮಾರ್ಗ

೩) **ಬ್ರಹ್ಮಮಾರ್ಗ** – ಸ್ವರ್ಗಾದಿಗಳ ಫಲಪ್ರಾಪ್ತಿಯ ಮಾರ್ಗ, ಸಾತ್ವಿಕರು ಬ್ರಹ್ಮಮಾರ್ಗವನ್ನೂ, ರಾಜಸರು ಸಂಸಾರಪೇಕ್ಷೆಯ ಪುರಂಜನ ಮಾರ್ಗವನ್ನೂ, ತಾಮಸರು ಕಲಿ ಮಾರ್ಗವನ್ನು ಅನುಸರಿಸುತ್ತಾರೆ.

(ನುಡಿ–೩೪) ಮುನಿಕರ್ದಮಂಗುದಿಸಿ– – –ಬೋಧಿಸಿದ್ಯೆ : ಕರ್ದಮ ಮತ್ತು ದೇವಹೂತಿಯರ ಮಗ ಕಪಿಲ. ಕಪಿಲ ವಿಷ್ಣುವಿನ ಅವತಾರ. ಇವನು ಸಾಂಖ್ಯ ಸೂತ್ರಗಳನ್ನು ಬರೆದು ತಾಯಿಗೆ ಸಾಂಖ್ಯ ತತ್ವವನ್ನು ಬೋಧಿಸಿದ

(ನುಡಿ–೩೫) ಅನಸೂಯೆಯಾತ್ಮಜನೆನಿಸಿ– – – : ವಿಷ್ಣುವಿನ ದತ್ತಾವತಾರದ ಪ್ರಸಂಗ

(ನುಡಿ–೩೬) ಋಷಭಾಖ್ಯನಾಗಿ– – –: ಮೇರುದೇವಿ ಮತ್ತು ನಾಭಿರಾಜ ಇವರ ಮಗನಾಗಿ ಋಷಭ ಎಂಬ ಹೆಸರಿನಿಂದ ವಿಷ್ಣು ಅವತರಿಸಿದ. ಸನ್ಯಾಸಾಶ್ರಮದ ಸತ್ಸಂಪ್ರದಾಯಗಳನ್ನು ಮುಕ್ತಿಯೋಗ್ಯರಾದ ಜೀವರಿಗೆ ಬೋಧಿಸಿದ.

(ನುಡಿ–೭೨) ದಶಕಂಠನೊಳ್ ಸಖತನಂ ಬೆಳೆಸಿರ್ದ ಸುರೇಶಪುತ್ರ : ಇಂದ್ರನ ಅಂಶದಿಂದ ಜನಿಸಿದ ಸುಗ್ರೀವ (ಸುರೇಶ ಪುತ್ರ) ರಾವಣನೊಂದಿಗೆ ಸ್ನೇಹ ಬೆಳೆಸಿದ್ದ ವಾಲಿ ಸುಗ್ರೀವರ ವೈಷಮ್ಯಕ್ಕೆ ಕಾರಣವಾಯಿತು. ವಾಲಿಯ ವಧೆಗೂ ಇದೇ ಮೂಲ.

(ನುಡಿ–೮೨) ಗಂಧರ್ವಾಧಿಪಂ ಖಳನ ಕಟ್ಟಲು : ಚಿತ್ರಾಂಗದನೆಂಬ ಗಂಧರ್ವ ದುರ್ಯೋಧನನನ್ನು ಅಪಹರಿಸಿಕೊಂಡು ಹೋದಾಗ ಅರ್ಜುನ ಭಾನುಮತಿಗೆ ಸಮಾಧಾನ ಮಾಡಿ ಉಪಯೋಗಾಸ್ತ್ರದ ಸಹಾಯದಿಂದ ದುರ್ಯೋಧನನನ್ನು ಬಿಡಿಸಿ ತಂದ ಸಂದರ್ಭ

ಕೀರ್ತನೆ–೩೪೨

(ನುಡಿ–೧) ಶಮಿಕಾತ್ಮಜನ ಶಾಪ : ಶಮೀಕ ಮುನಿ ತಪಸ್ಸು ಮಾಡುತ್ತಿರುವ ಪ್ರದೇಶಕ್ಕೆ ಬಂದ ಪರೀಕ್ಷಿತ ಮಹಾರಾಜ ತಪೋಮಗ್ನನಾಗಿದ್ದ ಮುನಿಯ ಕೊರಳಿಗೆ ಸತ್ತ ಹಾವೊಂದನ್ನು ಮಾಲೆಯಂತೆ ಹಾಕಿದ. ಈ ಕಾರಣದಿಂದ ಶಮೀಕನ ಮಗ ಶೃಂಗಿಯ ಕ್ರೋಧಕ್ಕೆ ಒಳಗಾದ. ತನ್ನ ತಂದೆಯ ಕೊರಳಿಗೆ ಸತ್ತ ಹಾವನ್ನು ಸುತ್ತಿ ಅವಮಾನ ಮಾಡಿದ ವ್ಯಕ್ತಿ ಒಂದು ವಾರದೊಳಗೆ ಹಾವಿನಿಂದಲೇ ಸಾಯಲಿ ಎಂಬುದು ಶೃಂಗಿಯ ಶಾಪ. ಈ ಶಾಪದಿಂದ ವೈರಾಗ್ಯ ಪರನಾದ ಪರೀಕ್ಷಿತ ದರ್ಭಾಸನದಲ್ಲಿ ಕುಳಿತು ಧ್ಯಾನಮಾಡುತ್ತ ಶುಕ ಮುನಿಯಿಂದ ಭಾಗವತ ಕತೆಯ ಶ್ರವಣ ಮಾಡಿದ.

ಅನುಬಂಧ-೩

ಅಂಕಿತನಾಮ ಸೂಚಿ

ಅನುಬಂಧ-೪

ಸಂಖ್ಯಾರ್ಥ ಪದಸೂಚಿ

ಮೂರು

ಅದ್ವೈತತ್ರಯ ಎರಡಲ್ಲದ ಮೂರು	= ಜ್ಞಾನ, ಭಕ್ತಿ, ವೈರಾಗ್ಯ
ಅವಸ್ಥಾತ್ರಯಗಳು	= ಜಾಗ್ರತ್, ಸ್ವಪ್ನ, ಸುಷುಪ್ತಿ
ಅವತಾರ ತ್ರಯಗಳು	= ೧) ಹನುಮ, ಭೀಮ, ಮಧ್ವ ೨) ಪ್ರಹ್ಲಾದ, ವ್ಯಾಸರಾಜ, ರಾಘವೇಂದ್ರ
ಈಷಣತ್ರಯ	= ಸತಿಮೋಹ, ಸುತಮೋಹ, ಅತಿದ್ರವ್ಯ ಮೋಹ (ದಾರೇಷಣ, ಪುತ್ರೇಷಣ, ವಿತ್ತೇಷಣ)
ತ್ರಿಕರ್ಮ	= ಪ್ರಾರಬ್ಧ, ಸಂಚಿತ, ಆಗಾಮಿ (ಕರ್ಮತ್ರಯಗಳು)
ತ್ರಿಕಾಲ	= ಭೂತ, ವರ್ತಮಾನ, ಭವಿಷ್ಯ
ತ್ರಿಕರಣ	= ವಾಕ್, ಮನ, ಕಾಯ.
ತ್ರಿಗುಣ	= ಸತ್, ರಜ, ತಮೋಗುಣಗಳು
ತ್ರಿಗೋಲ	= ಸೂರ್ಯಮಂಡಲ, ಚಂದ್ರಮಂಡಲ, ಅಗ್ನಿಮಂಡಲ (ಗೋಲತ್ರಯ)
ತ್ರಿಧಾಮ	= ಅನಂತಾಸನ, ಶ್ವೇತದ್ವೀಪ, ವೈಕುಂಠಗಳಲ್ಲಿ ವಾಸಿಸುವವರು
ತ್ರಿವಿಧಾತ್ಮ	= ವಿಶ್ವ, ತೇಜಸ, ಪ್ರಾಜ್ಞ
ತ್ರಿವಿಧ ಜೀವರು	= ಸಾತ್ವಿಕರು, ರಾಜಸರು, ತಾಮಸರು
ಪಿತೃತ್ರಯರು	= ಕವ್ಯವಾಹ, ಯಮ, ಸೋಮ
ಸಾಧನತ್ರಯ	= ಜ್ಞಾನ, ಭಕ್ತಿ, ವಿರಕ್ತಿ

ನಾಲ್ಕು

ಚತುರ್ವಿಧ ಸ್ತ್ರೀಜಾತಿಗಳು = ಹಸ್ತನಿ, ಶಂಕಿನಿ, ಪದ್ಮಿನಿ, ಚಿತ್ತಿನಿ

ಚತುರಾವಸ್ಥೆ = ಬಾಲ್ಯ, ಕೌಮಾರ, ಯೌವನ, ವಾರ್ಧಕ್ಯ

ಚತುರ್ವಿಧ ಪುರುಷಾರ್ಥ = (ಅರ್ಥ ಚತುಷ್ಟಯ)
ಧರ್ಮ, ಅರ್ಥ, ಕಾಮ, ಮೋಕ್ಷ

ಚತುರ್ವಿಧ ಮುಕ್ತಿ = ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ.

ಚತುರ್ಮೂರ್ತಿಗಳು = (ತತ್ವಾಭಿಮಾನಿ ಸುರರು) ಅನಿರುದ್ಧ, ಪ್ರದ್ಯುಮ್ನ, ವಾಮದೇವ, ಸಂಕರ್ಷಣ

ಸಾಧನ ಚತುಷ್ಟಯ = ಸದಸದ್ವಿವೇಕ, ವಿಷಯವೈರಾಗ್ಯ, ಶಮದಮಾದಿ ಷಟ್‌ಸಂಪತ್ತಿ, ಮುಮುಕ್ಷತಾ

ಹರಿಯ ಚತುರ್ಮೂರ್ತಿಗಳು = ೪ ವಾಸುದೇವ – ಮೋಕ್ಷದಾತ
೩ ಸಂಕರ್ಷಣ – ಲಯಕರ್ತ
೨ ಅನಿರುದ್ಧ – ಸ್ಥಿತಿಕರ್ತ
೧ ಪ್ರದ್ಯುಮ್ನ – ಸೃಷ್ಟಿಕರ್ತ

ಐದು

ಪಂಚ ವಿಷಯಗಳು = ಶಬ್ದ, ಸ್ಪರ್ಶ, ರೂಪ, ರಸ, ಗಂಧ
(ವಿಷಯ ಪಂಚಕ)

ಪಂಚ ಭೇದ = ಜೀವ ಜೀವಕೆ ಭೇದ, ಜೀವ ಜಡಕೆ ಭೇದ, ಜಡ
ಜಡಕೆ ಭೇದ, ಜೀವ ಈಶ್ವರ ಭೇದ, ಜಡ ಈಶ್ವರ ಭೇದ

ಪಂಚ ಭೂತಗಳು = ಭೂಮಿ, ಆಕಾಶ, ಅಗ್ನಿ, ಜಲ, ಗಾಳಿ

ಪಂಚ ಪ್ರಾಣಗಳು = ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ

ಪಂಚ ಪಾತಕಗಳು (ಪಂಚಾಘ) = ಬ್ರಹ್ಮಹತ್ಯೆ, ಸುರಾಪಾನ, ಕಳ್ಳತನ, ಗುರುತಲ್ಪಗಮನ, ಇಂಥವರ ಸಹವಾಸ

ಪಂಚ ಸಂಸ್ಕಾರಗಳು	=	ದೇವರ ಪೂಜೆ, ಕರಣಶುದ್ಧಿ, ಮನೋನಿಗ್ರಹ, ಬ್ರಹ್ಮಚರ್ಯೆ, ಅಹಿಂಸೆ
ಪಂಚ ಬಂಧ	=	(ಭವಬಂಧ) ಆಯು, ಕರ್ಮ, ಧನ, ವಿದ್ಯೆ, ಮೃತ್ಯು
ಪಂಚೇಂದ್ರಿಯಗಳು	=	ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ (ಇಂದ್ರಿಯ ಪಂಚಕ)

ಆರು

ಷಟ್‌ಪುರವಾಸಿ	=	ಶ್ವೇತದ್ವೀಪ, ಅನಂತಾಸನ, ವೈಕುಂಠ, ಆಕಾಶ, ಸತ್ಯಲೋಕ, ಮತ್ತು ಸರ್ವಜೀವರ ಹೃದಯದಲ್ಲಿ ಇರುವವನು (ಶ್ರೀಹರಿ)
ಷಟ್‌ಕರ್ಮ	=	ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ
ಷಟ್ ಸಾಧನಗಳು	=	ಶಮ (ಆತ್ಮಸಂಯಮ), ದಮ (ಇಂದ್ರಿಯನಿಗ್ರಹ), ಉಪರತಿ (ವೈರಾಗ್ಯ), ತಿತಿಕ್ಷಾ (ತಾಳ್ಮೆ) ಸಮಾಧಾನ (ಶಾಂತಿ), ಶ್ರದ್ಧಾ (ನಂಬಿಕೆ)
ಷಟ್‌ಚಕ್ರ	=	ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ, ಆಜ್ಞಾ
ಷಡ್ವೈರಿಗಳು	=	ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ
ಷಡ್ವೈಷ್ಣವರು	=	ಬಲಿ, ವಿಭೀಷಣ, ಭೀಷ್ಮ, ಪ್ರಹ್ಲಾದ, ನಾರದ, ಧ್ರುವ
ಷಣ್ಮತ	=	ಶೈವ, ವೈಷ್ಣವ, ಸೌರ, ಗಾಣಪತ್ಯ, ಕಾಪಾಲಿಕ, ಶಾಕ್ತೇಯ

ಏಳು

ಆರೊಂದು ವ್ಯಸನ	=	(ಸಪ್ತ ವ್ಯಸನ) ಬೇಟೆ, ಮದ್ಯಪಾನ, ಜೂಜು, ಕಠಿಣ ಶಿಕ್ಷೆ, ಕಠಿಣದಂಡ, ವಾಕ್‌ಪೌರುಷ, ವ್ಯಭಿಚಾರ

ಸಪ್ತಧಾತುಗಳು	= ರಸ, ರುಧಿ, ಮಾಂಸ, ಮೇಧಸ್ಸು, ಅಸ್ಥಿ, ಮಜ್ಜ, ಶುಕ್ರ
ಸಪ್ತಾವರಣ	= ಭಕ್ತಿ, ಪ್ರೇಮ, ದಯೆ, ಔದಾರ್ಯ, ಶಕ್ತಿ, ಕ್ಷಮಾ, ಜ್ಞಾನ
ಸಪ್ತಾಂಗ	= ಅರಸ, ಮಂತ್ರಿ, ಮಿತ್ರ, ಖಜಾನೆ, ರಾಷ್ಟ್ರ, ದುರ್ಗ, ಸೇವೆ
ಸಪ್ತಾನ್ನ	= ಶಿಶುಗ್ರಾಸ, ಪಕ್ಷಿಗ್ರಾಸ, ಗೋಗ್ರಾಸ, ಅತಿಥಿಭೋಜನ, ಮಾತಾಪಿತೃ ಭೋಜನ, ಯತಿಭಿಕ್ಷೆ, ಸ್ವಭೋಜನ.
ಸಪ್ತಋಷಿಗಳು	= ಮರೀಚಿ, ಅತ್ರಿ, ಆಂಗಿರಸ, ಪುಲಸ್ತ್ಯ, ಪುಲಹ, ಕ್ರತು, ವಶಿಷ್ಠ

ಎಂಟು

ಅಷ್ಟ ಸೌಭಾಗ್ಯಗಳು	= ಅರಿಶಿನ, ಕುಂಕುಮ, ಅಕ್ಷತೆ, ಚಂದನ, ಪುಷ್ಪ, ತಾಂಬೂಲ, ಕೇಸರಿ, ಕಾಡಿಗೆ
ಅಷ್ಟ ಭಾಗ್ಯಗಳು	= ಆನೆ, ಕುದುರೆ, ಪಲ್ಲಕ್ಕಿ, ಛತ್ರ, ಚಾಮರ, ಸೈನ್ಯ , ಕೋಶ, ರಾಜ್ಯ
ಅಷ್ಟ ಸಿದ್ಧಿಗಳು	= ಅಣಿಮಾ (ಸೂಕ್ಷ್ಮರೂಪವನ್ನು ಧರಿಸುವ ಶಕ್ತಿ) ಮಹಿಮಾ (ದೊಡ್ಡ ಆಕಾರವನ್ನು ಧರಿಸುವ ಶಕ್ತಿ) ಗರಿಮಾ (ಭಾರವಾಗುವ ಶಕ್ತಿ) ಲಘಿಮಾ (ಹಗುರಾಗುವ ಶಕ್ತಿ) ಪ್ರಾಪ್ತಿ (ಅಸಾಧ್ಯವಾದ್ದನ್ನು ಪಡೆಯುವುದು) ಪ್ರಕಾಮ್ಯ (ಬಯಸಿದ್ದನ್ನು ಪಡೆವುದು) ಈಶಿತ್ವ (ಪ್ರಭಾವ ಬೀರುವುದು) ವಶತ್ವ (ಇಂದ್ರಿಯ ನಿಗ್ರಹ)
ಅಷ್ಟಮದ	= ಕುಲಮದ, ರೂಪಮದ, ಯೌವ್ವನಮದ, ವಿದ್ಯಾಮದ, ಧನಮದ, ರಾಜ್ಯಮದ, ಅನ್ನಮದ, ಅಧಿಕಾರ ಮದ
ಅಷ್ಟಭೋಗ	= ಸ್ನಾನ, ಪಾನ, ಭೋಜನ, ವಸನ, ಗಂಧ, ಪುಷ್ಪ, ತಾಂಬೂಲ, ಸ್ತ್ರೀ

ಅಷ್ಟಾಂಗ ಯೋಗ = ಯಮ = ಇಂದ್ರಿಯ ನಿಗ್ರಯ,

ನಿಯಮ = ನಿಯಂತ್ರಣ, ಕಟ್ಟಲೆ

ಆಸನ = ಕುಳಿತುಕೊಳ್ಳುವುದು

ಪ್ರಾಣಾಯಾಮ = ಉಸಿರನ್ನು ಹತೋಟಿಯಲ್ಲಿಡುವುದು

ಪ್ರತ್ಯಾಹಾರ = ಸಾಮೀಪ್ಯ

ಧ್ಯಾನ = ಏಕಾಗ್ರತೆ

ಧಾರಣ = ಮನೋನಿಗ್ರಹ

ಸಮಾಧಿ = ತನ್ಮಯತೆ

ಕೃಷ್ಣನ ಅಷ್ಟಮಹಿಷಿಯರು = ರುಕ್ಮಿಣಿ, ಸತ್ಯಭಾಮೆ, ನೀಲಾ, ಭದ್ರಾ, ಮಿತ್ರವಿಂದಾ, ಜಾಂಬುವತಿ, ಕಾಳಿಂದಿ, ಲಕ್ಷಣೆ

ಒಂಬತ್ತು

ನವವಿಧ ಭಕ್ತಿ = ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನ

ಹತ್ತು

ದಶಾವತಾರ = ಮತ್ಸ್ಯ , ಕೂರ್ಮ, ವರಾಹ, ನಾರಸಿಂಹ, ವಾಮನ, ಪರಶುರಾಮ, ಶ್ರೀರಾಮ, ಕೃಷ್ಣ, ಬುದ್ಧ, ಕಲ್ಕಿ

ದಶವಾದ್ಯಗಳು = ಕರಡಿ, ನಗಾರಿ, ತಮಟೆ, ತಾಳ, ಢಕ್ಕೆ, ಡಿಂಡಿಮ, ಢಮರು, ಕಹಳೆ, ದುಂದುಭಿ, ಘಂಟೆ

ದಶಭಾವ = ಕಾಮ, ಸಂಶಯ, ಭಯ, ಸಂಕಲ್ಪ, ಶ್ರದ್ಧಾ, ಅಶ್ರದ್ಧಾ, ಧೃತಿ, ಮತಿ, ಅಧೃತಿ, ಲಜ್ಜೆ

ದಶದೇವತೆಗಳು (ವಿಶ್ವೇದೇವತೆಗಳು) = ಪುರೂರವ, ಆದ್ರವ, ಕಾಮ, ಕಾಲ,ದುರಿ, ಲೋಚನ, ದಕ್ಷ, ಕ್ರಮ, ವಸು, ಸತ್ಯ

ಏಕಾದಶ ಇಂದ್ರಿಯಗಳು = ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು, ಮನಸ್ಸು

ಷೋಡಷ ಕಲೆಗಳು = ಪಂಚೇಂದ್ರಿಯಗಳು, ವಿಷಯ ಪಂಚಕಗಳು, ವಾಕ್, ಚಿತ್, ಮನ, ಅಹಂಕಾರ, ವಿದ್ಯೆ, ಮತ್ತು ಶಕ್ತಿ

ಷೋಡಷ ದಾನಗಳು = ಹಸು, ಭೂಮಿ, ಚಿನ್ನ, ವಸ್ತ್ರ, ಆಭರಣ, ಛತ್ರ, ಚಾಮರ, ಶಯ್ಯೆ, ಬೀಸಣಿಗೆ, ಸಾಲಿಗ್ರಾಮ, ಧನ, ಧಾನ್ಯ, ದೀಪ, ಪಾದುಕೆ, ತುಪ್ಪ, ಕನ್ಯೆ

ಷೋಡಷ ತತ್ವಗಳು (ದೇಹ ಸಂಬಂಧಿ) = ಕರ್ಮೇಂದ್ರಿಯಗಳು ಐದು, ಜ್ಞಾನೇಂದ್ರಿಯಗಳು ಐದು, ವಿಷಯ ಪಂಚಕ ಐದು ಮತ್ತು ಮನಸ್ಸು

ಏಕವಿಂಶತಿ ಭಾಷ್ಯ = ಭಾರತಿ, ವಿಜಯ, ಸಚ್ಚಿದಾನಂದ, ಬ್ರಹ್ಮಘೋಷ, ಶತಾನಂದ, ವಿಜಯ, ರುದ್ರಭಟ್ಟ, ವಾಮನ, ಯಾದವ ಪ್ರಕಾಶ, ರಾಮಾನುಜ, ಭರ್ತೃಪ್ರಪಂಚ, ದ್ರವಿಡ, ಬ್ರಹ್ಮದತ್ತ, ಭಾಸ್ಕರ, ಪಿಶಾಚ, ವೃತ್ತಿಕಾರಕ, ವಿಜಯಭಟ್ಟ, ವಿಷ್ಣುಕ್ರಾಂತ, ವಾದೀಂದ್ರ, ಮಾಧವದಾಸ, ಶಂಕರ–ಇವರ ಭಾಷ್ಯಗಳು.

ಚತುರ್ವಿಂಶತಿ ತತ್ವಗಳು ಮತ್ತು ಅಭಿಮಾನಿ ದೇವತೆಗಳು

	ತತ್ವ	ಅಭಿಮಾನಿ ದೇವತೆಗಳು
೧.	ಚಿತ್ತ (ಅವ್ಯಕ್ತ ತತ್ವ)	ಲಕ್ಷ್ಮಿ
೨.	ಮತಿ (ಮಹತ್ ತತ್ವ)	ಬ್ರಹ್ಮ
೩.	ಮನ (ಅಹಂಕಾರ ತತ್ವ)	ರುದ್ರ
೪.	ಮನಸ್ತತ್ವ	ಇಂದ್ರ, ಕಾಮ, ಗರುಡ
	ಜ್ಞಾನೇಂದ್ರಿಯಗಳು	**ಅಭಿಮಾನಿ ದೇವತೆ**
೫.	ಕಿವಿ	ಚಂದ್ರ, ದಿಗ್ ದೇವತೆಗಳು
೬.	ಕಣ್ಣು	ಸೂರ್ಯ
೭.	ಮೂಗು	ಅಶ್ವಿನೀ ದೇವತೆಗಳು
೮.	ನಾಲಗೆ	ವರುಣ
೯.	ಚರ್ಮ	ಮರುತ ಕರ್ಮೇಂದ್ರಿಯಗಳು
೧೦.	ಬಾಯಿ	ಅಗ್ನಿ
೧೧.	ಕೈ	ಇಂದ್ರ
೧೨.	ಪಾದ	ಜಯಂತ
೧೩.	ಗುದ	ಮಿತ್ರ
೧೪.	ಉಪಸ್ಥ	ಮನು

ವಿಷಯಪಂಚಕಗಳು

೧೫.	ಶಬ್ದ	ಪ್ರಾಣ
೧೬.	ಸ್ಪರ್ಶ	ಅಪಾನ
೧೭.	ರೂಪ	ವ್ಯಾನ
೧೮.	ರಸ	ಉದಾನ
೧೯.	ಗಂಧ	ಸಮಾನ

ಪಂಚಭೂತಗಳು

೨೦.	ಆಕಾಶ	ಗಣೇಶ
೨೧.	ವಾಯು	ವಾಯು
೨೨.	ತೇಜಸ್	ಪಾವಕ
೨೩.	ಅಪ್ಪು	ವರುಣ
೨೪.	ಪೃಥಿವಿ	ಧರಾ–ಶನಿ

ಅನುಬಂಧ–೫

ತೀರ್ಥಕ್ಷೇತ್ರ ಸ್ತುತಿಗಳ ಅಕಾರಾದಿ

ಮೊದಲ ಸಾಲು	ಕ್ಷೇತ್ರ	ದೇವತೆ	ಕೀರ್ತನೆ ಸಂಖ್ಯೆ
ಅಪ್ರಮೇಯ ಆದರಿಸೊ ಎನ್ನ	ಮಳೂರು	ಅಪ್ರಮೇಯ	೭
ಕರುಣವಾರಿಧೆ ಮಾಧವ	ಕಲ್ಯಾಣತಿರುಪತಿ	ಶ್ರೀನಿವಾಸ	೧೭
ಕೋರಿಕೆಗಳ ನೀಡಮ್ಮ	ಕೋಲಾರ	ಕೋಲಾರಮ್ಮ	೧೫೬
ಚೂಡಾನಾಥೇಶ	ನೂತವಾವರಣ (ಹೊಸಕೋಟೆ)	ಈಶ್ವರ	೧೪೯
ದರುಶನವಾಯಿತು ಪಂಡರೀಶನ	ಪುಂಡರಾಪುರ	ಪಾಂಡುರಂಗ	೨೪
ಧನ್ಯನಾದೆನು ನಾಂ	ತಿರುಪತಿ	ವೆಂಕಟೇಶ	೨೫
ನೋಡಿರಯ್ಯ ಈ ರೂಢಿಯ ಜನರೆಲ್ಲ	ಫಣಿಗಿರಿ (ತಿರುಪತಿ)	ವೆಂಕಟೇಶ	೪೦
ಪರಶುರಾಮದೇವ	ಗರಳಪುರ (ನಂಜನಗೂಡು)	ಪರಶುರಾಮ	೪೪
ಪಾಂಡುರಂಗ ವಿಠಲೇಶ್ವರ	ನೂತನಾವರಣ	ಪಾಂಡುರಂಗ	೪೭
ಬೆಟ್ಟವಿಳಿದು ಬೇಗಬಾರೊ	ಘಟಿಕಾಚಲ	ಹನುಮಂತ	೧೩೪
ಮಂಗಳಂ ಮಂಗಳಂ	ಭಾಗ್ಯವಲ್ಲಿ (ಬಾಗೇಪಲ್ಲಿ)	ಹನುಮನೊಡೆಯ (ಶ್ರೀರಾಮ)	೫೦
ಮಂಗಳಂ ವೆಂಕಟೇಶಗೆ	ಉರಗಾದ್ರಿ (ತಿರುಪತಿ)	ವೆಂಕಟೇಶ	೫೧
ಮಂಗಳ ಭಾರತಿ ರಮಣನಿಗೆ	ಶಿಡ್ಲಘಟ್ಟ	ಆಂಜನೇಯ	೧೩೫
ಮಾತಾನ್ನಪೂರ್ಣೆ	ಕಾಶಿ	ಅನ್ನಪೂರ್ಣೆ	೧೬೦

ಅನುಬಂಧ-೬

ಇತರ ಕೃತಿಗಳ ಮೊದಲ ಮತ್ತು ಕೊನೆಯ ಪದ್ಯಗಳು

(೧) ಅನಸೂಯ ಚರಿತ್ರೆ

ಪ್ರಾರಂಭದ ಷಟ್ಪದಿ

ಸಿರಿಯರಸನಿಂದಿರೆಗೆ ಬ್ರಹ್ಮಗೆ
ಮರುತವಾಣೀ ಭಾರತಿಯರಿಗೆ
ಗರುಡಶೇಷ ಶಶಾಂಕಧರ ದೇವೇಂದ್ರ ಕಾಮರಿಗೆ
ಸುರರಿಗಾರ್‍ಮ್ಮಗ ಗಣಪತಿಯರಿಗೆ
ಗುರು ಹಿರಿಯರಿಗೆ ನಮಿಸಿ ಸತ್ಕವಿ
ವರರ ಪ್ರಾರ್ಥಿಸಿ ಪೇಳ್ವೆನನಸೂಯ ಚರಿತೆಯನಾಂ

ಮುಕ್ತಾಯದ ತ್ರಿಮೂರ್ತಿಗಳಸ್ತುತಿ

ಜಯ ಜಯ ಮಂಗಳ ಜಲ ಜಾತಾಲಯೆ ಹೃ-
ಜ್ಜಲನಿಧಿ ಚಂದ್ರನಿಗೆ ಪ

ಬಂಗಾರದೊಡಲಗೆ ಗಂಗಾಧರಗೆ ಅ.ಪ

ಪರಮಾತ್ಮಗೆ ಸರಸ್ವತಿ ಪತಿಗೆ
ಗಿರಿರಾಜ ಕುಮಾರಿಯಪ್ರಾಣೇಶಗೆ ೧

ಕಮಲಲೋಚನಗೆ ಕಮಲಾಸನಗೆ
ಕಮಲಾರಿಧರಗೆ ಅಸಮನೇತ್ರಗೆ ೨

ಗುರುರಾಮವಿಠಲಗೆ ಸುರಜೇಷ್ಠನಿಗೆ
ಸ್ಮರನನು ಗೆದ್ದ ತ್ರಿಪುರ ವೈರಿಗೆ ೩

(೨) ದೂರ್ವಾಸ ಚರಿತ್ರೆ

ಮೊದಲದ್ವಿಪದಿಗಳು

ಸಿರಿದೇವಿಯರಿಗೆರಗಿ ಬ್ರಹ್ಮಪವನರ ನಮಿಸಿ
ಸರಸ್ವತಿಯ ಕೊಂಡಾಡಿ ಭಾರತಿಯ ಪ್ರಾರ್ಥಿಸುವೆ
ದೂರ್ವಾಸ ಚರಿತೆಯಂ ಸಂಗೀತದಿಂ ಪೇಳ್ವ
ಗುರುರಾಮವಿಠಲ ಪೇಳಿಸಿದಂತೆ ಪೇಳುವೆನು

ಮುಕ್ತಾಯದ ಹಾಡು

ಮಂಗಳಂ ಮಂಗಳಂ ಮಾರಮಣಗೆ
(ನೋಡಿ: ಕೀ ೫೦)

(೩) ದ್ಯೂತಪರ್ವ

ಪ್ರಾರಂಭದ ಕಂದಪದ್ಯ

ಶ್ರೀ ಸೀತಾ ವಲ್ಲಭ ಕಮ
ಲಾಸನ ಪುರವೈರಿ ಮುಖ್ಯ ಸುರ ಗಣವಿನುತಾ
ಭಾಸುರ ಚರಿತ ಪರೇಶಸ
ದಾಶ್ರೀ ಗುರುರಾಮವಿಠಲ ಭಜಿಸುವೆನಿನ್ನಂ

ಮುಕ್ತಾಯದ ಹಾಡು

ಆರತಿಯನೆತ್ತಿದರು ನಾರಿಯರು ಕೃಷ್ಣಗೆ
(ನೋಡಿ: ಕೀ೧೦)

(೪) ಪುರುಷಸೂಕ್ತ

ಮೊದಲಪದ್ಯ

ಶ್ರೀಮತ್ ಭಗವದ್ರೂಪವ
ಪ್ರೇಮದಿ ವರ್ಣಿಸುವೆ ಗುರುಹಿರಿಯರಡಿ ಕೃಪೆಯಿಂ
ನಾ ಮನುಜನಲ್ಪ ಮತಿ ಶ್ರುತಿ
ಸ್ತೋಮದಿ ತಿಳಿದಷ್ಟು ಪೇಳ್ವೆನಾಲಿಪುದು ಬುಧರು

ಮುಕ್ತಾಯದ ಪದ್ಯ

ಇದು ಪುರಷಸೂಕ್ತದರ್ಥವು
ಉದಯದಿ ಪಠಿಸುವಂಗೆ ಅಖಿಲ ಪುರುಷಾರ್ಥಂಗಳ್
ಮುದದಲಿ ಗುರುರಾಮವಿಠಲ
ನುದಯವಾರಿನಿಧಿ ಕೊಡುವ ಕಡೆಗೆ ನಿಜಪದಂ

(೫) ಪ್ರಹ್ಲಾದ ಚರಿತ್ರೆ

ಪ್ರಾರಂಭದ ಪದ್ಯ

ಸಿರಿಯರಸನ ಕೊಂಡಾಡುವೆ
ಸರಸಿಜಭವ ಪವನರಡಿಗಳಂ ನೆನೆವೆನು ನಾಂ
ಸರಸ್ವತಿ ಭಾರತಿ ಶಂಕರ
ಗಿರಿಸುತೆ ಗಣನಾಥ ಗುರುಹಿರಿಯರಿಗೆ ನಮಿಪೆಂ

ಮುಕ್ತಾಯದ ಕೀರ್ತನೆ

ಆರತಿಯೆತ್ತಿದರು ಅಪ್ರಮೇಯಗೆ
(ನೋಡಿ : ಕೀ ೯)

(೬) ಭೋಜನ ಕಾಲ ನಿರ್ಣಯ

ಪ್ರಾರಂಭದ ಪದ್ಯ

ಶ್ರೀ ವಿನಾಯಕ ಗೌರಿಶಂಕರ
ದೇವಿಭಾರತಿ ವಾಣಿಮಾರುತ
ತಾವರೆಯಮಗ ಲಕುಮಿ ನಾರಾಯಣರ ಪ್ರಾರ್ಥಿಸುತ
ಭೂವಲಯದೊಳು ಸಕಲಜನಗಳು
ತಾವುನಿತ್ಯದಿ ಪ್ರಾಣ ರಕ್ಷಣೆ
ಗೈವ ಪರಿಯನು ಪೇಳ್ವೆ ಭೋಜನ ಕಾಲನಿರ್ಣಯವ

ಮುಕ್ತಾಯ

ಧಾರುಣಿ ಮಂಡಲದೊಳಗೆ ಮಹಿ
ಶೂರದೇಶಕೆ ಸೇರಿರುವ ಕೋ

ಲಾರದ ಭಾಗದಲಿ ಬಾಗೆ ಪಲ್ಲಂತೆಂಬ
ಚಾರು ನಗರದ ವಾಸಿ ಎನಿಸುವ
ಸುರನಿಕರ ವಿಧೇಯ ಸುಬ್ಬನು
ತಾರಚನೆಗೈದಿರುವ ಗುರುರಾಮ ವಿಠ್ಠಲಾಂಕಿತದಿ

(೭) ಮಾಧವ ಚರಿತ್ರೆ

ಮೊದಲ ಪದ್ಯ

ಸಿರಿಸರಸಿಜ ಭವಶಾರದೆ
ಪುರಹರ ಗಣನಾಥಮುಖ್ಯ ಸುರರಡಿಗಳನಾಂ
ಸ್ಮರಿಸುವೆ ಶುಭ ಮಾಳ್ಕೆಸದಾ
ಗುರುಹಿರಿಯರ ಕರುಣೆಯಿಂದ ಪೇಳ್ವೆ ಕವಿತೆಯ

ಮುಕ್ತಾಯದ ಕೀರ್ತನೆ

ಮಂಗಳಂ ವೆಂಕಟೇಶಗೆ ಅಲಮೇಲ್
ಮಂಗಾ ಮನೋಹರಗೆ
(ನೋಡಿ ಕೀ ೫೧)

(೮) ಸಿದ್ಧಾಂತಸಾರ

ಮೊದಲಪದ್ಯ

ಸಿದ್ಧಾಂತಸಾರ ವಾರ್ಯರ
ಪದ್ಧತಿಯಿದು ತಿಳಿದ ಮಾತ್ರ ಪೇಳಿರುವೆನುನಾಂ
ಮದ್ಗುರುಗಳ ಕರುಣದಿಭಗ
ವದ್ಭಕ್ತರು ಲಾಲಿಪುದು ಪರಮಾದರದಿಂ

ಮುಕ್ತಾಯ

ಹರಿವಾಕ್ಯವೆ ನಿಗಮಂಗಳು
ಹರಿಯಾಜ್ಞೆಯೆಶಾಸ್ತ್ರ ಸಮಿತಿ ಪೌರಾಣಂಗಳ್
ಸಿರಿಪತಿ ಗುರುರಾಮವಿಠಲ
ಸರುವೋತ್ತಮನೊಬ್ಬನೆ ಸಮಸ್ತಕು ಸತ್ಯಂ

(೯) ಸೇತೂರಾಯರ ಕಥೆ

ಪ್ರಾರಂಭ

ಶ್ರೀಕರವಹ ಕಲ್ಯಾಣ ಪಟ್ಟಣದಿ
ಸೇತೂರಾವ್ ದ್ವಿಜವರನು
ಪ್ರಾಕಟದಲಿ ಬ್ರಾಹ್ಮಣರುನು ಪೂಜಿಸಿ
ತಾ ಕೀರ್ತಿಯ ಬಹು ಪಡೆದಿಹನು

ಮಂಗಳ

ಮಂಗಳಾರತಿ ಶ್ರೀರಂಗನಾಥಗೆ
ಹಿಂಗದಾರ್ತರಂ ಪೊರೆವದೇವಗೆ ಪ

ಬೆಂಗಳೂರೊಳು ವಾಸ ಮಾಳ್ಪಗೆ
ಬೇಡಿದಿಷ್ಟವ ಕೊಡುವ ದೇವಗೆ ಅ.ಪ

ಪರದ್ರವ್ಯದಿಂದಾದರು ತಾನು ಸ–
ತ್ಪುರುಷರ ಪೂಜಿಸಿ ನೆರೆನೋಯುತ
ಗುರುರಾಮವಿಠಲನಾಜ್ಞೆಯೆನ್ನುತ
ಇರುವ ಭಕ್ತರಂ ಕರಪಿಡಿದವಗೆ

(೧೦) ಸ್ವವಂಶಾವಳಿ

ಪ್ರಾರಂಭ

ಗಜಾನನಂ ಗಿರಿಸುತಾಂ ಶಂಕರಂ ಭಾರತೀಂ ತಥಾ
ವಿಧಿಂ ಲಕ್ಷ್ಮಿಂ ಹರಿಂ ನತ್ವಾ ವಕ್ಷ್ಯೇಹಂ ವಂಶ ಕೀರ್ತನಂ

ಮುಕ್ತಾಯ

ಸುಬ್ರಹ್ಮಣ್ಯಾಭಿದೋದಾಸೋ ವೈಷ್ಣವೋ ಷಾಷ್ಠಿಕೋದ್ವಿಜಃ
ಪಿತೃಸಂತಾರಣಾರ್ಥಾಯ ಕೃತಂಸ್ತೋತ್ರಂ ಇದಂಹರೇ

ಅನುಬಂಧ-೭

ದಾಸಪೀಳಿಗೆ ಕೀರ್ತನೆ

ಶಿರಿಪಾದರಾಯರಿಗೆ ಶಿಷ್ಯ ಗುರು ವ್ಯಾಸರಾ
ಯರವರ್ಗೆ ಪುರಂದರಾಖ್ಯರು ಪುರಂದರ ದಾಸರ
ವರಶಿಷ್ಯ ವಿಜಯದಾಸರು ವಿಜಯದಾಸರ್ಗೆ
ಮೂವರಾದರು ಶಿಷ್ಯರು
ವರಭಾಗಣಾಖ್ಯ ತಿಮ್ಮಣ ಮೋಹನಾಖ್ಯದಾ
ಸರೊಳು ಮೋಹನ್ನದಾಸರ ಶಿಷ್ಯ ತಿರುಮಾಲಾ
ಖ್ಯರವರ್ಗೆ ಪ್ರೇಮದಾಸರು ಬಳಿಕ ಭಾಗ್ಯನಿಧಿದಾಸರವರಿಗೆ ಶಿಷ್ಯರು ೧

ವರ ವಿಜಯರಾಮಾಖ್ಯದಾಸೋತ್ತಮರು ನಮ್ಮ
ಗುರುಗಳೆನಿಸಿದರವರ ಚರಣ ಸೇವಕ ನಾನು
ವರ ಚಿತ್ರದುರ್ಗವವರಿಗೆ ಸ್ಥಳವು ಕಲ್ಯಾಣಪುರದೊಳಗೆ ಕೆಲವು ಕಾಲ
ಶರಣ ಜನರಿಗೆ ಸಾಧು ಚರಿತೆಗಳ ಪೇಳುತ್ತ
ಮೊರೆಹೊಕ್ಕು ವರಮನದ ಸಂದೇಹ ಬಿಡಿಸುತ್ತ
ಗುರುರಾಮ ವಿಠಲನೆಂದಂಕಿತವನಿತ್ತು ಕರುಣದಿಂ ಪಾಲಿಸಿದರು ೨

ಅವರ ಬೋಧಾಮೃತವೆ ಕಿವಿಗಳಿಗೆ ಹಬ್ಬವಿ
ನ್ನವರ ಕರುಣವೆ ಸಂಸರಣೆ ದುಃಖ ಮೋಚನವು
ಅವರ ಪಾರಸ್ಮೃತಿ ಭವಾಂಬುಧಿಗೆ ತಾರಕವು
ಅವರ ನೆನೆದವಗೆ ಸತತ
ಪ್ರವಿಮಲ ಜ್ಞಾನ ವೈರಾಗ್ಯ ಸದ್ಭಕ್ತಿಗಳ್
ತವಕದಲಿ ಪುಟ್ಟುವುದು ಧನ್ಯನಾಗುವ ನವಂ
ಪವನ ಸಂಭವ ಪ್ರೀಯ ಗುರುರಾಮ
ವಿಠಲನಿಹ ಪರಗಳಲಿ ಸೌಖ್ಯವೀವಂ ೩

ಅನುಬಂಧ-೮

ಕೀರ್ತನೆಗಳ ಅಕಾರದಿ ಸೂಚಿ

೨೫

— [illegible]

X. [illegible] . . [illegible]

[illegible]

[illegible]

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ
ಹರಿದಾಸ ಸಾಹಿತ್ಯ ಒಂದು ಪ್ರಮುಖ ಮಜಲು
ಹರಿದಾಸರು ರಚಿಸಿರುವ ವಿಪುಲ ಕೀರ್ತನೆಗಳು
ಕರ್ನಾಟಕ ಸಾಂಸ್ಕೃತಿಕ ತವನಿಧಿಗಳಾಗಿವೆ
ದಾಸಸಾಹಿತ್ಯದಲ್ಲಿ ಕಂಡುಬರುವ
ಭಾಷಿಕ ಹಾಗೂ ಸಾಹಿತ್ಯಕ ಸೊಬಗು,
ಆಧ್ಯಾತ್ಮಿಕ ಬೆಡಗು, ಸಂಗೀತದ ಮೆರುಗು ಅನನ್ಯ.
ದಾಸ ಸಾಹಿತ್ಯವು ಜ್ಞಾನ, ಮನೋಲ್ಲಾಸ
ಮತ್ತು ಜೀವ ಸಂಸ್ಕಾರಗಳ ತ್ರಿವೇಣಿ ಸಂಗಮ.
ಇಂಥ ದಾಸ ಸಾಹಿತ್ಯವನ್ನು
ಸಮಗ್ರವಾಗಿ ಸಂಗ್ರಹಿಸಿ, ಸಂಪಾದಿಸಿ,
ಬಹುಮಾಧ್ಯಮದಲ್ಲಿ ಹಾಗೂ ಸುಲಭ ಬೆಲೆಯಲ್ಲಿ
ಕನ್ನಡ ಜನತೆಗೆ ನೀಡುವ ಮಹತ್ವದ ಆಶಯವೇ
ಸಮಗ್ರ ದಾಸ ಸಾಹಿತ್ಯ ಯೋಜನೆ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಕನ್ನಡ ಭವನ ಜೆ.ಸಿ. ರಸ್ತೆ
ಬೆಂಗಳೂರು